ಕಲಾತಪಸ್ವಿ ವೆಂಕಟಪ್ಪ

ಪ್ರೊ|| ಸಾ. ಕೃ. ರಾಮಚಂದ್ರರಾವ್

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕರ್ನಾಟಕ ಸರ್ಕಾರ



ಕೆ. ವೆಂಕಟಪ್ಪ

1886-1965

ಕಲಾ ತಪಸ್ವಿ

ಕೆ. ವೆಂಕಟಪ್ಪ

ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕರ್ನಾಟಕ ಸರ್ಕಾರ

© ಹಕ್ಕುಗಳನ್ನು ಕಾದಿರಿಸಲಾಗಿದೆ
1988

ಬೆಲೆ: ರೂ. 15

ಪ್ರಕಾಶನ: ಐ.ಎಂ. ವಿಠ್ಠಲ ಮೂರ್ತಿ, ಕೆಎಎಸ್, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕರ್ನಾಟಕ ಸರ್ಕಾರ, 14/3ಎ, ನೃಪತುಂಗ ರಸ್ತೆ, ಬೆಂಗಳೂರು 560 002
ಮುದ್ರಣ: ದಿ ಈಸ್ಟ್ರನ್ ಪ್ರೆಸ್, ನಂ. 4, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560 029



ಮಹಾರಾಜ ಕೃಷ್ಣರಾಜ ಒಡೆಯರು

ಎಲ್ಕ್ ಹಿಲ್ ಹಾದಿಯಲ್ಲಿ, ಉದಕ ಮಂಡಲ

ಮುನ್ನುಡಿ

ಕರ್ನಾಟಕದ ಪ್ರಸಿದ್ಧ ಕಲಾವಿದರಾದ ಕೆ. ವೆಂಕಟಪ್ಪನವರ ಜನ್ಮ ಶತಾಬ್ದಿಯನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ಆಚರಿಸಲು ಕರ್ನಾಟಕ ಸರ್ಕಾರವು ನಿರ್ಧರಿಸಿ, ಅದರ ಅಂಗವಾಗಿ ಕೆಲವು ಪ್ರಕಟಣೆಗಳನ್ನು ಹೊರತರಲು ಯೋಜಿಸಿತು. ಅದರಂತೆ, ಪ್ರಸಕ್ತ ವೆಂಕಟಪ್ಪನವರನ್ನು ಕುರಿತ ಜೀವನ ಚರಿತ್ರೆ, ವರ್ಣಚಿತ್ರ ಸಂಪುಟ ಹಾಗೂ ಬಿಡಿ ಚಿತ್ರಕೋಶ ಈ ಮೂರು ಕೃತಿಗಳನ್ನು ಕನ್ನಡ ಮತ್ತು ಇಂಗ್ಲಿಷ್ ಆವೃತ್ತಿಗಳಲ್ಲಿ ಹೊರ ತರಲಾಗುತ್ತಿದೆ. ಜೀವನ ಚರಿತ್ರೆಗಳನ್ನು ಪ್ರೊ. ಎಸ್.ಕೆ. ರಾಮಚಂದ್ರ ರಾವ್ ಅವರು ರಚಿಸಿ ಕೊಟ್ಟಿರುತ್ತಾರೆ. ವರ್ಣಚಿತ್ರ ಸಂಪುಟ ಹಾಗೂ ಬಿಡಿ ಚಿತ್ರಕೋಶಗಳನ್ನು ಅವರೇ ಸಂಪಾದಿಸಿ ಕೊಟ್ಟಿರುತ್ತಾರೆ. ಇವುಗಳ ವಿನ್ಯಾಸವನ್ನು ರಾಷ್ಟ್ರೀಯ ವಿನ್ಯಾಸ ಸಂಸ್ಥೆಯವರು ಮಾಡಿಕೊಟ್ಟಿರುತ್ತಾರೆ. ಈ ಎಲ್ಲ ಪ್ರಕಟಣೆಗಳನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಪ್ರಕಟಿಸಲು ಪ್ರಯತ್ನಿಸಲಾಗಿದೆ. ಅಲ್ಲದೆ, ಈ ಪ್ರಕಟಣೆಗಳು ಕಡಿಮೆ ಬೆಲೆಯಲ್ಲಿ ದೊರೆಯುವಂತೆಯೂ ವ್ಯವಸ್ಥೆ ಮಾಡಲಾಗಿದೆ.

ಕಲಾವಿದ ವೆಂಕಟಪ್ಪನವರ ನೂರನೆಯ ಹುಟ್ಟುಹಬ್ಬದ ನೆನಪಿಗಾಗಿ ಪ್ರಕಟಿಸ ಲಾಗಿರುವ ಈ ಪುಸ್ತಕಗಳು ಅವರ ವ್ಯಕ್ತಿತ್ವ ಹಾಗೂ ಕಲಾಪ್ರೌಢಿಮೆಗಳ ಪರಿಚಯವನ್ನು ಕನ್ನಡ ಜನತೆಗೆ ಮಾಡಿಕೊಟ್ಟಲ್ಲಿ ಹಾಗೂ ಅವರ ಕಲೆಗಾರಿಕೆಯು ಕರ್ನಾಟಕದ ಕಲಾವಿದರಿಗೆ ಮಾರ್ಗದರ್ಶನ ನೀಡಿದಲ್ಲಿ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಪುಸ್ತಕಗಳನ್ನು ರಚಿಸಿ, ಸಂಪಾದಿಸಿಕೊಟ್ಟಿರುವ ಪ್ರೊ. ಎಸ್.ಕೆ. ರಾಮಚಂದ್ರ ರಾವ್ ಅವರಿಗೆ ನಿರ್ದೇಶನಾಲಯವು ಆಭಾರಿಯಾಗಿದೆ. ವೆಂಕಟಪ್ಪನವರ ಕಲಾಕೃತಿಗಳ ಚಿತ್ರಗಳನ್ನು ಒದಗಿಸಿಕೊಟ್ಟ ಶ್ರೀ ಪ್ರಭಜಿತ್ ಸಿಂಗ್, ಶ್ರೀ ಧೀರಜ್ ಚಾವ್ಡಾ, ಶ್ರೀ ಅಜಯ್ ಗೆಹಲಾಟ್, ಶ್ರೀ ಈಶ್ವರ್ ರಾಜು ಅವರಿಗೆ, ಚಿತ್ರಗಳನ್ನು ತೆಗೆಯಲು ಅವಕಾಶ ಮಾಡಿಕೊಟ್ಟ ಜಗನ್ಮೋಹನ ಅರಮನೆಯ ಕ್ಯೂರೇಟರ್ ಹಾಗೂ ವೆಂಕಟಪ್ಪ ಚಿತ್ರಶಾಲೆಯ ಕ್ಯೂರೇಟರ್ ಅವರಿಗೆ, ವಿನ್ಯಾಸ ಸಿದ್ಧಪಡಿಸಿಕೊಟ್ಟ ರಾಷ್ಟ್ರೀಯ ವಿನ್ಯಾಸ ಸಂಸ್ಥೆಯ ಶ್ರೀ ಅಶೋಕ ಪಣಿಕ್ಕರ್ ಹಾಗೂ ಪ್ರಕಟಣೆಯ ಕಾರ್ಯದಲ್ಲಿ ನೆರವು ನೀಡಿದ ಶ್ರೀ ಎಂ.ಎಸ್. ನಂಜುಂಡರಾವ್ ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಪ್ರೊ॥ ಶಂಕು ಚೌಧರಿ ಅವರಿಗೆ, ಮತ್ತು ಜೀವನ ಚರಿತ್ರೆಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ದಿ ಈಸ್ಟ್ರನ್ ಪ್ರೆಸ್‌ನ ಶ್ರೀ ಎಂ.ಎಸ್. ಚಿಂತಾಮಣಿ ಅವರಿಗೆ ಕೃತಜ್ಞತೆಗಳು.

21 ಮೇ 1988
ಬೆಂಗಳೂರು

ಐ.ಎಂ. ವಿಠ್ಠಲಮೂರ್ತಿ

ಈ ಗ್ರಂಥದಲ್ಲಿನ ಕಲಾಕೃತಿಗಳು

ಮುಖಚಿತ್ರಗಳು

ಮಹಾರಾಜ ಕೃಷ್ಣರಾಜ ಒಡೆಯರು

ಎಲ್ಕ್ ಹಿಲ್ ಹಾದಿಯಲ್ಲಿ, ಉದಕ ಮಂಡಲ

ಪುಟ 120-121ರ ನಡುವೆ

ರವೀಂದ್ರನಾಥ ಠಾಕೂರ್

ವೀಣೆ ಶೇಷಣ್ಣ

ಸಿದ್ಧಾರ್ಥನ ರಾಜ್ಯ ಪರಿತ್ಯಾಗ

ಶಿವ ತಾಂಡವ

ರಾಮನಿಂದ ಹನುಮನಿಗೆ ಅಂಗುಲಿ ಪ್ರದಾನ

ಏಕಲವ್ಯನ ಧನುರ್ವಿದ್ಯಾಭ್ಯಾಸ

ಶಕುಂತಲೆಯ ನಿರ್ಗಮನ

ಸಂಕಷ್ಟ ಪರಿಹಾರ

ಮುನಿಸಿಪಲ್ ಹೈಸ್ಕೂಲು ಮತ್ತು ಹಳೆಯ ಅಗ್ರಹಾರ, ಮೈಸೂರು

ಚರ್ಚ್ ಹಿಲ್ ಮೇಲಿನಿಂದ ಕಾಣುವ ನೀಲವರ್ಣದ ಬೆಟ್ಟಸಾಲು ಮತ್ತು ಉದಕ ಮಂಡಲದ ಹುಲ್ಲುಗಾವಲಿನ ವಿಹಂಗಮ ನೋಟ

ಪ್ರತಿಬಿಂಬ, ಉದಕ ಮಂಡಲ ಸರೋವರ

ಮುಂಗಾರು ಮಳೆ ನಿಂತ ಮೇಲೆ ಶುಭ್ರ ವಾತಾವರಣ

ಅಂಗಸಾಧನೆ

ಸಸ್ಯಗಳ ಅಧ್ಯಯನ

ರೇಖಾಚಿತ್ರ

ಪರಿವಿಡಿ

ಮೊದಲ ಮಾತು 1

ಜೀವನ

- ಮೈಸೂರಿನಲ್ಲಿ ಮೊದಲ ವರ್ಷಗಳು 9
- ಬಂಗಾಳದ ಕಲಾಶಾಲೆಯಲ್ಲಿ 17
- ಹಿಮಾಲಯ ಯಾತ್ರೆ 25
- ಮರಳಿ ಮೈಸೂರಿನಲ್ಲಿ 33
- ಬೆಂಗಳೂರಿನಲ್ಲಿ 64

... ವ್ಯಕ್ತಿ ... 89

... ಕಲೆ 119

ಮುಖ್ಯ ಪ್ರಸಂಗಳು 141

ಮೊದಲ ಮಾತು

೧

ವೆಂಕಟಪ್ಪನವರನ್ನು ನಾನು ಮೊದಲು ಕಂಡದ್ದು 1948ರ ಕಡೆಯ ಭಾಗದಲ್ಲಿ . ಆಗ ಅವರು ವೆಂಕಟಪ್ಪನವರೆಂಬ ಅರಿವಿರಲಿಲ್ಲ . ಆದರೆ ನೋಡಿದೊಡನೆ ಮನಸೆಳೆಯುವ ಆಕೃತಿ, ಗಂಭೀರವಾದ ನಿಲುವು, ದಿಟವಾಗಿ ಅಷ್ಟೇನೂ ಎತ್ತರವಲ್ಲದಿದ್ದರೂ, ತುಸು ಬೆನ್ನು ಬಾಗಿದ್ದರೂ ಎತ್ತರವಾದ ವ್ಯಕ್ತಿಯಂತೆ, ನೆಟ್ಟಗೆ ನಿಂತಂತೆ ತೋರುವರು. ಮುಪ್ಪಡರಿದ್ದರೂ ಮುಖದ ಚೆಲುವು ಮರೆಯಾಗಿರಲಿಲ್ಲ . ಮುಖಮುದ್ರೆಯ ಗಾಂಭೀರ್ಯದೊಂದಿಗೆ ಮುಖದ ಒಂದೊಂದು ವಿವರವನ್ನೂ ಶಿಲ್ಪಿಯೇ ಕಂಡರಿಸಿ ಮಾಡಿದಂತೆ ತೋರುವರು. ಶಿಲ್ಪದಂತೆ ಅಂಗಪ್ರತ್ಯಂಗಗಳೆಲ್ಲ ಸ್ಫುಟವಾಗಿ, ನಾಜೂಕಾಗಿ ಸಿದ್ಧವಾಗಿವೆ. ಮುಖದ ಮೇಲೆ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬಯಸುವಂತೆ ಕಳೆ. ಹಣೆಯ ಹರವು, ಕಣ್ಣುಗಳ ಹೊಳಪು, ಮೂಗಿನ ಮಾಟ, ಬಿಳಿಮೀಸೆಗಳ ಸೊಗಸು, ತುಂಬಿಕೊಂಡ ಗದ್ದ ತಲೆಯ ಮೇಲೆ ಜರಿಯಿಲ್ಲದ ಬಿಳಿ ರುಮಾಲು, ಮೈಮೇಲೆ ಹಳೆಯ ಕಾಲದ ಎದೆ ಮುಚ್ಚುವ ಕೋಟು, ಅಂಚಿಲ್ಲದ ಮಲ್ಲಿನ ಪಂಚೆ; ಕಾಲಲ್ಲಿ ರಬ್ಬರ್ ಶೂಗಳು; ಕೈಯಲ್ಲೊಂದು ಕೊಡೆ. ಹಳೆಯ ಕಾಲದ ಮೈಸೂರು ಅರಮನೆಯಂಗಳದಿಂದಲೇ ಎದ್ದುಬಂದ ವ್ಯಕ್ತಿಯಂತೆ ಠೀವಿ. ಅವರ ನೋಟದಲ್ಲಿ , ನಡಿಗೆಯಲ್ಲಿ , ಕೈಯಾಟದಲ್ಲಿ ಆತ್ಮವಿಶ್ವಾಸ ಎದ್ದು ಕಾಣುವುದು. ಸಾಮಾನ್ಯವಾಗಿ ಕಣ್ಣಿಗೆ ಬೀಳುವ ವ್ಯಕ್ತಿಯಂತಲ್ಲ ಇವರು. ಯಾವುದೋ ಸಾಧನೆಯಲ್ಲಿ ತೊಡಗಿ ಏನೋ ಸಿದ್ಧಿಯನ್ನು ಪಡೆದುಕೊಂಡು ಕೃತಕೃತ್ಯರಾದಂತೆ ನಿಲುವು. ಅದನ್ನು ಯಾರದರೂ ಗಮನಿಸಬಹುದಿತ್ತು .

ನಾನು ಅವರನ್ನು ಆಗ ಕಂಡದ್ದು ಮಲ್ಲೇಶ್ವರದ ಹದಿನೆಂಟನೆಯ ಅಡ್ಡರಸ್ತೆಯ ಬದಿಯಲ್ಲಿ . ನಾನು ಮೈಸೂರಿನಲ್ಲಿ ಓದು ಮುಗಿಸಿ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಿನಲ್ಲಿ (ತಾತಾ ವಿಜ್ಞಾನ ಮಂದಿರದಲ್ಲಿ) ಆಗ ತಾನೆ ಸಂಶೋಧನಾ ವಿಭಾಗದಲ್ಲಿ ಕೆಲಸಕ್ಕೆ ಸೇರಿದ್ದೆ. ಬಸವನಗುಡಿಯಲ್ಲಿ ವಾಸಮಾಡುತ್ತಿದ್ದ ನಾನು ಇನ್‌ಸ್ಟಿಟ್ಯೂಟಿರುವ ಮಲ್ಲೇಶ್ವರಕ್ಕೆ ದಿನವೂ ಬಸ್ಸಿನಲ್ಲಿ ಹೋಗಿಬರುತ್ತಿದ್ದೆ ಹದಿನೆಂಟನೆಯ ಅಡ್ಡರಸ್ತೆಯಲ್ಲೆ ಬಸ್ಸನ್ನು ಹಿಡಿಯಬೇಕು. ವೆಂಕಟಪ್ಪನವರ ಮನೆ, ಸ್ಟುಡಿಯೋ ಇದ್ದುದೂ ಅದೇ ಅಡ್ಡರಸ್ತೆಯಲ್ಲೇ. ಅವರೂ ಬಸ್ಸಿಗಾಗಿ ಅಲ್ಲೇ ನಿಲ್ಲುವರು. ಹೀಗಾಗಿ ಅವರು ವೆಂಕಟಪ್ಪನವರೆಂದು ತಿಳಿಯುವ ಮೊದಲೇ ಅವರನ್ನು ಅನೇಕ ಬಾರಿ ನೋಡಿದುದುಂಟು. ಅವರೊಂದಿಗೆ ಬಸ್ಸಿನಲ್ಲಿ ಪ್ರಯಾಣಮಾಡಿದುದೂ ಉಂಟು.

ಅವರ ನಿಲುವಿನ ಆಕರ್ಷಣೆಯಿಂದಾಗಿ, ನಾನು ಅವರು ಯಾರೆಂದು ಕೇಳಿ ತಿಳಿದುಕೊಂಡಾಗ ನನಗೆ ಅಚ್ಚರಿಯಾಯಿತು. ವೆಂಕಟಪ್ಪನವರ ವಿಚಾರ, ಅವರ ಕಲೆಯ ಮೇಲ್ಮೆಯ ವಿಚಾರ, ಅವರ ವ್ಯಕ್ತಿತ್ವದ ವೈಶಿಷ್ಟ್ಯದ ವಿಚಾರ ನಾನು ಮೈಸೂರಿನಲ್ಲಿದ್ದಾಗಲೆ ಅಷ್ಟಿಷ್ಟು ಅರಿತಿದ್ದೆ. ಪ್ರಾತಃಸ್ಮರಣೀಯರೂ ಗುರುಕಲ್ಪರೂ ಆದ ವಿದ್ವಾನ್ ರಾಳ್ಳಪಲ್ಲಿ ಅನಂತಕೃಷ್ಣಶರ್ಮರಿಂದ, ಗುರುಗಳಾಗಿದ್ದ ಡಾ।। ಎನ್.ಎಸ್. ನಾರಾಯಣಶಾಸ್ತ್ರಿಗಳಿಂದ ಅವರ ಗುಣಗಾನವನ್ನು ಕೇಳಿದ್ದೆ. ಬೆಂಗಳೂರಿಗೆ ಬಂದಮೇಲೆ ನಮ್ಮ ಮನೆಯ ನೆರೆಯಲ್ಲೇ ಇರುತ್ತಿದ್ದ ಹಿರಿಯರೂ ಪೂಜ್ಯರೂ ಆದ ಪ್ರೊ।। ಎ.ಆರ್. ಕೃಷ್ಣಶಾಸ್ತ್ರಿಗಳಿಂದ ಅವರ ಸ್ವಭಾವವನ್ನು ಕುರಿತು ಅಷ್ಟಿಷ್ಟು ತಿಳಿದುಕೊಂಡಿದ್ದೆ. ವೆಂಕಟಪ್ಪನವರನ್ನು ಕಾಣುವ, ಅವರ ಪರಿಚಯವನ್ನು ಪಡೆದುಕೊಳ್ಳುವ ಕಾತರ ನನಗೆ ಉಂಟಾದದ್ದು ಸೋಜಿಗವೇನಲ್ಲ. ಆದರೆ ಇದು ಸಾಹಸವಾದೀತು ಎಂಬ ಅಳುಕು ಕಾಡಿದುದೂ ಆಶ್ಚರ್ಯವಲ್ಲ! ಕಾತರವನ್ನು ಹತ್ತಿಕ್ಕಿ ಅಳುಕು ಹಲವು ವರ್ಷಗಳು ಮೆರೆಯಿತು.

ನಾನು ಅವರ ಮನೆಗೆ ಹೋಗುವ, ಅವರನ್ನು ಕಂಡು ಅವರೊಂದಿಗೆ ಮಾತನಾಡುವ, ಧೈರ್ಯ ಮಾಡಿದ್ದು 1954ರ ಮಾರ್ಚ್ ತಿಂಗಳ ಇಪ್ಪತ್ತೆಂಟರಂದು. ನಾನೇನು ದಿನಚರಿಯನ್ನು ಬರೆದಿಡುವವನಲ್ಲ. ಈಚೆಗೆ ವೆಂಕಟಪ್ಪನವರ ಡೈರಿಗಳ ಸಂಗ್ರಹವನ್ನು ಪರಿಶೀಲಿಸುತ್ತಿರುವಾಗ ಅವರೇ ನಾನು ಅಂದು ಅವರನ್ನು ಕಂಡ ವಿಚಾರ ಬರೆದಿರುವುದನ್ನು ನೋಡಿದೆ. ಆ ದಿನದ ಒಕ್ಕಣೆಯಲ್ಲಿ ಅಂದು ನಾನು ಅವರಿಗೆ ನನ್ನ ರೇಖಾಚಿತ್ರಗಳನ್ನೂ, ವರ್ಣಚಿತ್ರಗಳನ್ನೂ ತೋರಿಸಿದೆನೆಂದು, ಅವರು ನನಗೆ ತಮ್ಮ ನಾಲ್ಕು ಅರ್ಧಶಿಲ್ಪಫಲಕಗಳನ್ನು ತೋರಿಸಿದರೆಂದು, ಸಂಜೆ ಐದೂವರೆ ಗಂಟೆಯವರೆಗೆ ಅವರೊಂದಿಗೆ ಇದ್ದೆನೆಂದು ವಿವರಗಳಿವೆ.

ಅವರ ಮನೆಗೆಂದು ಹೋಗಿ ಅವರ ಚಿತ್ರಗಳನ್ನು ನೋಡಬಯಸದೆ ನನ್ನ ಚಿತ್ರಗಳನ್ನು ತೋರಿಸುವ ಆತುರ ಆಗ ನನಗೇಕಿದ್ದಿತೋ ಇಂದು ನಾನರಿಯೆ. ಹಾಗೆ ಮಾಡಬಾರದಿತ್ತೆಂದು ನನಗೀಗ ಅನಿಸುತ್ತಿದೆ. ಬದುಕಿನುದ್ದಕ್ಕೂ ಕಲೆಯನ್ನೇ ತಪಸ್ಸಿನಂತೆ ನಡೆಸಿಕೊಂಡುಬಂದ ಅವರ ಕಲಾಕೃತಿಗಳ ಮುಂದೆ ನನ್ನವು ಯಾವ ಮೂಲೆಗೆ? ಯಾವ ಅಳುಕೂ ಇಲ್ಲದೆ ಅವನ್ನು ಅವರ ಮುಂದೆ ಹಿಡಿದುದು ಏನು ಚೆನ್ನು? ಮುಪ್ಪಡರಿ, ಹೆಸರುಹೊಂದಿ, ಸಿದ್ಧಹಸ್ತರಾಗಿರುವ ಅವರೇ ತಮ್ಮನ್ನು 'ಕಲಾವಿದ್ಯಾರ್ಥಿ'ಯೆಂದು ಕರೆದುಕೊಳ್ಳುತ್ತಿರುವಾಗ ಯಾವ ಸಾಧನೆಯೂ ಇರದೆ, ವಯಸ್ಸೂ ಸಾಲದೆ, ಮನಸ್ಸಿಗೆ ಬಂದುದನ್ನು ಗೀಚುತ್ತಿದ್ದ ನಾನು ಅವರ ಮುಂದೆ 'ಕಲಾವಿದ'ನೆಂದು ಅಂದುಕೊಂಡಿದ್ದೆನೆ? ಅದೇನೋ ಒಂದು ಮೊಂಡು ಧೈರ್ಯ ನನ್ನನ್ನು ಅವರಲ್ಲಿಗೆ ಒಯ್ದುದು ಮಾತ್ರವಲ್ಲ, ನನ್ನ ಕಲಾಸಕ್ತಿಯನ್ನು ಅವರೆದುರು ತೋರಿಸುವಂತೆ ಮಾಡಿತು.

ಆದರೆ ಅವರು ನಾನೊಯ್ದಿದ್ದ ಕೃತಿಗಳನ್ನೆಲ್ಲ ತಾಳ್ಮೆಯಿಂದ ನೋಡಿದರು; ಒಂದೊಂದನ್ನೂ ಗಮನಿಸಿದರು; ಒಂದೊಂದರಲ್ಲೂ ತಮಗೆ ಕಂಡ ಗುಣದೋಷಗಳನ್ನು ಎತ್ತಿ ಹೇಳಿದರು. ರೇಖಾಚಿತ್ರದ ಸ್ವಾರಸ್ಯವನ್ನು ವಿವರಿಸಿದರು; ಅದರ ಹಲವು ಬಗೆಗಳನ್ನು ತೋರಿಸಿಕೊಟ್ಟರು. ಅನಂತರ ಒಳಕೋಣೆಗೆ ನನ್ನನ್ನೊಯ್ದು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ

ಮಾಡಿದ್ದ ನಾಲ್ಕು ಅರ್ಧಶಿಲ್ಪ ಫಲಕಗಳನ್ನು ತೋರಿಸಿ, ಅವುಗಳ ವೈಶಿಷ್ಟ್ಯವನ್ನು ವಿವರಿಸಿದರು. ಎಲ್ಲಿಂದ ಬೆಳಕು ಬಿದ್ದರೆ ಫಲಕದ ಯಾವ ಭಾಗದಲ್ಲಿ ಏನು ಸ್ವಾರಸ್ಯ ಮೂಡಿಕೊಳ್ಳುತ್ತದೆ ಎಂಬುದನ್ನು ಕಾಣಿಸಿದರು. ಇಂಥ ಬಿಳಿಬಣ್ಣದ ಫಲಕಗಳನ್ನು ಅಷ್ಟಾಗಿ ಉಬ್ಬಿರದ ರೀತಿಯಲ್ಲಿ ಮಾಡುವುದರ ಕಷ್ಟವನ್ನು ತಿಳಿಯಹೇಳಿದರು.

ಇಷ್ಟಾದ ಮೇಲೆ, ನಾನು ಅವರ ಮನೆಬಾಗಿಲಿಗೆ ಬಂದು ನಿಂತು, ಅವರಿಗೇನು ತೊಂದರೆಯಾದೀತೋ ಎಂದು ಕದ ತಟ್ಟಲು ಹಿಂಜರಿದುದನ್ನು ಹೇಳಿದಾಗ ಅವರು ನಕ್ಕು ''ನಾನೇನು ಹುಲಿಯೇ, ಸಿಂಹವೆ? ಹೆದರುವ ಕಾರಣವೇನು? ನಾನೊಬ್ಬ ಕಲಾವಿದ್ಯಾರ್ಥಿ; ನೀವೂ ಕಲಾವಿದ್ಯಾರ್ಥಿಯೇ. ನನಗೆ ನಿಮಗಿಂತ ವಯಸ್ಸಾಗಿದೆ; ಹಾಗಾಗಿ ಬಹುಶಃ ಕಲೆಯ ವಿಚಾರ ನಿಮಗಿಂತ ಸ್ವಲ್ಪ ಹೆಚ್ಚಾಗಿ ತಿಳಿದಿದ್ದೇನೆ. ನನ್ನನ್ನು ಕಾಣಲು ನೀವೇನು ಹಿಂಜರಿಯಬೇಕಾಗಿಲ್ಲ . ನನ್ನ ಇಡೀ ಬಾಳುವೆ ಕಲೆಗಾಗಿಯೆ ಮೀಸಲು. ಕಲೆಯಲ್ಲಿ ನಿಮಗೆ ಆಸಕ್ತಿಯಿದೆ, ಸಾಧ್ಯವಾದಾಗಲೆಲ್ಲ ಬನ್ನಿ'' ಎಂದು ಹೇಳಿದರು. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರು ಶೀಘ್ರಕೋಪಿಯೆಂದೂ, ನಿಷ್ಠುರರೆಂದೂ, ಖಂಡಿತ ವಾದಿಯೆಂದೂ, ಹರಿತವಾದ ನಾಲಗೆಯುಳ್ಳವರೆಂದೂ, ಯಾರನ್ನೂ ಹತ್ತಿರ ಸೇರಿಸು ವುದಿಲ್ಲವೆಂದೂ ಅವರ ವಿಚಾರವಾಗಿ ಹಲವಾರು ಕತೆಗಳನ್ನು ಕೇಳಿದ್ದೆ . ಆದರೆ ನಾನು ಅಂದು, ಮತ್ತು ಮುಂದೆ, ಕಂಡುದು ಈ ಕತೆಗಳಿಗೆ ಕಾಲಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟಿತು.

ಆದರೆ ಆ ವೇಳೆಗಾಗಲೆ ಅವರ ವಯಸ್ಸು ಅರವತ್ತೇಳು ವರ್ಷಗಳು. ದೇಹದಲ್ಲಿ ಸ್ವಾಸ್ಥ್ಯವೂ ಕೆಟ್ಟಿದ್ದಿತು, ಶಕ್ತಿ ಉಡುಗಿದ್ದಿತು. ಇದರಿಂದ ಅವರ ಕೊಂಕುಗಳ ತೀಕ್ಷ್ಣತೆಯಲ್ಲಿ ಇಳಿಮುಖವಾಗಿದ್ದಿತೊ ಏನೊ. ಅಲ್ಲದೆ, ಅವರಿಗಿದ್ದ ಮೂರು ತೆರನಾದ ಕಲೆಗಳಲ್ಲಿನ ಆಸಕ್ತಿ (ಸಂಗೀತ, ಶಿಲ್ಪ, ಚಿತ್ರಕಲೆ) ನನಗೂ ಇದ್ದುದರಿಂದ ಅವರ ವಿಶ್ವಾಸ ನನ್ನ ಕಡೆ ಹರಿಯುವುದು ಸುಲಭವಾಯಿತೊ ಏನೊ. ಆ ಕಾಲಕ್ಕೆ ಅವರಿಗೆ ಬಿಡುವೂ ಇದ್ದಿತು. ಬಹುಕಾಲ ಕುಳಿತು ವೀಣೆ ನುಡಿಸುವುದಾಗಲಿ ಚಿತ್ರಕರ್ಮ ಅಥವಾ ಶಿಲ್ಪದಲ್ಲಿ ತೊಡಗುವುದಾಗಲಿ, ಆಗುತ್ತಿರಲಿಲ್ಲ . ಹೀಗಾಗಿ ಬಂದವರೊಂದಿಗೆ ಕಲೆಯ ವಿಚಾರ ಮಾತನಾಡುವುದೆಂದರೆ ಅವರಿಗೆ ಆಗ ಪ್ರಿಯವಾದ ಹವ್ಯಾಸವೇ. ಕೆಲವೊಮ್ಮೆ ಮಾತನಾಡುತ್ತ ಕುಳಿತರೆಂದರೆ ಎರಡು ಗಂಟೆ ಕಳೆದುದೂ ತಿಳಿಯುತ್ತಿರಲಿಲ್ಲ . ಹೀಗೆ ಎಷ್ಟೋ ಸಮಯ ಅವರ ಮಾತನ್ನು ಕೇಳುತ್ತ ಕಳೆದಿದ್ದೇನೆ. ಆದರೆ, ಮಾತೆಲ್ಲ ಕಲೆಯನ್ನು ಕುರಿತದ್ದೇ; ವಿದ್ಯಾರ್ಥಿಗೆ ಉಪಯೋಗವಾಗುವಂಥದು, ಗಾಳಿಗೆ ಹೋಗುವ ಮಾತಲ್ಲ .

ಅದೇ ವರ್ಷದ ಕೊನೆಯ ಭಾಗದಲ್ಲಿ (ಡಿಸೆಂಬರ್ ಮೊದಲ ದಿನ) ಸೌತ್ ಪೆರೇಡ್‌ನಲ್ಲಿ ಜಿ. ವೆಂಕಟಾಚಲಂ ಏರ್ಪಡಿಸಿದ್ದ ಕಲಾಪ್ರದರ್ಶನಕ್ಕೆ ನನ್ನನ್ನು ಒಯ್ದುರು. ಆ ಪ್ರದರ್ಶನದಲ್ಲಿ ವೆಂಕಟಪ್ಪನವರು ಮಾಡಿದ್ದ ಉದಕಮಂಡಲದ ವರ್ಣಚಿತ್ರಗಳು ಪ್ರದರ್ಶಿತವಾಗಿದ್ದುವು. ವೆಂಕಟಾಚಲಂ ಕಲಾವಿಮರ್ಶಕ, ಅವರಿಗೂ ವೆಂಕಟಪ್ಪನವರಿಗೂ ಬಳಕೆ ಹೆಚ್ಚು . ಸ್ನೇಹವೆಂದೇನಲ್ಲ , ವೆಂಕಟಾಚಲಂ ಧೋರಣೆಯಾಗಲಿ ಅಭಿಪ್ರಾಯಗಳಾಗಲಿ ಅವರಿಗೆ ಸರಿಬೀಳುತ್ತಿರಲಿಲ್ಲ . ಆದರೆ, ವೆಂಕಟಪ್ಪನ ಸ್ನೇಹಿತ ಫ್ರೆಡ್ ಹಾರ್ವೆ ಎಂಬಾತನಿಗೆ

ವೆಂಕಟಾಚಲಂ ಸ್ನೇಹಿತ, ಹೀಗಾಗಿ ವೆಂಕಟಾಚಲಂ ವೆಂಕಟಪ್ಪನವರನ್ನು ಕಾಡಿ ಬೇಡಿ ಅವರ ಕೆಲವು ಚಿತ್ರಗಳನ್ನು ಪ್ರದರ್ಶನಕ್ಕೆ ಒಯ್ದಿದ್ದರು. ವೆಂಕಟಪ್ಪನವರು ನನ್ನನ್ನು ಅಲ್ಲಿಗೆ ಒಯ್ದು ಆ ಸಂಜೆ ನನಗೆ, ತಮ್ಮ ಚಿತ್ರಗಳನ್ನು ವಿವರಿಸಿದ ಬಗೆಯನ್ನು ಇಂದಿಗೂ ಮರೆಯಲಾರೆ. ವರ್ಣಸಂಯೋಜನೆ, ವಸ್ತುನಿರ್ದೇಶನ, ರೇಖೆಗಳ ಸ್ವಾರಸ್ಯ, ಪ್ರಕೃತಿಯ ಭಾವ, ಕಲೆಯ ದೃಷ್ಟಿ ಇವನ್ನೆಲ್ಲ ತಿಳಿಯಹೇಳಿದರು. ಮರುದಿನ ಸಂಜೆ ನಾನು ಅವರ ಮನೆಗೆ ಹೋದಾಗ ಕಲಾಸಂವಿಧಾನದ ಮೇಲೆ ಹಿಡಿತವನ್ನು ಸಾಧಿಸಿಕೊಳ್ಳಬೇಕಾದ ಅಗತ್ಯವನ್ನು ಕುರಿತು ಹೇಳಿದರು. ಇದನ್ನೂ ಅವರು ತಮ್ಮ ಡೈರಿಯಲ್ಲಿ ಕಾಣಿಸಿದ್ದಾರೆ.

೨

ಮಲ್ಲೇಶ್ವರದ ಅಂಚಿನಲ್ಲಿದ್ದ ಸೈನ್ಸ್ ಇನ್ಸ್‌ಟಿಟ್ಯೂಟನ್ನು ಬಿಟ್ಟು ನಾನು ನಗರದ ಇನ್ನೊಂದು ಮೂಲೆಯಲ್ಲಿ, ವಿಲ್ಸನ್‌ಗಾರ್ಡನ್ಸ್ ಆಚೆ ಇರುವ ಆಲ್ ಇಂಡಿಯ ಇನ್ಸ್‌ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ (ಈಗ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೊಸೈನ್ಸಸ್, ಹೊಸೂರು ರಸ್ತೆಯಲ್ಲಿದೆ)ನಲ್ಲಿ ಮನಃಶಾಸ್ತ್ರ ವಿಭಾಗದಲ್ಲಿ ಉಪಪ್ರಾಧ್ಯಾಪಕನಾಗಿ ಸೇರಿಕೊಂಡ ಮೇಲೆ, ವೆಂಕಟಪ್ಪನವರನ್ನು ಕಾಣುವುದು ಅಪುರೂಪವಾಯಿತು. ಆದರೆ ಹೋದಾಗಲೆಲ್ಲ ಅವರ ಕೃತಿಗಳನ್ನು ಅಧ್ಯಯನಮಾಡುವುದು, , ನನ್ನ ಕಲಾಕೃತಿಗಳನ್ನು ಅವರಿಗೆ ತೋರಿಸಿ ಅವರವಿಮರ್ಶೆಯನ್ನು ಪಡೆದುಕೊಳ್ಳುವುದು, ಕಲೆಯನ್ನು ಕುರಿತು ಬಹುಕಾಲ ಮಾತನಾಡುವುದು ನಡೆಯುತ್ತಲೇ ಇದ್ದಿತು. ಅವರಿಗೆ ತಮ್ಮ ಪ್ಲಾಸ್ಟರ್ ಆಫ್ ಪ್ಯಾರಿಸ್ ಅರ್ಧಶಿಲ್ಪಫಲಕಗಳ ಮೇಲೆ ಮಮತೆ ಹೆಚ್ಚು . ಅದರಲ್ಲೂ ಸಿದ್ಧಾರ್ಥನ ರಾಜ್ಯ ಪರಿತ್ಯಾಗವನ್ನು ಕುರಿತ ಫಲಕವನ್ನು ಎಷ್ಟು ವಿವರಿಸಿದರೂ ಅವರಿಗೆ ತೃಪ್ತಿಯಿಲ್ಲ . ಒಂದೊಂದು ಫಲಕ ಮೂಡಿಕೊಂಡ ಸಂದರ್ಭವನ್ನೂ ವಿಸ್ತಾರವಾಗಿ ಹೇಳುವರು, ಅದರ ಸ್ವಾರಸ್ಯವನ್ನೂ ಬಿಡಿಸಿ ಹೇಳುವರು. ಶಿಲ್ಪಗಳಲ್ಲಿ ಮಾಣಿಯದು ಅವರಿಗೆ ತುಂಬ ಮೆಚ್ಚಿಗೆ. ಅದರ ರಚನೆಯ ವೈಶಿಷ್ಟ್ಯವನ್ನು ತಿಳಿಸುವರು.

ಈ ನಡುವೆ, ಬೆಂಗಳೂರಿನ ದಿನಪತ್ರಿಕೆಯಾದ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಗೆಂದು ಅದರ ಸಂಪಾದಕರು ನನ್ನಿಂದ ಲೇಖನವೊಂದನ್ನು ಬಯಸಿದ್ದರು. ನಾನು ವೆಂಕಟಪ್ಪನವರ ಕಲೆಯ ವಿಚಾರವಾಗಿ ಲೇಖನವೊಂದನ್ನು ಬರೆದು ಕಳುಹಿಸಿದ್ದೆ . ಅದು 1956ರ ಡಿಸೆಂಬರ್ ಒಂಬತ್ತನೆಯ ದಿನ ಪ್ರಕಟವಾಯಿತು. ವೆಂಕಟಪ್ಪನವರಿಗೂ ನನಗೂ ಪರಿಚಿತರಾಗಿದ್ದ ಎಚ್.ವಿ. ವೆಂಕಟರಾಮ ಅಯ್ಯಂಗಾರರು ಈ ಲೇಖನವನ್ನು ನೋಡಿ, ವೆಂಕಟಪ್ಪನವರಿಗೆ ತಿಳಿಸಿದರಂತೆ. ವೆಂಕಟಪ್ಪ ಅಂಗಡಿಗೆ ತಾವೇ ಹೋಗಿ ಪತ್ರಿಕೆಯ ಪ್ರತಿಯೊಂದನ್ನು ಕೊಂಡು ಅನಂತರ ಅದನ್ನು ಹಲವು ಪರಿಚಿತರಿಗೆ, ಮಿತ್ರರಿಗೆ ತೋರಿಸಿದರಂತೆ. ಇದನ್ನು ಅವರ ಡೈರಿಯಲ್ಲಿ ನಮೂದಿಸಿದ್ದಾರೆ. ಪತ್ರಿಕೆಯಲ್ಲಿ ತಮ್ಮ ಅಥವಾ ತಮ್ಮ ಕಲೆಯ ವಿಚಾರ ಪ್ರಕಟವಾಗುವುದು ಅವರಿಗೆ ಇಷ್ಟವಿರಲಿಲ್ಲವೆಂದೂ, ಈ ವಿಚಾರದಲ್ಲಿ 'ಅವರ ಅನುಮತಿಯನ್ನು ಬಯಸಿದ ಹಲವರಿಗೆ ಅನುಮತಿ ನೀಡಲಿಲ್ಲವೆಂದೂ ನನಗೆ ಆಮೇಲೆ ತಿಳಿದು, ಅವರೆಲ್ಲಿ ನನ್ನ ಮೇಲೆ ಸಿಟ್ಟಿಗೆದ್ದಾರೋ ಎಂದು ಬೆದರಿದೆ.

1957ರ ಜನವರಿ ಹದಿನಾಲ್ಕನೆಯ ದಿನ ಸಂಜೆ ಬಸವನಗುಡಿಯ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಸುಪ್ರಸಿದ್ಧ ಇತಿಹಾಸ ಚಿಂತಕ ಆರ್ನಾಲ್ಡ್ ಟೊಯನ್‌ಬಿಯ ಭಾಷಣವಿದ್ದು ಅಲ್ಲಿ ನನಗೆ ವೆಂಕಟಪ್ಪನವರ ಭೇಟಿಯಾಯಿತು. ಭಾಷಣ ಮುಗಿದಮೇಲೆ ವೆಂಕಟಪ್ಪನವರೂ, ಪ್ರೊ॥ ವಿ. ಸೀತಾರಾಮಯ್ಯನವರೂ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳೂ, ಜಿ. ವೆಂಕಟಾಚಲಂ ಅವರೂ ಮತ್ತು ನಾನೂ ಒಟ್ಟಿಗೆ ಹೊರಹೊರಟೆವು. ನನಗೆ ಮನಸ್ಸಿನಲ್ಲೇ ಅಳುಕು, ಅಂಜಿಕೆ,ನನ್ನ ಲೇಖನವನ್ನೆಲ್ಲಿ ನೆನೆಸಿಕೊಂಡು ನನ್ನ ಮುಖಭಂಗ ಮಾಡುವರೋ ಎಂದು. ನಾವೆಲ್ಲ ಎಂ.ಎನ್. ಕೃಷ್ಣರಾವ್ ವೃತ್ತದವರೆಗೆ ನಡೆದು ಹೋಗಿ ಅಲ್ಲಿ ಸ್ವಲ್ಪ ಹೊತ್ತು ನಿಂತು ಮಾತನಾಡುತ್ತಿದ್ದೆವು. (ವೆಂಕಟಪ್ಪನವರ ಡೈರಿಯಿಂದಲೇ ನಾನು ನೆನಪು ಮಾಡಿಕೊಂಡಿದ್ದು.) 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಲೇಖನವನ್ನು ಪ್ರಸ್ತಾಪಿಸುತ್ತ ನನ್ನನ್ನು ಕುರಿತು "ಪರವಾಯಿಲ್ಲ, ಸರಿಯಾಗಿಯೇ ಬರೆದಿದ್ದೀರಿ! ಜನ ಕಲೆಯನ್ನು ಅರ್ಥಮಾಡಿಕೊಳ್ಳಬೇಕು" ಎಂದರು. ಬದುಕಿತು ಈ ಬಡಜೀವ! ಆದರೆ ನನಗೆ ಇನ್ನೂ ಒಂದು ಆತಂಕ. ವಿ. ಸೀತಾರಾಮಯ್ಯನವರು ನನಗಿಂತ ಎಷ್ಟೋ ಹಿರಿಯರು, ನಮ್ಮೆಲ್ಲರಿಗೂ ಪೂಜ್ಯರು. ವೆಂಕಟಪ್ಪನವರನ್ನು ನನಗಿಂತ ನಿಕಟವಾಗಿ ಬಲ್ಲವರು; ಬರಹದಲ್ಲೂ ಸಿದ್ಧರು, ಪ್ರಸಿದ್ಧರು. ವೆಂಕಟಾಚಲಂ ಅವರ ಬಗ್ಗೆ ವೆಂಕಟಪ್ಪನವರಿಗೆ ಅಷ್ಟೇನು ಒಳ್ಳೆಯ ಅಭಿಪ್ರಾಯವಿರಲಿಲ್ಲವೆಂಬುದನ್ನು ಅರಿತಿದ್ದೆನಾದರೂ, ಅವರೂ ಕಲಾವಿದರನ್ನು ಕುರಿತು ಬರೆಯುತ್ತಿದ್ದವರು, ನಾಡಿನಲ್ಲಿ ವಿಮರ್ಶಕರೆಂದು ಹೆಸರಾದವರು, ನನಗೆ ಎಷ್ಟೋ ವರ್ಷಕ್ಕೆ ಹಿರಿಯರು, ವೆಂಕಟಪ್ಪನವರನ್ನು ಚೆನ್ನಾಗಿ ಬಲ್ಲವರು. ಇವರಿಬ್ಬರ ಎದುರಿನಲ್ಲಿ ನನ್ನ ಲೇಖನವನ್ನು ಎತ್ತಿ ಆಡಿ ತಮ್ಮ ಸಮಾಧಾನವನ್ನು ಸೂಚಿಸಿದುದು ನನಗೆ ತಲೆ ತಗ್ಗಿಸುವಂತಾಯಿತು. ಈ ಇಬ್ಬರು ಹಿರಿಯರ ಮುಂದೆ ನನ್ನದೇನು ಸಾಧನೆಯಿದ್ದೀತು? ಅವರಿಗೆಲ್ಲಿ ಬೇಸರವಾದೀತೋ ಎಂದು ನನ್ನ ಆತಂಕ. ವೆಂಕಟಪ್ಪನವರೂ ವೆಂಕಟಾಚಲಂ ಅವರೂ ತಂತಮ್ಮ ಬಸ್ಸುಗಳನ್ನು ಹಿಡಿದು ಹೊರಟುಹೋದ ಮೇಲೆ, ವಿ. ಸೀತಾರಾಮಯ್ಯನವರೂ ಸುಬ್ರಹ್ಮಣ್ಯಶಾಸ್ತ್ರಿಗಳೂ ನಾನೂ ನಡೆದು ಹೊರಟೆವು. ದಾರಿಯಲ್ಲಿ ಸೀತಾರಾಮಯ್ಯನವರು ನನಗೆ, "ನೋಡಿ, ನೀವು ಬರೆದದ್ದನ್ನು ಓದಿ ಮೆಚ್ಚಿಕೊಂಡಿದ್ದಾರೆ. ನನಗೆ ಆಶ್ಚರ್ಯವಾಯಿತು. ವೆಂಕಟಪ್ಪ ತನ್ನ ಬಗ್ಗೆ ಪ್ರಕಟವಾದ ಬರಹವನ್ನು ಹೀಗೆ ಒಪ್ಪಿಕೊಳ್ಳುವುದು ಅವರ ಸ್ವಭಾವದಲ್ಲೇ ಇಲ್ಲ. ನಿಮ್ಮ ಪುಣ್ಯ ಅದು! ಇದೇ ಸಮಯ, ಅವರ ಮೇಲೊಂದು ಪುಸ್ತಕ ಬರೆದುಬಿಡಿ" ಎಂದು ಸೂಚಿಸಿದರು.

ಇದಾದ ನಾಲ್ಕಾರು ದಿನಗಳ ಮೇಲೆ ಒಂದು ಸಂಜೆ ನಾನು ವೆಂಕಟಪ್ಪನವರ ಮನೆಗೆ ಹೋದೆ. ಪ್ರೊ॥ ವಿ. ಸೀತಾರಾಮಯ್ಯನವರ ಸೂಚನೆಯನ್ನು ಅವರಿಗೆ ತಿಳಿಸಿದೆ. ಅದಕ್ಕೆ ಅವರು, "ಅದೆಲ್ಲ ಬೇಡ! ನನ್ನ ಕಲಾಕೃತಿಗಳನ್ನು ನೀವು ನೋಡಿ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡಿ, ಸಾಕು; ನಿಮಗೆ ಕಲೆಯಲ್ಲಿ ಆಸಕ್ತಿಯಿರುವುದರಿಂದ ಅದೇ ಮುಖ್ಯವಾದದ್ದು. ನನ್ನ ಮೇಲೆ ಪುಸ್ತಕ-ಗಿಸ್ತಕ ಬರೆಯುವುದು ನನಗಾಗದು; ನಾನು ಬದುಕಿರುವಾಗಲಂತು ಬೇಡ. ನಾನು ಸತ್ತಮೇಲೆ ನಿಮ್ಮ ಮನಸ್ಸಿಗೆ ಬಂದಂತೆ ಮಾಡಿ!" ಎಂದುಬಿಟ್ಟರು. ಇಷ್ಟು ಹೇಳಿ ಆ ವಿಚಾರ ಅಷ್ಟಕ್ಕೆ ಮೊಟಕುಮಾಡಿ, ತಾವು ಕೊಡೈಕೆನಾಲಿನಲ್ಲಿ ಮಾಡಿದ್ದ ವರ್ಣಚಿತ್ರಗಳನ್ನು ನನಗೆ ತೋರಿಸಿ ವಿವರಿಸತೊಡಗಿದರು. (ಜನವರಿ ಹದಿನೆಂಟರ ಡೈರಿ)

ಹೀಗೆ ವೆಂಕಟಪ್ಪನವರನ್ನು ಕುರಿತು ಪುಸ್ತಕವೊಂದನ್ನು ಬರೆಯಬೇಕೆಂಬ ಸಂಕಲ್ಪ 1957ರ ಮೊದಲಭಾಗದಲ್ಲೇ ಮೂಡಿಕೊಂಡುಬಂದಿತಾದರೂ, ಅದನ್ನು ಈಡೇರಿಸಲು ಬಹುವರ್ಷಗಳು ಕಾಯಬೇಕೆಂದು ಆ ವಿಚಾರ ಅಲ್ಲಿಗೇ ಕೈಬಿಟ್ಟುದಾಯಿತು. ವೆಂಕಟಪ್ಪನವರು ತೀರಿಕೊಂಡಮೇಲೂ ಇದನ್ನು ಎತ್ತಿಕೊಳ್ಳಲಾಗಲಿಲ್ಲ. ಅವರು ತೀರಿಕೊಂಡು ಎರಡು ವರ್ಷಗಳು ಕಳೆದನಂತರ, ಬೆಂಗಳೂರಿನ ಇಂಡಿಯ ಬುಕ್ ಹೌಸಿನ ನಿರ್ದೇಶಕರೂ ನನ್ನ ಮಿತ್ರರೂ ಆದ ಜಿ.ಕೆ. ಅನಂತರಾಮ್ ಅವರ ಕೋರಿಕೆಯಂತೆ ವೆಂಕಟಪ್ಪನವರ ಮೇಲೆ ಶಾಲಾ ಮಕ್ಕಳಿಗಾಗಿ ಒಂದು ಸಣ್ಣ ಪುಸ್ತಕವನ್ನು ಬರೆದೆ. ಅವರನ್ನೂ, ಅವರ ಕಲೆಯನ್ನೂ ಕುರಿತಂತೆ ಸಾಕಷ್ಟು ವಿಸ್ತಾರವಾದ ಗ್ರಂಥವನ್ನು ಸಿದ್ಧ ಪಡಿಸಬೇಕೆಂದು ಟಿಪ್ಪಣಿಗಳನ್ನು ಮಾಡಿಕೊಂಡಿದ್ದೆ, ವಿವರಗಳನ್ನು ಸಂಗ್ರಹಿಸಿದ್ದೆ. ಆದರೆ ಕೂತು ಬರೆಯುವಷ್ಟು ಬಿಡುವು ಸಿಗಲಿಲ್ಲ.

ಈ ವರ್ಷ ವೆಂಕಟಪ್ಪನವರ ಜನ್ಮಶತಾಬ್ದಿಯನ್ನು ಆಚರಿಸಬೇಕೆಂದು ಕರ್ನಾಟಕ ಸರಕಾರವೂ, ದಿಲ್ಲಿಯ ಕೇಂದ್ರ ಲಲಿತಕಲಾ ಅಕಾಡಮಿಯೂ ಆಲೋಚಿಸಿದಾಗ, ಜನ್ಮಶತಾಬ್ದಿ ಆಚರಣೆಗೆಂದು ನೇಮಕಗೊಂಡ ಸಮಿತಿಯು ಈ ಪುಸ್ತಕವನ್ನು ಬರೆದುಕೊಡುವಂತೆ ನನ್ನನ್ನು ಕೇಳಿಕೊಂಡಿತು. ಆ ಸಮಿತಿಯ ಯಜಮಾನರಾಗಿ ಕೆಲಸ ಮಾಡುತ್ತಿರುವ, ಸರಕಾರದ ಕಾರ್ಯದರ್ಶಿ ಶ್ರೀ ಚಿರಂಜೀವಿ ಸಿಂಗ್ ಅವರ ಒತ್ತಾಯಕ್ಕೆ ಮಣಿದು ಈ ಕೆಲಸವನ್ನು ಒಪ್ಪಿಕೊಂಡೆ.

೩

ವೆಂಕಟಪ್ಪನವರೊಂದಿಗೆ ಮಾತುಕತೆಯಾಡಿ ಹಿಂದಿರುಗಿದ ಮೇಲೆ ನಾನು ಕೇಳಿದ್ದರಲ್ಲಿ ಮುಖ್ಯಾಂಶಗಳನ್ನು ಗುರುತುಮಾಡಿಕೊಳ್ಳುತ್ತಿದ್ದುದುಂಟು; ಆದರೆ ಇದು ತಪ್ಪದೆ ನಡೆಯುತ್ತಿದ್ದ ವಾಡಿಕೆಯಲ್ಲ. ಹೀಗಾಗಿ ಎಷ್ಟೋ ವಿವರಗಳು ಈಗ ನೆನಪಿನಿಂದ ಜಾರಿಹೋಗಿವೆ. ವೆಂಕಟಪ್ಪನವರು ತೀರಿಕೊಂಡಮೇಲೆ, ಅವರು ಬರೆದಿಟ್ಟಿದ್ದ ಡೈರಿಗಳನ್ನೆಲ್ಲ, ಅವರ ಬಳಿಯಿದ್ದ ಪತ್ರವ್ಯವಹಾರದ ಸಂಗ್ರಹವನ್ನೆಲ್ಲ ಅವರ ಸೋದರಳಿಯ ಶ್ರೀ ರಾಮರಾಜು ಕರ್ನಾಟಕ ರಾಜ್ಯ ಪತ್ರಾಗಾರಕ್ಕೆ (ಆರ್ಕೈವ್ಸ್) ನೀಡಿದರು. ಅಲ್ಲಿ ಅವರ ಡೈರಿಗಳನ್ನೂ ಪತ್ರಗಳನ್ನೂ ಸುಭದ್ರವಾಗಿ ಇರಿಸಿಕೊಂಡಿದ್ದಾರೆ. ವೆಂಕಟಪ್ಪನವರನ್ನು ಕುರಿತ ವಿವರಗಳಿಗೆ ಈ ಡೈರಿಗಳೇ ಮುಖ್ಯವಾದ ಆಕರ ಎಂದು ಬೇರೆ ಹೇಳಬೇಕಾಗಿಲ್ಲ. 1913ರ ಮಾರ್ಚ್ ನಾಲ್ಕರಂದು ಅವರು ಡೈರಿ ಬರೆಯಲು ಮೊದಲುಮಾಡಿದರು. ಈ ಪದ್ಧತಿಯನ್ನು ವಿವರವಾಗಿ ತಾಳ್ಮೆಯಿಂದ ಸ್ಫುಟವಾಗಿ ಬರೆದಿಡುವುದು ಅವರ ಪದ್ಧತಿ. ಆದರ ನಡುನಡುವ ಎಷ್ಟೋ ವಾರಗಳು, ಎಷ್ಟೋ ತಿಂಗಳುಗಳು, ಕೆಲವು ಇಡೀ ವರ್ಷಗಳು ಖಾಲಿಯಿರುವುದನ್ನು ಕಾಣಬಹುದು. ಅವರು ಬರೆದಿಟ್ಟಿರುವ ಒಕ್ಕಣೆಯನ್ನೆಲ್ಲ ಸಾವಧಾನವಾಗಿ ಪರಿಶೀಲಿಸಿ, ಈ ಗ್ರಂಥವನ್ನು ಸಿದ್ಧಪಡಿಸಲು ಬಳಸಿಕೊಂಡಿದ್ದೇನೆ.

ಅವರ ಪತ್ರವ್ಯವಹಾರದ ಸಂಗ್ರಹ ಅಷ್ಟು ಸಮರ್ಪಕವಾಗಿಲ್ಲ. ತಮಗೆ ಬಂದ ಎಲ್ಲ ಪತ್ರಗಳನ್ನು ಜೋಪಾನವಾಗಿರಿಸಿಕೊಳ್ಳುವುದು ಅವರ ವಾಡಿಕೆ; ತಾವು ಬರೆದ ಎಲ್ಲ

ಪತ್ರಗಳಿಗೆ ನಕಲುಗಳನ್ನು ಮಾಡಿಟ್ಟುಕೊಳ್ಳುವುದು ಅವರ ವಾಡಿಕೆಯೇ. ಪತ್ರವ್ಯವಹಾರದಲ್ಲಿ ಅವರು ತುಂಬ ಅಚ್ಚುಕಟ್ಟು. ಯಾರು ಪತ್ರಬರೆದರೂ ಒಡನೆಯೇ ಉತ್ತರ ಬರೆಯುವರು. ಯಾವ ಪತ್ರವನ್ನೂ ಕಸಥ ಬುಟ್ಟಿಗೆ ಎಸೆಯುವವರಲ್ಲ. ಹೀಗಾಗಿ ಅವರ ಬಳಿ ಪತ್ರವ್ಯವಹಾರದ ಸಂಗ್ರಹ ತುಂಬ ದೊಡ್ಡ ಪ್ರಮಾಣದಲ್ಲೇ ಇದ್ದಿರಬೇಕು. ಆದರೆ ಈಗ ರಾಜ್ಯ ಪತ್ರಾಗಾರದಲ್ಲಿರುವ ಸಂಗ್ರಹ ಅಷ್ಟೇನು ದೊಡ್ಡದಲ್ಲ. ಈ ಸಂಗ್ರಹದಲ್ಲೂ ವ್ಯವಸ್ಥೆಯೇನು ಕಾಣಿಸುವುದಿಲ್ಲ. ಅರಮನೆಯ ವ್ಯವಹಾರಕ್ಕೆ ಸಂಬಂಧಪಟ್ಟ ಪತ್ರಗಳು, ಮೊಕದ್ದಮೆಯ ದಾಖಲೆಗಳು, ಉದ್ಬೋಧನ ಪತ್ರಿಕೆಯ ಮೇಲೆ, ರಂಗಭೂಮಿ ಪತ್ರಿಕೆಯ ಮೇಲೆ ಇವರು ನಡೆಸಿದ ಕಟ್ಟಳೆಗಳ ವಿವರಗಳು, ತಮ್ಮ ಗುರು ಅವನೀಂದ್ರನಾಥರಿಗೆ ಬರೆದ ಪತ್ರಗಳು ಇವೆಲ್ಲ ಈ ಪತ್ರಾಗಾರದ ಸಂಗ್ರಹದಲ್ಲಿ ಕಾಣಸಿಗುವುದಿಲ್ಲ. ಅವು ಏನಾದುವೋ ತಿಳಿಯದು.

ಆದುದರಿಂದ ಈ ವಿಚಾರಗಳನ್ನು ಕುರಿತು ಬರೆಯುವಾಗ ವೆಂಕಟಪ್ಪನವರು ನನ್ನೊಡನೆ ನಡೆಸಿದ ಮಾತುಕತೆಗಳ ನೆನಪನ್ನೇ ಅವಲಂಬಿಸಿದ್ದೇನೆ; ಪ್ರೊ|| ವಿ. ಸೀತಾರಾಮಯ್ಯನವರು, ಪ್ರೊ|| ಎ.ಆರ್ ಕೃಷ್ಣಶಾಸ್ತ್ರಿಗಳು, ಶೇಷಣ್ಣನವರ ಬಳಿ ವೆಂಕಟಪ್ಪ ವೀಣಾಭ್ಯಾಸ ಮಾಡುತ್ತಿರುವಾಗ ವೆಂಕಟಪ್ಪನವರ ಪರಿಚಯವನ್ನೂ ಪಡೆದಿದ್ದ, ಮತ್ತು ನನ್ನ ಗುರುಗಳಾಗಿದ್ದ ವಿದ್ವಾನ್ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು, ಅರಮನೆಯ ಕೆಲಸದಲ್ಲಿದ್ದು ಅಲ್ಲಿ ವೆಂಕಟಪ್ಪನವರನ್ನು ಬಲ್ಲ ವೆಂಕಟರಾಮಯ್ಯನವರು ಇವರಿಂದ ಪಡೆದುಕೊಂಡ ವಿವರಗಳನ್ನು ಬಳಸಿಕೊಂಡಿದ್ದೇನೆ. ಈಚೆಗೆ, ಅವರ ಪರಿಚಿತರಾಗಿದ್ದವರೂ ಕಲಾವಿದರೂ ಆಗಿದ್ದ ಹರಿರಾವ್ ಇನಾಮತಿಯವರಿಂದ; ಅವರ ವೈದ್ಯರೂ ಮಿತ್ರರೂ ಆಗಿದ್ದ ಕ್ಯಾಪ್ಟನ್ ಡಾ|| ಆರ್. ರಂಗಾಚಾರ್ಯರಿಂದ; ಅವರ ಸೋದರಳಿಯ ರಾಮರಾಜು ಅವರಿಂದ; ಅವರ ಕಡೆಗಾಲದಲ್ಲಿ ಅವರ ಮನೆಗೆ ಹೋಗಿಬರುತ್ತಿದ್ದು ಅವರಿಗೆ ಅಷ್ಟಿಷ್ಟು ನೆರವಾಗುತ್ತಿದ್ದ ಎಸ್.ಬಿ. ಶಂಕರ್ (ಇವರು ಜಿ. ವೆಂಕಟಾಚಲಂ ಅವರ ಬಳಿಯಿದ್ದು, ಅನಂತರ ಆರ್ಟ್ ಡಿಸೈನ್ ಸೆಂಟರ್‌ನಲ್ಲಿ ಕಲಾವಿದರಾಗಿ ಕೆಲಸಮಾಡುತ್ತಿದ್ದರು) ಅವರಿಂದ, ಕೆಲವೊಂದು ವಿವರಗಳನ್ನು ಸಂಗ್ರಹಿಸಿದ್ದೇನೆ. ಅವರಿಗೆಲ್ಲ ನನ್ನ ಕೃತಜ್ಞತೆ ಸಲ್ಲಬೇಕು.

ಈ ಗ್ರಂಥಕ್ಕಾಗಿ ವೆಂಕಟಪ್ಪನವರ ಕಲಾಕೃತಿಗಳನ್ನು ಈಚೆಗೆ ಮತ್ತೊಮ್ಮೆ ಪರಿಶೀಲಿಸಬೇಕಾಯಿತು. ಮೈಸೂರಿನ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿರುವ ಕೃತಿಗಳನ್ನು ಸಾವಧಾನವಾಗಿ ನೋಡಲು ಅವಕಾಶಮಾಡಿಕೊಟ್ಟವರು ಪುರಾವಸ್ತು ಇಲಾಖೆಯ ನಿರ್ದೇಶಕರೂ ನನ್ನ ಮಿತ್ರರೂ ಆದ ಡಾ|| ಅ. ಸುಂದರ ಅವರು. ಅಲ್ಲೇ ಜಗನ್ಮೋಹನ ಚಿತ್ರಾಲಯದಲ್ಲಿರುವ ಕೃತಿಗಳನ್ನು ನೋಡಲು ಅವಕಾಶಮಾಡಿಕೊಟ್ಟವರು ಅದರ ಅಧಿಕಾರಿಗಳಾದ, ಶ್ರೀ ಲಕ್ಷ್ಮೀನಾರಾಯಣ ಅವರು. ಮತ್ತೆ, ಬೆಂಗಳೂರಿನ ವೆಂಕಟಪ್ಪನ ಚಿತ್ರಸಂಗ್ರಹಾಲಯದಲ್ಲಿ ಅಧಿಕಾರಿಗಳಾದ ಶ್ರೀ ಬಿ.ಎಂ. ಚಿಕ್ಕಮಾರೇಗೌಡರು ಕೃತಿಗಳನ್ನು ನೋಡಲು, ಅಧ್ಯಯನಮಾಡಲು ಅವಕಾಶಮಾಡಿಕೊಟ್ಟರು. ವೆಂಕಟಪ್ಪನವರು ಮಾಡಿದ ತೈಲಚಿತ್ರವೊಂದು ಬೆಂಗಳೂರಿನ ಎನ್‌ಎಂಕೆಆರ್‌ವಿ ಹೆಂಗಸರ ಕಾಲೇಜಿನ 'ಶಾಶ್ವತಿ' ಸಂಗ್ರಹದಲ್ಲಿದೆ. ಇದನ್ನು ನೋಡಲು ಅವಕಾಶಮಾಡಿಕೊಟ್ಟವರು ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದ ಪ್ರೊ|| ಚಿ.ನ. ಮಂಗಳಾ ಅವರು. ಇವರಿಗೆಲ್ಲ ಋಣಿಯಾಗಿದ್ದೇನೆ.

ನನ್ನೊಂದಿಗೆ ಈ ಸ್ಥಳಗಳಿಗೆಲ್ಲ ಬಂದು, ಕಲಾಕೃತಿಗಳ ಛಾಯಾ ಚಿತ್ರಗಳನ್ನು ತೆಗೆದು, ಅವುಗಳ ಪ್ರತಿಗಳನ್ನೆಲ್ಲ ನನಗೆ ಕಳುಹಿಸಿಕೊಟ್ಟು ಉಪಕರಿಸಿದವರು ದಿಲ್ಲಿಯ ಕೇಂದ್ರ ಲಲಿತಕಲಾ ಆಕಾಡೆಮಿಯ ಶ್ರೀ ಪ್ರಭಾಜಿತ್ ಸಿಂಗ್ ಅವರು. ಅವರ ಸೌಜನ್ಯಕ್ಕೆ ನಾನು ವಿಶೇಷವಾಗಿ ಅಭಾರಿಯಾಗಿದ್ದೇನೆ.

ಈ ಪುಸ್ತಕವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಡೆಯಿಂದ ಪ್ರಕಟವಾಗುತ್ತಿದೆ. ಇದಕ್ಕೆ ಪ್ರೇರಣೆಯಾಗಿದ್ದ ಆಗಿನ ಸರಕಾರದ ಕಾರ್ಯದರ್ಶಿಗಳು ಶ್ರೀ ಚಿರಂಜೀವಿ ಸಿಂಗರವರಿಗೂ, ಇಲಾಖೆಯ ನಿರ್ದೇಶಕ ರಾಗಿದ್ದ ಶ್ರೀ ಚಂದ್ರಹಾಸ ಗುಪ್ತರವರಿಗೂ, ಸಹ-ನಿರ್ದೇಶಕರಾಗಿದ್ದ ಶ್ರೀ ಕೆ.ಸಿ. ಶಿವಪ್ಪನವರಿಗೂ, ಮತ್ತು ಈಗ ಪ್ರಕಾಶನ ಕೆಲಸವನ್ನು ಆಸಕ್ತಿ ಯಿಂದ ಕೈಗೆತ್ತಿ ಕೊಂಡ ಇಲಾಖೆಯ ಪ್ರಸ್ತುತ ನಿರ್ದೇಶಕರು ಶ್ರೀ ಐ.ಎಂ. ವಿಟ್ಠಲ ಮೂರ್ತಿ ಅವರಿಗೂ ಈ ವಿಭಾಗದ ಸರಕಾರದ ಕಾರ್ಯದರ್ಶಿಗಳು ಶ್ರೀ ಎಸ್.ಆರ್. ವಿಜಯ ಅವರಿಗೂ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಗ್ರಂಥವನ್ನು ಸಿದ್ಧಪಡಿಸಲು ನೆರವಾದ, ವೆಂಕಟಪ್ಪ ಜನ್ಮಶತಾಬ್ದಿ ಸಮಿತಿಯ ಸಂಚಾಲಕರಾದ ಶ್ರೀ. ಎಂ.ಎಸ್. ನಂಜುಂಡರಾಯರಿಗೆ ಋಣಿಯಾಗಿದ್ದೇನೆ.

ಸಾ.ಕೃ. ರಾಮಚಂದ್ರ ರಾವ್

ಜೀವನ . . . .

ಮೈಸೂರಿನಲ್ಲಿ ಮೊದಲ ವರ್ಷಗಳು

(1886 – 1908)

೧

ವೆಂಕಟಪ್ಪನವರ ಹಿರಿಯರು ಚಿತ್ರದುರ್ಗದ ಕಡೆಯವರು. ಚಿತ್ರಗಾರರ ಮನೆತನ. ಅರಮನೆ, ಗುರುಮನೆ, ಮಹಲು, ಗುಡಿ ಚಾವಡಿಗಳಲ್ಲಿ ಗೋಡೆಗಳ ಮೇಲೆ ಬಣ್ಣಗಳಿಂದ ಚಿತ್ರಗಳನ್ನು ಬಿಡಿಸುವುದು, ಹಜಾರಗಳನ್ನು ದಿವಾನಖಾನೆಗಳನ್ನು ಸಿಂಗರಿಸುವುದು ಇವರ ಕಸುಬು; ಕುಂದಣದ ಕೆಲಸವನ್ನೂ ಕೆಲವರು ಹಿಡಿದಿರುವುದುಂಟು. ಹರಿತಸಗೋತ್ರದ ಸೋಮವಂಶ ಆರ್ಯಕ್ಷತ್ರಿಯ ಜನಾಂಗ, ಮನೆಮಾತು ತೆಲುಗು; ಗಂಡಸರ ಹೆಸರಿನ ಕೊನೆಯಲ್ಲಿ ರಾಜು ಎಂದು ಸೇರಿಸಿಕೊಳ್ಳುವುದು ವಾಡಿಕೆ.

ಚಿತ್ರದುರ್ಗದ ಪಾಳೆಯಗಾರಿಕೆ ಮೆದಗೆರೆನಾಯಕನದಾಗಿದ್ದಾಗ ಈ ಚಿತ್ರಗಾರ ಮನೆತನದವರಿಗೆ ಆಸರೆ, ಆದರ ಅಲ್ಲಿ ದೊರೆಯುತ್ತಿತ್ತು. ಮೈಸೂರು ದೊರೆ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ, ನವಾಬ ಹೈದರಾಲಿಯು ಚಿತ್ರದುರ್ಗವನ್ನು ವಶಪಡಿಸಿಕೊಂಡಂದು, ಚಿತ್ರಗಾರರು ಚಿತ್ರದುರ್ಗದಿಂದ ಕಾಲ್ತೆಗೆದು ಮೈಸೂರು ಕಡೆ ವಲಸೆ ಹೊರಟರು. ಮೈಸೂರು ನಗರದ ದೊರೆತನ ಮಾಡುತ್ತಿದ್ದ ರಾಜ ಒಡೆಯರು, ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ವಿಜಯನಗರದ ಅಳಿದುಳಿದ ಅರಸ ಶ್ರೀರಂಗರಾಯನು ತೀರಿಕೊಂಡಮೇಲೆ, ಎಂದರೆ 1610 ರಲ್ಲಿ ಶ್ರೀರಂಗಪಟ್ಟಣದಲ್ಲೇ ಪಟ್ಟಾಭಿಷಿಕ್ತರಾಗಿ ಅಲ್ಲಿಂದಲೇ ರಾಜ್ಯಭಾರಮಾಡತೊಡಗಿದರು. ಮುಂದೆ ಸುಮಾರು ಇನ್ನೂರು ವರ್ಷಗಳು ಮೈಸೂರು ಅರಸೊತ್ತಿಗೆಗೆ ಶ್ರೀರಂಗಪಟ್ಟಣವೇ ರಾಜಧಾನಿ. ಈ ಅರಸರ ಕಲಾಭಿಮಾನವನ್ನು ಕಂಡು ಕಲಾವಿದರು ಶ್ರೀರಂಗಪಟ್ಟಣದಲ್ಲಿ ನೆರೆದರು. ದುರ್ಗದ ಚಿತ್ರಗಾರರೂ ಇಲ್ಲಿಗೆ ಬಂದು ಅರಸರ ಓಲಗಚಾವಡಿಯನ್ನು ಚಿತ್ರಗಳಿಂದ ಕಳೆಗಟ್ಟಿಸುವ ಕೆಲಸದಲ್ಲಿ ನಿಂತರು.

ರಣಧೀರ ಕಂಠೀರವ ನರಸರಾಜ ಒಡೆಯರು (1638-1659) ಪಟ್ಟಕ್ಕೆ ಬಂದಮೇಲೆ ಚಿತ್ರಗಾರರಿಗೂ ಶಿಲ್ಪಿಗಳಿಗೂ ಉತ್ತೇಜನ ಹೆಚ್ಚಿತು. ಶ್ರೀರಂಗಪಟ್ಟಣದಲ್ಲಿ 'ಚಿತ್ರಿಗರ ಕೇರಿ'ಯೇ ಒಂದಿದ್ದಿತೆಂದು ಗೋವಿಂದವೈದ್ಯನ 'ನರಸರಾಜ ವಿಜಯ' (1648)ದಿಂದ ತಿಳಿದು ಬರುತ್ತದೆ. ಅರಮನೆಯಲ್ಲಿ "ಸುರಪನ (ಎಂದರೆ ಇಂದ್ರನ) ಆಸ್ಥಾನಮಂಟಪದ ಪರಿವಿಡಿಯ ಸೋಲಿಸುವಂಥ" ಚಿತ್ರಶಾಲೆಯಿದ್ದಿತಂತೆ; ಅರಮನೆಯ 'ಶಾರದಾಮಂಟಪ'ದಲ್ಲಿ 'ಚಾರುತರ ಚೆಲ್ವ ಚಿತ್ತರ'ಗಳಿದ್ದುವಂತೆ. ಹಳೆಯ ಮೈಸೂರರಮನೆಯಲ್ಲೂ ಜಂತದ ತೊಟ್ಟಿ, ಸಮುಖದ ತೊಟ್ಟಿ, ಸೌಂದರ್ಯವಿಲಾಸದ ತೊಟ್ಟಿ ಮೊದಲಾದ ಭಾಗಗಳಲ್ಲಿ ಕಲಾವಿದರ ಕೆಲಸವಿದ್ದಿತು. ಅಲ್ಲಿನ ಅರಮನೆ ಹಾಳು

ಬೀಳತೊಡಗಿದಾಗ, ಶ್ರೀರಂಗಪಟ್ಟಣದಿಂದ ಚಿತ್ರಗಾರರನ್ನೂ ಅಲ್ಲಿಗೆ ಕಳುಹಿಸಿ ದುರಸ್ತಿ ಮಾಡುವುದೂ ಇದ್ದಿತು.

ಶ್ರೀರಂಗಪಟ್ಟಣದ ಒಂದು ಭಾಗದಲ್ಲಿ ಚಿತ್ರಗಾರರು ತಮ್ಮ ಕುಲದೇವತೆ ನಿಮಿಷಾಂಬಾ ದೇವಿಗೆ ಗುಡಿಯೊಂದನ್ನು ಕಟ್ಟಿಕೊಂಡು ಅದರ ಸುತ್ತ ನೆಲೆಸಿದರಾಗಿ ಅದು 'ಚಿತ್ರಗಾರ ಕೇರಿ'ಯಾಯಿತು. ದುರ್ಗದ ಚಿತ್ರಗಾರರ ಮನೆಯೂ ಇಲ್ಲಿಯೇ ಇದ್ದಿತು. ಟೀಪೂ ಸುಲ್ತಾನನ ಮರಣಾನಂತರ (ಎಂದರೆ 1799 ರಲ್ಲಿ) ಅರಸೊತ್ತಿಗೆಯು ಶ್ರೀರಂಗಪಟ್ಟಣದಿಂದ ಮತ್ತೆ ಮೈಸೂರಿಗೇ ಮರಳಿತಷ್ಟೆ. ಆಗ ಅಲ್ಲಿದ್ದ ಪೂರ್ವದ ಅರಮನೆ ವಾಸಕ್ಕೆ ಯೋಗ್ಯವಾಗಿರದೆ, ಶ್ರೀರಂಗಪಟ್ಟಣದಿಂದ ಬಂದ ಮಹಾರಾಣಿ ಲಕ್ಷಮ್ಮಣ್ಣಿಯವರನ್ನು (ಮೈಸೂರು ಅರಸೊತ್ತಿಗೆಯ ಉತ್ತರಾಧಿಕಾರಿಯ ತಾಯಿ) ದಿವಾನ ಪೂರ್ಣಯ್ಯನವರು (1732-1812) ನಜರಬಾದಿನಲ್ಲಿ ಇಳಿಸಿಕೊಂಡು, ಅರಮನೆಯನ್ನು ಸರಿಪಡಿಸಲು ತೊಡಗಿದರು. ಶ್ರೀರಂಗಪಟ್ಟಣದಿಂದ ಚಿತ್ರಗಾರರೂ ಮೈಸೂರಿಗೆ ಬಂದರು. ಅರಸರ ಆಸರೆಯಲ್ಲಿ, ಅರಮನೆಯ ಊಳಿಗದಲ್ಲಿ ಇರುತ್ತಲಿದ್ದ ಅವರಿಗೆ ಇನ್ನು ಶ್ರೀರಂಗಪಟ್ಟಣದಲ್ಲೇನು ಕೆಲಸ?

ಮೊದಲಿಗೆ ಚಿತ್ರಗಾರರು ಬಂದು ನೆಲೆಸಿದ್ದು ಹಳೆಯ ಅಗ್ರಹಾರದಲ್ಲಿ. ಆದರೆ ಶ್ರೀರಂಗಪಟ್ಟಣದಲ್ಲಿದ್ದಂತೆ, ಇಲ್ಲಿ ಚಿತ್ರಗಾರರದ್ದೇ ಕೇರಿಯೊಂದು ಮೂಡಿಕೊಳ್ಳಲಿಲ್ಲ ಹಲವು ಹತ್ತಾರು ಕಸುಬಿನವರ ನಡುವೆ ಇವರೂ ಬೆರೆತುಹೋದರು. ಚಿತ್ರಗಾರಿಕೆಯನ್ನು ಬಿಟ್ಟು ಉಳಿದ ಕೆಲಸಗಳಲ್ಲೂ ತಮ್ಮನ್ನು ತೊಡಗಿಸಿಕೊಂಡವರಿದ್ದರು. ಆದರೆ ದುರ್ಗದ ಕೃಷ್ಣಪ್ಪ (ವೆಂಕಟಪ್ಪನವರ ಹಿರಿಯರು) ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಉತ್ತಮ ಚಿತ್ರಗಾರರೆಂದು ಹೆಸರಾದರು.

ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಆರನೆಯ ವಯಸ್ಸಿನಲ್ಲೇ ಪಟ್ಟವನ್ನೇರಿ ಅರವತ್ತೊಂಬತ್ತು ವರ್ಷಗಳಷ್ಟು ದೀರ್ಘಕಾಲ (1799 ರಿಂದ 1868 ರವರೆಗೆ) ರಾಜರೆನಿಸಿ ಕೊಂಡಿದ್ದರೂ ದೇಶದಲ್ಲಿ ಆತಂಕಪರಿಸ್ಥಿತಿಯೆಂಬ ನೆವದಿಂದ ಬ್ರಿಟಿಷ್ ಆಳರಸರು 1831 ರಿಂದ 1868ರವರೆಗೂ ತಮ್ಮ ಆಡಳಿತವನ್ನೇ ನೇರವಾಗಿ ನಡೆಸಿದರು. ಈ ಅವಧಿಯಲ್ಲಿ ಜಿಲ್ಲೋ ಕಛೇರಿ, ಕಿಲ್ಲೆ ಕಛೇರಿ, ಮೋತಿಖಾನೆ, ಅಮೃತಮಹಲ್ ಮೊದಲಾದ ಕೆಲವು ಚಿಲ್ಲರೆ ಇಲಾಖೆಗಳಲ್ಲಿ ಮಾತ್ರ ಅರಸರ ಅಧಿಕಾರವನ್ನುಳಿಸಿ ಉಳಿದೆಲ್ಲ ಕಾರುಬಾರನ್ನೂ ಬ್ರಿಟಿಷ್ ಕಮಿಷನರುಗಳೇ ನಡೆಸಿದರು. ಇದರಿಂದ ಮಹಾರಾಜರಿಗೆ ಬೇಕಾದಂತೆ ಬಿಡುವು ದೊರಕಿತು. ಸಾಹಿತ್ಯ, ಸಂಗೀತ, ಕಲೆ, ಧರ್ಮಗಳಲ್ಲಿ ಆಸಕ್ತರಾಗಿದ್ದ ಅವರು ತಮ್ಮ ವೇಳೆಯನ್ನೂ ಹಣವನ್ನೂ ಈ ಕ್ಷೇತ್ರಗಳಲ್ಲಿ ವೆಚ್ಚಮಾಡಲು ಅನುಕೂಲವಾಯಿತು. ಅರಮನೆಯೂ ಅಂದವಾಗಿ ಮೈದಳೆಯಿತು. ಸಾಂಪ್ರದಾಯಿಕವಾದ ಒಡ್ಡೋಲಗವನ್ನು ನಡೆಸಲೆಂದು ಅಂಬಾವಿಲಾಸವೆಂಬ ಭಾಗವನ್ನು ಕಲಾತ್ಮಕವಾಗಿ ಸಿದ್ಧಪಡಿಸಲು ಚಿತ್ರಗಾರರು ನೇಮಕಗೊಂಡರು. ಇವರಲ್ಲಿ ದುರ್ಗದ ಕೃಷ್ಣಪ್ಪನವರೂ ಇದ್ದರು. 1865 ರಲ್ಲಿ ಮಹಾರಾಜರು ತಮಗೆ ಉತ್ತರಾಧಿಕಾರಿಯಾಗುವ ಮಗನನ್ನು (ಚಾಮರಾಜ ಒಡೆಯರು) ದತ್ತುತೆಗೆದುಕೊಂಡ ಸಮಾರಂಭ ನಡೆದದ್ದು ಇಲ್ಲಿಯೆ. ಅರಸರು ಕಲೆಗೆಂದೆ

1868ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ತೀರಿಕೊಂಡರು. ಅವರ ದತ್ತುಪುತ್ರ ಚಾಮರಾಜ ಒಡೆಯರು ಇನ್ನೂ ಐದು ವರ್ಷಗಳ ಮಗುವಾಗಿದ್ದುದರಿಂದ ಬ್ರಿಟಿಷರ ಆಡಳಿತವೇ 1881 ರವರೆಗೆ, ಎಂದರೆ ಚಾಮರಾಜ ಒಡೆಯರಿಗೆ ಹದಿನೆಂಟು ವರ್ಷ ತುಂಬುವವರೆಗೆ, ಮುಂದುವರೆಯಿತು. ಚಾಮರಾಜ ಒಡೆಯರು 1881 ರಿಂದ 1894ರವರೆಗೆ ಆಳಿದರು; ಅವರು ಕಲ್ಕತ್ತೆಯಲ್ಲಿ ತೀರಿಕೊಂಡಮೇಲೆ ಅವರ ಹಿರಿಯ ಮಗ ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟವೇರಿ 1940ರವರೆಗೂ ರಾಜ್ಯವಾಳಿದರು. ಮುಮ್ಮಡಿ ಕೃಷ್ಣರಾಜ ಒಡೆಯರಿಗಿದ್ದ ಕಲಾಭಿಮಾನ ಮತ್ತೆ ಮರುಕಳಿಸಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ಮುಮ್ಮಡಿಯವರ ಕಾಲದಲ್ಲಿ ದುರ್ಗದ ಕೃಷ್ಣಪ್ಪ ಅರಮನೆಯ ಪ್ರಧಾನ ಚಿತ್ರಗಾರನಾಗಿದ್ದಂತೆ ನಾಲ್ವಡಿಯವರ ಕಾಲದಲ್ಲಿ ಕೃಷ್ಣಪ್ಪನವರ ಮಗ ವೆಂಕಟಪ್ಪನವರು.

೨

ವೆಂಕಟಪ್ಪ ಹುಟ್ಟಿದ್ದು ಮೈಸೂರಿನಲ್ಲೇ. ತಾಯಿಯ ಹೆಸರು ರಂಗಮ್ಮ; ವೆಂಕಟಪ್ಪ ಎರಡನೆಯ ಮಗ. ಅವರ ಡೈರಿಯಲ್ಲಿ (1951ರ ಜನವರಿ ಎರಡರಂದು) ಕಾಣುವ ಒಕ್ಕಣೆಯಂತೆ ಅವರು ಹುಟ್ಟಿದ ದಿನ 1886ರ ಜೂನ್ ತಿಂಗಳ ಇಪ್ಪತ್ತ ಮೂರನೆಯ ತೇದಿ (ಸರ್ವಜಿತ್ ಸಂವತ್ಸರದ ಆಷಾಢ ಶುದ್ಧ ದ್ವಿತೀಯಾ). ಆಗ ಮೈಸೂರಿನ ದೊರೆ ಯಾಗಿದ್ದವರು ಚಾಮರಾಜ ಒಡೆಯರು; ದೇಶದ ಆಡಳಿತವನ್ನು ನಡೆಸುತ್ತಿದ್ದವರು ದಿವಾನರಾಗಿದ್ದ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರವರು. ವೆಂಕಟಪ್ಪನ ತಂದೆ ದುರ್ಗದ ಕೃಷ್ಣಪ್ಪ ಮೈಸೂರು ಅರಮನೆಯಲ್ಲೇ ಖಾಸಾ ಚಿತ್ರಗಾರರಾಗಿ ಮನೆತನದ ಕೆಲಸ ಮಾಡುತ್ತಿದ್ದರು. ವಾಸ ಅರಮನೆಯ ನೆರೆಯಲ್ಲೇ. ಹೀಗೆ ವೆಂಕಟಪ್ಪ ಹುಡುಗತನದಲ್ಲಿ ಬೆಳೆದದ್ದು ಅರಮನೆಯ ವಾತಾವರಣದಲ್ಲಿ. ತಂದೆಯೊಂದಿಗೆ ಆಗಾಗ ಅರಮನೆಯೊಳಗೆ ಹೋಗಿ ಅಲ್ಲಿನ ಕಲಾಕೃತಿಗಳನ್ನು ಎಳವೆಯಲ್ಲೇ ನೋಡಿದ ಅನುಭವ; ತಂದೆಯ ಕೆಲಸದಲ್ಲಿ ಅಷ್ಟಿಷ್ಟು ನೆರವಾಗುತ್ತಿದ್ದುದೂ ಉಂಟು.

ವೆಂಕಟಪ್ಪ ಹನ್ನೊಂದು ವರ್ಷ ವಯಸ್ಸಿನ ಹುಡುಗನಾಗಿರುವಾಗ ಅರಮನೆಯಲ್ಲಿ ಬೆಂಕಿಯ ಅನಾಹುತದ ಘಟನೆ. ಆ ವೇಳೆಗೆ ಚಾಮರಾಜ ಒಡೆಯರು ತೀರಿಕೊಂಡು, ಅವರ ಹಿರಿಯ ಮಗ ನಾಲ್ವಡಿ ಕೃಷ್ಣರಾಜ ಒಡೆಯರು ಇನ್ನೂ ಅಪ್ರಾಪ್ತವಯಸ್ಕರಾಗಿದ್ದುದರಿಂದ ಅವರ ಪರವಾಗಿ ತಾಯಿ ಕೆಂಪನಂಜಮ್ಮಣ್ಣಿಯವರು 'ರೀಜೆಂಟ್' ಆಗಿ ಆಡಳಿತ ನಡೆಸು ತ್ತಿದ್ದರು; 'ವಾಣೀವಿಲಾಸ ಸನ್ನಿಧಾನ'ವೆಂದು ಅವರನ್ನು ಕರೆಯುವ ವಾಡಿಕೆ. ನಾಲ್ವಡಿ ಕೃಷ್ಣರಾಜ ಒಡೆಯರು ಹುಟ್ಟಿದ ವರ್ಷ 1885; ವೆಂಕಟಪ್ಪನವರು ಹುಟ್ಟಿದ್ದು ಮರುವರ್ಷ. ಹೀಗೆ ಅವರಿಬ್ಬರು ಒಂದೇ ಓರಗೆಯವರು. ರೀಜೆಂಟ್ ಮಹಾರಾಣಿಯ ಹಿರಿಯ ಮಗಳು ಜಯಲಕ್ಷಮ್ಮಣ್ಣಿಯವರ ಮದುವೆ 1897ರ ಫೆಬ್ರುವರಿ ತಿಂಗಳಿನಲ್ಲಿ ವಿಜೃಂಭಣೆಯಿಂದ ಜರುಗಿತು. ಮದುವೆಯ ಸಮಾರಂಭ ಮುಗಿದ ಕೆಲವು ದಿನಗಳಲ್ಲೇ (ಫೆಬ್ರುವರಿ 28 ರಂದು) ಊಳಿಗದವಳೊಬ್ಬಳ ಅಚಾತುರ್ಯದಿಂದ ಕೋಟೆಯೊಳಗಿದ್ದ ಅರಮನೆಯ ಅಂಗಳದಲ್ಲಿ

ಬೆಂಕಿ ಬಿದ್ದಿತು. ಆಗಿನ ಅರಮನೆ ಬಹುಮಟ್ಟಿಗೆ ಮರದ ಕಟ್ಟಡವಾಗಿದ್ದುದರಿಂದ ಬೆಂಕಿ ಸುಲಭವಾಗಿ ಹರಡಿಕೊಂಡಿತು. ಸೆಜ್ಜೆ, ಅದರ ಮೇಲಣ ಮೂರು ಮಹಡಿಗಳು, ಪುಸ್ತಕಭಂಡಾರ, ಶಸ್ತ್ರಾಸ್ತ್ರಸಂಗ್ರಹದ ಕೋಣೆ, ಸಂಗೀತ ವಾದ್ಯಭವನ, ಬಾಲಾಖಾನೆ ಇವೆಲ್ಲ ಬೆಂಕಿಗೆ ತುತ್ತಾಗಿಬಿಟ್ಟುವು.

ಆಗ ದಿವಾನರಾಗಿದ್ದವರು ಸರ್ ಕುಮಾರಪುರಂ ಶೇಷಾದ್ರಿ ಅಯ್ಯರವರು. ಇವರು ಅರಮನೆಯನ್ನು ಸರಿಪಡಿಸುವ ಕೆಲಸವನ್ನು ಮದರಾಸ್ ಸರಕಾರಕ್ಕೆ ವಾಸ್ತುಶಿಲ್ಪ ಸಲಹೆಗಾರನಾಗಿದ್ದ ಹೆನ್ರಿ ಇರ್ವಿಂಗ್ ಎಂಬ ಬ್ರಿಟಿಷನಿಗೆ ಒಪ್ಪಿಸಿದರು. ಈತನು ಆಗಲೆ ಸಿಮ್ಲಾದಲ್ಲಿ 'ವೈಸ್‌ರೀಗಲ್ ಲಾಜ್' ಎಂಬ ಭವ್ಯಕಟ್ಟಡವನ್ನು ಕಟ್ಟಿ ಹೆಸರುಮಾಡಿಕೊಂಡಿದ್ದನು. ಅರಮನೆಯಲ್ಲಿ ನಾಶವಾದ ಭಾಗವನ್ನು ಅಷ್ಟೇ ಸರಿಪಡಿಸುವುದಕ್ಕಿಂತ, ಹೊಸದಾಗಿ ಅರಮನೆಯ ವಿನ್ಯಾಸವನ್ನು ಮಾರ್ಪಡಿಸಬೇಕೆಂದು ಸಲಹೆ ಮಾಡಿದ. ಹೊಸ ಅರಮನೆಯನ್ನು ಕಟ್ಟಿಸಬೇಕೆಂಬ ಅಪೇಕ್ಷೆ ದಿವಾನ ಪೂರ್ಣಯ್ಯನವರಿಗೇ ಇದ್ದಿತು; 1800 ರಷ್ಟು ಹಿಂದೆ. ಅದಕ್ಕಾಗಿ ಅವರು ಹಲವಾರು ತಜ್ಞರೊಡನೆ ಮಾತನಾಡಿ ಒಂದು ನಕ್ಷೆಯನ್ನೂ ಸಿದ್ಧಪಡಿಸಿದ್ದರು. ಹೆನ್ರಿ ಇರ್ವಿಂಗ್ ಈ ನಕ್ಷೆಯನ್ನು ನೋಡಿದಾಗ ಅವನಿಗೆ ಇದೇ ಸಮರ್ಪಕವೆಂದು ತೋರಿತು. ಅರಮನೆಯ ಪುನರ್ನಿರ್ಮಾಣ ಈ ದಿಕ್ಕಿನಲ್ಲೇ ನಡೆದು 1912ರ ಸುಮಾರಿಗೆ ಮುಗಿಯಿತು. ಈ ಕೆಲಸಕ್ಕೆ ತಿರುಚ್ಚಿ, ಮದರಾಸು, ಕೊಲ್ಲಾಪುರ, ಜಯಪುರ ಮೊದಲಾದ ಕಡೆಗಳಿಂದ ಕೆಲಸಗಾರರನ್ನು ಕರೆಯಿಸಿಕೊಂಡರು; ಮರಗೆಲಸದವರು, ಮೇಸ್ತ್ರಿಗಳು, ಗಾರೆ ಕೆಲಸದವರು, ಕಲ್ಲುಕುಟ್ಟಿಗರು, ಶಿಲ್ಪಿಗಳು, ಚಿತ್ರಗಾರರು ಬೇರೆ ಬೇರೆ ಕಡೆಗಳಿಂದ ಬಂದು ನೆರೆದರು.

ಒಡ್ಡೋಲಗದ ತೊಟ್ಟಿ (ಅಂಬಾವಿಲಾಸ), ಅದರ ಸುತ್ತಮುತ್ತಣ ಭಾಗಗಳು ಇಲ್ಲಿ ಚಿತ್ರದ ಕೆಲಸವನ್ನು ಮಾಡಿಸಲು ತಿರುವಾಂಕೂರಿನ ರಾಜಾ ರವಿವರ್ಮ ಮತ್ತು ಅವರ ಸೋದರ ರಾಜವರ್ಮ ಇವರನ್ನು ಒಪ್ಪಿಸಲಾಯಿತು. ಆ ವೇಳೆಗಾಗಲೆ ರಾಜಾ ರವಿವರ್ಮ ವಿಖ್ಯಾತ ಚಿತ್ರಗಾರರಾಗಿದ್ದರು. ಇವರ ಮೇಲ್ವಿಚಾರಣೆಯಲ್ಲಿ ಮೈಸೂರಿನ ಚಿತ್ರಗಾರರು ಅರಮನೆಯ ಚಿತ್ರಕರ್ಮವನ್ನು ನಿರ್ವಹಿಸಿದರು. ಇವರಲ್ಲಿ ದುರ್ಗದ ಕೃಷ್ಣಪ್ಪನೂ ಇದ್ದಿರಬೇಕು. ಅವರು ಒಡ್ಡೋಲಗದ ತೊಟ್ಟಿಯಲ್ಲಿ ಕೆಲಸಮಾಡುತ್ತಿರುವಾಗ ಮಗ ವೆಂಕಟಪ್ಪನೂ ಅಲ್ಲಿಗೆ ಹೋಗುತ್ತ ಇದ್ದಿರಬೇಕು. ರವಿವರ್ಮನ ಚಿತ್ರಶೈಲಿಯ ಪರಿಚಯ ವೆಂಕಟಪ್ಪನವರಿಗೆ ಆಗಲೇ ಆಗಿದ್ದಿತೆಂದು ತೋರುತ್ತದೆ; ಅವರು ರವಿವರ್ಮನನ್ನು ಹಲವು ಬಾರಿ ಕಂಡೂ ಇರಬೇಕು. ಎಳೆಯ ವಯಸ್ಸಿನಲ್ಲಿ ಆ ಪ್ರಭಾವ ಗಟ್ಟಿಯಾಗಿ ಮೂಡಿಕೊಂಡಿದ್ದರಿಂದಲೇ ವೆಂಕಟಪ್ಪನ ಕಲಾಸಂಸ್ಕಾರ ಬೆಳೆಯಿತು.

೩

1902ರಂದು ಮಹಾರಾಣಿ ರೀಜೆಂಟ್ ಆಡಳಿತ ಮುಗಿದು, ಹದಿನೆಂಟು ವರ್ಷವಯಸ್ಸಿನ ನಾಲ್ವಡಿ ಕೃಷ್ಣರಾಜ ಒಡೆಯರು ಮಹಾರಾಜರಾಗಿ ಅಧಿಕಾರಸೂತ್ರವನ್ನು ವಹಿಸಿಕೊಂಡರು. ಅದೇ ವರ್ಷ ಅವರಿಗಿಂತ ಕಿರಿಯರಾದ ವೆಂಕಟಪ್ಪ ಮೈಸೂರಿನಲ್ಲೇ ಇಂಡಸ್ಟ್ರಿಯಲ್ ಸ್ಕೂಲಿಗೆ ಸೇರಿದರು. ಉದ್ಯಮಿಗಳಿಗೆ ಮತ್ತು ಕಾರ್ಮಿಕರಿಗೆ ಶಿಕ್ಷಣವನ್ನು ಒದಗಿಸಲೆಂದು ಈ ಶಾಲೆ

1892 ರಷ್ಟು ಹಿಂದೆಯೇ ಏರ್ಪಟ್ಟಿದ್ದಿತು. ಇಲ್ಲಿ ಮುಖ್ಯವಾಗಿ ಕಲಿಸುತ್ತಿದ್ದುದು ಮರಗೆಲಸ ಮತ್ತು ಬೆತ್ತದ ಕೆಲಸ. ಆದರೆ ಶಿಕ್ಷಣದ ಹರವಿನಲ್ಲಿ ಚಿತ್ರ, ಗಂಧದ ಮರದಲ್ಲಿ ಕೆತ್ತನೆ, ಪುಸ್ತಕಗಳ ಹೊಲಿಗೆ-ಹೊದ್ದಿಕೆ, ಬಟ್ಟೆ ನೇಯುವುದು ಮೊದಲಾದುವೂ ಸೇರಿದ್ದುವು. ಈ ಶಾಲೆ ಮೊದಲು ನಜರಬಾದಿನಲ್ಲಿದ್ದಿತು. ಮುಂದೆ ಈ ಶಾಲೆಯನ್ನೂ, ಇಟ್ಟಿಗೆಗೂಡಿನಲ್ಲಿರುತ್ತಿದ್ದ ಇಂಜಿನಿಯರಿಂಗ್ ಸ್ಕೂಲನ್ನೂ ಸೇರಿಸಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಎಂಬ ಸಂಸ್ಥೆಯನ್ನು ವ್ಯವಸ್ಥೆ ಮಾಡಿದರು. 1906ರಲ್ಲಿ ಮೈಸೂರಿಗೆ ಬಂದಿದ್ದ ವೇಲ್ಸ್ ರಾಜಕುಮಾರ (ಮುಂದೆ ಐದನೆಯ ಜಾರ್ಜ್ ಎಂದು ಬ್ರಿಟಿಷ್ ದೊರೆ, ಭಾರತದ ಚಕ್ರವರ್ತಿಯಾದವನು) ಈ ಸಂಸ್ಥೆಯ ಕಟ್ಟಡದ ಶಿಲಾನ್ಯಾಸ ಮಾಡಿದ. 1910ರಲ್ಲಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಸಮಿತಿಯೊಂದು ಏರ್ಪಟ್ಟು ಈ ಸಂಸ್ಥೆಯ ಆಡಳಿತ ಅಚ್ಚುಕಟ್ಟಾಯಿತು.

ವೆಂಕಟಪ್ಪ ಕಲಿತದ್ದೇನೊ ನಜರಬಾದಿನಲ್ಲಿರುತ್ತಿದ್ದ ಹಳೆಯ ಇಂಡಸ್ಟ್ರಿಯಲ್ ಸ್ಕೂಲಿನಲ್ಲೆ. ಇಲ್ಲಿ ಎಷ್ಟು ಕಾಲ ಕಲಿತರೆಂಬುದು ತಿಳಿದಿಲ್ಲ. ಆದರೆ ಅದೇ ವರ್ಷ ಅವರು ಮದರಾಸಿನ ಸರಕಾರಿ ಕಲಾ ಪರೀಕ್ಷೆಗೆ ಕುಳಿತರೆಂಬ ವಿವರವೂ ಇದೆ. ಅವರು ಮದರಾಸಿನ ಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು 1906ರಲ್ಲಿ. ಅವರು ಇದಕ್ಕಾಗಿ ಕಲಿತದ್ದು ಮೂರು ವಿಶಿಷ್ಟ ಕಲಾಪ್ರಕಾರಗಳನ್ನು, ರೇಖಾಚಿತ್ರ, ವರ್ಣಚಿತ್ರ ಮತ್ತು ಶಿಲ್ಪ. ಆದ್ದರಿಂದ ಏನಿಲ್ಲವೆಂದರೂ ಎರಡು-ಮೂರು ವರ್ಷಗಳಾದರೂ ಅವರು ಇದಕ್ಕಾಗಿ ಅಭ್ಯಾಸ ಮಾಡಿರಬೇಕು. ಪರೀಕ್ಷೆಗಾಗಿ ಮದರಾಸಿಗೆ ಹೋಗಿದ್ದರೆಂದು ತೋರುತ್ತದೆ.

ಮದರಾಸಿನ ಕಲಾಶಾಲೆ 1880 ರಷ್ಟು ಹಿಂದೆಯೇ ಆಗಿನ ಮದರಾಸ್ ಪ್ರಾಂತ್ಯ ಸರಕಾರದಿಂದ ಏರ್ಪಟ್ಟು, ಶಾಲೆಯ ವ್ಯವಸ್ಥೆಗೆ ಅರ್ನೆಸ್ಟ್ ಬಿನ್‌ಫೀಲ್ಡ್ ಹ್ಯಾವೆಲ್ (1861-1915) ಎಂಬ ಕಲಾಪರಿಣತರು ಇಂಗ್ಲೆಂಡಿನಿಂದ ಬಂದು 1884 ರಿಂದ 1896ರವರೆಗೂ ಅದರ ಮುಖ್ಯಸ್ಥರಾಗಿದ್ದರು. ಇವರಿಗೆ ಭಾರತದೇಶದ ಕಲೆಯೆಂದರೆ ತುಂಬ ಮೆಚ್ಚುಗೆ; ಭಾರತೀಯ ಕಲಾ ಪ್ರಕಾರಗಳ ಪ್ರಸಾರಕ್ಕೆ, ಪ್ರಸಿದ್ಧಿಗೆ ಬಹುವಾಗಿ ಶ್ರಮಿಸಿದರು. 1896ರಲ್ಲಿ ಅವರು ಮದರಾಸನ್ನು ಬಿಟ್ಟು ಕಲ್ಕತ್ತೆಗೆ ಹೋಗಿ ಅಲ್ಲಿನ ಸರಕಾರೀ ಕಲಾಶಾಲೆಯ ಮುಖ್ಯಸ್ಥರಾದರು. ಆದರೆ ವೆಂಕಟಪ್ಪ ಮದರಾಸಿನ ಪರೀಕ್ಷೆಗೆ ಕುಳಿತಿದ್ದಾಗ ಹ್ಯಾವೆಲ್ಲರ ಪ್ರಸಿದ್ಧಿ ಇನ್ನೂ ಉಳಿದಿತ್ತು. ಇವರ ಬಳಿ ಕಲಿಯಬೇಕೆಂಬ ಕಾತರ ವೆಂಕಟಪ್ಪನಿಗೆ ಮದರಾಸಿನಲ್ಲೇ ಒದಗಿದ್ದಿದ್ದರೆ ಸೋಜಿಗವೇನಲ್ಲ. ಕಲ್ಕತ್ತೆಗೆ ಹೋಗಿ, ಅಲ್ಲಿನ ಕಲಾಶಾಲೆಯನ್ನು ಸೇರಬೇಕೆಂಬ ಬಯಕೆ ಅವರಲ್ಲಿ ಬೇರು ಬಿಟ್ಟದ್ದು ಹೀಗೆ ಎಂದು ತೋರುತ್ತದೆ.

ವೆಂಕಟಪ್ಪ ಮದರಾಸಿನಲ್ಲಿ ಕಲಾ ಪರೀಕ್ಷೆಯನ್ನು ಮುಗಿಸಿ ಮೈಸೂರಿಗೆ ಹಿಂದಿರುಗಿದ ವರ್ಷ 1906; ಅದೇ ವರ್ಷ ಹ್ಯಾವೆಲ್ ಅನಾರೋಗ್ಯದ ನಿಮಿತ್ತ ಕಲಾಶಾಲೆಯಿಂದ ರಜೆಪಡೆದು ಸ್ವದೇಶಕ್ಕೆ ಹಿಂದಿರುಗಿದ್ದರು. ಆದರೆ ಆರೋಗ್ಯ ಸುಧಾರಿಸಿದಮೇಲೆ, ಕಲ್ಕತ್ತೆಗೆ ಮರಳಿ ಬರುವರೆಂದು ನಿರೀಕ್ಷೆ ಇದ್ದಿತು. ಮೂರು ವರ್ಷಗಳನಂತರ ವೆಂಕಟಪ್ಪ ಕಲ್ಕತ್ತಾ ಕಲಾಶಾಲೆಗೆ ಸೇರಿಕೊಂಡಾಗಲೇ ಹ್ಯಾವೆಲ್ ಹಿಂದಿರುಗುವುದಿಲ್ಲವೆಂಬ ಸುದ್ದಿ ಬಂದದ್ದು !

ವೆಂಕಟಪ್ಪ ಕಲಾಶಿಕ್ಷಣಕ್ಕೆಂದು ಮದರಾಸಿಗೆ ಹೋದಾಗ ಮೈಸೂರಿನ ದಿವಾನರಾಗಿ ಆಡಳಿತ ನೋಡಿಕೊಳ್ಳುತ್ತಿದ್ದವರು ಸರ್ ಪಿ. (ಪೂರ್ಣಯ್ಯ) ಎನ್. (ನರಸಿಂಗರಾವ್) ಕೃಷ್ಣಮೂರ್ತಿಯವರು; ಅವರ ಅಧಿಕಾರಾವಧಿ 1901 ರಿಂದ 1906ರವರೆಗೆ. ದಿವಾನ್ ಪೂರ್ಣಯ್ಯನವರ ವಂಶದವರಾದ ಕೃಷ್ಣಮೂರ್ತಿ ಕಲಾರಸಿಕರು. ವೆಂಕಟಪ್ಪನಲ್ಲಿ ಮೊದಲ ಆಸಕ್ತಿಯನ್ನು ವಹಿಸಿದವರು ಅವರೆ. ಅವರ ಪ್ರೋತ್ಸಾಹದಿಂದಲೆ ವೆಂಕಟಪ್ಪ ಶಿಕ್ಷಣಕ್ಕೆಂದು ಮದರಾಸಿಗೆ ಹೋದದ್ದು . ಆದರೆ, ಮದರಾಸಿನಿಂದ ಹಿಂದಿರುಗುವ ವೇಳೆಗೆ ಕೃಷ್ಣಮೂರ್ತಿಯವರು ನಿವೃತ್ತರಾಗಿ ಸರ್ ವಿ. (ವಿಶ್ವನಾಥ) ಪಿ. (ಪಾಟಣಕರ) ಮಾಧವರಾಯರು ದಿವಾನರಾಗಿದ್ದರು (1906-1909). ವೆಂಕಟಪ್ಪ ಆಗ ಇಪ್ಪತ್ತು ವರ್ಷದ ತರುಣ. ಅರಮನೆಯ ದುರಸ್ತಿಯ ಕೆಲಸ ಇನ್ನೂ ಮುಗಿದಿರಲಿಲ್ಲ . ಒಡ್ಡೋಲಗದ ತೊಟ್ಟಿಯ ಅಲಂಕರಣವೂ ನಡೆಯುತ್ತಿತ್ತು . ವೆಂಕಟಪ್ಪನ ತಂದೆ ಅಲ್ಲಿಯೇ ಕೆಲಸ ಮಾಡುತ್ತಿರುವಾಗ ವೆಂಕಟಪ್ಪನೂ ಹೋಗಿ ಅದೂ ಇದೂ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದರು. ವೆಂಕಟಪ್ಪನ ಕೆಲಸವನ್ನು ಆಗಲೇ ಅರಮನೆ ಅಧಿಕಾರಿಗಳು ಕೆಲವರು ಮೆಚ್ಚಿಕೊಂಡು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಹೇಳಿದರು. ಆಗ ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ಆರ್.ಎಚ್. ಕ್ಯಾಂಪ್‌ಬೆಲ್ ಕಲಾಭಿಮಾನಿ; ಅವರೂ ವೆಂಕಟಪ್ಪನ ಕೆಲಸವನ್ನು ಮೆಚ್ಚಿಕೊಂಡು, ಹೆಚ್ಚಿನ ಶಿಕ್ಷಣಕ್ಕೆ ಅವರನ್ನು ಕಲ್ಕತ್ತಾ ಕಲಾಶಾಲೆಗೆ ಕಳುಹಿಸಬೇಕೆಂದು ಮಹಾರಾಜರಿಗೆ ಸಲಹೆ ಮಾಡಿದರು.

ಆ ಕಾಲಕ್ಕೆ ಕಲ್ಕತ್ತೆಯ ಸರಕಾರೀ ಕಲಾಶಾಲೆ ನಾಡಿನಲ್ಲೆಲ್ಲ ವಿಖ್ಯಾತವಾಗಿದ್ದ ಸಂಸ್ಥೆ. ಭಾರತದ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಕರ್ಜನ್ ಸ್ವತಃ ಅದರಲ್ಲಿ ಆಸಕ್ತಿಯನ್ನು ವಹಿಸಿದ್ದ . ಮೈಸೂರು ಸಂಸ್ಥಾನದ ಭಾಗ್ಯವಿಧಾತರಾಗಿದ್ದ ಬ್ರಿಟಿಷ್ ಅಧಿಕಾರಿಗಳಿಗೆ ಅದರಲ್ಲಿ ಆದರ ಬಂದುದೇನು ಸೋಜಿಗವಲ್ಲ . ಆದರೆ ವೆಂಕಟಪ್ಪನಿಗೂ ಅದೇ ಕಾಲಾಶಾಲೆಗೆ ಹೋಗಬೇಕೆಂಬ ತವಕವಿದ್ದಿತು; ಆದರೆ ಅದು ಹ್ಯಾವೆಲ್ಲರ ಬಳಿ ಕಲಿಯಬೇಕೆಂಬ ಬಯಕೆಯಿಂದ.

ಮಹಾರಾಜರ ಮನಸ್ಸನ್ನು ಒಲಿಸಲು ಇನ್ನೂ ಒಬ್ಬರು ನೆರವಾದರು. ಅವರು ಅರಮನೆ ಕಟ್ಟೋಣದ ಮುಖ್ಯಸ್ಥರಾಗಿದ್ದ ಕಿಲ್ಲೆ-ದಫ್ತರ್ ಬಕ್ಷಿ; ಅರಸರ ಮನೆತನದವರು, ಮಹಾರಾಜರ ನೆಂಟರು. ಮೈಸೂರು ಅರಮನೆಯ ವ್ಯವಹಾರಗಳನ್ನು ವ್ಯವಸ್ಥೆಗೊಳಿಸಲೆಂದು 1868 ರಲ್ಲಿ ಮೇಜರ್ ಜಿ.ಸಿ.ಬಿ. ಇಲಿಯಟ್ ಎಂಬ ಬ್ರಿಟಿಷ್ ನ್ಯಾಯವೇತ್ತನೂ, ಸಿ.(ಚಟ್ಟೆಪಟ್ಟಣಂ) ವಿ.(ವೀರವಲ್ಲಿ) ರಂಗಚಾರ್ಯ (ಮರಣ 1868) ಎಂಬ ಅರಮನೆ ನಿಯಂತ್ರಕರು (ಮುಂದೆ ದಿವಾನರೂ ಆದರು) ಕೂಡಿ ಅರಮನೆಯ ಆಡಳಿತವು ಮೂರು ಮುಖ್ಯ ಕಛೇರಿಗಳಲ್ಲಿ , ಎಂಟು ಇಲಾಖೆಗಳಲ್ಲಿ ನಡೆಯಬೇಕೆಂದು ಗೊತ್ತುಪಡಿಸಿದರು. ಮೂರು ಕಛೇರಿಗಳು ಅರಮನೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ದಾಖಲೆಗಳನ್ನೂ ನಿರ್ವಹಿಸುವ ಅರಮನೆ ದಫ್ತರ್; ಅರಮನೆಯ ಕಾವಲು, ಸೇವೆ, ಪರಿವಾರ, ಸಿಬ್ಬಂದಿ ಇವನ್ನೆಲ್ಲ ನೋಡಿಕೊಳ್ಳುವ ಕಿಲ್ಲೆ-ದಫ್ತರ್; ಅರಮನೆಯಲ್ಲಿ ಮತ್ತು ಸಾರ್ವಜನಿಕವಾಗಿ ಆಗಾಗ ನಡೆಯಬೇಕಾದ ಉತ್ಸವ, ಸಮಾರಂಭಗಳನ್ನು ನೋಡಿಕೊಳ್ಳುವ ಜಿಲ್ಲೋ-ದಫ್ತರ್.

ಧಾರ್ಮಿಕ ಸಂಸ್ಥೆಗಳು, ಒಳಗಣ ಮತ್ತು ಹೊರಗಣ ಊಳಿಗದವರು, ಆನೆ-ಕುದುರೆಗಳ ಲಾಯ, ಗೋಶಾಲೆ ಮೊದಲಾದುವನ್ನೆಲ್ಲ ಇಲಾಖೆಗಳು ನೋಡಿಕೊಳ್ಳುತ್ತಿದ್ದುವು. ಕಛೇರಿಗಳ ಮುಖ್ಯಸ್ಥರಾಗಿದ್ದವರು ಸಾಮಾನ್ಯವಾಗಿ ಅರಸು ಮನೆತನದವರೆ, ಮಹಾರಾಜರ ನೆಂಟರಾಗಿದ್ದು ಅವರಿಗೆ ವಿಶ್ವಾಸಪಾತ್ರರಾಗಿದ್ದವರೆ. ಅವರನ್ನು ಬಕ್ಷಿಗಳೆಂದು ಕರೆಯುವ ವಾಡಿಕೆ. ಅರಮನೆಯ ದುರಸ್ತಿ, ವಿಸ್ತರಣ, ಅಲಂಕರಣ ಕೆಲಸಗಳು ನಡೆಯುತ್ತಿದ್ದಾಗ ಅವುಗಳ ಮೇಲ್ವಿಚಾರಣೆಯನ್ನು ಕಿಲ್ಲೆ-ದಫ್ತರ್ ಬಕ್ಷಿಗೆ ವಹಿಸಿದ್ದರು.

ಒಡ್ಡೋಲಗದ ಅಂಗಳದಲ್ಲಿ ಚಿತ್ರದ ಕೆಲಸ ನಡೆಯುತ್ತಿರುವಾಗ ಈ ಕಿಲ್ಲೆ-ದಫ್ತರ್ ಬಕ್ಷಿ ತರುಣ ವೆಂಕಟಪ್ಪನ ಕಲಾ ಕೌಶಲವನ್ನು ಕಂಡುಕೊಳ್ಳುವ ಅವಕಾಶ ಒದಗಿತು. ಇದನ್ನು ಅವರು ಮಹಾರಾಜರ ಗಮನಕ್ಕೂ ತಂದರು. ಮುಂದೆ ಹೆಚ್ಚಿನ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನವನ್ನು ನೀಡಿ ಹೊರಗಣ ಶಾಲೆಗಳಿಗೆ ಕಳುಹಿಸುವ ಯೋಜನೆಯಲ್ಲಿ ಅರಮನೆಯ ಕಡೆಯಿಂದ ಯೋಗ್ಯರಾದವರನ್ನು ಸೂಚಿಸಲು ಕರೆಬಂದಾಗ ಕಿಲ್ಲೆ-ದಫ್ತರ್ ಬಕ್ಷಿ ವೆಂಕಟಪ್ಪನ ಹೆಸರನ್ನು ಸೂಚಿಸಿದರು; ಮಹಾರಾಜರು ಒಪ್ಪಿದರು.

ಈ ಸಂದರ್ಭದಲ್ಲಿ ಒಂದು ಕತೆಯನ್ನು ಕಲಾವಿದ ಸುಬ್ರಹ್ಮಣ್ಯರಾಜು ಅವರಿಂದ ಕೇಳಿದ್ದೇನೆ. ವೆಂಕಟಪ್ಪ ಇನ್ನೂ ಹುಡುಗನಾಗಿದ್ದಾಗಲೆ ಅರಮನೆಯ ಚಿತ್ರಗಾರರ ನಡುವೆ ಸೇರಿ ಕೆಲಸ ಮಾಡುತ್ತಿದ್ದರು. ಅಲ್ಲಿ ಸುಬ್ರಹ್ಮಣ್ಯರಾಜು ಅವರ ತಾತ ಚಿತ್ರಗಾರರ ಕೆಲಸ ನೋಡಿ ಮಜೂರಿ ಕೊಡುವ ಅಧಿಕಾರದಲ್ಲಿದ್ದರು. ಅವರು ವೆಂಕಟಪ್ಪನ ಕೆಲಸವನ್ನು ಮೆಚ್ಚಿ, ಹಿರಿಯ ಚಿತ್ರಗಾರರಿಗೆ ಕೊಡುವಷ್ಟೆ ಮಜೂರಿಯನ್ನು ಇವರಿಗೂ ಕೊಡುತ್ತಿದ್ದರು. ಇದು ಹಿರಿಯ ಚಿತ್ರಗಾರನೊಬ್ಬನಿಗೆ ಹಿಡಿಸಲಿಲ್ಲ. ಆತ ಸುಬ್ರಹ್ಮಣ್ಯರಾಜು ಅವರ ತಾತನ ಬಳಿ ಬಂದು "ಮೀಸೆ ಹೊತ್ತವರಿಗೂ ಒಂದೇ ಮಜೂರಿ, ಮೀಸೆ ಕಾಣದ ಹುಡುಗನಿಗೂ ಒಂದೇ ಮಜೂರಿ! ಇದು ಏನು ನ್ಯಾಯ" ಎಂದು ಕೇಳಲು ಅವರು "ಆ ಹುಡುಗನನ್ನೇ ಕೇಳಿ, ಹೋಗಿ" ಎಂದು ಹೇಳಿ ಕಳುಹಿಸಿದರು ಆತ ಬಂದು ವೆಂಕಟಪ್ಪನ ಮುಂದೆ ಇದೇ ಆಕ್ಷೇಪಣೆಯನ್ನೆತ್ತಲು, ವೆಂಕಟಪ್ಪ ತಟ್ಟನೆ "ಕೆಲಸಮಾಡುವುದು ಮೀಸೆಯಲ್ಲ, ಕೈ!" ಎಂದು ಹೇಳಿದರು. ಆಗಿನಿಂದಲೂ ವೆಂಕಟಪ್ಪನಿಗೆ ಅದೇ ಸ್ವಾಭಿಮಾನ, ಧೈರ್ಯ.

೪

ಮಹಾರಾಣಿ-ರೀಜೆಂಟ್ ಅವರ ಆಳ್ವಿಕೆಯ ಸಮಯದಲ್ಲಿ, ಆಡಳಿತವನ್ನು ನೋಡಿ ಕೊಳ್ಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಯೋಜನೆಯೊಂದನ್ನು ಜಾರಿಗೆ ತಂದಿದ್ದರು. ಈ ದೇಶದಲ್ಲಿ ಯೋಗ್ಯರಾದ, ಪ್ರತಿಭಾಶಾಲಿಗಳಾದ ತರುಣರನ್ನು ಬ್ರಿಟಿಷರ ನೇರವಾದ ಆಡಳಿತಕ್ಕೆ ಒಳಪಟ್ಟ ಮುಂಬಯಿ, ಮದರಾಸ್ ಮೊದಲಾದ 'ಮುಂದುವರಿದ' ಸ್ಥಳಗಳಲ್ಲಿದ್ದ ಉಚ್ಚ ಶಿಕ್ಷಣಶಾಲೆಗಳಿಗೋ, ಸಾಧ್ಯವಾದರೆ ಇಂಗ್ಲೆಂಡ್ ದೇಶದ ಶಾಲೆಗಳಿಗೋ ಕಳುಹಿಸಿ ಅಲ್ಲಿ ಶಿಕ್ಷಣ ಪಡೆದು ಹಿಂದಿರುಗಿ ಬಂದು ಇಲ್ಲಿನ ಔದ್ಯಮಿಕ, ಆರ್ಥಿಕ ಪ್ರಗತಿಗೆ ನೆರವಾಗಬೇಕೆಂಬುದು ಯೋಜನೆಯ ಆಶಯ. ಪ್ರತಿ ವಿದ್ಯಾರ್ಥಿಗೂ ಸರಕಾರದಿಂದ ತಿಂಗಳೊಂದಕ್ಕೆ ಹದಿನೈದು-ಇಪ್ಪತ್ತು ರೂಪಾಯಿಗಳಷ್ಟು ವಿದ್ಯಾರ್ಥಿ

ವೇತನವೂ ದೊರಕುತ್ತಿತ್ತು. ನಮ್ಮ ದೇಶದಲ್ಲೇ ಈ ವಿಭಾಗಗಳಲ್ಲಿ ಶಿಕ್ಷಣ ದೊರೆಯದಿದ್ದಲ್ಲಿ ಮಾತ್ರ ಹೊರಗಣ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುತ್ತಿದ್ದರು. ಮುಖ್ಯವಾಗಿ ಉದ್ಯಮ, ವಿಜ್ಞಾನ, ವಾಣಿಜ್ಯ ಈ ವಿಭಾಗಗಳಲ್ಲಿಯೇ ಉಚ್ಚ ಶಿಕ್ಷಣಕ್ಕೆಂದು ಹುಡುಗರನ್ನು ಕಳುಹಿಸುವ ಏರ್ಪಾಡಿದ್ದಿತು. ಈ ಯೋಜನೆಯು 1916-1917 ರಲ್ಲಿಯೇ ಸುವ್ಯವಸ್ಥಿತವಾಯಿತಾದರೂ, ಅದಕ್ಕೆ ಮೊದಲೂ ಮೈಸೂರಿನಿಂದ ತರುಣರನ್ನು ಮುಂಬಯಿಯ ಸಿಡೆನ್‌ಹ್ಯಾಂ ಕಾಲೇಜ್ ಆಫ್ ಕಾಮರ್ಸ್, ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗಳಿಗೂ, ಮದರಾಸಿನ ಆರ್ಟ್ಸ್ ಸ್ಕೂಲಿಗೂ ಕಳುಹಿಸಿದ್ದುಂಟು. ಹಾಗೆ ಉಚ್ಚ ಶಿಕ್ಷಣದ ಸೌಲಭ್ಯವನ್ನು ಪಡೆದುಕೊಳ್ಳಲು ಯೋಗ್ಯರಾದ ವಿದ್ಯಾರ್ಥಿಗಳನ್ನು ಸೂಚಿಸಲು ಎಲ್ಲ ಕಚೇರಿಗಳ, ಇಲಾಖೆಗಳ ಮುಖ್ಯಸ್ಥರಿಗೂ ಕರೆ ಬರುತ್ತಿತ್ತು.

ವೆಂಕಟಪ್ಪ ಒಲಿದ ಕ್ಷೇತ್ರ ಉದ್ಯಮವೂ ಅಲ್ಲ, ವಾಣಿಜ್ಯವೂ ಅಲ್ಲ, ವಿಜ್ಞಾನವೂ ಅಲ್ಲ; ಕಲೆ. ಕಲೆಯಿಂದ ದೇಶದ ಆರ್ಥಿಕ ಪ್ರಗತಿಯಾದೀತೆಂಬ ಕಲ್ಪನೆ ಆಗಿನ ಅಧಿಕಾರಿಗಳಿಗೆ ಇರಲಿಲ್ಲ. ಆದ್ದರಿಂದ ಸ್ವಾಭಾವಿಕವಾಗಿ ವೆಂಕಟಪ್ಪನವರಿಗೆ ಈ ಅವಕಾಶ ದೊರೆಯುತ್ತಿರಲಿಲ್ಲ. ಆದರೆ ಕಿಲ್ಲೆ-ದಫ್ತರ್ ಬಕ್ಷಿ ಆಸಕ್ತಿ ವಹಿಸಿದ್ದರಿಂದ, ಮಹಾರಾಜರೇ ನೇರವಾಗಿ ಸಲಹೆಮಾಡಿದ್ದರಿಂದ ವೆಂಕಟಪ್ಪ ಮದರಾಸಿನ ಸರಕಾರೀ ಕಲಾ ಪರೀಕ್ಷೆಗೆ ಕೂಡುವುದಾಯಿತು; ಮತ್ತೆ ಕಲ್ಕತ್ತೆಯ ಸರಕಾರೀ ಕಲಾಶಾಲೆಗೂ ಹಾಗೆಯೇ ಹೋಗುವುದಾಯಿತು. ವಿದ್ಯಾರ್ಥಿವೇತನಗಳ ವಿತರಣೆ ಮೈಸೂರಿನಲ್ಲಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್-ಜನರಲ್ ಅವರ ಹೊಣೆಯಾಗಿದ್ದಿತು. ಆಗ ಈ ಅಧಿಕಾರದಲ್ಲಿದ್ದವರು ಹೊರ್ಮಸ್ಜಿ ಜೆಹಾಂಗೀರ್ ಭಾಭಾ ಎಂಬ ಪಾರ್ಸಿ ಗೃಹಸ್ಥರು; ಮುಂದೆ ವಿಶ್ವವಿಖ್ಯಾತ ವಿಜ್ಞಾನಿಯಾದ ಭಾಭಾ ಅವರ ತಂದೆ. ವೆಂಕಟಪ್ಪ ಬೆಂಗಳೂರಿಗೆ ಬಂದಮೇಲೆ ವಿಜ್ಞಾನಿ ಭಾಭಾ ಅವರೊಂದಿಗೆ ನಿಕಟವಾದ ಸಂಪರ್ಕ ಒದಗಿತು. ಆದರೆ ಮೈಸೂರಿನಿಂದ ವಿದ್ಯಾರ್ಥಿವೇತನವನ್ನು ಪಡೆದುಕೊಳ್ಳುವಾಗ ತಂದೆ ಭಾಭಾ ಅವರ ಪರಿಚಯ ಏನೇನೂ ಇರಲಿಲ್ಲ. ಆದರೂ ಕಿಲ್ಲೆ-ದಫ್ತರ್ ಬಕ್ಷಿ ವೆಂಕಟಪ್ಪನ ಪ್ರತಿಭೆಯ ವಿಚಾರ ಭಾಭಾ ಅವರಿಗೆ ಹೇಳಿದ್ದುದರಿಂದ ವಿದ್ಯಾರ್ಥಿವೇತನ ಏನೂ ಕಷ್ಟವಿಲ್ಲದೆ ಮಂಜೂರಾಯಿತು.

ಹೀಗೆ ವಿದ್ಯಾರ್ಥಿವೇತನವನ್ನು ಪಡೆದುಕೊಂಡು ವೆಂಕಟಪ್ಪನವರು ಕಲ್ಕತ್ತೆಯಲ್ಲಿದ್ದ ಸರಕಾರೀ ಕಲಾಶಾಲೆಗೆ ಉಚ್ಚ ಶಿಕ್ಷಣಕ್ಕೆಂದು ಹೊರಟುನಿಂತ ವರ್ಷ 1908. ಅವರು ಮೈಸೂರಿನಿಂದ ಹೊರಡುವಾಗ ಹ್ಯಾವೆಲ್ ಬಳಿ ಕಲಿಯುವೆನೆಂಬ ಉತ್ಸಾಹವಿದ್ದಿತು; ಚಿತ್ರಕಲೆಯಲ್ಲಿ ಪರಿಣತನಾಗುವೆನೆಂಬ ಧೈರ್ಯವಿದ್ದಿತು; ತನ್ನನ್ನು ವಿಶ್ವಾಸದಿಂದ ಕಂಡುಕೊಂಡು ಈ ಅವಕಾಶವನ್ನು ಕಲ್ಪಿಸಿಕೊಟ್ಟ ಮಹಾರಾಜರ ವಿಚಾರವಾಗಿ ಕೃತಜ್ಞತಾಭಾವವಿದ್ದಿತು. ಪಯಣದ ಸಿದ್ಧತೆಗಳು ಮುಗಿದು ಮೈಸೂರು ಬಿಡುವ ಸಮಯಕ್ಕೆ ಆ ವರ್ಷ ಮುಗಿದು ಮರು ವರ್ಷ ಕಾಲಿಟ್ಟಿದ್ದಿತು.

ಬಂಗಾಳದ ಕಲಾಶಾಲೆಯಲ್ಲಿ

(1909 – 1916)

೧

ವೆಂಕಟಪ್ಪ ಕಲಾಶಾಲೆಗೆ ಸೇರಲೆಂದು, ಮೈಸೂರಿನ ಸರ್ಕಾರದಿಂದ ಪತ್ರವನ್ನೂ ವಿದ್ಯಾರ್ಥಿ ವೇತನವನ್ನೂ ಹೊತ್ತು, ಕಲ್ಕತ್ತೆಗೆ ಬಂದು ತಲುಪಿದ್ದು 1909ರಲ್ಲಿ. "ಚಿತ್ರಕಲೆ ಮತ್ತು ಶಿಲ್ಪ ವಿಭಾಗಗಳಲ್ಲಿ ವಿಶೇಷವಾಗಿ ಉಚ್ಚ ಶಿಕ್ಷಣವನ್ನು ಪಡೆಯುವುದು" ವಿದ್ಯಾರ್ಥಿವೇತನದ ಉದ್ದೇಶ. ಆ ಕಾಲಕ್ಕೆ ಕಲ್ಕತ್ತೆ ಇಡೀ ದೇಶದ ರಾಜಧಾನಿ, ಸಾಂಸ್ಕೃತಿಕ ಕೇಂದ್ರ, ರಾಜಕೀಯ ಆಂದೋಲನದ ನೆಲೆಮನೆ. ಐರೋಪ್ಯ ಸಂಸ್ಕೃತಿಯ ಪ್ರಭಾವ ಪ್ರಬಲ ವಾಗಿದ್ದುದೂ ಅಲ್ಲೆ. ಅಲ್ಲಿನ ಕಲಾಶಾಲೆ 1854ರಷ್ಟು ಹಿಂದೆ ಖಾಸಗಿ ಶಾಲೆಯಾಗಿ ಆರಂಭವಾಯಿತು. ಇಂಡಸ್ಟ್ರಿಯಲ್ ಆರ್ಟ್ ಸ್ಕೊಸೈಟಿ ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ ಅದು. ಈ ಶಾಲೆಯಲ್ಲಿ ಶಿಕ್ಷಣವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧಪಟ್ಟುವೇ ಆಗಿದ್ದುವು; ಮುಖ್ಯವಾಗಿ ಮರದಲ್ಲಿ ಕೆತ್ತನೆ, ಲಿತೋಗ್ರಫಿ. ಇವುಗಳೊಂದಿಗೆ ಅಲಂಕರಣಕಲೆಯನ್ನೂ ಅಷ್ಟಿಷ್ಟು ಕೂಡಿಸಿದ್ದರು. ಶಾಲೆಗಳಲ್ಲಿ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಆಗ ನಾಡಿನ ಒಡೆಯನಾಗಿದ್ದ ಲಾರ್ಡ್ ಕರ್ಜನ್ ಆಗ್ರಹ. ಈ ಧೋರಣೆಯು ಹ್ಯಾವೆಲ್ ಅಲ್ಲಿಗೆ 1896ರಲ್ಲಿ ಶಾಲೆಯ ಮುಖ್ಯಸ್ಥರಾಗಿ ಬರುವವರೆಗೂ ಇದ್ದಿತು. ಹ್ಯಾವೆಲ್ ಲಲಿತಕಲೆಯ ಅಗತ್ಯವನ್ನೂ ಮನಗಂಡವರು. ಅವರು ಶಾಲೆಯಲ್ಲಿ ವರ್ಣಚಿತ್ರವನ್ನು ಕಲಿಸಲೂ ಅವಕಾಶ ಮಾಡಿಕೊಟ್ಟರು. ವೆಂಕಟಪ್ಪ ಶಾಲೆಗೆ ಸೇರುವಾಗ ವರ್ಣಚಿತ್ರ ವಿಭಾಗ ಜನಪ್ರಿಯವೆ ಆಗಿದ್ದಿತು.

ಇ.ಬಿ. ಹ್ಯಾವೆಲ್ (ಜನನ 1861) ಭಾರತದೇಶಕ್ಕೆ ಬಂದಾಗ ಅವರಿಗೆ ಇಪ್ಪತ್ತುಮೂರು ವರ್ಷ ವಯಸ್ಸಿನ ಪ್ರಾಯ; ಐರೋಪ್ಯ ಚಿತ್ರಪದ್ಧತಿಯಲ್ಲಿ ನುರಿತವರು, ಅದನ್ನು ಚೆನ್ನಾಗಿ ಅರಿತವರು. ಅವರು 1884ರಲ್ಲಿ ಲಂಡನ್ನಿನಿಂದ ಮದ್ರಾಸಿನ ಕಲಾಶಾಲೆಗೆ ಬಂದದ್ದು ಭಾರತೀಯ ವಿದ್ಯಾರ್ಥಿಗಳಿಗೆ ಐರೋಪ್ಯ ಚಿತ್ರಪದ್ಧತಿಯನ್ನು ಕಲಿಸಲೆಂದೆ. ಆದರೆ ಮದರಾಸಿನಲ್ಲಿ ಅವರು ಕಳೆದ ಹತ್ತುವರ್ಷ ಅವರ ಕಣ್ಣನ್ನು ಭಾರತೀಯ ಕಲೆಯ ಕಡೆಗೆ ಹರಿಸಿತು. ಭಾರತೀಯರಿಗೆ ತಮ್ಮದೆ ಆದ, ತುಂಬ ಪ್ರಾಚೀನವಾದ ಕಲಾ ಸಂಪ್ರದಾಯವಿದೆಯೆಂದು ಅವರಿಗೆ ಮನದಟ್ಟಾಯಿತು; ಅದರ ಪ್ರಭಾವ ಇಂದಿನ ಜನಜೀವನದಲ್ಲೂ ಹಾಸುಹೊಕ್ಕಾಗಿ ಸೇರಿ ನಿಂತಿರುವುದೂ ಅವರ ಅರಿವಿಗೆ ಬಂದಿತು. ಹೀಗಿರುವಾಗ ಭಾರತೀಯ ಕಲಾ ವಿದ್ಯಾರ್ಥಿಗಳು ಐರೋಪ್ಯ ಸಂಪ್ರದಾಯದ ಕಲೆಯನ್ನು

ಕಲಿಯುವ ಅಗತ್ಯವೇನೆಂದು ಅವರಿಗೆ ಅನಿಸಿತು. ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಬಲದಿಂದ, ಭಾರತೀಯರು ತಮ್ಮ ಕಲೆಯನ್ನೇ ನಿರ್ಲಕ್ಷಿಸಿ ಕೈಬಿಡುತ್ತಿರುವುದನ್ನು ಕಂಡು ಮರುಗಿದ ಹ್ಯಾವೆಲ್ ಭಾರತೀಯ ಕಲೆಯ ಮೇಲ್ಮೆಯನ್ನು ಇಲ್ಲಿನ ಜನರಿಗೂ ಪ್ರಪಂಚದ ಎಲ್ಲ ರಸಿಕರಿಗೂ ತಿಳಿಸಿಕೊಡುವ ಸಂಕಲ್ಪ ಮಾಡಿದರು.

ಐರೋಪ್ಯ ಕಲಾ ಪ್ರಕಾರಗಳೂ, ಆ ಕಲೆಯ ರೀತಿನೀತಿಗಳೂ ಗೊತ್ತುಗುರಿಯೂ ಆಗಲೆ ನಮ್ಮ ಜನರಲ್ಲಿ ಹರಡಿಕೊಳ್ಳುತ್ತಿದ್ದವು. ಆದರವನ್ನು ಪಡೆದುಕೊಳ್ಳುತ್ತಿದ್ದುವು. ಆ ಕಾಲಕ್ಕೆ ಮುಂಬಯಿ, ಕಲ್ಕತ್ತೆ, ಮದರಾಸುಗಳ ಕಲಾಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಭಾರತೀಯ ಕಲೆಯೆಂದರೆ ಪರ್ಶಿಯನ್ ಮತ್ತು ಮೊಗಲ್ ಶೈಲಿಗಳಿಂದ ಮೈವಡೆದು ಮುಂದೆ ಐರೋಪ್ಯ ಪ್ರಭಾವವನ್ನು ತಳೆದ ವಿಚಿತ್ರವಾದೊಂದು ದೇಶೀ ಶೈಲಿ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಯಲು ಹೇಳುತ್ತಿದ್ದುದು ಐರೋಪ್ಯ ಕಲೆಯ ವಿವರಗಳನ್ನೇ, ಸಂವಿಧಾನಗಳನ್ನೇ, ಶೈಲಿಗಳನ್ನೇ. ಈ ಕಲಬೆರಕೆಯ ಪ್ರಕಾರದ ಪ್ರಸಿದ್ಧ ಪ್ರತಿನಿಧಿಯೆಂದರೆ ರಾಜಾ ರವಿವರ್ಮನ ಚಿತ್ರ ಸಂಗ್ರಹ. ಅವನ ಚಿತ್ರಗಳಲ್ಲಿ ಭಾರತೀಯ ವ್ಯಕ್ತಿಗಳಿದ್ದರೂ ಪೌರಾಣಿಕ ಪ್ರಸಂಗಗಳಿದ್ದರೂ ಕಲಾವಿದನು ಥಿಯೊಡರ್ ಯೆನ್ಸನ್ನನ ಶಿಷ್ಯನೆಂಬುದನ್ನು, ಆಂಗ್ಲ ವರ್ಣಚಿತ್ರಶೈಲಿಯಿಂದ ಪ್ರಭಾವಿತನಾದನೆಂಬುದನ್ನು, ಮರೆಯುವ ಹಾಗಿರಲಿಲ್ಲ; ಅವುಗಳ ನಿರೂಪಣೆಯಲ್ಲಿ, ಒಟ್ಟಾರೆ ಚಿತ್ರಣದಲ್ಲಿ ಭಾರತೀಯತೆಯ ಗುಣ ತೀರ ಕಡಮೆಯೆ.

ಇದನ್ನೆಲ್ಲ ನೋಡಿ ಹ್ಯಾವೆಲ್ ಬೇಸತ್ತು, ಹೀಗೆಯೇ ಇಲ್ಲಿ ಕಲಾಶಿಕ್ಷಣ ಮುಂದುವರಿದರೆ ಭಾರತೀಯ ಕಲೆಯೆನ್ನುವುದು ಕುರುಹಿಲ್ಲದೆ ಅಳಿಸಿಹೋದೀತು ಎಂದು ಬಗೆದು, ಭಾರತೀಯ ಕಲೆಯ ಪುನರುಜ್ಜೀವನಕ್ಕೆ ಟೊಂಕ ಕಟ್ಟಿ ನಿಂತರು. ಭಾರತೀಯ ಸಂಸ್ಕೃತಿಯ ರೀತಿ, ಕಲೆಯ ಕಾಣ್ಕೆಯ ವೈಶಿಷ್ಟ್ಯ ಇವನ್ನು ಜನರಿಗೆ ಮತ್ತೆ ದೊರಕಿಸಿಕೊಡುವ ಸಂಕಲ್ಪದಿಂದ ಆತ ಕಲ್ಕತ್ತೆಯ ಕಲಾಶಾಲೆಯಲ್ಲಿ ಒಂದು ಆಂದೋಲನವನ್ನೆ ನಡೆಸತೊಡಗಿದರು. ಶಾಲೆಯಲ್ಲಿ ಆವರೆಗೆ ಗೋಡೆಗಳನ್ನೆಲ್ಲ ಆವರಿಸಿ ಅಲಂಕರಿಸಿದ್ದ ಐರೋಪ್ಯ ಕಲಾಕೃತಿಗಳ ಪ್ರತಿಕೃತಿಗಳನ್ನು ಕೆಳಗಿಳಿಸಿ, ಅವುಗಳಿದ್ದೆಡೆ ರಾಜಾಸ್ಥಾನೀ, ಮೊಗಲ್ ಪರಂಪರೆಗಳ ಕಿರು ಚಿತ್ರಗಳನ್ನು ಏರಿಸಿದರು. ಭಾರತೀಯ ವಿದ್ಯಾರ್ಥಿಗಳಿಗೆ ಹೊರಗಣ ಕಲಾಕೃತಿಗಳು ನೀಡಬಲ್ಲ ಸ್ಫೂರ್ತಿ, ಒದಗಿಸಬಲ್ಲ ಪ್ರೇರಣೆ, ಮಾಡಬಲ್ಲ ಮಾರ್ಗದರ್ಶನ ಕೃತಕವಾದವು, ಕ್ಷಣಿಕವಾದವು, ಹೊರಮೈಯವು ಎಂದು ಅವರ ವಾದ. ನಾಡಿನಲ್ಲೇ ಬೆಳೆದುಬಂದ ಪರಂಪರೆ ಇಂದಿನ ಕಾಲಕ್ಕೂ ಪ್ರಸ್ತುತ ಎಂದು ಅವರ ಎಣಿಕೆ.

ಈ ದಿಸೆಯಲ್ಲಿ ಅವರಿಗೆ ಬೆಂಬಲವಾಗಿ ನಿಂತ ಭಾರತೀಯರು ಆನಂದಕುಮಾರ ಸ್ವಾಮಿ, ಅವನೀಂದ್ರನಾಥ ಠಾಕುರ ಮೊದಲಾದವರು; ಇತರ ಅಭಿಮಾನಿಗಳು ಕಲ್ಕತ್ತೆಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಸರ್ ಜಾನ್ ವುಡ್‌ರೊಫ್, ರಾಮಕೃಷ್ಣ-ವಿವೇಕಾನಂದರ ಶಿಷ್ಯೆ ನಿವೇದಿತಾ ಮುಂತಾದವರು. ಈ ಆಂದೋಲನದ ಪ್ರಮುಖ ವಕ್ತಾರರಾಗಿ ನಿಂತ ಡಾ॥ ಆನಂದಕುಮಾರ ಸ್ವಾಮಿಯವರು ತಮ್ಮ ಬರಹಗಳಲ್ಲಿ ಕಲಾಶಿಕ್ಷಣದಲ್ಲಿ ಭಾರತೀಯತೆಯ ದೃಷ್ಟಿಯೇ ಇರಬೇಕೆಂದು ಪ್ರತಿಪಾದಿಸಿದರು.

ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ತಾವು ಕಂಡ ಬರಡುತನ, ಅವಿವೇಕ, ನಿರರ್ಥಕತೆಗಳನ್ನು ಎತ್ತಿ ತೋರಿಸಿದರು. ಭಾರತೀಯನೇ ಒಬ್ಬ, ತನ್ನ ದುಡಿಮೆಯ ಹಣದಿಂದ ನಮ್ಮ ಜನರ ಕಲಾಶಿಕ್ಷಣಕ್ಕೆಂದು ಏರ್ಪಡಿಸಿದ ಕಲಾಶಾಲೆಯಲ್ಲಿ ಹೊರಗಣ ಪ್ರಭಾವವೇ ಹದ್ದುಮೀರಿ ಕುಣಿದಾಡುತ್ತಿರುವುದನ್ನು ಅವರು ಟೀಕಿಸಿದರು. ನಮ್ಮ ಕಲಾಶಿಕ್ಷಣಕ್ಕೆ ಇಂದು ಅಗತ್ಯವಾಗಿರುವುದು ಐರೋಪ್ಯಕಲೆಯ ಆದರ್ಶ, ಮಾರ್ಗದರ್ಶನಗಳಲ್ಲ ; ನಮ್ಮದೇ ಆದ ಹರಿದು ಹಂಚಿಹೋದ ಕಲಾಸಂಪ್ರದಾಯದ ತುಣುಕುಗಳನ್ನು ಗುರುತಿಸಿ, ಹೆಕ್ಕಿಕೊಂಡು, ನಮ್ಮ ಸಂಸ್ಕೃತಿಗೆ ಸಮುಚಿತವಾದ ಕಲಾಶೈಲಿಯನ್ನು ಬೆಳೆಸುವುದು. ಇದು ಆನಂದಕುಮಾರ ಸ್ವಾಮಿಯವರ ವಾದ. ಹ್ಯಾವೆಲ್‌ನ ನಾಡಿಗಳಲ್ಲಿ ಮಿಡಿಯುತ್ತಿದ್ದುದೂ ಇದೇ ದೃಷ್ಟಿ.

ಹ್ಯಾವೆಲ್ ಮತ್ತು ಆನಂದಕುಮಾರ ಸ್ವಾಮಿಗಳ ಕನಸನ್ನು ನನಸಾಗಿಸಿದವರು ಅವನೀಂದ್ರನಾಥರು. ವಿಶ್ವವಿಖ್ಯಾತ ಕವಿ ರವೀಂದ್ರನಾಥಠಾಕುರರ ತಂದೆ ದೇವೇಂದ್ರನಾಥ ಠಾಕುರರು; ಅವರ ಕಿರಿಯ ಸೋದರ ಗಿರೀಂದ್ರನಾಥ ಠಾಕುರರ ಮಗ ಗುಣೇಂದ್ರನಾಥ ಠಾಕುರ; ಅವರ ಮಗ ಅವನೀಂದ್ರನಾಥರು (1871-1951). ಅವನೀಂದ್ರನಾಥರ ಬಾಲ್ಯದಲ್ಲಿ ಅವರಿಗೆ ಕಲಾಶಿಕ್ಷಣ ಒದಗಿದ್ದು ಸಿನಾರ್ ಗಿಲರ್ಡಿ ಮತ್ತು ಚಾರ್ಲ್ಸ್ ಪಾಮರ್ ಎಂಬ ವಿದೇಶಿ ಕಲಾವಿದರಿಂದಲೆ; ಅವರು ಕಲಿತದ್ದು ಐರೋಪ್ಯ ಕಲಾ ಸಂವಿಧಾನವನ್ನೇ. ಆದರೆ ಅವರು ಹ್ಯಾವೆಲ್ ಅವರ ಸಂಪರ್ಕಕ್ಕೆ ಬಂದಂದು (1897), ಅವರಲ್ಲಿ ಹುದುಗಿದ್ದ ಭಾರತೀಯತೆ ತಲೆಯೆತ್ತಿಕೊಂಡಿತು. ಹ್ಯಾವೆಲ್ ಅವರ ಒತ್ತಾಯದ ಮೇಲೆ ಕಲ್ಕತ್ತೆಯ ಕಲಾಶಾಲೆಯಲ್ಲಿ ಅಧ್ಯಾಪಕರಾಗಿ, ಉಪ-ಪ್ರಧಾನರಾಗಿ ಸೇರಿದರು. ಇವರಿಬ್ಬರ ಸಹಯೋಗ 1906 ರವರೆಗೂ ಮುಂದುವರಿಯಿತು. ಆ ವರ್ಷ ಹ್ಯಾವೆಲ್‌ರ ಆರೋಗ್ಯ ಹದಗೆಟ್ಟು ಅವರು ಚಿಕಿತ್ಸೆಗೆಂದು ಇಂಗ್ಲೆಂಡಿಗೆ ಮರಳಿದರು; ಮತ್ತೆ ಭಾರತಕ್ಕೆ ಬರಲಿಲ್ಲ.

೨

ಕಲ್ಕತ್ತೆಯ ಕಲಾಶಾಲೆಯ ಮುಖ್ಯಸ್ಥರಾಗಿದ್ದ ಹ್ಯಾವೆಲ್ ರಜೆಯ ಮೇಲೆ ದೇಶ ಬಿಟ್ಟು ಹೊರಟಂದು, ಶಾಲೆಯಲ್ಲಿ ಎರಡನೆ ಅಧಿಕಾರದಲ್ಲಿದ್ದ ಅವನೀಂದ್ರನಾಥರೆ ಮುಖ್ಯಸ್ಥರಾಗಿ ಕೆಲಸವನ್ನು ನಿರ್ವಹಿಸಬೇಕಾಯಿತು. ಅವನೀಂದ್ರನಾಥರು ಹಾಗೆ ಹಂಗಾಮಿ ಮುಖ್ಯಸ್ಥರಾಗಿರುವಾಗಲೇ ವೆಂಕಟಪ್ಪ ಮೈಸೂರು ಸರ್ಕಾರದ ವಿದ್ಯಾರ್ಥಿವೇತನವನ್ನು ಪಡೆದುಕೊಂಡು ಕಲಾಶಾಲೆಗೆ ಸೇರಿದ್ದು ; 1909ರಲ್ಲಿ. ಆದರೆ ಕೆಲವು ತಿಂಗಳುಗಳಲ್ಲೇ ಪರ್ಸಿ ಬ್ರೌನ್ ಎಂಬ ಆಂಗ್ಲ ಕಲಾರಸಿಕ ಮುಖ್ಯಸ್ಥರಾಗಿ ನೇಮಕಗೊಂಡರು; ಅವನೀಂದ್ರನಾಥರು ಅಧ್ಯಾಪಕರಾಗಿ ಮುಂದುವರಿದರು. ವೆಂಕಟಪ್ಪ ಕಲಾಶಾಲೆಯನ್ನು ಬಿಡುವ ಸ್ವಲ್ಪ ಮುಂಚೆ (1915ರಲ್ಲಿ) ಅವನೀಂದ್ರನಾಥರು ಶಾಲೆಯನ್ನು ಬಿಟ್ಟು ತಮ್ಮದೆ ಸ್ಟುಡಿಯೊ ತೆರೆದುಕೊಂಡರು, ಕಲ್ಕತ್ತೆಯಲ್ಲಿ; ತಮ್ಮ ಹಿರಿಯರ ಮನೆಯಾದ 'ಜೋಡಾಶಂಖೊ' (ಜೋಡಿ ಶಂಖ) ಎಂಬಲ್ಲಿ. 1911 ರಷ್ಟು ಹಿಂದೆಯೆ ಅದನ್ನು ತೆರೆಯುವ ಆಲೋಚನೆಯಿದ್ದಿತು, ಅದಕ್ಕಾಗಿ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಏಕೆಂದರೆ

ಹೊಸದಾಗಿ ಶಾಲೆಯ ಮುಖ್ಯಸ್ಥನಾಗಿ ನೇಮಕಗೊಂಡ ಪರ್ಸಿ ಬ್ರೌನ್‌ನ ಧೋರಣೆ ಅವರಿಗೆ ಹಿಡಿಸಿರಲಿಲ್ಲ. ಇವರಿಬ್ಬರ ನಡುವೆ ವಿರಸ ದಿನದಿನವೂ ಬೆಳೆಯುತ್ತಿತ್ತು.

ಅವನೀಂದ್ರನಾಥರಿಗೆ ಬ್ರೌನರ ಕಲಾಭಿರುಚಿಯಿರಲಿ, ಅವರ ವ್ಯವಹಾರವೂ ಅಷ್ಟಾಗಿ ಒಗ್ಗಲಿಲ್ಲ. ತಮ್ಮ ಪ್ರಭಾವವನ್ನು ತಡೆಹಿಡಿಯಲು ಒಂದು ಗುಂಪನ್ನು ಬೆಳೆಯಿಸುತ್ತಿದ್ದಾರೆ ಎಂದೂ ಅವರಿಗೆ ಎನಿಸಿತ್ತು. ಇದನ್ನು ಅವರು ''ಪಿ.ಬಿ. ಎಂಡ್ ಕೋ'' (ಬ್ರೌನ್ ಮತ್ತು ಸಂಗಡಿಗರು) ಎಂದು ಹಲವು ವೇಳೆ ಮೂದಲಿಸುತ್ತಿದ್ದುದೂ ಉಂಟು. ಭಾರತೀಯ ಕಲಾ ಸಂಪ್ರದಾಯದ ವಿಚಾರವಾಗಿ ಬ್ರೌನರಿಗೆ ಹ್ಯಾವೆಲ್‌ಗಿದ್ದಷ್ಟು ಗೌರವ ಬುದ್ಧಿಯಿರಲಿಲ್ಲವೆಂಬುದೇನೋ ದಿಟ. ಕಲಾಶಾಲೆಯಲ್ಲಿ ವಿದ್ಯಾರ್ಥಿಗಳೆದುರು ಐರೋಪ್ಯ ಕಲೆಯ ಆದರ್ಶವನ್ನೇ ಎತ್ತಿ ಹಿಡಿಯುತ್ತಿದ್ದುದೂ ದಿಟವೆ. ಈ ದೇಶದ ಕಲಾವಿದ್ಯಾರ್ಥಿಗಳು ಹೊರಗಣ ಸ್ಫೂರ್ತಿಯನ್ನೆ ಪಡೆದುಕೊಳ್ಳಬೇಕೆಂದು ಇವರ ಉಪದೇಶ.

ಅವನೀಂದ್ರನಾಥರೆ ವೆಂಕಟಪ್ಪನಿಗೆ ಕಲಾಶಾಲೆಯಲ್ಲಿ ಗುರುಗಳು. ಆದರೆ ಅವನೀಂದ್ರನಾಥರು ಬಿಟ್ಟಮೇಲೂ ವೆಂಕಟಪ್ಪ ಕೆಲಕಾಲ ಶಾಲೆಯಲ್ಲೆ ಮುಂದುವರಿಯಬೇಕಾಯಿತು; ನಿರ್ದಿಷ್ಟವಾದ ಶಿಕ್ಷಣದ ಅವಧಿ ಮುಗಿಯಬೇಕಲ್ಲ ? ಡಿಪ್ಲೊಮ ಕೈಗೆ ಬರಬೇಕಲ್ಲ ? ವೆಂಕಟಪ್ಪನ ಜೊತೆಗೆ ಕಲಿಯುತ್ತಿದ್ದ ನಂದಲಾಲ ಬಸು (ಬಂಗಾಳದ ಸುಪ್ರಸಿದ್ಧ ಕಲಾವಿದ) ಅವನೀಂದ್ರನಾಥರ ಅಚ್ಚುಮೆಚ್ಚಿನ ಶಿಷ್ಯ. ಅವನೀಂದ್ರನಾಥರು ಶಾಲೆಯನ್ನು ಬಿಟ್ಟಾಗಲೇ ಅವರೂ ಹಿಂದೆ ಮುಂದೆ ನೋಡದೆ, ಡಿಪ್ಲೊಮದ ಚಿಂತೆಯಿಲ್ಲದೆ, ಶಾಲೆಯನ್ನು ಬಿಟ್ಟು ಹೊರಟರು. ವೆಂಕಟಪ್ಪ ಹಾಗೆ ಮಾಡುವಂತಿರಲಿಲ್ಲ ಮೈಸೂರು ಸರಕಾರದ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದರಷ್ಟೆ ; ಶಿಕ್ಷಣವನ್ನು ಪೂರೈಸಿ, ಡಿಪ್ಲೊಮ ಪಡೆದು ಮೈಸೂರಿಗೆ ಹಿಂದಿರುಗಬೇಕಿತ್ತು. ಅಲ್ಲದೆ, ಪರ್ಸಿ ಬ್ರೌನ್ ವೆಂಕಟಪ್ಪನ ಕಲೆಗಾರಿಕೆಯನ್ನೂ, ನಿಷ್ಠೆಯನ್ನೂ, ಶ್ರದ್ಧೆಯನ್ನೂ ಮೆಚ್ಚಿಕೊಂಡು, ಮೈಸೂರು ಸರಕಾರವು ವೆಂಕಟಪ್ಪನನ್ನು ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಬೇಕೆಂದು ಶಿಫಾರಸು ಮಾಡಿದ್ದರು. ಸಹಜವಾಗಿಯೇ ಬ್ರೌನರ ವಿಚಾರವಾಗಿ ವೆಂಕಟಪ್ಪನಿಗೆ ಕೃತಜ್ಞತಾ ಭಾವವಿದ್ದಿತು. ಇಷ್ಟನ್ನು ಮೀರಿ, ಅವನೀಂದ್ರನಾಥರ ಮತ್ತು ಬ್ರೌನರ ನಡುವೆ ಬೆಳೆದ ಹಗರಣದಲ್ಲಿ ತಾವು ತಲೆ ಹಾಕಿಕೊಂಡು ಹೋಗುವ ಪ್ರವೃತ್ತಿಯೂ ಅವರದ್ದಲ್ಲ. ಹೀಗಾಗಿ ಅವನೀಂದ್ರನಾಥರ ಮನಸ್ಸಿನಲ್ಲಿ ವೆಂಕಟಪ್ಪ ''ಪಿ.ಬಿ. ಎಂಡ್ ಕೋ'' ಗುಂಪಿಗೆ ಸೇರಿದವರು ಎಂಬ ಶಂಕೆ ಮೂಡಿಕೊಂಡಿದ್ದರೆ ಆಶ್ಚರ್ಯವೇನಲ್ಲ.

ಆದರೆ ಅವನೀಂದ್ರನಾಥರ ಮನಸ್ಸಿನಲ್ಲಿ ಈ ಶಂಕೆ ಬಹುಕಾಲ ಉಳಿಯಲಿಲ್ಲ. ವೆಂಕಟಪ್ಪ ಕಲ್ಕತ್ತೆಯನ್ನು ಬಿಟ್ಟು ಮೈಸೂರಿಗೆ ಮರಳಿದ ಮೇಲೆ ಬ್ರೌನ್ ಹತ್ತು-ಹನ್ನೊಂದು ವರ್ಷಗಳು ಕಲ್ಕತ್ತೆಯ ಕಲಾಶಾಲೆಯ ಮುಖ್ಯಸ್ಥರಾಗಿದ್ದರು. ಅವರಿಗೂ ವೆಂಕಟಪ್ಪನಿಗೂ ಆತ್ಮೀಯವೆನ್ನಬಹುದಾದ ಪತ್ರವ್ಯವಹಾರವೇನು ಎಂದೂ ನಡೆದಿದ್ದಿಲ್ಲ. ಕಲ್ಕತ್ತೆಯ ಶಿಕ್ಷಣವನ್ನು ಮುಗಿಸಿ ವೆಂಕಟಪ್ಪ ಮೈಸೂರಿಗೆ ಹಿಂದಿರುಗಿದ ಮೇಲೆ, ಇಂಗ್ಲೆಂಡಿಗೆ ಹೆಚ್ಚಿನ ಶಿಕ್ಷಣಕ್ಕೆ ಹೋಗಲು ಅಡ್ಡಿಯಾಗಿ ಯುದ್ಧಪರಿಸ್ಥಿತಿ ಇದ್ದಿತಷ್ಟೆ. ಆಗ ಮೈಸೂರು ಸರಕಾರವು ವೆಂಕಟಪ್ಪನಿಗೆ ಮತ್ತೆ ವಿದ್ಯಾರ್ಥಿವೇತನವನ್ನಿತ್ತು ಕಲ್ಕತ್ತೆಗೆ ಇನ್ನಷ್ಟು ಕಾಲ ಶಿಕ್ಷಣಕ್ಕೆ

ಕಳುಹಿಸುವ ಸೂಚನೆ ಮಾಡಿತು. ಆದರೆ ವೆಂಕಟಪ್ಪ ಒಪ್ಪಲಿಲ್ಲ ; ಅಲ್ಲಿ ಕಲಿಯುವುದು ಇನ್ನೇನೂ ಇರದೆಂದುಬಿಟ್ಟರು. ಬ್ರೌನರ ಆಕರ್ಷಣೆ ಅವರಿಗೆ ಇರಲಿಲ್ಲ . ಮೇಲಾಗಿ, ಅವನೀಂದ್ರನಾಥರೊಂದಿಗೇ ಅವರ ಸಂಪರ್ಕ ಮುಂದುವರಿಯಿತು. ಅವನೀಂದ್ರನಾಥರು ವೆಂಕಟಪ್ಪನಿಗೆ ಗುರುಸ್ಥಾನದಲ್ಲಿದ್ದವರು; ಬ್ರೌನರಿಗೆಂದೂ ಈ ಸ್ಥಾನ ದೊರಕಲಿಲ್ಲ .

೩

ಕಲ್ಕತ್ತೆಯ ಕಲಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆಲ್ಲ ಪ್ರಮುಖ ಆಕರ್ಷಣೆಯೆಂದರೆ ಅವನೀಂದ್ರನಾಥರೆ. ಅದರಲ್ಲೇನು ಎರಡು ಅಭಿಪ್ರಾಯವಿಲ್ಲ . ಬಂಗಾಳದ ಕಲಾಪುನರುಜ್ಜೀವನದ ನೇತಾರರೇ ಅವರಷ್ಟೆ . ನಾಡಿನ ಎಲ್ಲ ಕಾಲದ ಶ್ರೇಷ್ಠ ಕಲಾವಿದರ ಸಾಲಿನಲ್ಲಿ ಅವರಿಗೆ ಉನ್ನತಸ್ಥಾನ. ಅಷ್ಟುಮಾತ್ರವಲ್ಲ , ನಿಜಕ್ಕೂ ತುಂಬ ದೊಡ್ಡವ್ಯಕ್ತಿತ್ವ ಅವರದ್ದು , ನಿಷ್ಠಾವಂತ ಹಿರಿಯ ಚೇತನ. ಹಳೆಯ ಕಾಲದ ಋಷಿಯಂತೆ ಬದುಕಿ ಬಾಳಿದವರು. ಅವರಿಂದ ಸ್ಫೂರ್ತಿಪಡೆದುಕೊಂಡವರು ಬಹುಮಂದಿ; ಅವರ ಸಂಪರ್ಕಕ್ಕೆ ಬಂದವರು ಒಬ್ಬೊಬ್ಬರೂ ಹಿರಿಯ ಕಲಾವಿದರಾಗಿ ದೇಶದಲ್ಲಿ ಕಲೆಯ ಪ್ರಗತಿಗೆ ನೆರವಾದರು. ವೆಂಕಟಪ್ಪ ಕರ್ನಾಟಕದಲ್ಲಿ ಕಲೆಯ ಬಾವುಟವನ್ನು ಎತ್ತರಕ್ಕೆ ಏರಿಸಿದವರು. ನಂದಲಾಲ ಬಸು, ಅವರ ಪಟ್ಟಶಿಷ್ಯ, ಶಾಂತಿನಿಕೇತನದಲ್ಲಿ ನಿಂತು ಅಲ್ಲಿನ ಕಲಾಶಾಲೆಯ ಭಾಗ್ಯವಿಧಾತರಾಗಿ ನಾಡಿನಲ್ಲೇ ನಿಸ್ಸೀಮರೆಂದು ಹೆಸರು ಪಡೆದರು. ಅಶೀತಕುಮಾರ ಹಾಲದಾರ ಲಕ್ನೋದಲ್ಲಿ , ಶೈಲೇಂದ್ರನಾಥ ದೇ ಜಯಪುರದಲ್ಲಿ , ಸಮರೇಂದ್ರ ಗುಪ್ತ ಲಾಹೋರಿನಲ್ಲಿ , ಪ್ರಮೋದ ಕುಮಾರ ಚಟ್ಟೋಪಾಧ್ಯಾಯ ಆಂಧ್ರಪ್ರದೇಶದಲ್ಲಿ , ಮುಕುಲ ದೇ ಕಲ್ಕತ್ತೆಯಲ್ಲಿ , ಶಾರದಾ ಉಕಿಲ್ ದಿಲ್ಲಿಯಲ್ಲಿ ಕಲಾ ಶಿಕ್ಷಣವನ್ನು ಕೈಗೊಂಡು ಅವನೀಂದ್ರನಾಥರ ನೆನಪನ್ನು ಉಳಿಸಿದರು. ಇವರೆಲ್ಲರೂ ವೆಂಕಟಪ್ಪನ ಜೊತೆಯಲ್ಲಿಯೇ ಅವನೀಂದ್ರನಾಥರ ಶಿಷ್ಯರಾಗಿದ್ದರು. ನಂದಲಾಲ ಬಸು ಒಬ್ಬರು ಮಾತ್ರ ವೆಂಕಟಪ್ಪನು ಕಲಾಶಾಲೆ ಸೇರುವ ಮೊದಲೇ ಸೇರಿದ್ದರು; ವೆಂಕಟಪ್ಪ ಶಾಲೆ ಬಿಡುವ ಮೊದಲೇ ಬಿಟ್ಟುಹೋದರು.

ಕಲ್ಕತ್ತೆಯ ಕಲಾ ಶಾಲೆಯಲ್ಲಿ ಅವನೀಂದ್ರನಾಥರು ಬೋಧಿಸುತ್ತಿದ್ದ ಬಗೆಯೇ ವಿಶಿಷ್ಟವಾಗಿತ್ತು . ಕೋಣೆಯಲ್ಲಿ ನಾಲ್ಕು ಗೋಡೆಗಳ ನಡುವೆ ಕಲೆಯ ಸೊಗಸನ್ನು ತಿಳಿಯಿಸಿ ಕೊಡುವುದು ಅವನೀಂದ್ರನಾಥರ ರೀತಿಯಲ್ಲ . ಪಠ್ಯಪದ್ಧತಿಯೊಂದನ್ನು ಕಟ್ಟುನಿಟ್ಟಾಗಿ ಹಿಡಿದು ಪಾಠ ಹೇಳುವುದೂ ಅವರ ದಾರಿಯಲ್ಲ . ಶಾಲೆಯ ಕಟ್ಟಡದ ಹೊರಗೆ, ಗಿಡಮರಗಳ ನಡುವೆ, ತಂಪಾದ ತಾಣದಲ್ಲಿ ಕೂತು ಸುತ್ತಲು ನೆರೆದ ಶಿಷ್ಯರಿಗೆ ಕಲೆಯ ಸ್ವಾರಸ್ಯವನ್ನು ಮನದಟ್ಟು ಮಾಡಿಸುವುದು ಅವರ ಬಗೆ. ಕಲೆಯ ಗೊತ್ತುಗುರಿ, ಗುಣದೋಷ, ರೀತಿನೀತಿ, ಬಿತ್ತರಬಿನ್ನಾಣ, ಎಲ್ಲವನ್ನೂ ಸರಳವಾಗಿ, ನೇರವಾಗಿ, ಪೂರ್ವಸಿದ್ಧತೆಯಿಲ್ಲದೆ, ಸ್ಫೂರ್ತಿ ಬಂದಂತೆ ವಿವರಿಸುವರು; ಪ್ರಯೋಗವನ್ನು ನಿಸರ್ಗದ ನಡುವೆಯೇ ಕಲಿಸುವರು. ಕುಂಚದ ಕೆಲಸವೋ, ಬಣ್ಣದ ಹರವೋ, ವಿಷಯದ ವಿನ್ಯಾಸವೋ, ಮನಸ್ಸಿನ ಒಲವೋ, ಒಳಗಿನ ಒತ್ತಡವೋ ವಿದ್ಯಾರ್ಥಿಗೆ ಆಗಿಂದಾಗ ಅರ್ಥವಾಗಬೇಕು. ಪರೀಕ್ಷೆಗಾಗಿ ಕಲಿಸುವುದಲ್ಲ , ಬದುಕಿಗೆ ಕಲಿಸುವುದು ಅವರ ಗುರಿ.

ಮತ್ತೆ, ತಮ್ಮ ವಿದ್ಯಾರ್ಥಿಗಳೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಅವರನ್ನು ಮೇಲೆತ್ತಲು ಎಂದೂ ಉತ್ಸುಕರು. ಶಿಷ್ಯರಲ್ಲಿ ಗುರುಭಕ್ತಿ ಮೂಡಿದ್ದರೆ ಆಶ್ಚರ್ಯವೇನು?

ಲೇಡಿ ಹೆರಿಂಗ್‌ಹ್ಯಾಮ್ ಎಂಬಾಕೆ ಲಂಡನ್ನಿನ ಇಂಡಿಯಾ ಸೊಸೈಟಿಗೆ ಸೇರಿದ ಶ್ರೀಮಂತ ಕಲಾಭಿಮಾನಿ ಮಹಿಳೆ. ಆಕೆ ಅಜಂಟ ಗುಹೆಗಳಲ್ಲಿರುವ ವಿಶ್ವವಿಖ್ಯಾತ ಭಿತ್ತಿಚಿತ್ರಗಳ ಯಥಾವತ್ತಾದ ಪ್ರತಿಗಳನ್ನು ಮಾಡಿಸುವ ಸಲುವಾಗಿ ಭಾರತಕ್ಕೆ ಬಂದು, ತನ್ನ ಪರಿಚಿತಳಾಗಿದ್ದ ಸೋದರಿ ನಿವೇದಿತಾಳಲ್ಲಿ ಪ್ರಸ್ತಾಪಮಾಡಿದಾಗ, ಆಕೆ ಅವನೀಂದ್ರನಾಥರನ್ನು ಹೋಗಿ ಕಾಣುವಂತೆ ತಿಳಿಸಿದಳು. ಹೆರಿಂಗ್‌ಹ್ಯಾಮ್ ಅವನೀಂದ್ರನಾಥರ ಬಳಿಗೆ 1909ರಲ್ಲಿ ಮೊದಲು ಬಂದಾಗ ಈ ಕೆಲಸಕ್ಕೆ ತಕ್ಕವರು ತಮ್ಮ ಶಿಷ್ಯ ನಂದಲಾಲ ಬಸು ಎಂದು ಸೂಚಿಸಿದರು. ನಂದಲಾಲರು ಆಕೆಯ ಜತೆ ಅಜಂಟ ಗುಹೆಗಳಿಗೆ ಹೋಗಿ ಕೆಲದಿನಗಳು ಅಲ್ಲಿ ತಂಗಿದ್ದು ಕೆಲವು ಚಿತ್ರಗಳನ್ನು ಪ್ರತಿ ಮಾಡಿದರು. ಎರಡು ವರ್ಷಗಳ ನಂತರ ಆಕೆ ಮತ್ತೆ ಭಾರತಕ್ಕೆ ಬಂದು ಅಜಂಟ ಭಿತ್ತಿಚಿತ್ರಗಳನ್ನು ಪ್ರತಿಮಾಡಿಸುವ ಕೆಲಸವನ್ನು ಮುಂದುವರಿಸುವ ಯೋಚನೆ ಮಾಡಿದಾಗ, ಅವನೀಂದ್ರನಾಥರು ನಂದಲಾಲರ ಜೊತೆಗೆ ವೆಂಕಟಪ್ಪನನ್ನು ಕಳುಹಿಸಿದರು; ಇವರಿಬ್ಬರಿಗೆ ನೆರವಾಗಲು ಅಶೀತಕುಮಾರ ಹಾಲದಾರ ಮತ್ತು ಸಮರೇಂದ್ರನಾಥಗುಪ್ತರನ್ನು ಕಳುಹಿಸಿದರು. ಇವರು ಕೆಲವು ತಿಂಗಳುಗಳ ಕಾಲ ಅಜಂಟ ಗುಹೆಗಳಲ್ಲಿನ ಬಹುಮಟ್ಟಿಗಿನ ಚಿತ್ರಗಳನ್ನು ತದೇಕಧ್ಯಾನದಿಂದ ಪ್ರತಿಮಾಡಿದರು. ಲೇಡಿ ಹೆರಿಂಗ್‌ಹ್ಯಾಮ್ ಅವನ್ನೆಲ್ಲ ಲಂಡನ್ನಿಗೆ ಒಯ್ದು ಪ್ರದರ್ಶನವೊಂದನ್ನು ಏರ್ಪಡಿಸಿದ್ದಳು. ಆದರೆ ದುರದೃಷ್ಟದಿಂದ, ಲಂಡನ್ನಿನ ಇಂಡಿಯಾ ಹೌಸಿನಲ್ಲಿ ನಡೆದ ಬೆಂಕಿ ದುರಂತವೊಂದರಲ್ಲಿ ಇವೆಲ್ಲ ನಾಶವಾಗಿಬಿಟ್ಟವು.

೪

ಕಲ್ಕತ್ತೆಯಲ್ಲಿ ವೆಂಕಟಪ್ಪನವರು ಕಲಾಭ್ಯಾಸ ಮಾಡುವಾಗ ಅವರಿಗೆ ಹಲವಾರು ಹಿರಿಯ ಚೇತನಗಳ ಸಂಪರ್ಕ ಒದಗಿಬಂದಿತು. ಕಲ್ಕತ್ತೆಯ ಉಚ್ಚನ್ಯಾಯಾಲಯದ ನ್ಯಾಯ ಮೂರ್ತಿಯಾಗಿದ್ದ, ತಾಂತ್ರಿಕ ಪದ್ಧತಿಯ ಪ್ರಯೋಗಗಳಲ್ಲೂ ಸಿದ್ಧಾಂತದಲ್ಲೂ ನಿಷ್ಣಾತರಾಗಿದ್ದ, ಭಾರತೀಯ ಕಲೆಯ ಅಭಿಮಾನಿಯಾಗಿದ್ದ ಸರ್ ಜಾನ್ ವುಡ್‌ರೊಫ್ (ಇವರು 1919ರಲ್ಲಿ ಭಾರತದೇಶವನ್ನು ಬಿಟ್ಟು ಸ್ವದೇಶಕ್ಕೆ ಮರಳಿದರು); ರಾಮಕೃಷ್ಣ-ವಿವೇಕಾನಂದ ಪಂಥದಲ್ಲಿ ಅಗ್ರಗಣ್ಯರೆಂದು ಹೆಸರಾಗಿದ್ದ, ಹಲವಾರು ವಿಶಿಷ್ಟ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾಗಿದ್ದ, ಭಾರತೀಯ ಕಲೆಯ ಪುನರುಜ್ಜೀವನದಲ್ಲಿ ಆಸಕ್ತಿಯನ್ನು ವಹಿಸಿದ್ದ, ಅವನೀಂದ್ರನಾಥರಿಗೂ ಪ್ರೇರಣೆ ಒದಗಿಸಿದ ಸೋದರಿ ನಿವೇದಿತಾ (ಇವರು 1911ರಲ್ಲಿ ತೀರಿಕೊಂಡರು); ಅವನೀಂದ್ರನಾಥರ ಅಣ್ಣ, ಉತ್ತಮಕಲಾವಿದ, ಹ್ಯಾವೆಲ್ಲರ ಮಿತ್ರ ಗಗನೇಂದ್ರನಾಥ ಠಾಕೂರರು; ಕಲಾಭಿಮಾನಿಯೂ ಪ್ರಚಾರಕನೂ ಆಗಿದ್ದ ಜೇಮ್ಸ್ ಕಸಿನ್ಸ್; ಕಲಾತಪಸ್ವಿ ಆನಂದ ಕೆಂಟಿಷ್ ಕುಮಾರಸ್ವಾಮಿ ಮೊದಲಾದ ಹಲವರು ವೆಂಕಟಪ್ಪನವರ ಪರಿಚಯಕ್ಕೆ ಬಂದರು. ಸಹಪಾಠಿಗಳಾಗಿದ್ದ ನಂದಲಾಲ ಬಸು,

ಅಶೀತಕುಮಾರ ಹಾಲದಾರ, ಶೈಲೇಂದ್ರ ದೇ, ಪ್ರಮೋದ ಕುಮಾರ ಚಟ್ಟೋಪಾಧ್ಯಾಯ ರಂತೂ ಸರಿಯೇ ಸರಿ.

ಇವರಲ್ಲಿ ಗಗನೇಂದ್ರನಾಥ ಠಾಕುರರೊಂದಿಗೆ ಸಂಪರ್ಕ ನಿಕಟವಾಯಿತು. ಗಗನೇಂದ್ರನಾಥರು (1867-1938) ಸ್ವತಃ ಕವಿ, ಚಿತ್ರಗಾರ, ಭಾವುಕ, ರಸಿಕ, ಮೇಧಾವಿ, ಅಧ್ಯಾತ್ಮದಲ್ಲಿ ಆಸಕ್ತ. ಅವರಿಗೆ ತೀರ ಹತ್ತಿರದ ನಂಟರಾಗಿ ರವೀಂದ್ರನಾಥರು ವಿಶ್ವವಿಖ್ಯಾತ ಕವಿಯಾದುದು ಗಗನೇಂದ್ರನಾಥರ ಪ್ರಸಿದ್ಧಿಗೆ ಸ್ವಲ್ಪಮಟ್ಟಿಗೆ ಅಡ್ಡಿಯಾಯಿತೆಂದೇ ಹೇಳಬೇಕು; ದೊಡ್ಡ ಮರದ ಹತ್ತಿರ ಇರುವ ಮರಗಳಂತೆ. ಈ ಸೋದರರಿಬ್ಬರ ಪ್ರತಿಭೆ, ಕಲೆಗಾರಿಕೆ, ಸಹೃದಯತೆಗಳು ರವೀಂದ್ರನಾಥರ ಈ ಗುಣಗಳಿಗಿಂತ ಎಷ್ಟು ಮಾತ್ರಕ್ಕೂ ಕಡಮೆಯಿಲ್ಲ. ಆದರೆ, ಇವರು ಹೆಸರು ಪಡೆದು ದೇಶದ ರಸಿಕರೆದುರು ಮೆರೆಯಬೇಕೆಂಬ ಚಪಲವೂ ಇವರಿಗಿರಲಿಲ್ಲವನ್ನಿ ! ಗಗನೇಂದ್ರನಾಥರು, ಸೋದರನಂತಲ್ಲದೆ ತಮ್ಮದೇ ಸ್ವಂತ ಕಲಾಶೈಲಿಯನ್ನು ಬೆಳೆಸಿಕೊಂಡರು; ಪಾಶ್ಚಾತ್ಯ ಪ್ರಕಾರಗಳ ಮೇಲೆ ಅವರ ಒಲವು ಹೆಚ್ಚು, ಸಾಂಕೇತಿಕತೆಯ ಆಕರ್ಷಣೆ ಅವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ನೆರಳು-ಬೆಳಕಿನ ಆಟದ ಗುಟ್ಟನ್ನೂ ಸ್ವಾರಸ್ಯವನ್ನೂ ಅವರಂತೆ ಅಧ್ಯಯನಮಾಡಿದ ಕಲಾವಿದ ಬೇರೊಬ್ಬ ಇಲ್ಲ. ವ್ಯಂಗ್ಯ ಚಿತ್ರಗಳನ್ನೂ ಬರೆಯುತ್ತಿದ್ದರು; ವಿಡಂಬನೆಗೆ ಎತ್ತಿದ ಕೈ.

ಗಗನೇಂದ್ರನಾಥರಿಗೂ ಪರ್ಸಿ ಬ್ರೌನನಿಗೂ ನಿಕಟವಾದ ಸ್ನೇಹ. ಇಬ್ಬರೂ ಕೂಡಿ ಹಲವು ಬೆಟ್ಟಗುಡ್ಡಗಳಲ್ಲಿ ಅಲೆದಾಡಿ ಬರುತ್ತಿದ್ದುದುಂಟು. ವೆಂಕಟಪ್ಪ ಗಗನೇಂದ್ರನಾಥರಿಗಿಂತ ವಯಸ್ಸಿನಲ್ಲಿ ಹತ್ತಾರು ವರ್ಷ ಕಿರಿಯವರಾದರೂ, ಗಗನೇಂದ್ರನಾಥರಿಗೆ ವೆಂಕಟಪ್ಪನೆಂದರೆ ಪ್ರೀತಿ. ತಾವು ಪುರಿ-ಜಗನ್ನಾಥದಲ್ಲಿ ಮನೆಮಾಡಿಕೊಂಡು ಇರುತ್ತಿದ್ದಾಗ, ಹಲವಾರು ಕಲಾ ವಿದ್ಯಾರ್ಥಿಗಳನ್ನು ಕರೆಸಿಕೊಂಡು ಅವರಿಂದ ಕಲಾಕೃತಿಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಹಾಗೆ ಅವರು ಕರೆಯಿಸಿಕೊಳ್ಳುತ್ತಿದ್ದವರಲ್ಲಿ ವೆಂಕಟಪ್ಪ ಒಬ್ಬರು. 1914ರ ಮೇ ತಿಂಗಳಲ್ಲಿ (8ರಿಂದ 14ರವರೆಗೆ) ಗಗನೇಂದ್ರನಾಥರು ದಾರ್ಜಿಲಿಂಗಿಗೆ ಹೋದಾಗ ವೆಂಕಟಪ್ಪನನ್ನೂ ಜೊತೆಯಲ್ಲಿ ಒಯ್ದಿದ್ದರು. ಹಿಮಾಲಯ ಪರ್ವತಶ್ರೇಣಿಯ ಅನುಭವ ವೆಂಕಟಪ್ಪ ನಿಗಾದುದು ಅದೇ ಮೊದಲು. ಈ ಅನುಭವ ಅವರ ಮೇಲೆ ತುಂಬ ಪ್ರಭಾವವನ್ನು ಬೀರಿತು. ಐವತ್ತು ವರ್ಷಗಳಾದರೂ ಅದರ ನೆನಪು ಅಚ್ಚಳಿಯದೆ ಉಳಿದಿತ್ತು. ವೆಂಕಟಪ್ಪನಿಗೆ ಬೆಟ್ಟಗಳ ಮೇಲೆ ಒಲುಮೆ ಬಂದುದೂ ಇದೇ ಕಾರಣದಿಂದ ಇದ್ದೀತು. ಅವರು ಮೈಸೂರಿ ನಲ್ಲಿರುವಾಗ ಅಡಿಗಡಿಗೆ ಊಟಿಗೆ (ಉದಕಮಂಡಲಕ್ಕೆ) ಹೋಗಿಬರುತ್ತಿದ್ದರು.

೫

ವೆಂಕಟಪ್ಪ ಕಲ್ಕತ್ತೆಗೆ ಬರುವ ಮೊದಲೇ, 1907ರಲ್ಲಿ, 'ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್' ಎಂಬ ಸಂಸ್ಥೆ ಮೈದಳೆದಿದ್ದಿತು. ಭಾರತ, ಚೀಣ, ಜಪಾನ್ ದೇಶಗಳ ಕಲಾಪ್ರಕಾರಗಳನ್ನು ಆಳವಾಗಿ ಅಭ್ಯಸಿಸಲು, ಈ ದೇಶಗಳ ಲಲಿತಕಲೆ ಮತ್ತು ಕರಕುಶಲ ಕಲೆಗಳಲ್ಲಿ ಶಿಕ್ಷಣ ಒದಗಿಸಲು ಈ ಸಂಸ್ಥೆ ಟೊಂಕಕಟ್ಟಿದ್ದಿತು. ಇದರ ನೇತಾರರು ಗಗನೇಂದ್ರನಾಥ ಠಾಕುರ, ಅವನೀಂದ್ರನಾಥ ಠಾಕುರ, ಸರ್ ಜಾನ್ ವುಡ್‌ರೊಫ್

ಮೊದಲಾದವರು. ಆಗಿನ ಬಂಗಾಳ ಸರಕಾರದ ಪ್ರೋತ್ಸಾಹದಿಂದ ಮೊದಲಾದ ಈ ಸಂಸ್ಥೆಗೆ ಬಂಗಾಳದ ಗೌರ್ನರ್ ಲಾರ್ಡ್ ರೊನಲ್ಡ್‌ಷೇ ಪೋಷಕ; ಅದರ ಮೊಟ್ಟಮೊದಲ ಕಾರ್ಯದರ್ಶಿಗಳು ಅವನೀಂದ್ರನಾಥ ಠಾಕುರ ಮತ್ತು ನಾರ್ಮನ್ ಬ್ಲಂಟ್ ಎಂಬ ಆಂಗ್ಲ ಕಲಾಭಿಮಾನಿ. ಮುಂದೆ ಗಗನೇಂದ್ರನಾಥರು ಕಾರ್ಯದರ್ಶಿಯಾದರು. ಈ ಸಂಸ್ಥೆಯಿಂದ ಆಗಾಗ ಭಾರತೀಯ ಮಧ್ಯಯುಗೀನ ಮತ್ತು ಸಮಸಾಮಯಿಕ ಚಿತ್ರಗಳ, ಜಪಾನೀ ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ನಡೆಯುತ್ತಿದ್ದಿತು. ಬಂಗಾಳದಲ್ಲಿ ಅವನೀಂದ್ರನಾಥರ ನೇತೃತ್ವದಲ್ಲಿ ರೂಪುಗೊಂಡ ಹೊಸ ಪ್ರವೃತ್ತಿಯನ್ನು ಜನರಿಗೆ ಕಾಣಿಸುವುದರಲ್ಲಿ ಸಂಸ್ಥೆ ಫಲಕಾರಿಯಾಯಿತು. ಸಂಸ್ಥೆಯಿಂದ 'ರೂಪಂ' ಎಂಬ ಹೆಸರಿನ ಕಲಾ ಪತ್ರಿಕೆಯೊಂದೂ ಹೊರಡುತ್ತಿದ್ದಿತು. ಸುಪ್ರಸಿದ್ಧ ವಿಮರ್ಶಕ ಅರ್ಧೇಂದು ಕುಮಾರ ಗಂಗೊಲಿ ಅದರ ಸಂಪಾದಕರು.

ಈ ಸಂಸ್ಥೆಯೊಡನೆ ವೆಂಕಟಪ್ಪನ ಸಂಬಂಧ ನಿಕಟ ಅಥವಾ ಸಕ್ರಿಯ ಅಲ್ಲದಿದ್ದರೂ ಈ ಸಂಸ್ಥೆಯ ಕಾರ್ಯನಿರ್ವಾಹಕರಾಗಿದ್ದ ನಂದಲಾಲ ಬಸು, ಅಶೀತಕುಮಾರ ಹಾಲದಾರ, ಅರ್ಧೇಂದು ಕುಮಾರ ಗಂಗೊಲಿ ಇವರು ವೆಂಕಟಪ್ಪನಿಗೆ ಸ್ನೇಹಿತರು. ವೆಂಕಟಪ್ಪನ ಕಲಾಕೃತಿಗಳ ಪ್ರದರ್ಶನ ಈ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿದ್ದುದುಂಟು. ವೆಂಕಟಪ್ಪ ಮೈಸೂರಿಗೆ ಬಂದಮೇಲೂ ಈ ಸಂಸ್ಥೆಯ ಕಡೆಯಿಂದ ವೆಂಕಟಪ್ಪನ ಕಲಾಕೃತಿಗಳ ಮಾರಾಟ ಆಗಾಗ ಆಗುತ್ತಿದ್ದಿತು. ವೆಂಕಟಪ್ಪನ ಕಲೆಗಾರಿಕೆಯನ್ನು ಮೆಚ್ಚಿಕೊಂಡು ಅವರ ಕೃತಿಗಳ ಸಂಗ್ರಹಮಾಡಲು ತೊಡಗಿದ ಜೇಮ್ಸ್ ಕಸಿನ್ಸ್, ಕಾರ್ಲ್ ಖಂಡಲವಾಲ, ಟ್ರೆಷರಿವಾಲ ಮೊದಲಾದ ಕಲಾಪ್ರೇಮಿಗಳಿಗೆ ವೆಂಕಟಪ್ಪನ ಪರಿಚಯ ಆದದ್ದು ಈ ಸಂಸ್ಥೆಯ ಮೂಲಕವೇ.

ಇಂಗ್ಲೆಂಡಿನ ದೊರೆಯಾಗಿದ್ದ ಐದನೆಯ ಜಾರ್ಜ್ 1911ರಲ್ಲಿ ಭಾರತದೇಶದ ಚಕ್ರವರ್ತಿಯಾಗಿ ಭಾರತಕ್ಕೆ ಭೇಟಿಕೊಟ್ಟರಷ್ಟೆ. ಆಗ ದೇಶದ ಸಾಂಸ್ಕೃತಿಕ ರಾಜಧಾನಿಯಾಗಿದ್ದ ಕಲ್ಕತ್ತೆಗೂ ಬಂದಿದ್ದರು. ಅವರ ಸ್ವಾಗತಸಮಾರಂಭದಲ್ಲಿ ಸಾರ್ವಜನಿಕ ಮಂಡಪವನ್ನು ರಚಿಸುವ ಹೊಣೆಯನ್ನು ಪ್ರಾಂತ್ಯ ಸರಕಾರ ಕಲಾಶಾಲೆಗೆ ಒಪ್ಪಿಸಿತು. ಕಲಾ ಶಾಲೆಯಲ್ಲೇ ಇನ್ನೂ ಉದ್ಯೋಗ ನಿರ್ವಹಿಸುತ್ತಿದ್ದ ಅವನೀಂದ್ರನಾಥರು ಈ ಕೆಲಸಕ್ಕೆ ತಮ್ಮ ಶಿಷ್ಯರಾಗಿದ್ದ ನಂದಲಾಲ ಬಸು ಮತ್ತು ವೆಂಕಟಪ್ಪ ಇವರಿಬ್ಬರನ್ನು ತೊಡಗಿಸಿದರು; ಇವರಿಗೆ ನೆರವಾಗಿ ಅಶೀತಕುಮಾರ ಹಾಲದಾರರು ಜೊತೆಗಿದ್ದರು. ಇವರು ನಿರ್ವಹಿಸಿದ ಕೆಲಸದ ಬಗೆ, ಸೊಬಗು, ಅಚ್ಚುಕಟ್ಟು ಎಲ್ಲರಿಗೂ ಮೆಚ್ಚುಗೆಯಾದುವು. ಪತ್ರಿಕೆಗಳಲ್ಲೂ ಇದರ ಪ್ರಶಂಸೆ ಪ್ರಕಟವಾಯಿತು.

ವೆಂಕಟಪ್ಪ ಕಲ್ಕತ್ತೆಗೆ ಬಂದದ್ದು ಎರಡು ವರ್ಷಗಳ ಕಲಿಕೆಗೆಂದು; ಮೈಸೂರು ಸರಕಾರದ ವಿದ್ಯಾರ್ಥಿವೇತನವಿದ್ದುದೂ ಇದೇ ಅವಧಿಗೆ. ಆದರೆ ಅಲ್ಲಿ ಕಲಿಯುತ್ತಿದ್ದ ಕಲೆಯ ಆಳ-ಅಗಲಗಳನ್ನು ಗಮನಿಸಿ ಕಲಿಕೆಯ ಅವಧಿ ಏಳೂವರೆ ವರ್ಷಗಳವರೆಗೆ ವಿಸ್ತರಿಸಿಕೊಂಡಿತು! ಮೈಸೂರು ಮಹಾರಾಜರ ಆಸಕ್ತಿಯಿಂದಾಗಿ ವಿದ್ಯಾರ್ಥಿವೇತನವೂ ಇಷ್ಟೂ ಕಾಲ ವೆಂಕಟಪ್ಪನಿಗೆ ದೊರಕುವಂತಾಯಿತು.

ಹಿಮಾಲಯ ಯಾತ್ರೆ

(1913)

೧

ವೆಂಕಟಪ್ಪ 1913ರ ಏಪ್ರಿಲ್ ತಿಂಗಳ ಮೊದಲ ಭಾಗದಲ್ಲಿ ಹಿಮಾಲಯದ ಕಡೆ ಯಾತ್ರೆ ಹೊರಟರು. ಇದಕ್ಕೆ ಪ್ರೇರಣೆಯೇನೋ ತಿಳಿದುಬರುವುದಿಲ್ಲ. ಮೊದಲಿಂದ ದೈವಭಕ್ತಿಯೇನೋ ಇದ್ದಿತು; ಧರ್ಮಶ್ರದ್ಧೆಯೂ ಇದ್ದಿತು. ಆ ವರ್ಷದ ಏಪ್ರಿಲ್ ತಿಂಗಳ ಹದಿನಾಲ್ಕನೆಯ ದಿನದಿಂದ ಕಲಾಶಾಲೆಗೆ ಬೇಸಿಗೆ ರಜೆಯ ಬಿಡುವು; ಮತ್ತೆ ಕಲಾಶಾಲೆ ತೆರೆಯುವುದು ಜೂನ್ ತಿಂಗಳ ಹದಿನಾರನೆ ದಿನದಂದೇ. ಅಲ್ಲಿಯವರೆಗೆ ಕಲ್ಕತ್ತೆಯಲ್ಲಿದ್ದು ಮಾಡುವುದೇನು? ಕಲಾವಿದರಿಗೂ ಹಿಮಾಲಯ ಸ್ಫೂರ್ತಿಯನ್ನು ಕೊಡುವಂಥ ತಾಣವೇ; ಧರ್ಮಶ್ರದ್ಧಾಳುಗಳಿಗಂತೂ ಬದರಿ, ಕೇದಾರ ಯಾತ್ರೆಗಳ ಅಗತ್ಯ ಸರಿಯೇ ಸರಿ. ರಜೆಯ ದಿನಗಳಲ್ಲಿ ಪ್ರಕೃತಿಯ ಸೊಬಗನ್ನು ಸವಿಯಲು ಅವರ ಗುರುಗಳಾದ ಅವನೀಂದ್ರನಾಥರೂ ಹಿಮಾಲಯದ ಕಡೆ ಹೋಗುತ್ತಿದ್ದುದುಂಟು; ಅವರ ಸೋದರ ಗಗನೇಂದ್ರನಾಥರಿಗೂ ಇದೇ ವಾಡಿಕೆಯಿದ್ದಿತು. ವೆಂಕಟಪ್ಪನಿಗೆ ರಜೆಯ ಎರಡು ತಿಂಗಳು ಮರಳಿ ತನ್ನೂರಿಗೆ ಬರುವ ಹಂಬಲವೇನು ಇರಲಿಲ್ಲ. ಇದನ್ನು ಗಮನಿಸಿ ಅವನೀಂದ್ರನಾಥರೇ ವೆಂಕಟಪ್ಪನಿಗೆ ಹಿಮಾಲಯ ಯಾತ್ರೆ ಮಾಡಿಬರಲು ಸೂಚಿಸಿಯೂ ಇರಬಹುದು.

ಹಿಮಾಲಯ ಯಾತ್ರೆಗೆ ಸಿದ್ಧಪಡಿಸಿಕೊಂಡು ವೆಂಕಟಪ್ಪ ಕಲ್ಕತ್ತೆಯಿಂದ ಏಪ್ರಿಲ್ ಹನ್ನೆರಡನೆಯ ದಿನದಂದು ವಾರಣಾಸಿಗೆ ಹೊರಟರು. ಬದರಿಯಾತ್ರೆಗೆ ಮೊದಲು ಗಂಗಾಸ್ನಾನ, ವಿಶ್ವನಾಥ ದರ್ಶನ ಯಾತ್ರಾವಿಧಿಯೇ. ಕಲ್ಕತ್ತೆಯಿಂದ ಹೊರಡುವ ಮೊದಲು ಗುರುಗಳಾದ ಅವನೀಂದ್ರನಾಥರ ಮನೆಗೆ ಹೋಗಿ ಅವರ ಆಶೀರ್ವಾದ ಪಡೆದುಕೊಂಡರು. ವೆಂಕಟಪ್ಪ ಅವನೀಂದ್ರನಾಥರ ಮನೆಗೆ ಹೋಗಿಬರುವೆನೆಂದು ಹೇಳಲು ಹೋಗಿದ್ದಾಗ, ಅವನೀಂದ್ರನಾಥರು ಮನೆಯವರನ್ನೆಲ್ಲ ಕರೆದು, "ನೋಡಿ, ಹಿಮಾಲಯಯಾತ್ರೆಗೆ ಹೊರಟಿದ್ದಾನೆ ಅಪ್ಪ (ಅವನೀಂದ್ರನಾಥರೂ ಇತರರೂ ಅವರನ್ನು ಅಪ್ಪನೆಂದೇ ಕರೆಯುತ್ತಿದ್ದರು.); ಬಂದು ಆತನನ್ನು ಚೆನ್ನಾಗಿ ನೋಡಿ, ಪ್ರಾಯಶಃ ಇದೇ ಕಡೆಯ ಬಾರಿ ಅವನನ್ನು ನೋಡುವುದೊ ಏನೋ! ಮತ್ತೆ ಹಿಂದಕ್ಕೆ ಬರುವನೆಂಬ ಭರವಸೆಯಿಲ್ಲ!!" ಎಂದು ನಗೆಯಾಡಿದರು. ವೆಂಕಟಪ್ಪನ ವೈರಾಗ್ಯ ಪ್ರವೃತ್ತಿಯ ಪರಿಚಯ ಅಲ್ಲಿ ಎಲ್ಲರಿಗೂ ಇದ್ದಿತು. ಅವನೀಂದ್ರನಾಥರಿಗೆ ತಮ್ಮ ಎಲ್ಲ ಶಿಷ್ಯರ ಮೇಲೂ ಇದ್ದ ವಾತ್ಸಲ್ಯ ಸುಪ್ರಸಿದ್ಧವಾದುದು; ಅದರಲ್ಲೂ ನಂದಲಾಲ ಬಸು, ವೆಂಕಟಪ್ಪ ಎಂದರೆ ತುಂಬ ಪ್ರೀತಿ.

ಹೊರಡುವ ಮುಂಚೆ ಅದೇ ವರ್ಷದ ಜನವರಿ ತಿಂಗಳ ಇಪ್ಪತ್ತೊಂದನೆಯ ದಿನ ರಾಮಾಯಣ ಚಿತ್ರಮಾಲೆಯ ಕಡೆಯ ಮೂರು ಚಿತ್ರಗಳನ್ನು ಗುರುಗಳಿಗೆ ಒಪ್ಪಿಸಿ ಆ ವರ್ಷದ ಶಾಲೆಯ ಅಗತ್ಯವನ್ನು ಪೂರೈಸಿದ್ದರು. ಅವನೀಂದ್ರನಾಥರು ರಾಮಾಯಣದ ವಸ್ತುಗಳನ್ನಾರಿಸಿ ತಮ್ಮ ವಿದ್ಯಾರ್ಥಿಗಳಿಂದ ಚಿತ್ರ ಬರೆಯಿಸುವ ವಾಡಿಕೆಯಿದ್ದಿತು; ನಂದಲಾಲ ಬಸು ಮತ್ತು ವೆಂಕಟಪ್ಪ ಇಬ್ಬರೂ ಸಿದ್ಧಪಡಿಸಿದ ಚಿತ್ರಗಳು ಅವರಿಗೆ ತುಂಬ ಪ್ರಿಯವಾಗಿದ್ದುವು. ವೆಂಕಟಪ್ಪ ರಾಮಾಯಣದ ಪ್ರಸಂಗಗಳನ್ನಾರಿಸಿಕೊಂಡು ಎಷ್ಟು ಚಿತ್ರಗಳನ್ನು ರಚಿಸಿದರೊ ತಿಳಿಯದು. ಅವರ ಡೈರಿಯಲ್ಲೇನೋ 1913ರ ಜನವರಿ 21 ರಂದು "ರಾಮಾಯಣದ ಕಡೆಯ ಮೂರು ಚಿತ್ರಗಳನ್ನು ಒಪ್ಪಿಸಿದೆ"ನೆಂದು ಒಕ್ಕಣೆಯಿದೆ. ಸೀತಾಕಲ್ಯಾಣ, (ಕೇಂದ್ರ ಲಲಿತ ಕಲಾ ಅಕಾಡಮಿಯ 'ವೆಂಕಟಪ್ಪ' ಪುಸ್ತಕದಲ್ಲಿ ಐದನೆಯ ಚಿತ್ರ), ಅರಣ್ಯದಲ್ಲಿ ಭೂಮಿತಾಯಿ ರಾಮನಿಗಾಗಿ ಪಾದುಕೆಗಳನ್ನು ಸೀತೆಯ ಕೈಗೆ ಒಪ್ಪಿಸು ತ್ತಿರುವುದು (ಆನಂದ ಕುಮಾರಸ್ವಾಮಿಯವರ 'ಆರ್ಟ್ ಎಂಡ್ ಸ್ವದೇಶಿ' ಪುಸ್ತಕದಲ್ಲಿ ಹದಿನೆಂಟನೆಯ ಚಿತ್ರ), ಸೇತು ಬಂಧನ (ಭಾರತ ಸರಕಾರದ 'ಇಂಡಿಯನ್ ಆರ್ಟ್ ತ್ರೂ ದಿ ಏಜಸ್' ನಲ್ಲಿ ಅರವತ್ತನೆಯ ಚಿತ್ರ), ರಾಮನು ಬಂಗಾರದ ಜಿಂಕೆಯನ್ನು ಬೆನ್ನಟ್ಟಿ ಹೋದುದು (ದಿಲ್ಲಿಯ ನ್ಯಾಷನಲ್ ಗ್ಯಾಲರಿಯ ಸಂಗ್ರಹ) ಈ ಚಿತ್ರಗಳು ಮಟ್ಟಿಗೆ ನಮ್ಮ ಗಮನಕ್ಕೆ ಬಂದಿವೆ. ವೆಂಕಟಪ್ಪನವರ ರಾಮಾಯಣ ಚಿತ್ರಗಳನ್ನು ಬಂಗಾಳದ ದಿಗಪಾತಿಯಾ ರಾಜರು ಕೊಂಡರೆಂದೂ ಅವರ ಅರಮನೆಯಲ್ಲಿದ್ದುವೆಂದೂ ಹೇಳುತ್ತಾರೆ; ಅವು ಏನಾದುವೋ ತಿಳಿಯದು.

ಹಿಮಾಲಯ ಯಾತ್ರೆಗೆಂದು ಹೊರಟ ವೆಂಕಟಪ್ಪ ಏಪ್ರಿಲ್ 13 ರಂದು ವಾರಣಾಸಿಗೆ ಬಂದರು. (ಇಲ್ಲಿಂದ ಮುಂದೆ ಅವರಿಗೆ ತಮ್ಮ ದಿನಚರಿಗಳನ್ನು ಬರೆದಿಡುವ ವಾಡಿಕೆ ಮೊದಲಾಯಿತು. ಮೊದಮೊದಲು ಬರಿಯ ವೆಚ್ಚಕ್ಕೆಂದೇ ಸೀಮಿತವಾದುದು ಬರುಬರುತ್ತ ಸಂಗತಿಗಳ ವಿವರವಾದ ನಿರೂಪಣೆಯ ರೂಪವನ್ನು ತಳೆಯಿತು.) ಎರಡು ದಿನಗಳನಂತರ ಅಯೋಧ್ಯೆಗೆ ಹೋಗಿ ರಾಮನ ಜನ್ಮಸ್ಥಾನವನ್ನು ಸಂದರ್ಶಿಸಿ ವಾರಣಾಸಿಗೆ ಹಿಂದಿರುಗಿದರು; ಮತ್ತೆ ಎರಡು ದಿನಗಳು ಕಳೆದ ಮೇಲೆ ಹರಿದ್ವಾರಕ್ಕೆ ಹೊರಟರು. ಅದೇ ತಿಂಗಳ 22ನೆಯ ತಾರೀಖು ರೈಲಿನಲ್ಲಿ ದೆಹ್ರಾದೂನ್ ನಗರವನ್ನು ಮುಟ್ಟಿ, ಅಲ್ಲಿಂದ ಮುಂದೆ ರಾಜಪುರಕ್ಕೆ ಆರು ಮೈಲಿಗಳ ದೂರ ನಡೆದು ಹೋದರು. ಮುಂದೆ ಲಂಡೌರ್ (ಮುಸ್ಸೂರಿ), ಉತ್ತರಕಾಶಿ, ಮಾನೇರಿಬೆಟ್ಟಗಳನ್ನು ಹಾದು ಮೇ ತಿಂಗಳ ಮೊದಲ ದಿನ ಗಂಗೋತ್ರಿಯಲ್ಲಿ ಬಂದಿಳಿದರು. ದೆಹ್ರಾದೂನಿನಿಂದ ಒಟ್ಟು ಒಂದುನೂರು ಮೈಲಿಗಳ ದೂರವನ್ನು ಕಾಲುನಡಿಗೆಯಲ್ಲೇ ನಿರ್ವಹಿಸಿದರು. ದಾರಿಯಲ್ಲಿ ಅವರ ಆಹಾರ ತೀರ ಅಲ್ಪ, ಬಹು ಮಟ್ಟಿಗೆ ಬ್ರೆಡ್ ಮತ್ತು ಹಾಲು; ಹಲವೊಮ್ಮೆ, ರಾತ್ರಿಯ ವೇಳೆ ಉಪವಾಸವೆ.

ಗಂಗೋತ್ರಿಯನ್ನು ಮುಟ್ಟಿದಾಗ ಅವರು ಭಾವಪರವಶರಾದುದನ್ನು ತಮ್ಮ ದಿನಚರಿಯ ಹಾಳೆಯಲ್ಲಿ ಕಾಣಿಸಿದ್ದಾರೆ. ಮುದ್ದಾದ ಅಕ್ಷರಗಳಲ್ಲಿ ಶ್ರದ್ಧೆಯಿಂದ

"ಜಯ್ ಗಂಗಾಮಾ ಕೀ ಜಯ್
ಜಯ್ ಭಗೀರಥ ಕೀ ಜಯ್"

ಎಂದು ಬರೆದಿದ್ದಾರೆ. ಅಲ್ಲಿನ ಯಾತ್ರಿಕರು ಗಂಗೆಯನ್ನು ಕಂಡೊಡನೆ ಮಾಡುವ ಉದ್ಗಾರ ಅದು. ಅವರು ಗಂಗೋತ್ರಿಯಲ್ಲಿ ಎರಡು ದಿನಗಳನ್ನು ಕಳೆದು, ಅನಂತರ ತ್ರಿಜುಗೀ ನಾರಾಯಣ ಮತ್ತು ಹರಶಿಲಾ ಮಾರ್ಗವಾಗಿ ಕೇದಾರನಾಥದ ಕಡೆ ಹೊರಟರು.

ಮೇ ತಿಂಗಳ ಆರನೆಯ ದಿನದಂದು ಅವರ ದಿನಚರಿಯ ಒಕ್ಕಣೆಯನ್ನು ಗಮನಿಸಿದರೆ 'ಸ್ವಯಂಸಹಾಯವೇ ಅತ್ಯುತ್ತಮ ಸಹಾಯ'' ಎಂಬ ಆಂಗ್ಲನುಡಿಯ ಸುಭಾಷಿತ ವೊಂದನ್ನು ಎದ್ದು ಕಾಣುವಂತೆ ಬರೆದಿದ್ದಾರೆ. ಈ ದೃಷ್ಟಿ ಅವರಿಗೆ ಮೊದಲಿಂದ ಇದ್ದಿತು. ಕಲ್ಕತ್ತೆಗೆ ಬಂದಾಗಿನಿಂದ ತಮ್ಮ ಅಡುಗೆಯನ್ನು ತಾವೆ ಮಾಡಿಕೊಳ್ಳುವುದು, ತಮ್ಮ ಬಟ್ಟೆಗಳನ್ನು ತಾವೆ ಒಗೆದುಕೊಳ್ಳುವುದು, ತಮ್ಮ ಸ್ಥಿತಿಗತಿಗಳನ್ನು ತಾವೆ ನೋಡಿಕೊಳ್ಳುವುದು ರೂಢಿಯಾಯಿತು; ಬೇರೊಬ್ಬರ ನೆರವನ್ನು ಪಡೆಯಲು ಆಗಿನಿಂದ ಅವರು ಒಪ್ಪುತ್ತಿರಲಿಲ್ಲ. ತಮ್ಮ ಕಾಲಮೇಲೆ ತಾವು ನಿಲ್ಲದೆ, ಹೆರವರನ್ನು ಅವಲಂಬಿಸುವುದು ನಾಚಿಕೆಯ ಪ್ರಸಂಗವೆಂದು ಅವರು ತೀರ್ಮಾನಿಸಿದ್ದರು. ಅವರು ಯಾವಜ್ಜೀವವೂ ಕೈಗೊಂಡ ಅಪರಿಗ್ರಹವ್ರತವು ಬಹುಶಃ ಗಂಗೋತ್ರಿಯಿಂದ ಕೇದಾರನಾಥಕ್ಕೆ ಹೋಗುವ ದಾರಿಯಲ್ಲಿ ತಳೆದಿದ್ದಿರಬೇಕು. ಯಾತ್ರಿಕರು ಪುಣ್ಯಕ್ಷೇತ್ರಗಳಿಗೆ ಹೋದಾಗ ತೀರ್ಥಗಳಲ್ಲಿ ಮಿಂದು, ತಮಗೆ ಪ್ರಿಯವೆನಿಸಿದ ಯಾವುದಾದರೊಂದು ವಸ್ತುವನ್ನು ಅಥವಾ ಯಾವುದಾದರೊಂದು ರೂಢಿಯನ್ನು ಅಥವಾ ಅಭ್ಯಾಸವನ್ನು ಕೈಬಿಡುವುದು ಹಿಂದಿನಿಂದ ಬಂದ ವಾಡಿಕೆ. ಬೇರೆಯವರಿಂದ ಯಾವ ವಸ್ತುವನ್ನಾಗಲಿ ಸೇವೆಯನ್ನಾಗಲಿ ಉಚಿತವಾಗಿ ಸ್ವೀಕರಿಸುವು ದಿಲ್ಲವೆಂಬ ವ್ರತವನ್ನು ವೆಂಕಟಪ್ಪ ಕೈಗೊಂಡುದು ಈ ವಾಡಿಕೆಯ ಒಂದು ಅನ್ವಯರೂಪವಾಗಿಯೆ. ಇದು ಯೋಗಸಾಧಕರ ನಡುವೆ ಅಪರಿಗ್ರಹವ್ರತವೆನಿಸಿ ಕೊಳ್ಳುತ್ತದೆ. ಬೇರೊಬ್ಬರ ನೆರವನ್ನು ಅವಲಂಬಿಸದೆ ಬದುಕುವುದು ತೀರ ಕಷ್ಟ ; ವೆಂಕಟಪ್ಪ ಕೈಗೊಂಡುದು ಕಠೋರವಾದ ವ್ರತವನ್ನೇ. ಬದುಕಿರುವವರೆಗೂ ಇದನ್ನು ನಡೆಸಿಕೊಂಡೂ ಬಂದರೆನ್ನಿ.

ಗಂಗೋತ್ರಿಯಿಂದ ಹದಿನಾಲ್ಕು ಮೈಲಿಗಳಷ್ಟು ದೂರ ನಡೆದು ಹರಶಿಲಾ ಎಂಬಲ್ಲಿಗೆ ಬಂದುದು ಮೇ ತಿಂಗಳ ಮೊದಲವಾರದಲ್ಲಿ. ಅಲ್ಲಿ ತಮ್ಮ ಅಡುಗೆಯನ್ನು ತಾವೇ ಮಾಡಿಕೊಂಡು ಊಟ ಮುಗಿಸಿ ಎರಡು ದಿನಗಳ ಕಾಲ ನಡೆದು ಕೇದಾರನಾಥಕ್ಕೆ ಅದೇ ತಿಂಗಳ ಹನ್ನೆರಡನೆಯ ದಿನ ಬಂದರು. ನಡುವೆ ದಾರಿಯಲ್ಲಿ ಬ್ರೆಡ್ ಮತ್ತು ಹಾಲುಗಳಷ್ಟೇ ಜೀವನಾಧಾರ. ಕೇದಾರನಾಥವನ್ನು ತಲುಪುವ ಮುನ್ನವೇ ಅಪರಿಗ್ರಹವ್ರತವನ್ನು ಕೈಗೊಂಡುದು. ಕೇದಾರನಾಥ ಕ್ಷೇತ್ರಕ್ಕೆ ಬಂದೊಡನೆ ಮಂದಾಕಿನೀ ನದಿಯಲ್ಲಿ ಮಿಂದು, ಅಲ್ಲಿ ಒಂದು ದಿನ ತಂಗಿದ್ದು, ಅಲ್ಲಿಂದ ಸುಮಾರು ನೂರು ಮೈಲುಗಳನ್ನು ನಡೆದು 19ನೆಯ ದಿನದಂದು ಬದರೀನಾಥ ಕ್ಷೇತ್ರಕ್ಕೆ ಬಂದರು. ಬದರಿಯಲ್ಲಿ ಬ್ರಹ್ಮಕಪಾಲ ಎಂಬೆಡೆ ವಾಸುದೇವ-ಪಿಂಡ-ಶ್ರಾದ್ಧವನ್ನು ನೆರವೇರಿಸಿ ದೇವರ ದರ್ಶನ ಮಾಡಿ, ಪ್ರಸಾದವನ್ನು ಸ್ವೀಕರಿಸಿದ ಮೇಲೆ, ತಮ್ಮ ಗುರುಗಳಾದ ಅವನೀಂದ್ರನಾಥರಿಗೆ ಬದರಿಯನ್ನು ಮುಟ್ಟಿದೆ ನೆಂದು ತಾರುಕೊಟ್ಟು ಸಮಾಚಾರಮುಟ್ಟಿಸಿದರು. ಯಾವ ಶ್ರದ್ಧಾವಂತನಾದ ಹಿಂದುವಿಗೂ ಬದರಿಯನ್ನು ಕಾಣಬೇಕೆಂಬ ತವಕ ಇರುವುದು ಸಹಜವೆ. ಆದರೆ ಬದರಿಯಾತ್ರೆ ತುಂಬ

ಪ್ರಯಾಸದ್ದೆಂದು ಎಲ್ಲರೂ ಬಲ್ಲರು. ಈ ಯಾತ್ರೆಯನ್ನು ಯಾವ ಅಡ್ಡಿ -ಆತಂಕಗಳಿಲ್ಲದೆ ಮುಗಿಸಿದುದು ವೆಂಕಟಪ್ಪನಿಗೆ ತುಂಬ ಸಂತೋಷವನ್ನು ತಂದಿತು.

ಬದರಿಯಲ್ಲಿ ಎರಡು ದಿನಗಳಿದ್ದು, ಅನಂತರ ಅಲ್ಲಿಂದ ಹೊರಟು ಬುಲ್‌ದೋರ, ವಿಷ್ಣುಪ್ರಯಾಗ, ಗರುಡಗಂಗಾ, ಕರ್ಮಪ್ರಯಾಗ, ರುದ್ರಪ್ರಯಾಗ, ಬಿಲ್ವಕೇದಾರ ಎಂಬ ಕ್ಷೇತ್ರಗಳನ್ನು ಸಂದರ್ಶಿಸಿ ಹರಿದ್ವಾರಕ್ಕೆ ಹಿಂದಿರುಗಿದರು. ಜೂನ್ ತಿಂಗಳ ನಾಲ್ಕನೆಯ ದಿನ ಹರಿದ್ವಾರವನ್ನು ಬಿಟ್ಟು ಹೊರಟು ಮರುದಿನ ಕುರುಕ್ಷೇತ್ರವನ್ನು ತಲುಪಿದರು. ಮಾರನೆಯ ದಿನ ಅಲ್ಲಿಂದ ಹೊರಟು ದಿಲ್ಲಿಗೆ ಬಂದರು. ದಿಲ್ಲಿಯಲ್ಲಿ ಎರಡುದಿನಗಳ ವಾಸ. ಕುತಬ್‌ಮಿನಾರ್, ಲಾಲ್ ಖಿಲಾ (ಕೆಂಪುಕೋಟೆ), ದಿವಾನ್-ಇ-ಖಾಸ್, ಹುಮಾಯೂನನ ಗೋರಿ, ಜಂತರ್-ಮಂತರ್, ನಿಜಾಮುದ್ದೀನ್ ಮತ್ತು ಸಫ್ದರ್‌ಜಂಗರ ಗೋರಿಗಳು ಇವನ್ನೆಲ್ಲ ನೋಡಿಕೊಂಡು, ಮತ್ತೆ ವಾರಣಾಸಿಗೆ ಬಂದು ಆರು ದಿನಗಳು ಅಲ್ಲಿದ್ದು ಜೂನ್ ತಿಂಗಳ ಹದಿನೈದನೆಯ ದಿನ ಮುಂಜಾನೆ ಆರು ಗಂಟೆಯ ಸಮಯಕ್ಕೆ ಕಲ್ಕತ್ತೆಯಲ್ಲಿ ಬಂದಿಳಿದರು. ಮರುದಿನವೇ ಕಲಾಶಾಲೆಯು ತೆರೆಯುವುದಿದ್ದಿತು. ಭಾರತ ಸರಕಾರದಿಂದ ಗುರು ಅವನೀಂದ್ರನಾಥರು ಸಿ.ಐ.ಇ. ಬಿರುದನ್ನು ಪಡೆದರಾಗಿ ಅಭಿಮಾನಿಗಳೂ ಶಿಷ್ಯರೂ ಅವರನ್ನು ಸನ್ಮಾನಮಾಡುವ ಸಮಾರಂಭವೊಂದನ್ನು ಕಲಾಶಾಲೆಯಲ್ಲಿ ಅದೇ ದಿನ ಏರ್ಪಡಿಸಿದ್ದರು. ವೆಂಕಟಪ್ಪ ಈ ಸಭೆಯಲ್ಲಿ ಪಾಲ್ಗೊಂಡರು.

೨

ಹಿಮಾಲಯ ಯಾತ್ರೆಯಿಂದ ವೆಂಕಟಪ್ಪನವರ ಬಾಳುವೆಯಲ್ಲಿ ಹೊಸದೊಂದು ಪರಿಚ್ಛೇದ ಮೊದಲಾದಂತಾಯಿತು. ಅದೇ ವರ್ಷ ಆಗಸ್ಟ್ ತಿಂಗಳಿನಲ್ಲಿ, ಎಂದರೆ ಹಿಮಾಲಯ ಯಾತ್ರೆ ಮುಗಿಸಿ ಕಲ್ಕತ್ತೆಗೆ ಹಿಂದಿರುಗಿದನಂತರ ಒಂದೂವರೆ ತಿಂಗಳಲ್ಲಿ, ಅವರಿಗೂ ಸಂಗೀತಕ್ಕೂ ನೆಂಟು ಮೂಡಿಕೊಂಡಿತು. ಆ ಸಂದರ್ಭವಾದರೋ ಅನಿರೀಕ್ಷಿತ ವಾದುದು. ಆಗಸ್ಟ್‌ತಿಂಗಳ ಏಳನೆಯ ದಿನ ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರರೆಂಬ ಸಂಗೀತವಿದ್ವಾಂಸರು ಕಲ್ಕತ್ತೆಗೆ ಬಂದರು. ಅವರು ವೈಣಿಕರು, ಮೈಸೂರಿನ ವೀಣೆ ಶೇಷಣ್ಣನವರ ಶಿಷ್ಯರು. ಕಲ್ಕತ್ತೆಯಲ್ಲಿ ಬಹು ಮಂದಿ ದಕ್ಷಿಣದೇಶದವರು ನೆಲೆಸಿದ್ದು, ಅವರ ಮಕ್ಕಳಿಗೆ ದಕ್ಷಿಣಾದಿ ಸಂಗೀತವನ್ನು ಹೇಳಿಕೊಡಲು ಉಪಾಧ್ಯಾಯರ ಅಗತ್ಯವಿದೆ ಎಂದು ಕೇಳಿ ರಾಮಸ್ವಾಮಿ ಅಯ್ಯಂಗಾರರು ಕಲ್ಕತ್ತೆಗೆ ಬಂದಿದ್ದರು. ಅಷ್ಟು ದೊಡ್ಡ ನಗರದಲ್ಲಿ ತಮಗೆ ಸುಲಭವಾಗಿ ಜೀವನೋಪಾಯ ಆದೀತೆಂದು ಅವರ ನಿರೀಕ್ಷೆ. ಹೀಗೆ ಬಂದವರು, ವೆಂಕಟಪ್ಪ ಮೈಸೂರಿನವರೆಂಬುದನ್ನು ತಿಳಿದು ಅವರನ್ನು ನೋಡಲು ಬಂದರು. ವೆಂಕಟಪ್ಪನ ಮನೆಯಲ್ಲಿ ವೀಣೆಯೊಂದೂ ಇದ್ದುದನ್ನು ಕಂಡರು. ಅದು ಅಲ್ಲಿಗೆ ಬಂದ ಬಗೆಯೂ ಅನಿರೀಕ್ಷಿತವೇ. ಅವನೀಂದ್ರನಾಥರ ಐರೋಪ್ಯ ಮಿತ್ರರೊಬ್ಬರು ಭಾರತೀಯ ಸಂಗೀತವಾದ್ಯಗಳನ್ನು ಸಂಗ್ರಹಿಸಿದ್ದರು. ಅವರಿಗೆ ದಕ್ಷಿಣದೇಶದ ವೀಣೆಯೊಂದು ಬೇಕಾಗಿದ್ದಿತು. ಅವನೀಂದ್ರನಾಥರು ವೆಂಕಟಪ್ಪನಿಗೆ ಮೈಸೂರಿನಿಂದ ವೀಣೆಯೊಂದನ್ನು ಮಾಡಿಸಿ ತರಿಸುವಂತೆ ಹೇಳಿದರು. ವೀಣೆ ಕಲ್ಕತ್ತೆಗೆ ಬರುವ ವೇಳೆಗೆ ಆ ಐರೋಪ್ಯ ಮಿತ್ರರು ಭಾರತವನ್ನು ಬಿಟ್ಟು ಸ್ವದೇಶಕ್ಕೆ ಹಿಂದಿರುಗಿದ್ದರು. ಹೀಗಾಗಿ ಮೈಸೂರಿನಿಂದ ಬಂದ ವೀಣೆ

ವೆಂಕಟಪ್ಪನ ಮನೆಯಲ್ಲೇ ಉಳಿಯಿತು. ಆದರೆ ವೆಂಕಟಪ್ಪನಿಗೇನು ಸಂಗೀತದಲ್ಲಿ ಆಸಕ್ತಿ ಇದ್ದಿಲ್ಲ.

ರಾಮಸ್ವಾಮಿ ಅಯ್ಯಂಗಾರರು ವೆಂಕಟಪ್ಪನ ಮನೆಯಲ್ಲಿ (ಆಗ ವೆಂಕಟಪ್ಪ ಇರುತ್ತಿದ್ದುದು ಕಲ್ಕತ್ತೆಯ ಬೋಬಜಾರಿನ ಶೋಭಾರಾಮ ಬಸಕ ರಸ್ತೆಯಲ್ಲಿ, ಹದಿನೇಳನೇ ನಂಬರ್ ಮನೆಯಲ್ಲಿ) ವೀಣೆಯನ್ನು ನೋಡಿ, ವೆಂಕಟಪ್ಪ ಬಯಸಿದರೆ ವೀಣಾಭ್ಯಾಸವನ್ನು ಮಾಡಿಸುವುದಾಗಿ ಹೇಳಿದರು. ವೆಂಕಟಪ್ಪನೂ ಒಪ್ಪಿದರು. ಅಲ್ಲಿಂದ ಮುಂದೆ ಸಂಗೀತ ವೆಂಕಟಪ್ಪನಿಗೆ ಪ್ರೀತಿಯ ವಿಷಯವಾಯಿತು. ಆದರೆ ರಾಮಸ್ವಾಮಿ ಅಯ್ಯಂಗಾರರು ಕಲ್ಕತ್ತೆಯಲ್ಲಿ ತಮಗೆ ಹಲವಾರು ಸಂಗೀತಪಾಠಗಳು ಏರ್ಪಡಬಹುದೆಂದು ಬಗೆದದ್ದು ತಪ್ಪಾಯಿತು. ಎರಡು-ಮೂರು ತಿಂಗಳುಗಳು ಕಳೆದರೂ ವೆಂಕಟಪ್ಪನನ್ನು ಬಿಟ್ಟು ಬೇರಾವ ಉತ್ಸುಕ ವಿದ್ಯಾರ್ಥಿಯೂ ಅವರ ಬಳಿ ಸುಳಿಯಲಿಲ್ಲ. ನವೆಂಬರ್ ಮೊದಲ ವಾರದಲ್ಲಿ ಅಯ್ಯಂಗಾರರು ನಿರಾಶರಾಗಿ ಕಲ್ಕತ್ತೆಯನ್ನು ಬಿಟ್ಟು ಶ್ರೀರಂಗಕ್ಕೆ ಹಿಂದಿರುಗುವ ಯೋಚನೆ ಮಾಡಿದರು. ಕಲ್ಕತ್ತೆಯನ್ನು ಬಿಡುವ ದಿನ ವೆಂಕಟಪ್ಪನನ್ನು ಕಂಡು "ನಾ ಇಂಗೆ ವಂದತ್ತಿಲೆ ಉಂಗಳ್‌ಕ್ಕು ಮಾತ್ರಂ ಅನುಕೂಲಮಾಚಿ" (ನಾನು ಇಲ್ಲಿಗೆ ಬಂದುದರಿಂದ ನಿಮಗೆ ಮಟ್ಟಿಗೆ ಅನುಕೂಲವಾಯಿತು) ಎಂದು ಹೇಳಿದರಂತೆ. ಇದನ್ನು ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಕಾಣಿಸಿದ್ದಾರೆ (ನವೆಂಬರ್ ಐದರಂದು). ವೆಂಕಟಪ್ಪನಿಗೆ ಸಂಗೀತ ಕಲಿಯಲು ಅನುಕೂಲವಾಯಿತು; ಆದರೆ ಅಯ್ಯಂಗಾರರು ತಮ್ಮ ಬದುಕನ್ನು ಆ ದೊಡ್ಡ ಊರಲ್ಲಿ ತಳ್ಳುವಂತೆ ಪಾಠಗಳು ಮಾತ್ರ ಸಿಗಲಿಲ್ಲ!

ನಿರಾಶೆಯಿಂದ ಗುರುಗಳು ಕಲ್ಕತೆಯನ್ನು ಬಿಟ್ಟು ಹೊರಟು ಹೋದಮೇಲೂ, ಸಂಗೀತದಲ್ಲಿ ವೆಂಕಟಪ್ಪನ ಆಸಕ್ತಿಯೇನು ಕಡಮೆಯಾಗಲಿಲ್ಲ. ಮುಂದುವರೆದದ್ದು ಮಾತ್ರವಲ್ಲ, ಬೆಳೆಯಿತು. ಮೂರು ತಿಂಗಳ ಪಾಠವನ್ನು ಬೇರೂರಿಸಿಕೊಂಡುದಷ್ಟೇ ಅಲ್ಲ; ಸಂಗೀತ ಶಾಸ್ತ್ರದ ವಿಚಾರವಾಗಿ, ಪ್ರಯೋಗದ ವಿಚಾರವಾಗಿ ಓದಿ ಮನನಮಾಡಿದರು. ಇದರ ಫಲವಾಗಿ ಮರುವರ್ಷ ಮೊದಲ ಕೆಲವು ತಿಂಗಳುಗಳಲ್ಲೇ 'ಶ್ರುತಿ ವೀಣೆ'ಯೊಂದನ್ನು ಸಿದ್ಧಪಡಿಸಿದರು. ಭಾರತೀಯ ಸಂಗೀತದಲ್ಲಿ ಶ್ರುತಿ ತುಂಬ ಪ್ರಮುಖವಾದ ವಿವರವಷ್ಟೆ. ಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವ ಇಪ್ಪತ್ತೆರಡು ಶ್ರುತಿಗಳ ಔಚಿತ್ಯ, ಅಗತ್ಯ, ಪ್ರಯೋಜನಗಳನ್ನು ತಿಳಿಯಪಡಿಸಲೆಂದು ಅವರು ಈ ವಾದ್ಯವನ್ನು ತುಂಬಾ ಶ್ರಮವಹಿಸಿ ತಯಾರಿಸಿದರು. 1914ರ ಜನವರಿಯಲ್ಲಿ ರೂಪುತಳೆದ ಈ ವಾದ್ಯವನ್ನು ಅವರು ಮೈಸೂರಿನ ಸಂಗೀತವಿದ್ವಾಂಸರೂ ಶಾಸ್ತ್ರಜ್ಞರೂ 'ಸಂಗೀತದಲ್ಲಿ ಮನಃಶಾಸ್ತ್ರ' ಎಂಬ ಪ್ರೌಢ ಪುಸ್ತಕವನ್ನು ಬರೆದವರೂ ಆಗಿದ್ದ ಶ್ರೀ ಹೆಚ್.ಪಿ. ಕೃಷ್ಣರಾಯರಿಗೆ ಕಳುಹಿಸಿ ಕೊಟ್ಟರು. ಪ್ರಾಚೀನ ಶ್ರುತಿಗಳ ವಿಚಾರವಾಗಿ ವಿಪುಲವಾದ ಸಂಶೋಧನೆ ನಡೆಸಿದ್ದ ರಾಯರು ವೆಂಕಟಪ್ಪನು ಸಿದ್ಧಪಡಿಸಿದ್ದ ಶ್ರುತಿವೀಣೆಯನ್ನು ಮೆಚ್ಚಿಕೊಂಡರು. ಅವರಿಬ್ಬರ ನಡುವೆ ಪತ್ರವ್ಯವಹಾರ ಬಹು ಕಾಲ ನಡೆಯಿತಂತೆ. ಈ ಪತ್ರಗಳು ಇಂದು ಉಪಲಬ್ಧವಾಗಿಲ್ಲ, ನಮ್ಮ ದುರ್ದೈವ.

ಈ ಶ್ರುತಿವೀಣೆಯನ್ನು ಕುರಿತು ವೆಂಕಟಪ್ಪನಿಗೆ ತುಂಬ ಹೆಮ್ಮೆಯಾದುದು ಸಹಜವೇ.

ತಮ್ಮ ಬದುಕಿನಲ್ಲೇ ಇದೊಂದು ದೊಡ್ಡ ಸಾಧನೆಯೆಂದು ಅವರು ಬದುಕಿರುವವರೆಗೂ ನಂಬಿದ್ದರು. ಅವರು ಮೈಸೂರಿಗೆ ಹಿಂದಿರುಗಿದ ಮೇಲೆ ಅದನ್ನು ಹಲವಾರು ಹಿರಿಯ ವಿದ್ವಾಂಸರು ಪರಾಮರ್ಶಿಸಿದ್ದರು. ಟೈಗರ್ ವರದಾಚಾರ್ಯರು, ಬಿಡಾರಂ ಕೃಷ್ಣಪ್ಪನವರು, ವೀಣೆ ವೆಂಕಟಗಿರಿಯಪ್ಪ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರ್, ಕೆ. ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುತ್ತಯ್ಯ ಭಾಗವತರು, ಅರಿಯಕುಡಿ ರಾಮಾನುಜ ಅಯ್ಯಂಗಾರರು ಮೊದಲಾದವರೆಲ್ಲ ಈ ಶ್ರುತಿವೀಣೆಯನ್ನು ನೋಡಿದ್ದರು; ವೆಂಕಟಪ್ಪನ ವಿವರಣೆಯನ್ನು ಕೇಳಿ ತಮ್ಮ ಸಮ್ಮತಿಯನ್ನು ಸೂಚಿಸಿದ್ದರು. 1916ರಂದು ಮೈಸೂರಿನಲ್ಲಿ ಜರುಗಿದ ದಸರಾ ವಸ್ತುಪ್ರದರ್ಶನದಲ್ಲಿಯೂ ಇದು ಸೇರಿದ್ದಿತು. ಅರಮನೆಗೂ ಇದನ್ನು ಕಳುಹಿಸಿ ಮಹಾರಾಜರ (ಆಗ ಮಹಾರಾಜ ರಾಗಿದ್ದವರು ನಾಲ್ವಡಿ ಕೃಷ್ಣರಾಜ ಒಡೆಯರು) ಗಮನಕ್ಕೆ ತಂದಿದ್ದರು. ಇಷ್ಟಾದರೂ ವೆಂಕಟಪ್ಪನ ಈ ಸಾಧನೆಗೆ ಸರಿಯಾದ ಆದರ, ಮನ್ನಣೆ ದೊರಕದಿದ್ದುದು ಸೋಜಿಗ. ವೆಂಕಟಪ್ಪನಿಗೆ ಇದು ಬದುಕಿನುದ್ದಕ್ಕೂ ಅಸಮಾಧಾನಕ್ಕೆ ಕಾರಣವಾಯಿತು.

೩

ಇರಲಿ, ಅದು ಮುಂದಿನ ಮಾತಾಯಿತು. ಶ್ರುತಿವೀಣೆಯನ್ನು ಅವರು ಸಿದ್ಧಪಡಿಸಿದ ತರುವಾಯ ಅವರ ಆರೋಗ್ಯ ಕೆಟ್ಟಿತು. 'ಸ್ವಯಂ ಚಿಕಿತ್ಸೆ'ಯನ್ನು ಮಾಡಿಕೊಂಡು ಗುಣವಾದರು. ಇದೇ ವರ್ಷದ (1914) ಮೇ ತಿಂಗಳಿನಲ್ಲಿ ಗಗನೇಂದ್ರನಾಥರು ಇವರನ್ನು ದಾರ್ಜಿಲಿಂಗಿಗೆ ಕೊಂಡೊಯ್ದರು. ಈ ವಿಚಾರ ಮೊದಲೇ ಬಂದಿದೆ. ಅವರು ದಾರ್ಜಿಲಿಂಗಿನಲ್ಲಿದ್ದಾಗ ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಸೂಚಿಸುವಂಥ ಪ್ರಸಂಗವೊಂದು ಜರುಗಿತು.

ದಾರ್ಜಿಲಿಂಗಿನಲ್ಲಿದ್ದಾಗ, ಕಲ್ಕತ್ತೆಯ ಕಲಾಶಾಲೆಯ ಮುಖ್ಯಸ್ಥನೂ ವೆಂಕಟಪ್ಪನ ಗುರುವೂ ಆಗಿದ್ದ ಪೆರ್ಸಿ ಬ್ರೌನ್ ಮೇ ತಿಂಗಳ ಇಪ್ಪತ್ತರಂದು ವೆಂಕಟಪ್ಪನಿಗೆ ತುರ್ತು ಸಂದೇಶವೊಂದನ್ನು ಕಳುಹಿಸಿ, ಮರುದಿನ ತನ್ನನ್ನು ದಾರ್ಜಿಲಿಂಗ್ ಮತ್ತು ಘೂಂಗಳ ನಡುವೆ ಇರುವ 'ರಿಟ್ರೀಟ್' ಎಂಬೆಡೆ ಕಾಣಬೇಕೆಂದು ಬಯಸಿದರು. ವೆಂಕಟಪ್ಪ 'ರಿಟ್ರೀಟ್'ನಲ್ಲಿ ಬ್ರೌನರನ್ನು ಕಂಡಾಗ ಅವರಿಗೆ ತಿಳಿದದ್ದು ರಾಜ್ಯ ಸರಕಾರದಲ್ಲಿ ಕಲಾಸಲಹಕಾರನ (ಆರ್ಟ್ ಅಡ್ವೈಸರ್) ಹುದ್ದೆಯೊಂದು ಏರ್ಪಟ್ಟು ಅದಕ್ಕೆ ಸರಿಯಾದ ವ್ಯಕ್ತಿಯನ್ನು ಸೂಚಿಸಲು ಬ್ರೌನರಿಗೆ ಕರೆಬಂದಿದ್ದಿತೆಂಬುದು. ಬ್ರೌನರ ಅಭಿಪ್ರಾಯದಲ್ಲಿ ವೆಂಕಟಪ್ಪನೇ ಇದಕ್ಕೆ ಸರಿಯಾದ ಅಭ್ಯರ್ಥಿ. ವೆಂಕಟಪ್ಪನ ಅನುಮೋದನೆಯನ್ನು ಪಡೆದುಕೊಂಡು, ಬ್ರೌನ್ ರಾಜ್ಯ ಸರಕಾರಕ್ಕೆ ಪತ್ರಬರೆಯಬೇಕಾಗಿದ್ದಿತು. ಇದಕ್ಕಾಗಿಯೇ ವೆಂಕಟಪ್ಪನನ್ನು ಬ್ರೌನ್ ತುರ್ತಾಗಿ ಕಾಣಬಯಸಿದ್ದು. ಸರಕಾರೀ ಉದ್ಯೋಗವಾದುದರಿಂದ, ಅಧಿಕಾರವ್ಯಾಪ್ತಿ ವಿಶಾಲವಾಗಿದ್ದುದರಿಂದ, ಆರ್ಥಿಕ ಪ್ರಯೋಜನವೂ ಗಣನೀಯವಾಗಿದ್ದುದರಿಂದ ಈ ಹುದ್ದೆಯನ್ನು ವೆಂಕಟಪ್ಪ ಒಪ್ಪಿಕೊಳ್ಳಬೇಕೆಂದು ಬ್ರೌನರ ಆಗ್ರಹ.

ಆದರೆ ವೆಂಕಟಪ್ಪ ಒಪ್ಪಿಕೊಳ್ಳಲಿಲ್ಲ. ತಮ್ಮನ್ನು ಕಲಾಶಿಕ್ಷಣಕ್ಕೆಂದು ವಿದ್ಯಾರ್ಥಿವೇತನ ನೀಡಿ ಕಲ್ಕತ್ತೆಗೆ ಕಳುಹಿಸಿದ್ದು ಮೈಸೂರು ಮಹಾರಾಜರ ಸರಕಾರ; ಆದುದರಿಂದ ತಮ್ಮ

ಮೊದಲ ಸೇವೆ ಅಲ್ಲಿಯೇ ಸಲ್ಲಬೇಕಾದುದು ಧರ್ಮ. ಹೀಗೆ ಬಗೆದು, ಅವರು ಮೈಸೂರಿನಲ್ಲಲ್ಲದೆ ಬೇರೆಲ್ಲಿಯೂ ತಾನು ಉದ್ಯೋಗವನ್ನು ಕೈಗೊಳ್ಳುವುದಿಲ್ಲವೆಂದು ತಮ್ಮ ನಿರ್ಧಾರವನ್ನು ಬ್ರೌನರಿಗೆ ತಿಳಿಸಿದರು. ಬ್ರೌನರಿಗೆ ನಿರಾಶೆಯಾಯಿತು. ಮೈಸೂರು ಸರಕಾರದ ಆಗಿನ ವಿದ್ಯಾರ್ಥಿವೇತನದ ಯೋಜನೆಯಲ್ಲಿ ವಿದ್ಯಾರ್ಥಿಯು ಮೈಸೂರು ರಾಜ್ಯದಲ್ಲೇ ಸೇವೆ ಸಲ್ಲಿಸಬೇಕೆಂಬ ಕರಾರೇನು ಬರಹದಲ್ಲಿ ಇರಲಿಲ್ಲವಾಗಿ ವೆಂಕಟಪ್ಪನಿಗೆ ಬ್ರೌನ್ ಸೂಚಿಸಿದ ಉದ್ಯೋಗವನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ನಿರ್ಬಂಧವೂ ಇರಲಿಲ್ಲ. ಆದರೂ ವೆಂಕಟಪ್ಪನಿಗೆ ಇದು ಧರ್ಮದ ಪ್ರಶ್ನೆ. ಅವರ ಪಾಲಿಗೆ ಮೈಸೂರು ಸರಕಾರವೆಂದರೆ ಮಹಾರಾಜರು. ಆಗಿನ ಮಹಾರಾಜರ ವಿಚಾರದಲ್ಲಿ ತಮಗೆ ತುಂಬ ಆದರ, ಅಭಿಮಾನ; ಮಹಾರಾಜರ. ಸೇವೆಯನ್ನು ಬಿಟ್ಟು ಬೇರೆಲ್ಲಿಯಾದರೂ ಸೇವೆಗೆ ತೊಡಗುವುದೆಂದರೆ ಅವರಿಗೆ ಒಗ್ಗದ ಮಾತು. ಮಹಾರಾಜರು ತಮಗೆ ನೀಡಿದ ಪ್ರೋತ್ಸಾಹಕ್ಕೆ ತಮ್ಮಿಂದ ಸಲ್ಲಬೇಕಾದ ಕೃತಜ್ಞತೆಯೆಂದರೆ ತ್ರಿಕರಣಪೂರ್ವಕವಾದ ಸೇವೆ. ಇದು ವೆಂಕಟಪ್ಪನ ತರ್ಕ.

ಅವನೀಂದ್ರನಾಥರ ಶಿಷ್ಯರಲ್ಲಿ ಈ ಬಗೆಯ ಮನೋಧರ್ಮ ಇದ್ದುದು ವಿರಳ. ಅವರ ಶಿಷ್ಯರಲ್ಲಿ ನಂದಲಾಲ ಬಸು, ವೆಂಕಟಪ್ಪ ಇಬ್ಬರನ್ನು ಬಿಟ್ಟರೆ ಉಳಿದವರು ಉದ್ಯೋಗಾಕಾಂಕ್ಷಿಗಳೆ. ನಂದಲಾಲ ಬಸು ಕಲ್ಕತ್ತೆಯಿಂದ ಹೋದದ್ದು ನೆರೆ ಶಾಂತಿನಿಕೇತನಕ್ಕಷ್ಟೆ; ಅದೂ ರವೀಂದ್ರನಾಥ ಠಾಕುರರ ಒತ್ತಾಯದ ಮೇಲೆ. ಮುಂದೆ ಬದುಕೆಲ್ಲವನ್ನೂ ಅಲ್ಲಿಯೆ ಕಳೆದರು. ಬೇರೆಡೆಗಳಿಂದ ಎಷ್ಟೋ ಕರೆಗಳು ಬಂದರೂ ಕಿವಿಗೊಡಲಿಲ್ಲ. ಹಾಗೆಯೆ ವೆಂಕಟಪ್ಪ ಕಲ್ಕತ್ತೆಯನ್ನು ಬಿಟ್ಟಮೇಲೆ ಹಿಂದಿರುಗಿದ್ದು ಮೈಸೂರಿಗೆ. ಮಹಾರಾಜರು ಬದುಕಿರುವವರೆಗೂ ಅವರು ಮೈಸೂರನ್ನು ಬಿಡಲಿಲ್ಲ; ಅನಂತರ ಬೆಂಗಳೂರಿಗೆ ಬಂದವರು ಅಲ್ಲಿಯೆ ನೆಲೆಸಿದರು. ಅಲ್ಲಿಂದ ಇಲ್ಲಿಂದ ಉದ್ಯೋಗಕ್ಕೆಂದು ಆಹ್ವಾನ ಬಂದುದುಂಟು; ಯಾವುದಕ್ಕೂ ಓಗೊಡಲಿಲ್ಲ. ಉಳಿದ ಶಿಷ್ಯರಾದರೆ ಉದ್ಯೋಗಾವಕಾಶ ಇದ್ದೆಡೆ ಹಾರಿಹೋದರು. ಅಶೀತಕುಮಾರ ಹಾಲದಾರರು ಮೊದಲು ಲಕ್ನೋಗೆ ಹೋದರು, ಅಲ್ಲಿಂದ ಬೆಂಗಳೂರಿಗೆ ಬಂದರು. ಸಮರೇಂದ್ರನಾಥ ಗುಪ್ತ ಲಾಹೋರಿಗೆ, ಶೈಲೇಂದ್ರನಾಥ ದೇ ಜಯಪುರಕ್ಕೆ, ಸಮರೇಂದ್ರ ಕೌರ್ ಪಂಜಾಬಿಗೆ, ಪ್ರಮೋದಕುಮಾರ ಚಟ್ಟೋಪಾಧ್ಯಾಯ ಮಚ್ಛಲಿಪಟ್ಟಣಕ್ಕೆ, ಶಾರದಾ ಉಕೀಲ ದಿಲ್ಲಿಗೆ, ಹೀಗೆ ಅಲ್ಲಲ್ಲಿ ಹರಡಿಕೊಂಡರು. ಅವರಿಗೆಲ್ಲ ತೌರೂರಿನ ಆಕರ್ಷಣೆ ಅಷ್ಟಕ್ಕಷ್ಟೆ. ನಂದಲಾಲ ಬಸುವಾದರೊ, ವೆಂಕಟಪ್ಪನಾದರೊ ತಮ್ಮೂರಿನಲ್ಲೇ ನೆಲೆನಿಲ್ಲುವ ಕಾತರ ಇದ್ದವರು.

ಅಂತೂ ದಾರ್ಜಿಲಿಂಗಿನ ಪ್ರವಾಸದಲ್ಲಿ ಅವರಿಗೆ ಒಳ್ಳೆಯ ಉದ್ಯೋಗವೊಂದನ್ನು ಒದಗಿಸುವ ಯತ್ನಮಾಡಿದ ಬ್ರೌನ್ ವಿಫಲನಾಗಿ ಕಲ್ಕತ್ತೆಗೆ ಹಿಂದಿರುಗಬೇಕಾಯಿತು. ಮುಂದೆ ವೆಂಕಟಪ್ಪನಿಗೆ ಕಲ್ಕತ್ತೆಯ ಋಣ ಇದ್ದುದು ಸುಮಾರು ಒಂದು ವರ್ಷ ಅಷ್ಟೆ. 1915ರ ಏಪ್ರಿಲ್ ತಿಂಗಳಲ್ಲಿ, ಶಾಲೆಗೆ ಬೇಸಿಗೆ ರಜೆ ಬಂದಾಗ, ಅವರು ದಕ್ಷಿಣದ ಕಡೆ ಸಂಚಾರಕ್ಕೆ ಹೊರಟರು. ತಮಿಳುನಾಡಿನ ತಿರುಚ್ಚಿರಪಳ್ಳಿಯ ನೆರೆಯಲ್ಲಿರುವ ಶ್ರೀರಂಗಕ್ಕೆ ಬಂದರು. ಅದು ತಮ್ಮ ವೀಣಾಗುರುಗಳಾದ ರಾಮಸ್ವಾಮಿ ಅಯ್ಯಂಗಾರರ ಊರು; ಆಗ ಅವರು ಅಲ್ಲೇ ಇರುತ್ತಿದ್ದರು. ಅವರಿಗೆ ತಾವು ಸಿದ್ಧಪಡಿಸಿದ ಶ್ರುತಿವೀಣೆಯನ್ನು

ತೋರಿಸುವ ಹಂಬಲ ವೆಂಕಟಪ್ಪನನ್ನು ಅಲ್ಲಿಗೆ ಒಯ್ದಿತ್ತು. ಅಲ್ಲಿ ಕೆಲದಿನಗಳು ತಂಗಿದ್ದು ಕರ್ನಾಟಕ ಶಾಸ್ತ್ರೀಯ ಸಂಗೀತದ ಹಲವು ಪರಿಣತರ ಪರಿಚಯವನ್ನು ಪಡೆದುಕೊಂಡರು. ಇವರಲ್ಲಿ ಸುಪ್ರಸಿದ್ಧ ವಯಲಿನ್ ವಿದ್ವಾಂಸರಾಗಿದ್ದ ಮಾರುಂಗಪುರಿ ಗೋಪಾಲಕೃಷ್ಣ ಅಯ್ಯರ್ ಒಬ್ಬರು: ಇವರು ಸರಿಸಾಟಿಯಿರದ ಸಂಗೀತ ವಿದ್ವಾಂಸರು, ಸಹೃದಯರು, ರಸಿಕರು, ಉತ್ತಮ ಮನೋಧರ್ಮವುಳ್ಳವರು, ಉಜ್ವಲವಾದ ವ್ಯಕ್ತಿತ್ವವುಳ್ಳವರು. ಇವರ ಸ್ನೇಹ-ಸಂಪರ್ಕ ವೆಂಕಟಪ್ಪನಲ್ಲಿದ್ದ ಸಂಗೀತಾಭಿರುಚಿಯನ್ನು ಬೇರೂರಿಸಿತು, ಬೆಳೆಸಿತು, ನೇರಮಾಡಿತು; ಮುಂದೆ ಮೈಸೂರಿನಲ್ಲಿ ವೀಣೆ ಶೇಷಣ್ಣನವರಲ್ಲಿ ಅಭ್ಯಾಸಮಾಡಲು ಸರಿಯಾದ ಸಿದ್ಧತೆಯನ್ನು ಒದಗಿಸಿತು.

ಮರಳಿ ಮೈಸೂರಿನಲ್ಲಿ

(1916 – 1940)

೧

ವೆಂಕಟಪ್ಪ ಕಲಾಶಾಲೆಯ ಕಲಿಕೆಯನ್ನು ಮುಗಿಸಿ ಕಲ್ಕತ್ತೆಯನ್ನು ಬಿಟ್ಟು ಹೊರಟದ್ದು 1916ರ ಮೇ ತಿಂಗಳ ಹದಿನೈದನೆಯ ದಿನದಂದು; ಮೈಸೂರಿನಲ್ಲಿ ಬಂದಿಳಿದದ್ದು ಜೂನ್ ತಿಂಗಳ ಮೊದಲನೆಯ ದಿನ. ಈ ನಡುವೆ ಅವರು ಊಟಿ (ಉದಕಮಂಡಲ), ಕೂನೂರು, ಫರ್ನ್‌ಹಿಲ್, ಕೊಯಮತ್ತೂರು, ತಿರುಪ್ಪೂರು ಮತ್ತು ಮೆಟ್ಟುಪಾಳಯಗಳನ್ನು ಕಂಡು ಬಂದರು. ಕೊಯಮತ್ತೂರಿನ ಒಂದು ಛತ್ರದಲ್ಲಿ ಇವರು ತಂಗಿರುವಾಗ ಅವರ ಗುರುಗಳಾದ ರಾಮಸ್ವಾಮಿ ಅಯ್ಯಂಗಾರರ ಭೇಟಿಯಾಯಿತು. ತಿರುಪ್ಪೂರಿನಲ್ಲಿ ವೀಣೆಯ ತಂತಿಗಳನ್ನು ಕೊಂಡರು. ಮೈಸೂರಿಗೆ ಬಂದ ಮೂರು ದಿನಗಳ ನಂತರ ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರನ್ನು ಅವರ ಕಚೇರಿಯಲ್ಲಿ ಭೇಟಿಮಾಡಿ, ತಾವು ಕಲ್ಕತ್ತೆಯಲ್ಲಿ ಶಿಕ್ಷಣ ಪಡೆದುದರ ವರದಿ ಒಪ್ಪಿಸಿ ಇನ್ನು ಮಹಾರಾಜರ ಸೇವೆಗೆ ತಾವು ಸಿದ್ಧರಾಗಿರುವುದನ್ನು ನಿವೇದಿಸಿಕೊಂಡರು.

ವೆಂಕಟಪ್ಪನ ಮೇಲೆ ವಿಶ್ವಾಸವನ್ನಿರಿಸಿ, ಅವರ ಏಳಿಗೆಗೆ ನೆರವಾದ ಹಿರಿಯರಲ್ಲಿ ಮಿರ್ಜಾ ಇಸ್ಮಾಯಿಲ್ ಒಬ್ಬರು (ಜನನ 1883). ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಥಾನದ ಆಡಳಿತವನ್ನು ಕಮೀಷನ್ ವ್ಯವಸ್ಥೆಯಿಂದ ಮತ್ತೆ ತಾವೆ ಪಡೆದುಕೊಳ್ಳಲು ಸಹಾಯಕರಾಗಿದ್ದ ಅಲಿಅಕ್ಬರ್ ಎಂಬುವರ ವಂಶದವರು ಮಿರ್ಜಾ; ಮುಂದೆ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಸಹಪಾಠಿ, ಬಾಲ್ಯಸ್ನೇಹಿತರು. ಓದು ಮುಗಿದನಂತರ 1905ರಲ್ಲಿ ರಾಜ್ಯ ಪೊಲೀಸ್ ಇಲಾಖೆಯ ಅಸಿಸ್ಟಂಟ್ ಸೂಪರಿನ್‌ಟೆಂಡೆಂಟ್ ಆಗಿ ಕೆಲಸಕ್ಕೆ ಸೇರಿ, 1910ರಲ್ಲಿ ಮಹಾರಾಜರ ಉಪಕಾರ್ಯದರ್ಶಿಯ ಕೆಲಸವನ್ನು ನೋಡುತ್ತ ಮುಂದೆ ಹುಜೂರ್ (ಸನ್ನಿಧಾನದ) ಕಾರ್ಯದರ್ಶಿ, ಅನಂತರ ಆಪ್ತಕಾರ್ಯದರ್ಶಿಯಾದರು. ಇವರು ಆಪ್ತಕಾರ್ಯದರ್ಶಿಯಾಗಿರುವಾಗಲೆ ವೆಂಕಟಪ್ಪ ಇವರನ್ನು ಕಂಡದ್ದು (1916). ಮುಂದೆ 1926ರಲ್ಲಿ ಮಿರ್ಜಾ ಸಂಸ್ಥಾನದ ದಿವಾನರಾಗಿ ನಾಡಿನ ಅಭ್ಯುದಯಕ್ಕೆ ಹಲವಾರು ರೀತಿಗಳಲ್ಲಿ ನೆರವಾದರು. ವಿಶ್ವೇಶ್ವರಯ್ಯನವರನ್ನು ಬಿಟ್ಟರೆ, ಮೈಸೂರು ಸಂಸ್ಥಾನದ ದಿವಾನರಲ್ಲಿ ಇವರಷ್ಟು ಪ್ರಸಿದ್ಧಿ ಪಡೆದ ದಿವಾನರು ಮತ್ತೊಬ್ಬರಿಲ್ಲ. ಮಿರ್ಜಾರವರು ವೆಂಕಟಪ್ಪನ ಕಲೆಗಾರಿಕೆಯನ್ನೂ ವ್ಯಕ್ತಿತ್ವವನ್ನೂ ಮೆಚ್ಚಿ

ಕೊಂಡಿದ್ದರು. ಅವರು ತಾವು ಬದುಕಿರುವವರೆಗೂ ವೆಂಕಟಪ್ಪನಿಗೆ ಸ್ನೇಹಿತರಾಗಿ ನಡೆದುಕೊಂಡರು.

ವೆಂಕಟಪ್ಪ ಕಲ್ಕತ್ತೆಯನ್ನು ಬಿಡುವ ಮೊದಲು (1916ರ ಫೆಬ್ರುವರಿ 17 ರಂದು) ಕಲಾಶಾಲೆಯ ಮುಖ್ಯಸ್ಥರೂ ವೆಂಕಟಪ್ಪನವರ ಹಿತಚಿಂತಕರೂ ಆಗಿದ್ದ ಪರ್ಸಿ ಬ್ರೌನ್ ಮಹಾರಾಜರ ಸರಕಾರಕ್ಕೆ ಪತ್ರವೊಂದನ್ನು ಬರೆದಿದ್ದರು. ಪತ್ರದ ಒಕ್ಕಣೆ ಹೀಗಿದ್ದಿತು—

"ಮೈಸೂರು ಸರಕಾರವು ವೆಂಕಟಪ್ಪನಿಗೆ ಕಲ್ಕತ್ತೆಯ ಸರಕಾರೀಕಲಾಶಾಲೆಯಲ್ಲಿ ಶಿಕ್ಷಣಪಡೆಯಲೆಂದು ನೀಡುತ್ತಿದ್ದ ವಿದ್ಯಾರ್ಥಿವೇತನದ ಅವಧಿಯು ಮುಗಿದಿದೆ. ವೆಂಕಟಪ್ಪ ತುಂಬ ನಿಷ್ಠೆಯಿಂದ ಇಲ್ಲಿ ಏಳುವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದಾರೆ. ಫಲವಾಗಿ, ಈಗ ಅವರು ವರ್ಣಚಿತ್ರ ಮತ್ತು ಶಿಲ್ಪ ಎರಡೂ ವಿಭಾಗಗಳನ್ನು ಮುಗಿಸಿ, ಇವೆರಡರಲ್ಲಿ ಯಾವ ವಿಭಾಗವನ್ನಾದರೂ ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಇಷ್ಟು ಮಾತ್ರವಲ್ಲದೆ, ತಮ್ಮ ವಿದ್ಯಾಭ್ಯಾಸದ ವಿಷಯದಲ್ಲಿ ತದೇಕಚಿತ್ತದಿಂದ ಅನುಸಂಧಾನ ನಡೆಸಿದ್ದಾರೆ. ಅವರಿಗೆ ಕಲಾತ್ಮಕವಾದ ಮನೋವೃತ್ತಿಯೂ ಇರುವುದು ಮುಖ್ಯವಾದ ಸಂಗತಿ.

ಕಲೆಯ ಉಚ್ಚಮಟ್ಟದ ವಿವರಗಳಲ್ಲಿ, ಅದರಲ್ಲಿಯೂ ಹಾಲುಗಲ್ಲಿನ ಶಿಲ್ಪ ಮತ್ತು ಕಂಚಿನ ಎರಕದ ಕೆಲಸ ಇವುಗಳಲ್ಲಿ, ವಿಶೇಷ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಹೋಗುವ ಬಯಕೆ ಅವರಿಗಿದೆ.

ವೈಯಕ್ತಿಕವಾಗಿ, ವೆಂಕಟಪ್ಪ ಎಂದೂ ಆದರ್ಶ ವಿದ್ಯಾರ್ಥಿ, ಶಾಂತ ಸ್ವಭಾವದವರು, ಸಭ್ಯರು ಎಂಬುದನ್ನು ಕಂಡುಕೊಂಡಿದ್ದೇನೆ. ಅವರನ್ನು ಕಳುಹಿಸಿದ ಸಂಸ್ಥಾನಕ್ಕೆ ಕೀರ್ತಿಯನ್ನು ತರುವವರು."

ಈ ಪತ್ರವು ಮಹಾರಾಜರ ಆಪ್ತಕಾರ್ಯದರ್ಶಿಯ ಹೆಸರಿಗೇ ಬಂದಿದ್ದಿತು. ಆಗ ಆ ಅಧಿಕಾರದಲ್ಲಿದ್ದ ಮಿರ್ಜಾ ಇಸ್ಮಾಯಿಲ್ ಪತ್ರವನ್ನು ತಮ್ಮ ಶಿಫಾರಸಿನೊಂದಿಗೆ ಆಗ ದಿವಾನರಾಗಿದ್ದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಕಚೇರಿಗೆ ಕಳುಹಿಸಿದ್ದರು. ವೆಂಕಟಪ್ಪ ಮಿರ್ಜಾ ಅವರನ್ನು ಭೇಟಿ ಮಾಡುವ ವೇಳೆಗಾಗಲೆ ಪತ್ರ ದಿವಾನರ ಕಚೇರಿಗೆ ಹೋಗಿದ್ದಿತು; ತಾವು ದಿವಾನರಿಗೆ ನೆನಪಿನ ಪತ್ರವನ್ನು ಬರೆಯುವುದಾಗಿ ವೆಂಕಟಪ್ಪನಿಗೆ ತಿಳಿಸಿ, ದಿವಾನರು ನಿರ್ಧಾರವನ್ನು ಕೈಗೊಳ್ಳುವವರೆಗೆ ಅರಮನೆಗೆ ಕೆಲವು ನಿಸರ್ಗಚಿತ್ರಗಳನ್ನು ರಚಿಸುವಂತೆ ಸೂಚಿಸಿದರು.

ಸುಮಾರು ಒಂದು ತಿಂಗಳು ಕಳೆಯುವಷ್ಟರಲ್ಲಿ, ವೆಂಕಟಪ್ಪ ಮೂರು ನಿಸರ್ಗಚಿತ್ರಗಳನ್ನು ಮುಗಿಸಿ ಮಿರ್ಜಾ ಅವರಿಗೆ ಒಪ್ಪಿಸಿದರು. ಮಿರ್ಜಾ ಅವನ್ನು ಬಹುವಾಗಿ ಮೆಚ್ಚಿಕೊಂಡು, ಅವನ್ನು ಮಹಾರಾಜರಿಗೆ ತೋರಿಸುವುದಾಗಿ ಆಶ್ವಾಸನೆ ನೀಡಿದರು. ವೆಂಕಟಪ್ಪನ ವಿಚಾರವಾಗಿ ಮಿರ್ಜಾ ಆಗಲೆ ಮಹಾರಾಜರಿಗೆ ತಿಳಿಸಿದ್ದರು. ಈ ಚಿತ್ರಗಳನ್ನು

ನೋಡಿದಮೇಲೆ ಮಹಾರಾಜರು ಮೈಸೂರು ನಗರದ ವಿಹಂಗಮನೋಟವನ್ನು ಪೆನ್ಸಿಲ್‌ನಲ್ಲಿ ವೆಂಕಟಪ್ಪ ರಚಿಸಲೆಂದು ಮಿರ್ಜಾರವರಿಗೆ ಸೂಚಿಸಿದರು. ವೆಂಕಟಪ್ಪ ಇದನ್ನು ಮುಗಿಸಿ ಆಗಸ್ಟ್ ತಿಂಗಳ ಮೊದಲನೆಯ ದಿನ ಮಿರ್ಜಾ ಅವರಿಗೆ ಒಪ್ಪಿಸಿದರು. ಸಂತೋಷಪಟ್ಟ ಮಿರ್ಜಾ ಇದನ್ನು ಮರುದಿನವೇ ಮಹಾರಾಜರಿಗೆ ತೋರಿಸಿದಾಗ, ಅವರೂ ತುಂಬ ಮೆಚ್ಚಿಕೊಂಡು, ತಮ್ಮ ಸಮಾಧಾನದ ಸಂಕೇತವಾಗಿ ಐವತ್ತು ರೂಪಾಯಿಗಳ ಸಂಭಾವನೆಯನ್ನು ನೀಡಿದರು.

ಮಿರ್ಜಾ ದಿವಾನರನ್ನು ಕಂಡು ವೆಂಕಟಪ್ಪನ ವಿಚಾರವಾಗಿ ಪೆರ್ಸಿ ಬ್ರೌನ್ ಬರೆದಿದ್ದ ಪತ್ರವನ್ನು ಕುರಿತು ಮಾತನಾಡಿದಾಗ, ದಿವಾನರು "ಯುದ್ಧ ಪರಿಸ್ಥಿತಿಯ ಸಮಯವಾದುದರಿಂದ ಈಗ ವೆಂಕಟಪ್ಪ ಹೊರಗೆ ಹೋಗುವುದು ಬೇಡ. ಮೈಸೂರಿನಲ್ಲೇ ಇದ್ದುಕೊಂಡು ಕೆಲಸಮಾಡುತ್ತಿರಲಿ. ಯುದ್ಧ ಮುಗಿದಮೇಲೆ ಯುರೋಪಿಗೆ ಕಳುಹಿಸೋಣ" ಎಂದು ತಮ್ಮ ನಿರ್ಧಾರವನ್ನು ಹೇಳಿದರು. ಮಿರ್ಜಾ ಇದನ್ನು ವೆಂಕಟಪ್ಪನಿಗೆ ತಿಳಿಸಲು, ವೆಂಕಟಪ್ಪ ತಮ್ಮ ಬಯಕೆ ಕೈಗೂಡಲಿಲ್ಲವೆಂದು ನೊಂದುಕೊಂಡರು. ಅವರಿಗೆ ನಿರಾಶೆಯಾದುದು ನಿಜ. ಆದರೆ ಪರಿಸ್ಥಿತಿ, ದಿವಾನರು ಹೇಳಿದಂತೆ, ಅನುಕೂಲವಾಗಿರಲಿಲ್ಲವೆಂಬುದೂ ನಿಜವೆ. ಜಗತ್ತನ್ನೆಲ್ಲ ಪೀಡಿಸಿ, ಎಲ್ಲೆಲ್ಲಿಯ ಜನರ ನೆಮ್ಮದಿಯನ್ನೂ ಕೆಡಿಸಿ, ಭಯಂಕರವಾಗಿ ಮೆರೆದ ಮಹಾಯುದ್ಧ (1914-1918) ಯೂರೋಪನ್ನು ಅನಿಶ್ಚಿತ, ಆತಂಕ ಪರಿಸ್ಥಿತಿಯಲ್ಲಿ ಮುಳುಗಿಸಿದ್ದಿತು. ಆಗ ವಿದೇಶಕ್ಕೆ ಪ್ರಯಾಣ ಮಾಡುವುದಾಗಲಿ, ವಿದೇಶದಲ್ಲಿ ಇರುವುದಾಗಲಿ ಕಷ್ಟವೇ ಆಗಿದ್ದಿತು.

೨

ಯುದ್ಧ ಪರಿಸ್ಥಿತಿ ಮುಗಿಯುವವರೆಗೆ ವೆಂಕಟಪ್ಪ ತಾವು ಬಯಸಿದ ಹೆಚ್ಚಿನ ಕಲಾಶಿಕ್ಷಣವನ್ನು ಇಂಗ್ಲೆಂಡಿನಲ್ಲಾಗಲಿ ಯೂರೋಪಿನ ಬೇರೆಡೆಯಾಗಲಿ ಪಡೆದುಕೊಳ್ಳುವುದು ಸಾಧ್ಯವಿರದೆಂದು ಖಚಿತವಾದಾಗ, ಮುಂದೇನು ಮಾಡುವುದು ಎಂಬ ಸಮಸ್ಯೆ ತಲೆದೋರಿತು. ದಿವಾನರ ಆಪ್ತ ಕಾರ್ಯದರ್ಶಿಯನ್ನು ವೆಂಕಟಪ್ಪ ಭೇಟಿಮಾಡಿ ಈ ವಿಚಾರ ಚರ್ಚಿಸಿದಾಗ, ಅವರು ಅಲ್ಲಿಯವರೆಗೆ ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳುವುದೆಂದು ಸೂಚಿಸಿದರು. ಆದರೆ ವೆಂಕಟಪ್ಪ "ನನ್ನ ಕಲಾಶಿಕ್ಷಣ ಇನ್ನೂ ಪೂರೈಸಿಲ್ಲ, ಅದು ಪೂರೈಸದೆ ಯಾವ ಕೆಲಸಕ್ಕೂ ಸೇರಿಕೊಳ್ಳುವುದಾಗದು" ಎಂದು ಹಟ ಹಿಡಿದರು.

ಹಲವಾರು ತಿಂಗಳುಗಳು ಕಳೆದರೂ ಸಮಸ್ಯೆ ಬಗೆಹರಿಯಲಿಲ್ಲ. ವೆಂಕಟಪ್ಪನ ದಾರಿ ಯಾವುದು ಎಂಬುದು ನಿಶ್ಚಯವಾಗಲಿಲ್ಲ; ಇದರಿಂದ ವೆಂಕಟಪ್ಪನಿಗೂ ಆತಂಕ, ಸರಕಾರಕ್ಕೂ ಸಂಕಟ. 1917 ರ ಮಾರ್ಚ್ ತಿಂಗಳಲ್ಲಿ ಸಂಸ್ಥಾನದ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ವೆಂಕಟಪ್ಪನಿಗೆ ಪತ್ರವೊಂದನ್ನು ಬರೆದು, ಮತ್ತೆ ಒಂದೆರಡು ವರ್ಷಗಳು ಕಲ್ಕತ್ತೆಯಲ್ಲೆ ಇದ್ದುಕೊಂಡು ಅಲ್ಲಿನ ಕಲಾಶಾಲೆಯಲ್ಲಿ ಶಿಕ್ಷಣ ಪಡೆಯುವುದು ಒಳ್ಳೆಯದೆಂದೂ, ಅದಕ್ಕಾಗಿ ವಿದ್ಯಾರ್ಥಿವೇತನವನ್ನು ಸರಕಾರ ಮುಂದುವರಿಸುವುದೆಂದೂ ಸೂಚಿಸಿದರು. ವೆಂಕಟಪ್ಪ ಇದಕ್ಕೆ ಉತ್ತರವಾಗಿ, ತಮಗೆ ಇದು

ಇಷ್ಟವಿರದೆಂದೂ, ಕಲ್ಕತ್ತೆಯ ಕಲಾಶಾಲೆಯಲ್ಲಿ ಈಗಾಗಲೇ ಏಳು ವರ್ಷಗಳನ್ನು ಕಳೆದು, ಅಲ್ಲಿ ಕಲಿಯಬಹುದಾದುದನ್ನೆಲ್ಲ ಕಲಿತಾಗಿದೆಯೆಂದೂ, ಮತ್ತೆ ಅಲ್ಲಿಗೆ ಹೋಗುವುದು ತಮಗೆ ವೃಥಾ ಕಾಲಹರಣ, ಸರಕಾರಕ್ಕೆ ವೃಥಾ ವೆಚ್ಚವೆಂದೂ ಪತ್ರಬರೆದರು (1917ರ ಮಾರ್ಚಿ 31). ಅವರು ಹೊರದೇಶಕ್ಕೆ ಹೋಗಬೇಕೆಂದು ಬಯಸಿದುದು ಇಲ್ಲಿ ದೊರೆಯಲಾರದ ಶಿಕ್ಷಣವನ್ನು ಅಲ್ಲಿ ದೊರಕಿಸಿಕೊಳ್ಳಲೆಂದು.

ಮಹಾರಾಜರ ಸರಕಾರವೇನೋ ವೆಂಕಟಪ್ಪನಿಗೆ ಇನ್ನೂ ಕೆಲವು ವರ್ಷಗಳ ಕಾಲ (ಎಂದರೆ ಮಹಾಯುದ್ಧದ ಪಿಡುಗು ಅಡಗಿ, ವೆಂಕಟಪ್ಪ ಹೊರದೇಶಕ್ಕೆ ಹೋಗುವವರೆಗೆ) ವಿದ್ಯಾರ್ಥಿವೇತನವನ್ನು ನೀಡಲು ಸಿದ್ಧವಾಗಿದ್ದಿತು. ವೆಂಕಟಪ್ಪ ಕಲ್ಕತ್ತೆಗೆ ಹೋಗಲು ಒಪ್ಪದಿದ್ದುದರಿಂದ ಈಗ ಎಲ್ಲಿಗೆಂದು ವಿದ್ಯಾರ್ಥಿವೇತನವನ್ನು ಗೊತ್ತುಪಡಿಸುವುದು? ಇದು ಸರಕಾರದ ಮುಂದಿದ್ದ ಪ್ರಶ್ನೆ. ಇದನ್ನು ವೆಂಕಟಪ್ಪನ ಗಮನಕ್ಕೆ ತರಲು, ವೆಂಕಟಪ್ಪ ತಮಗೆ ಸಂಗೀತದಲ್ಲಿ ಸ್ವಾಭಾವಿಕ ಆಸಕ್ತಿ ಮತ್ತು ಸಾಕಷ್ಟು ಪರಿಶ್ರಮ ಈಗಾಗಲೆ ಇವೆಯೆಂದೂ, ಮೈಸೂರಿನ ಅರಮನೆಯ ವಿದ್ವಾಂಸರಿಂದ ಹೆಚ್ಚಿನ ಸಂಗೀತ ಶಿಕ್ಷಣವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ವಿದ್ಯಾರ್ಥಿವೇತನವನ್ನು ಚಿತ್ರಕಲೆಯಿಂದ ಸಂಗೀತ ಕ್ಷೇತ್ರಕ್ಕೆ ವರ್ಗಾಯಿಸಬೇಕೆಂದು ಕೇಳಿಕೊಂಡರು. ಸರಕಾರದ ಅಧಿಕಾರಿಗಳಿಗೆ ಈ ಬೇಡಿಕೆ ಸೋಜಿಗವೆನಿಸಿತು. ಯಾವ ನಿರ್ಧಾರವನ್ನೂ ಕೈಗೊಳ್ಳದೆ ಹಲವು ತಿಂಗಳುಗಳು ಕಳೆದುವು.

ಈ ನಡುವೆ ವೆಂಕಟಪ್ಪ ಮಹಾರಾಜರಿಗೆ ನೇರವಾಗಿ ಅರ್ಜಿಯೊಂದನ್ನು ಸಲ್ಲಿಸಿ (27-8-1917), ಮಹಾರಾಜರು ದಯೆಮಾಡಿ ಆಸ್ಥಾನವಿದ್ವಾಂಸರಾಗಿದ್ದ ವೈಣಿಕ ಶಿಖಾಮಣಿ ಶೇಷಣ್ಣನವರ ಬಳಿಯೊ, ವೈಣಿಕ ಪ್ರವೀಣ ಸುಬ್ಬಣ್ಣನವರ ಬಳಿಯೊ ವೀಣೆಯನ್ನು ಕಲಿಯುವಂತೆ ಆದೇಶವನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡಿದ್ದರು. ಮಹಾರಾಜರೂ ವೆಂಕಟಪ್ಪನ ವಿಚಾರವಾಗಿ ಆಸಕ್ತಿಯನ್ನು ತಳೆದಿದ್ದುದರಿಂದ, ಈ ಬೇಡಿಕೆಯನ್ನು ಪರಿಶೀಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರೂಪ ಹೋಯಿತು. 1918ರ ಜನವರಿ ತಿಂಗಳಿನಲ್ಲಿ ಅರಮನೆಯ ಇಲಾಖೆಯು ವೆಂಕಟಪ್ಪನನ್ನು "ಅರಮನೆಯ ಸಂಗೀತಶಾಲೆಗೆ ಸೇರಲು ಇಚ್ಛೆಯಿದೆಯೇ?" ಎಂದು ಕೇಳಿತು. ವೆಂಕಟಪ್ಪ ಒಪ್ಪಿದರು. ಹೀಗೆ ಮೈಸೂರಿಗೆ ಹಿಂದಿರುಗಿದ ವೆಂಕಟಪ್ಪನಿಗೂ ಸಂಗೀತಕ್ಕೂ ನಿಕಟವಾದ ನಂಟು ಬೆಳೆಯಿತು.

ಅವರು ಕಲ್ಕತ್ತೆಯಲ್ಲಿರುವಾಗಲೇ ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರರ ಬಳಿ ಕೆಲವು ತಿಂಗಳುಗಳ ಕಾಲ ವೀಣೆಯನ್ನು ಕಲಿತಿದ್ದರಷ್ಟೆ. ಆದರೆ ಆ ಕಲಿಕೆ ಅಷ್ಟೇನು ಮುಂದು ವರಿದಿರಲಿಲ್ಲ. ಆಸಕ್ತಿಯೇನೊ ಬೇರೂರಿದ್ದಿತು. ಮೈಸೂರಿಗೆ ಬಂದ ಮೇಲೆ ಮತ್ತೆ ವೀಣಾಭ್ಯಾಸವನ್ನು ಮುಂದುವರಿಸುವುದೆಂದು ಅವರು ನಿಶ್ಚಯಿಸಿಯೂ ಇದ್ದರು. ಆದರೆ ಚಿತ್ರಕಲೆಯನ್ನಾಗಲಿ ಶಿಲ್ಪವನ್ನಾಗಲಿ ಕೈಬಿಟ್ಟು ಸಂಗೀತವೊಂದನ್ನೇ ಹಿಡಿಯುವ ಮನಸ್ಸೇನು ಇರಲಿಲ್ಲ. ಈಗ ಉಚ್ಚ ಶಿಕ್ಷಣಕ್ಕೆಂದು ವಿದೇಶಕ್ಕೆ ಹೋಗುವುದು ಸಾಧ್ಯವಿಲ್ಲವೆಂದಾಗ, ಸಂಗೀತದ ಒಲವು ಹೆಚ್ಚಿಕೊಂಡಿತು. ತಮಗೆ ವೀಣೆಯ ಪರಿಚಯವನ್ನು ಒದಗಿಸಿದ ರಾಮಸ್ವಾಮಿ ಅಯ್ಯಂಗಾರರ ಗುರುಗಳಾದ ವೀಣೆ ಶೇಷಣ್ಣನವರಲ್ಲೇ ಕಲಿಯಬೇಕೆಂದೂ

ಬಯಸಿದರು. ಆಗ ನಾಡಿನಲ್ಲಿ ವೀಣಾವಾದನದಲ್ಲಿ ಶೇಷಣ್ಣನವರನ್ನು ಮೀರಿಸುವವರು ಯಾರೂ ಇದ್ದಿಲ್ಲ. ಚಿತ್ರಕಲೆಯನ್ನು ಅವನೀಂದ್ರನಾಥ ಠಾಕುರರಂಥ ಸರ್ವಶ್ರೇಷ್ಠ ಕಲಾವಿದರ ಬಳಿ ಕಲಿತವರು ಸಂಗೀತವನ್ನೂ ಅಷ್ಟೇ ಪ್ರಖ್ಯಾತರಿಂದ, ಪರಿಣತರಿಂದ ಕಲಿಯಬೇಕೆಂಬುದು ಅವರ ತವಕ, ಹಟ. ಮೇಲಾಗಿ, ಶೇಷಣ್ಣನವರ ಗುಣಗಾನವನ್ನು ರಾಮಸ್ವಾಮಿ ಅಯ್ಯಂಗಾರರಿಂದಲೇ ಕೇಳಿ ಆಕರ್ಷಿತರಾಗಿದ್ದರು.

ಆದರೆ ವೆಂಕಟಪ್ಪನಿಗೆ ಶೇಷಣ್ಣನವರೆ ತಮಗೆ ಪಾಠ ಹೇಳಿಯಾರೆಂಬ ನಂಬಿಕೆಯಿರಲಿಲ್ಲ. ಆ ಕಾಲಕ್ಕಾಗಲೇ ಶೇಷಣ್ಣನವರ ಕೀರ್ತಿ ದಿಗಂತವಿಶ್ರುತವಾಗಿ, ಹಲವು ಪರಿಣತರು ಎಡೆಬಿಡದೆ ಅವರ ಸಂದರ್ಶನಕ್ಕೆ, ಸೇವೆಗೆ, ಶಿಕ್ಷಣಕ್ಕೆ ಕಾದು ನಿಂತಿರುತ್ತಿದ್ದರು; ಮೇಲಾಗಿ ಅವರು ಸ್ವಯಂ ಮಹಾರಾಜರಿಗೇ ವೀಣೆಯನ್ನು ಕಲಿಸುತ್ತಿದ್ದವರು. ಇಂಥವರು ವೆಂಕಟಪ್ಪನಿಗೆ ಬಾಲಪಾಠ ಮಾಡಿಸಲು ಒಪ್ಪಿಯಾರೇ? ಅವರಿಗೆ ಬಿಡುವಾದರೂ ಇದ್ದೀತೊ? ಈ ಅಳುಕು ವೆಂಕಟಪ್ಪನಿಗಿದ್ದಿತು. ಹಾಗೆಂದೆ ಅವರು ಮಾಹಾರಾಜರಿಗೇ ಒಂದು ಮನವಿಪತ್ರ ಸಿದ್ಧಪಡಿಸಿ ಒಪ್ಪಿಸಿದ್ದು.

ಅರಮನೆಯಲ್ಲಿ ಆಗ ಸಂಗೀತ ಶಾಲೆಯೊಂದನ್ನು ತೆರೆದಿದ್ದರು. ಅರಮನೆಗೆ ಸೇರಿದ ವಿದ್ವಾಂಸರು, ಮುಖ್ಯವಾಗಿ ವೀಣೆ ಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ ಮತ್ತು ಅವರ ಹಿರಿಯ ಶಿಷ್ಯರು, ಇಲ್ಲಿ ಪಾಠ ಹೇಳುತ್ತಿದ್ದರು. ವಿದ್ಯಾರ್ಥಿಗಳ ಆಯ್ಕೆ ಕಟ್ಟುನಿಟ್ಟಾಗಿದ್ದಿತು; ಕೆಲವೆ ಗಣ್ಯಮನೆತನಗಳಿಂದ ಬಂದವರು ಮಾತ್ರ ಇಲ್ಲಿ ಕಲಿಯಬಹುದಾಗಿದ್ದಿತು. ಇದರ ಮೇಲ್ವಿಚಾರಣೆ ಮಹಾರಾಜರ ನೆಂಟರೂ ದರ್ಬಾರ್ ಬಕ್ಷಿಯೂ ಆಗಿದ್ದ ಲಿಂಗರಾಜ ಅರಸು ಅವರದ್ದು. ವೆಂಕಟಪ್ಪನ ಮನವಿಪತ್ರವನ್ನು ಮಹಾರಾಜರು ದರ್ಬಾರ್ ಬಕ್ಷಿಯ ಕಡೆಗೆ ಕಳುಹಿಸಿದ್ದರು. ದರ್ಬಾರ್ ಬಕ್ಷಿಯು ವೆಂಕಟಪ್ಪನನ್ನು ಕರೆಕಳುಹಿಸಿ, ಅವರನ್ನು ಸಂಗೀತಶಾಲೆಗೆ ಸೇರಿಸಿಕೊಳ್ಳುವ ಮೊದಲು ಪರೀಕ್ಷೆಮಾಡುವುದಕ್ಕಾಗಿ ವೀಣೆ ಸುಬ್ಬಣ್ಣನವರನ್ನೂ ಬಿಡಾರಂ ಕೃಷ್ಣಪ್ಪನವರನ್ನೂ ಕೇಳಿಕೊಂಡಿದ್ದರು. 1918ರ ಜನವರಿ ತಿಂಗಳ ಮೂವತ್ತನೆಯ ದಿನ ಅರಮನೆ ಸಂಗೀತಶಾಲೆಯಲ್ಲಿ ವೆಂಕಟಪ್ಪನ ಪರೀಕ್ಷೆ ನಡೆದು ಸೇರಿಸಿಕೊಳ್ಳಬಹುದೆಂದು ತೀರ್ಮಾನವಾಯಿತು. ವೆಂಕಟಪ್ಪನ ವಿದ್ಯಾರ್ಥಿವೇತನ ಸಂಗೀತ ಶಿಕ್ಷಣಕ್ಕೆಂದು ನಿಗದಿಯಾಯಿತು. ಅದೇ ದಿನ ವೆಂಕಟಪ್ಪ ಅರಮನೆಯ ಸಂಗೀತಶಾಲೆಯಲ್ಲಿ ವೀಣಾಭ್ಯಾಸಕ್ಕೆ ಮೊದಲಿಟ್ಟರು.

೩

ವೆಂಕಟಪ್ಪ ಕಲ್ಕತ್ತೆಯಿಂದ ಮೈಸೂರಿಗೆ ಹಿಂದಿರುಗಿದ್ದು 1916ರ ಜೂನ್ ತಿಂಗಳಲ್ಲಿ; ಅರಮನೆಯ ಸಂಗೀತಶಾಲೆಗೆ ಸೇರಿದ್ದು 1918ರ ಜನವರಿ ಕಡೆಯ ದಿನ. ನಡುವೆ ಒಂದೂವರೆ ವರ್ಷ ಅವರೇನು ಸುಮ್ಮನೆ ಕಾಲಕಳೆಯಲಿಲ್ಲ. ಚಿತ್ರಗಳನ್ನು ರಚಿಸುತ್ತಲೇ ಇದ್ದರು; ಶಿಲ್ಪವನ್ನೂ ಮಾಡುತ್ತಿದ್ದರು. 1918ರ ಜನವರಿ ತಿಂಗಳ ಕೊನೆಯ ವಾರ ಅವರು ತಮ್ಮ ಆರು ವರ್ಣಚಿತ್ರಗಳನ್ನು ಮದರಾಸ್ ಲಲಿತಕಲಾ ಸಂಘದ ಕಲಾಪ್ರದರ್ಶನಕ್ಕೆ ಕಳುಹಿಸಿದ್ದರು. ಆದರೆ ಅರಮನೆಯ ಸಂಗೀತ ಶಾಲೆಗೆ ಸೇರುವುದೆಂದು ಗೊತ್ತಾದ ಮೇಲೆ

ಚಿತ್ರಕಲೆಯನ್ನು ಶಿಲ್ಪವನ್ನು ಕೈಬಿಟ್ಟು ಸಂಗೀತ ಒಂದಕ್ಕೆ ತಮ್ಮ ಕಾಲವನ್ನೂ ಶಕ್ತಿಯನ್ನೂ ಮೀಸಲಾಗಿ ಇಡುವ ಮನಸ್ಸು ಮಾಡಿದರು. ಈ ನಿರ್ಧಾರ ಅವರ ಹಲವು ಅಭಿಮಾನಿಗಳಿಗೆ ಹಿಡಿಸಲಿಲ್ಲ. ಅವರಲ್ಲಿ ಮಿರ್ಜಾ ಇಸ್ಮಾಯಿಲರೂ ಒಬ್ಬರು. ಅವರು ವೆಂಕಟಪ್ಪನನ್ನು ಕರೆಕಳುಹಿಸಿ, ಕಲ್ಕತ್ತೆಯಲ್ಲಿ ಅಷ್ಟು ವರ್ಷಗಳ ಕಾಲ, ಅಷ್ಟು ಕಷ್ಟಪಟ್ಟು, ಅಷ್ಟು ಹಣ ವೆಚ್ಚಮಾಡಿ ಕಲಿತ ವಿದ್ಯೆಯನ್ನು ಹೀಗೆ ಕೈಬಿಡುವುದು ಸರಿಯಲ್ಲವೆಂದೂ, ತಾವು ಪರಿಣತಿ ಪಡೆದಿದ್ದ ಕ್ಷೇತ್ರವನ್ನು ಬಿಟ್ಟು ಹೊಸ ಕ್ಷೇತ್ರವೊಂದಕ್ಕೆ ಜಾರುವುದರಲ್ಲಿ ಅರ್ಥವಿರದೆಂದೂ ಬುದ್ಧಿ ಹೇಳಿದರು. ಆಗ ಅವರು ಮಹಾರಾಜರ ಸಮ್ಮುಖ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು.

ವೆಂಕಟಪ್ಪನ ಹಿತೈಷಿಯಾಗಿದ್ದ ಮಿರ್ಜಾ, ವೆಂಕಟಪ್ಪ ಅರಮನೆಯ ಸಂಗೀತಶಾಲೆಗೆ ಸೇರಿದ ಹೊಸದರಲ್ಲೇ ಮಹಾರಾಜರ ಚಿತ್ರಗಳನ್ನು ಜಲವರ್ಣದಲ್ಲೋ ತೈಲವರ್ಣದಲ್ಲೋ ರಚಿಸುವಂತೆ ಅಪ್ಪಣೆಮಾಡಿದರು. ವೆಂಕಟಪ್ಪ ಆನೆಯ ದಂತದ ಹಲಗೆಯ ಮೇಲೆ ಜಲವರ್ಣದಲ್ಲಿ ಮಹಾರಾಜರ ಚಿತ್ರವನ್ನು ಬಿಡಿಸುವೆನೆಂದು ಹೇಳಲು, ಮಿರ್ಜಾ ಒಪ್ಪಿ ಅವರಿಗೆ ಆನೆಯ ದಂತದ ಕೆಲವು ಹಲಗೆಗಳನ್ನೂ ಮಹಾರಾಜರ ಕೆಲವು ಭಾವಚಿತ್ರಗಳನ್ನೂ ಕಳುಹಿಸಿಕೊಡುವ ಏರ್ಪಾಡುಮಾಡಿದರು. ಆದರೆ ಸಂಗೀತವನ್ನು ಕಲಿಯಬೇಕೆಂಬ ನಿರ್ಧಾರವನ್ನು ಮಾತ್ರ ವೆಂಕಟಪ್ಪ ಬಿಡಲಿಲ್ಲ. ಅವರು ಮೊದಲಿಂದ ಹಟವಾದಿಯೆ. ಒಮ್ಮೆ ಮನಸ್ಸು ಮಾಡಿದರೆಂದರೆ ಅದನ್ನು ಕದಲಿಸುವುದು ಯಾರಿಂದಲೂ ಆಗದು. ಅರಮನೆಯ ಸಂಗೀತಶಾಲೆಯಲ್ಲಿ ಎಡೆಬಿಡದೆ ಅವರ ಅಭ್ಯಾಸ ಮೊದಲಾಯಿತು. ಬಿಡುವಿನ ವೇಳೆಯಲ್ಲಿ ಮಿರ್ಜಾ ಅವರಿಗಾಗಿ ಚಿತ್ರಗಳ ತಯಾರಿಕೆ ಅಷ್ಟೆ!

ವೆಂಕಟಪ್ಪನ ಶಿಕ್ಷಣವನ್ನು ದರ್ಬಾರ್ ಬಕ್ಷಿ ವೈಣಿಕಪ್ರವೀಣ ಸುಬ್ಬಣ್ಣನವರಿಗೆ ಒಪ್ಪಿಸಿದರು. ವೆಂಕಟಪ್ಪನ ಮನಸ್ಸೆಲ್ಲ ಇದ್ದುದು ಶೇಷಣ್ಣನವರ ಮೇಲೆ. ಅವರು ಶೇಷಣ್ಣನವರಲ್ಲೇ ಶಿಷ್ಯವೃತ್ತಿ ಮಾಡಬೇಕೆಂದು ಹಂಬಲಿಸುತ್ತಿದ್ದರು. ಆದರೆ ದರ್ಬಾರ್ ಬಕ್ಷಿ (ಲಿಂಗರಾಜ ಅರಸು) ಶೇಷಣ್ಣನವರಿಗೆ ಶಾಲೆಯಲ್ಲಿ ಈ ಬಾಲಪಾಠಗಳ ತೊಂದರೆ ಯಿರಬಾರದೆಂದೂ, ಅವರ ವೇಳೆ ರಾಗಾಲಾಪನೆ, ತಾನ, ಪಲ್ಲವಿ ಈ ಉಚ್ಚ ಶಿಕ್ಷಣಕ್ಕೆ ಮಾತ್ರ ಮೀಸಲಾಗಿರಬೇಕೆಂದೂ ಬಗೆದು ಶೇಷಣ್ಣನವರ ಬಳಿ ಹೆಚ್ಚು ವಿದ್ಯಾರ್ಥಿಗಳನ್ನು ಕಳುಹಿಸು ತ್ತಿರಲಿಲ್ಲ. ಬಹುಮಟ್ಟಿಗೆ ವೀಣೆಯ ಮೊದಲಪಾಠಗಳೆಲ್ಲ ಸುಬ್ಬಣ್ಣನವರಿಂದಲೋ ಅವರ ಅನುಭವಸ್ಥ ಶಿಷ್ಯರಿಂದಲೋ ನಡೆಯುವ ಏರ್ಪಾಡಿದ್ದಿತು. ಹೀಗಾಗಿ ವೆಂಕಟಪ್ಪ ಸುಬ್ಬಣ್ಣನವರ ಬಳಿಯೇ ಕಲಿಯಬೇಕಾಗಿ ಬಂದಿತು. ಸುಬ್ಬಣ್ಣನವರೂ ಪ್ರಸಿದ್ಧ ವೈಣಿಕರೇ; ನುಡಿಸಾಣಿಕೆಯಲ್ಲಿ ಅದ್ಭುತವಾದ ಕೌಶಲವಿದ್ದವರೇ. ಆದರೆ ಶ್ರೀಮಂತರ ಠೀವಿ, ಶೃಂಗಾರ ಪ್ರೀತಿ, ಉತ್ತಮ ಕಲಾವಿದರೆಂಬ ಹೆಮ್ಮೆ, ರಾಜಸ ಪ್ರವೃತ್ತಿ ಇವೆಲ್ಲ ಅವರನ್ನು ಅಷ್ಟಾಗಿ ಜನಪ್ರಿಯರನ್ನಾಗಿ ಮಾಡಿರಲಿಲ್ಲ. ಶೇಷಣ್ಣನವರ ನಯ, ವಿನಯ, ನಿರಾಡಂಬರ, ಸರಳಸ್ವಭಾವ, ಸಾತ್ವಿಕತೆ ಇವು ಅವರ ವಿದ್ವತ್ತಿಗೂ ವ್ಯಕ್ತಿತ್ವಕ್ಕೂ ವಿಶೇಷವಾದ ಮೆರುಗನ್ನು ಕೊಟ್ಟಿದ್ದುವು; ಅವರಿಗೆ ಅಪಾರವಾದ ಜನಪ್ರೀತಿಯಿದ್ದಿತು. ವೆಂಕಟಪ್ಪ ಶೇಷಣ್ಣನವರ

ಆಕರ್ಷಣೆಗೆ ಒಳಗಾದುದು ಆಶ್ಚರ್ಯವೇನಲ್ಲ. ಹೀಗಾಗಿ ಸುಬ್ಬಣ್ಣನವರು ಇನ್ನು ಮುಂದೆ ತಮ್ಮ ವಿದ್ಯಾಗುರುಗಳು ಎಂದಾದಾಗ ಅವರಿಗೆ ನಿರಾಶೆಯೇ ಆಯಿತು.

ಇದು ಸಾಲದೆಂಬಂತೆ, ಸುಬ್ಬಣ್ಣನವರ ಬಳಿ ಮೊದಲದಿನವೇ ವೆಂಕಟಪ್ಪನಿಗೆ ಇನ್ನಷ್ಟು ಜುಗುಪ್ಸೆಗೆ ಕಾರಣವಾಯಿತು. ವೆಂಕಟಪ್ಪ ಆಗಲೆ ವೀಣೆಯನ್ನು ಕಲಿತಿದ್ದುದರಿಂದ, ಸುಬ್ಬಣ್ಣ ಅವರಿಗೆ ಮೋಹನರಾಗದ ಸ್ವರಜತಿಯನ್ನು ನುಡಿಸಲು ಹೇಳಿದರು. ಶೇಷಣ್ಣನವರ ಶಿಷ್ಯ ರಾಮಸ್ವಾಮಿ ಅಯ್ಯಂಗಾರರಿಂದ ವೆಂಕಟಪ್ಪ ಅದನ್ನು ಕಲಿತಿದ್ದುದು; ಶೇಷಣ್ಣನವರ ಪಾಠವೆ, ಪದ್ಧತಿಯೆ. ಆದರೆ ಸುಬ್ಬಣ್ಣನವರಿಗೆ ವೆಂಕಟಪ್ಪ ನುಡಿಸಿದ್ದು ಹಿಡಿಸಲಿಲ್ಲ. ತಮ್ಮ ಶಿಷ್ಯ ಸುಬ್ರಹ್ಮಣ್ಯನೆಂಬುವನನ್ನು ಕರೆದು ವೆಂಕಟಪ್ಪನ ಎಡಗೈ ಬೆರಳಾಟವನ್ನು ತಿದ್ದುವಂತೆ ಹೇಳಿದರು. ಸುಬ್ರಹ್ಮಣ್ಯನ ತಿದ್ದುಪಾಟು ವೆಂಕಟಪ್ಪನಿಗೆ ಏನೇನೂ ಸರಿಕಾಣಲಿಲ್ಲ. ಆದರೆ ಮಾಡುವುದೇನು? ಒಳಗಿನ ತುಮುಲಾಟವನ್ನು ತಾಳಿಕೊಂಡು ಮುಂದುವರೆಸಿದರು. ಸುಬ್ಬಣ್ಣನವರು ಶಾಲೆಯ ಪಾಠಕ್ಕೆ ಸರಿಯಾಗಿ ಬರುತ್ತಿದ್ದವರೂ ಅಲ್ಲ; ಮನಸ್ಸಿಗೆ ಬಂದಾಗ ಬರುವರು, ಇಲ್ಲವಾದರೆ ಇಲ್ಲ. ವಿದ್ಯಾರ್ಥಿಗಳು ಕಾದು ಕಾದು ಬೇಸತ್ತು ಹಿಂದಿರುಗಬೇಕು. ಬಂದಾಗ ಕೂಡ ತಮ್ಮ ಶಿಷ್ಯರಿಂದ ಪಾಠ ಮಾಡಿಸಿಬಿಡುವರು. ಶಿಸ್ತಿನ ವೆಂಕಟಪ್ಪನಿಗೆ ಇದು ನುಂಗಲಾರದ ತುತ್ತಾಯಿತು. ಶಾಲೆಗೆ ಬಂದು ಗುರುಗಳಿಗೆ ಕಾಯುತ್ತ ಸಮಯವನ್ನು ಹಾಳುಮಾಡುವುದು ಅವರಿಗೆ ಎಷ್ಟಕ್ಕೂ ಸಮ್ಮತವಿಲ್ಲ. ತಮ್ಮ ಅಳಲನ್ನು ದರ್ಬಾರ್ ಬಕ್ಷಿ ಲಿಂಗರಾಜ ಅರಸರಲ್ಲಿ ತೋಡಿಕೊಂಡರು. ಅವರು ಸಮಾಧಾನ ಹೇಳಿ, ಮುಂದುವರೆಯುವಂತೆ ಸಲಹೆ ಮಾಡಿದರು. ವೆಂಕಟಪ್ಪ ಸಿದ್ಧಪಡಿಸಿದ್ದ ಶ್ರುತಿವೀಣೆಯನ್ನು ನೋಡಿ ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಆದರೆ "ಶೇಷಣ್ಣನವರಿಗೆ ಈಗ ಬಿಡುವಿಲ್ಲ, ಸ್ವಲ್ಪ ದಿನ ಕಳೆಯಲಿ, ಹೇಳುತ್ತೇನೆ" ಎಂದು ಭರವಸೆ ನೀಡಿದರು.

ವೆಂಕಟಪ್ಪನ ಬಯಕೆಯನ್ನು ಈಡೇರಿಸುವಂಥ ಪ್ರಸಂಗವೊಂದು ಜರುಗಿತು. ಮಾರ್ಚ್‌ತಿಂಗಳ ನಾಲ್ಕನೆಯ ದಿನ (ಎಂದರೆ ವೆಂಕಟಪ್ಪ ಸಂಗೀತ ಶಾಲೆಗೆ ಸೇರಿ ಒಂದು ತಿಂಗಳ ಕಾಲ ಕಳೆದಮೇಲೆ), ಒಂದು ಸಂಜೆ ಶೇಷಣ್ಣನವರು ಅನಿರೀಕ್ಷಿತವಾಗಿ ಶಾಲೆಗೆ ಬಂದರು. ಅರಮನೆಯ ಸಂಗೀತ ಶಾಲೆಯಲ್ಲಿ ಪಾಠ ನಡೆಯುತ್ತಿದ್ದುದು ಸಂಜೆಯೇ. ಅರಮನೆಯಿಂದ ತಮ್ಮ ಮನೆಗೆ ಹೋಗುವಾಗ ದಾರಿಯಲ್ಲಿ ಏನು ಕಾರಣವೋ ಶೇಷಣ್ಣನವರು ಶಾಲೆಯ ಒಳನುಗ್ಗಿದರು. ವಿದ್ಯಾರ್ಥಿಗಳೆಲ್ಲ ಸುಮ್ಮನೆ ಕೂತಿರುವುದನ್ನು ಕಂಡು, ಕಾರಣವನ್ನು ವಿಚಾರಿಸಲು, ಅವರೆಲ್ಲ ವೀಣೆಯ ವಿದ್ಯಾರ್ಥಿಗಳೆಂದೂ ಸುಬ್ಬಣ್ಣನವರಿಗಾಗಿ ಕಾಯುತ್ತಿರುವುದಾಗಿಯೂ ತಿಳಿದುಬಂದಿತು. ಒಡನೆಯೆ ಶೇಷಣ್ಣನವರು, "ಛೆ, ಛೆ, ಇಷ್ಟು ಜನ ವಿದ್ಯಾರ್ಥಿಗಳು ಬಂದು ಪಾಠವಿಲ್ಲದೆ ಹಿಂದಿರುಗುವುದೆ? ಕಾಯುವುದೆ? ನಾನೆ ಇಂದು ಪಾಠ ಹೇಳುತ್ತೇನೆ, ಬನ್ನಿ" ಎಂದು ಪಾಠ ಹೇಳಲು ತೊಡಗಿದರು. ಹಿಂದಿನ ಪಾಠಗಳನ್ನೆಲ್ಲ ಕೇಳುವಾಗ ವೆಂಕಟಪ್ಪನ ಸರದಿ ಬಂದಿತು. ವೆಂಕಟಪ್ಪನು ಮೋಹನ ರಾಗದ ಸ್ವರಜತಿಯನ್ನೇ ನುಡಿಸಿ ತಾವು ರಾಮಸ್ವಾಮಿ ಅಯ್ಯಂಗಾರರ ಬಳಿ ಕಲಿತದ್ದು ಹೀಗೆ, ಇಲ್ಲಿ ಕಲಿಸಿದ್ದು ಹೀಗೆ ಎಂದು ಭೇದವನ್ನು ಕಾಣಿಸಿದರು. ಶೇಷಣ್ಣನವರಿಗೆ ತಮ್ಮ ಶಿಷ್ಯ ರಾಮಸ್ವಾಮಿ ಅಯ್ಯಂಗಾರರ ಶಿಷ್ಯ ವೆಂಕಟಪ್ಪ

ಎಂಬುದನ್ನು ತಿಳಿದು ಸಂತೋಷವಾಯಿತು. ಅಂದಿನ ಪಾಠ ಮುಗಿದಮೇಲೆ ಶೇಷಣ್ಣನವರು ವೆಂಕಟಪ್ಪನನ್ನು ಹತ್ತಿರ ಕರೆದು, ರಾಮಸ್ವಾಮಿ ಅಯ್ಯಂಗಾರರಿಂದ ಕಲಿತ ಪಾಠವೇ ಸರಿಯಾದುದೆಂದೂ, ವೆಂಕಟಪ್ಪನ ನುಡಿಸಾಣಿಕೆ ಸರಿಯಾದ ದಾರಿಯಲ್ಲಿದೆಯೆಂದೂ, ಬೇಕಿದ್ದರೆ ತಾವೇ ವೆಂಕಟಪ್ಪನಿಗೆ ಶಾಲೆಯಿಂದ ಹಿಂದಿರುಗಿದ ಮೇಲೆ ಸಂಜೆ ತಮ್ಮ ಮನೆಯಲ್ಲೇ ಪಾಠ ಹೇಳುವುದಾಗಿಯೂ ತಿಳಿಸಿದರು. ವೆಂಕಟಪ್ಪನಿಗೆ ಸ್ವರ್ಗವೆ ಧರೆಗಿಳಿದು ಬಂದಂತಾಯಿತು.

ಆದರೆ ಒಂದು ತೊಡಕು. ಇದನ್ನು ಅವರೇ ಹೇಳಿ ಅದಕ್ಕೆ ಪರಿಹಾರವನ್ನು ತೋರಿಸಿದರು. ಈಗಾಗಲೆ ದರ್ಬಾರ್ ಬಕ್ಷಿ ವೆಂಕಟಪ್ಪನನ್ನು ಸುಬ್ಬಣ್ಣನವರಿಗೆ ಒಪ್ಪಿಸಿದ್ದಾರೆ. ತಾವು ನಡುವೆ ಬಂದು ಸುಬ್ಬಣ್ಣನವರಿಂದ ವಿದ್ಯಾರ್ಥಿಯೊಬ್ಬನನ್ನು ಕಸಿದುಕೊಳ್ಳುವುದು ಸರಿಯಲ್ಲ. ದರ್ಬಾರ್ ಬಕ್ಷಿಯೆ ತಮ್ಮ ನಿರ್ಧಾರವನ್ನು ಬದಲಿಸಿ, ಅವರೇ ವೆಂಕಟಪ್ಪನಿಗೆ ಪಾಠ ಹೇಳಿರೆಂದು ಶೇಷಣ್ಣನವರನ್ನೇ ಕೇಳುವುದು ಸರಿಯಾದ ದಾರಿ. ಅದಕ್ಕಾಗಿ ವೆಂಕಟಪ್ಪ ದರ್ಬಾರ್ ಬಕ್ಷಿಯನ್ನು ನೋಡಿ ಅವರಲ್ಲಿ ಮನವಿಮಾಡಿಕೊಳ್ಳಬೇಕು. ಶೇಷಣ್ಣನವರ ಈ ಸಲಹೆಯಂತ ವೆಂಕಟಪ್ಪದರ್ಬಾರ್‌ಬಕ್ಷಿಯನ್ನು ಕಂಡರು. ಅವರು ನೋಡೋಣ ಎಂದು ಹೇಳಿಕಳುಹಿಸಿದರು. ಶೇಷಣ್ಣನವರು ತಾವೆ ದರ್ಬಾರ್ ಬಕ್ಷಿಯನ್ನು ಕಂಡು ಈ ವಿಚಾರ ತಿಳಿಸಿದರು; ಬಿಡಾರಂ ಕೃಷ್ಣಪ್ಪನವರಿಂದಲೂ ದರ್ಬಾರ್ ಬಕ್ಷಿಗೆ ಹೇಳಿಸಿದರು. ದರ್ಬಾರ್ ಬಕ್ಷಿಯದೇನು ಅಭ್ಯಂತರವಿರಲಿಲ್ಲ ; ಶೇಷಣ್ಣನವರಿಗೆ ಶ್ರಮವಾದೀತೆಂಬ ಭಯದಿಂದ ತಾನೆ ಅವರು ಸುಬ್ಬಣ್ಣನವರಿಗೆ ಈ ಪಾಠವನ್ನೊಪ್ಪಿಸಿದ್ದು ? ಶೇಷಣ್ಣನವರು ತಾವೆ ಇಷ್ಟಪಟ್ಟರೆ ಅಡ್ಡಿಯೇನು?

ಸುಬ್ಬಣ್ಣನವರಿಗೆ ಅಸಮಾಧಾನವಾಗದಂತೆ ನಾಜೂಕಾಗಿ ವೆಂಕಟಪ್ಪನ ಪಾಠವನ್ನು ಅವರಿಂದ ಶೇಷಣ್ಣನವರಿಗೆ ವರ್ಗಾಯಿಸಿದ್ದು ಬಿಡಾರಂ ಕೃಷ್ಣಪ್ಪನವರ ಜಾಣತನ; ವೆಂಕಟಪ್ಪ ಇದಕ್ಕಾಗಿ ಅವರಿಗೆ ಎಂದೂ ಕೃತಜ್ಞರಾಗಿದ್ದರು. ಬಿಡಾರಂ ಕೃಷ್ಣಪ್ಪನವರು ತಾವೆ ಶೇಷಣ್ಣನವರ ಶಿಷ್ಯರು; ಎಂದ ಮೇಲೆ ಗುರುವಿನ ಮಹತಿ ಅವರಿಗೆ ತಿಳಿದದ್ದ. ಮತ್ತು ವೆಂಕಟಪ್ಪನನ್ನು ಕಂಡರೆ ವಿಶ್ವಾಸವೂ ಇದ್ದಿತು, ಸಂಗೀತವೆಂದರೆ ಅವರಿಗೆ ತದೇಕನಿಷ್ಠೆಯಿರುವುದೂ ತಿಳಿದಿದ್ದಿತು. ಹೀಗಾಗಿ ಶೇಷಣ್ಣನವರ ಮನವೊಲಿಸಿದ್ದು, ದರ್ಬಾರ್ ಬಕ್ಷಿಯಿಂದ ಅನುಮತಿ ದೊರಕಿಸಿದ್ದು, ಸುಬ್ಬಣ್ಣನವರನ್ನು ಸಮಾಧಾನ ಪಡಿಸಿದ್ದು ಎಲ್ಲ ಕೃಷ್ಣಪ್ಪನವರೆ. ಈ ಸಂದರ್ಭದಲ್ಲಿ ಚಿಕ್ಕರಾಮರಾಯರೂ ವೆಂಕಟಪ್ಪನ ಸನ್ಮಿತ್ರನಂತೆ ನಡೆದುಕೊಂಡರು. ಅಂತೂ ಶೇಷಣ್ಣನವರ ಬಳಿ ವಿದ್ಯಾಭ್ಯಾಸ ಮಾಡುವ ಕನಸು ನನಸಾದುದಕ್ಕೆ ವೆಂಕಟಪ್ಪನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಪಾಠದ ಮೊದಲನೆಯ ದಿನದಂದು ಅವರ ದಿನಚರಿಯಲ್ಲಿ "ಅಂತೂ, ಜಯವಾಯಿತು!" ಎಂದು ಬರೆದುಕೊಂಡಿದ್ದಾರೆ. ಪಾಠ ಆರಂಭವಾದದ್ದು ಪಿಂಗಳನಾಮ ಸಂವತ್ಸರದ ಫಾಲ್ಗುಣ ಶುದ್ಧ ಗುರುವಾರ ಎಂಬ ಒಕ್ಕಣೆ ಅವರ ದಿನಚರಿಯಲ್ಲಿದೆ; 1918ರ ಮಾರ್ಚ್ ತಿಂಗಳ ಹದಿನಾಲ್ಕನೆಯ ದಿನ. ಅದು ಒಳ್ಳೆಯ ದಿನವೆಂದು ಶೇಷಣ್ಣನವರೆ ಇಟ್ಟುಕೊಟ್ಟದ್ದು. ಪಾಠ

ಮೊದಲಾದದ್ದು ಕೇದಾರರಾಗದ ಕೀರ್ತನೆಯಿಂದ. ವೆಂಕಟಪ್ಪ ಪಲ್ಲವಿಯನ್ನು ಕಲಿತ ರೀತಿಯನ್ನು ನೋಡಿ ಗುರುಗಳಿಗೆ ಸಂತೋಷವಾಯಿತು.

ನಾಲ್ಕು ದಿನಗಳು ಕಳೆದ ಮೇಲೆ ವೆಂಕಟಪ್ಪ ಸಂಸ್ಕೃತವನ್ನು ಕಲಿಯಲೂ ತೊಡಗಿದರು. ಕೃಷ್ಣಶರ್ಮ ಎಂಬುವರು ಅರಮನೆ ಸಂಗೀತಶಾಲೆಯಲ್ಲಿ ಕಲಿಯುತ್ತಿದ್ದವರು; ಸಂಸ್ಕೃತ ಪಂಡಿತರಾಗಿದ್ದರೆಂದೂ ಅವರ ಬಳಿ ವೆಂಕಟಪ್ಪ ಸಂಸ್ಕೃತಾಭ್ಯಾಸ ಮಾಡತೊಡಗಿದರೆಂದೂ ದಿನಚರಿಯ ಒಕ್ಕಣೆಯಿಂದ ತಿಳಿದುಬರುತ್ತದೆ. ಆದರೆ ಈ ಕೃಷ್ಣಶರ್ಮ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ಬಹುಶಃ ಮುಂದೆ ಸುಪ್ರಸಿದ್ಧರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮರೇ ಇದ್ದೀತೆಂದು ನನ್ನ ಎಣಿಕೆ. ವೆಂಕಟಪ್ಪನವರಿಗೂ ಅನಂತಕೃಷ್ಣಶರ್ಮರಿಗೂ ಮೈಸೂರಿನಿಂದ ಪರಿಚಯ ಇದ್ದುದು ದಿಟ; ಈ ಶರ್ಮರು ಬಿಡಾರಂ ಕೃಷ್ಣಪ್ಪನವರ ಮತ್ತು ವೀಣೆ ಶೇಷಣ್ಣನವರ ಬಳಿ ಸಂಗೀತ ಕಲಿಯುತ್ತಿದ್ದುದೂ ದಿಟ. ಆದರೆ ಖಚಿತವಾಗಿ ಅವರೇ ವೆಂಕಟಪ್ಪನ ಸಂಸ್ಕೃತ ಗುರು ಎಂದು ಹೇಳಲಾರೆ. ಇಬ್ಬರ ಪರಿಚಯವೂ ನನಗೆ ಇದ್ದಿತಾದರೂ, ಈ ವಿಚಾರ ಅವರಿಂದ ತಿಳಿಯುವ ಸಂದರ್ಭ ಎಂದೂ ಬಂದಿರಲಿಲ್ಲ.

೪

ಶೇಷಣ್ಣನವರ ವ್ಯಕ್ತಿತ್ವಕ್ಕೆ ವೆಂಕಟಪ್ಪ ಮಾರುಹೋದರು. ಇದರಲ್ಲೇನು ಆಶ್ಚರ್ಯವಿಲ್ಲ. ಶೇಷಣ್ಣನವರ ಸಂಪರ್ಕಕ್ಕೆ ಯಾರು ಬಂದರೂ ಅವರು ಮಾರು ಹೋಗುವವರೇ; ದಿಟವಾಗಿ ಉದಾತ್ತವಾದ, ಭವ್ಯವಾದ, ಅಲೌಕಿಕವೆಂಬಂಥ ಕಳೆಯುಳ್ಳ ವ್ಯಕ್ತಿತ್ವ. ಅವರ ವಿದ್ವತ್ತೊ, ಮನೋಧರ್ಮವೊ, ಸೌಜನ್ಯವೊ, ವಿನಯವೊ, ಸರಳಸ್ವಭಾವವೊ ಯಾವುದಾದರೂ ಸರಿ ಸಾಟಿಯಿಲ್ಲದಂಥದು. ವೆಂಕಟಪ್ಪ ವೀಣೆಯನ್ನು ಅವರಲ್ಲಿ ಕಲಿಯುತ್ತಿರುವಾಗ ಅವರ ಪ್ರತಿಕೃತಿಯನ್ನು ಶಿಲ್ಪದಲ್ಲಿ ಮೂಡಿಸುವ ಸಂಕಲ್ಪ ಮಾಡಿದರು. ವ್ಯಕ್ತಿ ಚಿತ್ರಣದ ಶಿಲ್ಪಕ್ಕೆ ಅವರು ಶಿಲ್ಪಿಯ ಎದುರಿಗೆ ಹಲವಾರು ಬಾರಿ ಸುಮ್ಮನೆ ಕುಳಿತಿರಬೇಕು ತಾನೆ? ವೆಂಕಟಪ್ಪನ ಮೇಲಣ ವಾತ್ಸಲ್ಯದಿಂದ ಶೇಷಣ್ಣನವರು ವೆಂಕಟಪ್ಪನ ಸ್ಟುಡಿಯೋಕ್ಕೆ ಹೋಗಿಬರಲೊಪ್ಪಿದರು. 1918ರ ಜುಲೈ-ಆಗಸ್ಟ್ ತಿಂಗಳುಗಳ ಸುಮಾರಿಗೆ ಶಿಲ್ಪದ ಕೆಲಸ ಮೊದಲಿಟ್ಟಿತು. ಜುಲೈ ಹತ್ತರಿಂದ ಆಗಸ್ಟ್ ಆರರ ನಡುವೆ ಹಲವು ದಿನಗಳು ಶೇಷಣ್ಣನವರು ಬೆಳಿಗ್ಗೆ ಒಂದು ಗಂಟೆ, ಮಧ್ಯಾಹ್ನ ಒಂದು ಗಂಟೆ ವೆಂಕಟಪ್ಪನ ಸ್ಟುಡಿಯೋಕ್ಕೆ ಬಂದು ಕೂಡುವರು. ಪ್ಯಾರಿಸ್ಸಿನ ಪ್ಲಾಸ್ಟರ್ ಮಾಧ್ಯಮದಲ್ಲಿ ಶೇಷಣ್ಣನವರ ಶಿಲ್ಪಪ್ರತಿಕೃತಿ ಆಗಸ್ಟ್ ತಿಂಗಳ ಕಡೆಯ ವಾರ ಮುಗಿಯಿತು.

ಇದೊಂದು ಅದ್ಭುತವಾದ ಶಿಲ್ಪಕೃತಿಎನ್ನುವುದರಲ್ಲಿ ಎರಡು ಮಾತಿಲ್ಲ. ಶೇಷಣ್ಣನವರ ಹೊರಗಣ ರೂಪ ಯಥಾವತ್ತಾಗಿ ಮೂಡಿಬಂದಿರುವುದು ಮಾತ್ರವಲ್ಲ. ಆ ವೈಣಿಕಶಿಖಾಮಣಿಯ ಇಡೀ ಭಾವವೇ ಈ ಕಲಾಕೃತಿಯ ಮೂಲವಾದುದರಿಂದ ಕಲಾಕೃತಿಯಲ್ಲಿ ವಿಶೇಷವಾದ ಕಳೆಕೂಡಿಕೊಂಡಿರುವುದು ಸಹಜ. ಮೈಸೂರಿನ ರಸಿಕರೂ, ಸಂಗೀತ ವಿದ್ವಾಂಸರೂ, ಗಣ್ಯರೂ ದಿನವೂ ವೆಂಕಟಪ್ಪನ ಸ್ಟುಡಿಯೋಗೆ ಬಂದು ಈ

ಕಲಾಕೃತಿಯನ್ನು ನೋಡಿಕೊಂಡು ಹೋಗುವುದು ತಿಂಗಳುಗಳು ನಡೆಯಿತು. ಶೇಷಣ್ಣನವರ ಪ್ರಸಿದ್ಧಿಯೊಂದಿಗೆ ವೆಂಕಟಪ್ಪನ ಕಲೆಗಾರಿಕೆಯ ಯಶಸ್ಸೂ ಹರಡಿಕೊಂಡಿತು.

ಅದೇ ವರ್ಷದ ಕಡೆಯ ಭಾಗದಲ್ಲಿ ಅಂಥದೇ ಇನ್ನೊಂದು ಶಿಲ್ಪಕೃತಿ ವೆಂಕಟಪ್ಪನ ಕೈಯಿಂದ ಹೊರಬಂದಿತು. ವೆಂಕಟಪ್ಪ ಮೈಸೂರಿಗೆ ಹಿಂದಿರುಗಿದ ಕಾಲಕ್ಕೆ ಅವರ ತಂದೆ-ತಾಯಿಯರು ತೀರಿಕೊಂಡಿದ್ದರು. ಇದ್ದ ಒಬ್ಬಳೇ ತಂಗಿಗೆ ಮದುವೆಯಾಗಿತ್ತು. ಹತ್ತಿರದ ನೆಂಟರಿದ್ದರೂ ಅವರ ಬಳಿ ಸುಳಿಯುವ ಮನೋಧರ್ಮ ಅವರದಲ್ಲ. ಹೀಗಾಗಿ ಆಗಿನಿಂದಲೆ ಅವರು ಒಂಟಿ ಜೀವಿ. ಮೊದಲು ಹಳೇ ಅಗ್ರಹಾರದಲ್ಲಿ ಗೋಪಾಲರಾಜೆ ಅರಸಿನವರ ಚತ್ರದಲ್ಲಿಯೆ ಇರುತ್ತಿದ್ದರು. ಅನಂತರ ಸಂತೆಪೇಟೆಯಲ್ಲಿ ಉಡುಪಿ ಹೋಟಲೊಂದರಲ್ಲಿ ಕೋಣೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲೇ ಇರುತ್ತಿದ್ದರು. ಆ ಹೋಟಲಿನ ಒಡೆಯರು ವಿಶ್ವೇಶ್ವರಯ್ಯ ಎಂಬುವರು ವೆಂಕಟಪ್ಪನ ಸ್ನೇಹಿತರಾದರು. ಹೋಟೆಲಿನಲ್ಲಿ ಪರಿಚಾರಕನಾಗಿದ್ದ ನರಸಿಂಹನೆಂಬ ಮಂಗಳೂರು ಕಡೆಯ ಹುಡುಗ (ಇವನನ್ನು ಚೂಂದನೆಂದು ಕರೆಯುತ್ತಿದ್ದರು) ವೆಂಕಟಪ್ಪನ್ನಿಗೆ ಅಚ್ಚುಮೆಚ್ಚಿನ ಬಂಟನಾದ. ವೆಂಕಟಪ್ಪ ಬಹುಹೊತ್ತು ಮೈಮರೆತು ತಮ್ಮ ಕಲಾಸೃಷ್ಟಿ ಕೆಲಸದಲ್ಲೆ ತೊಡಗಿದ್ದು ಹೋಟೆಲಿಗೆ ಹಿಂದಿರುಗಿ ಬರುವ ವೇಳೆಗೆ ಎಲ್ಲರ ಊಟವೂ ಮುಗಿದು ಕಡೆಯ ಆರಿದ, ಕಲ್ಲು ಸೇರಿದ ಅನ್ನವಷ್ಟೇ ಅವರ ಪಾಲಿಗೆ ಉಳಿದಿರುತ್ತಿತ್ತು. ಆದರೆ ನರಸಿಂಹನಿಗೆ ಇವರ ಮೇಲೆ ಏನೊ ಆದರ, ಅಭಿಮಾನ. ವೆಂಕಟಪ್ಪ ಬಹುವೇಳೆ ರಾತ್ರಿ ಹೊತ್ತಾಗಿ ಹೋಟೆಲಿಗೆ ಬಂದಾಗ, ನರಸಿಂಹ ಅವರಿಗಾಗಿ ಊಟವನ್ನು ಬೆಚ್ಚಗೆ ಕಾದಿರಿಸಿ ಬಡಿಸುವನು. ಈ ಅಭಿಮಾನವನ್ನು, ಉಪಕಾರವನ್ನು ವೆಂಕಟಪ್ಪ ಮರೆಯಲಿಲ್ಲ. ಅವನ ಪ್ರತಿಕೃತಿಯೊಂದನ್ನು ಪ್ಯಾರಿಸ್ಸಿನ ಪ್ಲಾಸ್ಟರ್ ನಲ್ಲಿ ಮಾಡಿದರು. ಇದು 'ಉಡುಪಿ ಹುಡುಗ' ಅಥವಾ 'ಮಾಣಿ' (ತುಳು ಭಾಷೆಯಲ್ಲಿ ಹುಡುಗ, ಮಗು) ಎಂದು ಪ್ರಸಿದ್ಧವಾಯಿತು.

ಈ ಅವಧಿಯಲ್ಲಿ ವೆಂಕಟಪ್ಪ ಮುಂಜಾನೆ ಐದೂವರೆ ಗಂಟೆಗೆ ಎದ್ದು ನಿತ್ಯ ವಿಧಿಗಳನ್ನು ಮುಗಿಸಿ ಏಳೂವರೆ ಗಂಟೆಯ ವರೆಗೆ ವೀಣಾಭ್ಯಾಸದಲ್ಲಿ ತೊಡಗಿರುತ್ತಿದ್ದರು. ಉಪಹಾರ ಮಾಡಿ ಅನಂತರ ಅರಮನೆಯ ಆವರಣದಲ್ಲಿ ಇರುತ್ತಿದ್ದ ತಮ್ಮ ಸ್ಟುಡಿಯೋವಿಗೆ ಎಂಟೂವರೆ ಗಂಟೆಯ ಸಮಯಕ್ಕೆ ಬರುವರು. ಅಲ್ಲಿ ಮಧ್ಯಾಹ್ನ ಹನ್ನೆರಡೂವರೆ, ಒಂದು ಗಂಟೆಯ ವರೆಗೆ ಕೆಲಸಮಾಡುತ್ತಿದ್ದು ತಮ್ಮ ಬಿಡಾರಕ್ಕೆ ಹಿಂದಿರುಗಿ, ಊಟ ಮುಗಿಸಿ ಮತ್ತೆ ಸ್ಟುಡಿಯೋಗೆ ಬಂದು ಸಂಜೆ ಐದೂವರೆ ಗಂಟೆಯವರೆಗೆ ಕೆಲಸದಲ್ಲಿ ತೊಡಗಿದ್ದು, ಅಲ್ಲಿಂದ ಅರಮನೆಯ ಸಂಗೀತ ಶಾಲೆಗೆ ಹೋಗಿ ಸಂಗೀತ ಪಾಠ ಕಲಿಯುವರು. ರಾತ್ರಿ ಎಂಟು ಗಂಟೆಯ ಸುಮಾರಿಗೆ ಬಿಡಾರಕ್ಕೆ ಹಿಂದಿರುಗಿ ಬರುವರು. ಇದು ಅವರ ದಿನಚರ್ಯೆಯಾಗಿದ್ದಿತು. 1920ರ ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ಅರಮನೆಯ ಸಂಗೀತಶಾಲೆಗೆ ಹೋಗುವುದನ್ನು ನಿಲ್ಲಿಸಿ, ಶೇಷಣ್ಣನವರ ಮನೆಗೇ ವೀಣೆ ಪಾಠಕ್ಕೆ ಹೋಗಲಾರಂಭಿಸಿದರು. ಶೇಷಣ್ಣನವರ ಮನೆಯಲ್ಲಿ ಅಡಿಗಡಿಗೆ ಊರಿನ, ಪರವೂರಿನ ಸಂಗೀತ ವಿದ್ವಾಂಸರ ಕಚೇರಿಗಳು ಏರ್ಪಡುತ್ತಿದ್ದುವು. ಆ ಸಮಯಗಳಲ್ಲಿ ಪಾಠವಿಲ್ಲದಿದ್ದರೂ ಶಿಷ್ಯರೆಲ್ಲ ಕೂತು

ಸಂಗೀತವನ್ನು ಕೇಳುವ ವಾಡಿಕೆ; ಊರಿನ ರಸಿಕರೂ ಬಂದು ನೆರೆಯುವರು. ವೆಂಕಟಪ್ಪನ ದಿನಚರಿಯಲ್ಲಿ ತಾವು ಕೇಳಿದ ವಾಸುದೇವಾಚಾರ್ಯರ, ಟೈಗರ್ ವರದಾಚಾರ್ಯರ, ಬಿಡಾರಂ ಕೃಷ್ಣಪ್ಪನವರ, ವೀಣಾ ಧನಮ್ಮಾಳ್ ಅವರ, ಹೀಗೆ ಮತ್ತಿತರ ಕಲಾವಿದರ ಕಚೇರಿಗಳ ನೆನಪನ್ನು ಉಳಿಸಿಕೊಂಡಿದ್ದಾರೆ. ಈ ಕಚೇರಿಗಳು ರಾತ್ರಿ ಒಂಬತ್ತು-ಹತ್ತು ಗಂಟೆಯವರೆಗೂ ನಡೆಯುವುವು. ಕೆಲವೊಮ್ಮೆ ನಡುರಾತ್ರಿ ಹನ್ನೆರಡು ಒಂದು ಗಂಟೆಯ ವರೆಗೂ ನಡೆಯುತ್ತಿದ್ದುದುಂಟು. ಅನಂತರವೆ ವೆಂಕಟಪ್ಪ ಮನೆ ಸೇರುತ್ತಿದ್ದುದು.

ಈ ಅವಧಿಯಲ್ಲಿ ವೆಂಕಟಪ್ಪ ಹಲವು ಮಹನೀಯರ ಪರಿಚಯವನ್ನು ಪಡೆದುಕೊಂಡರು; ಹಲವರು ಸ್ನೇಹಿತರಾದರು. ತಮಗೆ ವಯಸ್ಸಿನಲ್ಲಿ ಹತ್ತು ವರ್ಷ ಹಿರಿಯರಾದ ಬಿಡಾರಂ ಕೃಷ್ಣಪ್ಪನವರು, ಅದೇ ವಯಸ್ಸಿನ ಸಂಗೀತ ವಿದ್ವಾಂಸರು ಚಿಕ್ಕರಾಮರಾಯರು, ವೀಣೆ ಲಕ್ಷ್ಮೀನಾರಾಯಣಪ್ಪನವರು, ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯರು, ಗಾಯಕ ಶಿಖಾಮಣಿ ಮುತ್ತಯ್ಯ ಭಾಗವತರು, 'ಟೈಗರ್' ವರದಾಚಾರ್ಯರು, ವೀಣೆ ವೆಂಕಟಗಿರಿಯಪ್ಪನವರು ಮೊದಲಾದವರು ವೆಂಕಟಪ್ಪನನ್ನು ತುಂಬ ವಿಶ್ವಾಸದಿಂದ, ಗೌರವಬುದ್ಧಿಯಿಂದ ಕಾಣುತ್ತಿದ್ದರು. ಗುರುಗಳಾದ ಶೇಷಣ್ಣನವರಿಗೆ ವೆಂಕಟಪ್ಪನೆಂದರೆ ಆದರಕ್ಕಿಂತ ಹೆಚ್ಚಾಗಿ ಗೌರವ! ಸಂಗೀತ ವಿದ್ವಾಂಸರಲ್ಲದೆ, ಅರಮನೆಯ ಆಡಳಿತಕ್ಕೆ ಸಂಬಂಧಿಸಿದ ಮತ್ತು ಸರಕಾರದ ಉದ್ಯೋಗದಲ್ಲಿದ್ದ ಹಲವರು ವೆಂಕಟಪ್ಪನಿಗೆ ಹತ್ತಿರದ ಸ್ನೇಹಿತರಾದರು. ಇವರಲ್ಲಿ ಮಹಾರಾಜರ ಖಾಸಾ ಸಿಬ್ಬಂದಿಯ ಹಿರಿಯ ಅಧಿಕಾರಿಯಾಗಿದ್ದ ಲೆಫ್ಟಿನೆಂಟ್ ಕರ್ನಲ್ ಕೆ. ಗೋಪಾಲರಾಜೆ ಅರಸಿನವರು ಮುಖ್ಯರಾದವರು. ಗೋಪಾಲರಾಜೆ ಅರಸಿನವರಂತೂ ವೆಂಕಟಪ್ಪನಿಗೆ ತುಂಬ ಆಪ್ತರು. ನಗರದ ಗಣ್ಯರಾದ ಯು.ಡಿ. ನಾರಾಯಣಮೂರ್ತಿ, ಟಿ.ಜಿ. ರಾಮಯ್ಯರ್, ಡಿ. ಶ್ರೀನಿವಾಸ ಅಯ್ಯಂಗಾರ್ (ವಕೀಲರು), ಬಿ. ಲಿಂಗಪ್ಪಯ್ಯನವರು, ಸಿ. ಆನಂದರಾಯರು (ಅಧಿಕಾರದಿಂದ ನಿವೃತ್ತರಾದಮೇಲೆ ಮೈಸೂರು ನಾಟಕ ಸಂಘವನ್ನು ತೊಡಗಿಸಿದರು), ಬಿ. ವೆಂಕಟರಾಮಯ್ಯ (ಅರಮನೆಯಲ್ಲಿ ಉದ್ಯೋಗದಲ್ಲಿದ್ದವರು) ಮೊದಲಾದವರು ಸ್ನೇಹಿತರಾದರು.

ಆ ಕಾಲದಲ್ಲಿ ಅವರು ಚಿತ್ರಕಲೆಯನ್ನೇನು ಕೈಬಿಟ್ಟಿರಲಿಲ್ಲ. ಕಲ್ಕತ್ತೆಯ ಓರಿಯಂಟಲ್ ಆರ್ಟ್ ಸೊಸೈಟಿಯು ವರ್ಷಂಪ್ರತಿ ಏರ್ಪಡಿಸುತ್ತಿದ್ದ ಕಲಾಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. 1907ರಷ್ಟು ಹಿಂದೆ ಆರಂಭವಾದ ಈ ಸಂಸ್ಥೆಯನ್ನು ಅವನೀಂದ್ರನಾಥರು, ನಂದಲಾಲ ಬಸು ಮೊದಲಾದವರು ನೋಡಿಕೊಳ್ಳುತ್ತಿದ್ದರು. ಆ ಸಂಸ್ಥೆಯ ಮೂಲಕ ಮಾರಾಟಮಾಡಲು ತಮ್ಮ ಕಲಾಕೃತಿಗಳನ್ನು ಕಳುಹಿಸುತ್ತಿದ್ದುದೂ ಉಂಟು. ಅರ್ಧೇಂದು ಕುಮಾರ ಗಂಗೋಲಿ, ಕಾರ್ಲ್ ಖಂಡೆಲವಾಲಾ, ಜೇಮ್ಸ್ ಕಸಿನ್ಸ್, ಬಿ.ಎನ್. ಟ್ರೆಷರಿವಾಲಾ, ಜಿ. ವೆಂಕಟಾಚಲಂ, ಹರೀಂದ್ರನಾಥ ಚಟ್ಟೋಪಾಧ್ಯಾಯ ಮತ್ತು ಅವರ ಹೆಂಡತಿ ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದ ಕಲಾವಿಮರ್ಶಕರ, ಸಂಗ್ರಾಹಕರ, ಕಲಾಭಿಮಾನಿಗಳ ಪರಿಚಯವಾದುದೂ ಇದೆ ಕಾಲದಲ್ಲಿ. 1920ರ ಏಪ್ರಿಲ್‌ನಲ್ಲಿ ಆಂಧ್ರಪ್ರದೇಶದ ಮಚ್ಚಲಿಪಟ್ಟಣದ ಆಂಧ್ರಜಾತೀಯ ಕಲಾಶಾಲೆಯ ವ್ಯವಸ್ಥಾಪಕರು ವೆಂಕಟಪ್ಪನಿಗೆ ಪತ್ರ ಬರೆದು ಆ ಕಲಾಶಾಲೆಯ ಮುಖ್ಯಸ್ಥರಾಗಿ ಹೊಣೆ ಹೊರಬೇಕೆಂದು

ಕೇಳಿಕೊಂಡರು. ಆದರೆ ವೆಂಕಟಪ್ಪನಿಗೆ ಮೈಸೂರು ಬಿಟ್ಟು ಬೇರೆಲ್ಲಿಯೂ ಹೋಗುವ ಮನಸ್ಸಿರಲಿಲ್ಲ .

೫

ವೆಂಕಟಪ್ಪ ಕಲ್ಕತ್ತೆಯಿಂದ ಹಿಂದಿರುಗಿದ ಮೇಲೆ ತಮ್ಮ ಚಿತ್ರಕಲಾಗುರು ಅವನೀಂದ್ರನಾಥರೊಂದಿಗೆ ಸಂಪರ್ಕವನ್ನಿರಿಸಿಕೊಂಡಿದ್ದರು. ಪತ್ರ ವ್ಯವಹಾರವಷ್ಟೇ ಅಲ್ಲದೆ, ಆಗಾಗ ಇಲ್ಲಿಂದ ಏನಾದರೂ ಅವರಿಗೆ ಕಾಣಿಕೆಯಾಗಿ ಕಳುಹಿಸುವರು. ಮಾವಿನಹಣ್ಣಿನ ಕಾಲದಲ್ಲಿ ರುಚಿಯಾದ ಒಂದುನೂರು ರಸಪೂರಿ, ಬಾದಾಮಿ ಹಣ್ಣುಗಳನ್ನು ರೈಲ್ವೆ ಮೂಲಕ ಕಳುಹಿಸುತ್ತಿದ್ದುದುಂಟು. ಪತ್ರವ್ಯವಹಾರದಲ್ಲಿ ಅವನೀಂದ್ರನಾಥರು ಒಮ್ಮೆ, ವೆಂಕಟಪ್ಪ ಚಿತ್ರಕಲೆಯನ್ನು ಸಂಪೂರ್ಣವಾಗಿ ಕೈಬಿಟ್ಟು ಸಂಗೀತಕ್ಕೆ ಮಾರುಹೋಗಿದ್ದಾರೆಂದು ತಮಗೆ ಯಾರೋ ಹೇಳಿದುದನ್ನು ತಿಳಿಸಿ ಹಾಗೆ ಮಾಡಬಾರದೆಂದು ಸೂಚಿಸಿದ್ದರು. ಅದಕ್ಕುತ್ತರವಾಗಿ ವೆಂಕಟಪ್ಪ 'ವೀಣೆಯ ಹುಚ್ಚು' ಎಂಬ ಹೆಸರನ್ನು ಹೊತ್ತ ವರ್ಣಚಿತ್ರವೊಂದನ್ನು ರಚಿಸಿ ಅವನೀಂದ್ರನಾಥರಿಗೆ ಕಳುಹಿಸಿದರು.

ವಾಸ್ತವವಾಗಿ ವೆಂಕಟಪ್ಪ ಚಿತ್ರಕಲೆಯನ್ನೇನು ಕೈಬಿಟ್ಟಿರಲಿಲ್ಲ . ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್ ಸಂಸ್ಥೆಯ ವಾರ್ಷಿಕ ಕಲಾಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿದ್ದುದಲ್ಲದೆ, ತಮ್ಮ ಸ್ಟುಡಿಯೋವಿನಲ್ಲಿಯೇ ಹೆಚ್ಚು ಕಾಲಕಳೆಯುತ್ತಿದ್ದರು. ಅಷ್ಟಲ್ಲದೆ ಅರಮನೆಯಲ್ಲಿ ಅಲಂಕರಣಕ್ಕೆಂದು ಚಿತ್ರಗಳನ್ನು ಬಿಡಿಸುವ ಕೆಲಸವನ್ನು 1920ರ ಫೆಬ್ರುವರಿ ಮೊದಲವಾರದಿಂದ ಮೊದಲುಮಾಡಿದ್ದರು. ಮಿರ್ಜಾ ಅವರ ಸಲಹೆಯ ಮೇರೆಗೆ ಚಾಮುಂಡಿಬೆಟ್ಟದ ಆಕೃತಿ ಶಿಲ್ಪವೊಂದನ್ನು ಸಿದ್ಧಪಡಿಸಿದ್ದರು; ಇದು ಮಿರ್ಜಾರವರಿಗೂ ಮಹಾರಾಜರಿಗೂ ತುಂಬ ಮೆಚ್ಚುಗೆಯಾಯಿತು. ಮಹಾರಾಜರು ಮೆಚ್ಚಿಕೊಂಡುದನ್ನು ಶೇಷಣ್ಣನವರೆ ವೆಂಕಟಪ್ಪನಿಗೆ ತಿಳಿಸಿದರು. ಕೆಲವೊಮ್ಮೆ ದಾಕ್ಷಿಣ್ಯದಿಂದ ವ್ಯಕ್ತಿಗಳ ಭಾವಚಿತ್ರವನ್ನವಲಂಬಿಸಿ ವರ್ಣಚಿತ್ರಗಳನ್ನು ಸಿದ್ಧಪಡಿಸುವುದು ಮೊದಲಾದ ಖಾಸಗಿ ಕೆಲಸಗಳನ್ನು ಒಪ್ಪಿಕೊಳ್ಳುತ್ತಿದ್ದುದುಂಟು. ಅವರ ನೆಂಟನೊಬ್ಬನ (ಅವನನ್ನು ದಿನಚರಿಯಲ್ಲಿ 'ಕಿಟ್ಟ'ನೆಂದು ನಿರ್ದೇಶಿಸಿದ್ದಾರೆ) ಕ್ಲೋಸ್‌ಪೇಟೆಯ (ಈಗಿನ ರಾಮನಗರದ) ಶ್ರೀಮಂತ ವರ್ತಕರೊಬ್ಬರ ಭಾವಚಿತ್ರವನ್ನು ತಂದುಕೊಟ್ಟು ಅದನ್ನು ದೊಡ್ಡದು ಮಾಡಿ ವರ್ಣಚಿತ್ರ ರಚಿಸುವಂತೆ ಕೇಳಿಕೊಂಡನು. ಇಂಥ ಕೆಲಸಗಳನ್ನು ಮಾಡುವುದು ಅವರಿಗೆ ಸುತರಾಂ ಇಷ್ಟವಿಲ್ಲ . ಆದರೆ ನೆಂಟ ಬಡವ; ಶ್ರೀಮಂತವರ್ತಕರಿಂದ ಅವನಿಗೆ ಸಹಾಯವಾಗುವ ಭರವಸೆ ಇದ್ದಿತಾಗಿ ನೆಂಟನ ಮೇಲಣ ವಿಶ್ವಾಸದಿಂದ ವೆಂಕಟಪ್ಪ ಈ ಕೆಲಸವನ್ನು ಒಪ್ಪಿಕೊಳ್ಳಬೇಕಾಯಿತು.

ಆದರೆ ಸಂಗೀತದಲ್ಲಿ ಆಸಕ್ತಿ ಹೆಚ್ಚಾಗಿದ್ದಿತೆನ್ನುವುದೇನೋ ದಿಟವೆ. 'ವೀಣೆಯ ಹುಚ್ಚು' ಎಂದರೆ ಉತ್ಪ್ರೇಕ್ಷೆಯೇನಲ್ಲ . ಮೇಲಾಗಿ ಶೇಷಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರಾಗಿ ವೀಣಾವಾದನವನ್ನೇ ಹವ್ಯಾಸವಾಗಿಸಿಕೊಳ್ಳುವ ಹಂಬಲವೂ

ಇದ್ದಿರಬಹುದು. ಸಂಗೀತದಿಂದಾಗಿ ಚಿತ್ರಕಲೆಗೆ, ಶಿಲ್ಪಕ್ಕೆ ಸಾಕಷ್ಟು ಗಮನವನ್ನು ಕೊಡುವುದು ಸಾಧ್ಯವಿರಲಿಲ್ಲವೋ ಏನೋ, ಅವುಗಳ ಕಡೆ ತದೇಕನಿಷ್ಠೆಯಂತೂ ಇರಲಿಲ್ಲ. ಇದನ್ನು ಮೊದಲೇ ಮಿರ್ಜಾರವರು ಗಮನಿಸಿದ್ದರು. ಹೀಗಾದೀತೆಂದು ವೆಂಕಟಪ್ಪನಿಗೆ ಎಚ್ಚರಿಕೆಯನ್ನೂ ನೀಡಿದ್ದರು. ಅನಂತರ ಅವರ ಹಿತೈಷಿಗಳೂ ಮಿತ್ರರೂ ಆದ ಸರ್ದಾರ್ ಗೋಪಾಲರಾಜೆ ಅರಸಿನವರೂ ಈ ವಿಚಾರವಾಗಿ ವೆಂಕಟಪ್ಪನಿಗೆ ಸಂಗೀತದ ಗೀಳನ್ನು ಹೆಚ್ಚಾಗಿ ಹತ್ತಿಸಿಕೊಳ್ಳಬಾರದೆಂದು ಹೇಳುತ್ತಲೆ ಇದ್ದರು. ವೆಂಕಟಪ್ಪನ ಚಿತ್ರಗಳನ್ನು ನೋಡಿ ಅವುಗಳ ಮೇಲ್ಮೆಯನ್ನರಿತುಕೊಂಡಿದ್ದ ವಿಮರ್ಶಕರು (ಅರ್ಧೇಂದು ಗಂಗೊಲಿ ಮುಂತಾದವರು) ಕಲಾಸಂಗ್ರಾಹಕರು (ಟ್ರೆಷರಿವಾಲಾ ಮುಂತಾದವರು) ಇನ್ನು ವೆಂಕಟಪ್ಪ ಚಿತ್ರಗಳ ರಚನೆಯನ್ನು ಪೂರಾ ನಿಲ್ಲಿಸಿಬಿಟ್ಟಾರು ಎಂದು ಭಯಗೊಂಡುದೂ ಉಂಟು. ಅವರು ಅವನೀಂದ್ರನಾಥರನ್ನು ಕಂಡಾಗ ಈ ಭಯವನ್ನು ಅವರಲ್ಲಿ ತೋಡಿಕೊಂಡರೆಂದು ತೋರುತ್ತದೆ. ಅವನೀಂದ್ರನಾಥರು ವಸ್ತುಸ್ಥಿತಿಯನ್ನು ಅರಿತುಕೊಳ್ಳಲು ವೆಂಕಟಪ್ಪನಿಗೆ ಪತ್ರ ಬರೆದರು.

ಪತ್ರಕ್ಕೆ ಉತ್ತರವಾದ 'ವೀಣೆಯ ಹುಚ್ಚು' ಚಿತ್ರವನ್ನು ಅವನೀಂದ್ರನಾಥರಿಗೆ ವೆಂಕಟಪ್ಪ 1921ರಲ್ಲಿ ಎಂದೋ ಕಳುಹಿದರು. ಎಂದು ಎಂಬುದು ಅವರ ದಿನಚರಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿಲ್ಲ, ಈ ಚಿತ್ರದ ಬಗ್ಗೆಯೂ ಅಲ್ಲಿ ವಿವರಗಳಿಲ್ಲ; ಅವನೀಂದ್ರನಾಥರ ಬಳಿ ಈ ಚಿತ್ರವನ್ನು ನೋಡಿದ ಕಲಾರಸಿಕ ಬಿ.ಎನ್. ಟ್ರೆಷರಿವಾಲಾ ಅದರ ಮೇಲೆ ಆಸೆಪಟ್ಟು ಅದನ್ನು ತನ್ನ ಸಂಗ್ರಹದಲ್ಲಿ ಸೇರಿಸಿಕೊಳ್ಳಬಯಸಿದರು. ಆದರೆ ಚಿತ್ರವನ್ನು ಅವನೀಂದ್ರನಾಥರು ವೆಂಕಟಪ್ಪನಿಗೆ ಹಿಂದಿರುಗಿಸಬೇಕಾಗಿದ್ದಿತು. ಮುಂದೆ ಟ್ರೆಷರಿವಾಲಾ ಮೈಸೂರಿಗೆ ಬಂದಾಗ ವೆಂಕಟಪ್ಪನನ್ನು ಕಂಡು ಈ ಚಿತ್ರವನ್ನು ಕೊಳ್ಳುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ. ವೆಂಕಟಪ್ಪ ಅವನೀಂದ್ರನಾಥರಿಗೆ ಚಿತ್ರವನ್ನು ಅವರ ವಿಮರ್ಶೆ-ಅಭಿಪ್ರಾಯಗಳೊಂದಿಗೆ ಹಿಂದಿರುಗಿಸಬೇಕೆಂದು ಕೇಳಿ ಬರೆದ ಪತ್ರದ ದಾಖಲೆಯಿದೆ (1922ರ ಮಾರ್ಚ್ ಹದಿನಾರನೆಯ ತಾರೀಖಿನ ಪತ್ರ). ಅದಕ್ಕೆ ಅವನೀಂದ್ರನಾಥರು ಬರೆದ ಉತ್ತರ ಹೀಗಿದೆ. (ಪತ್ರದ ದಿನ ಅದೇ ವರ್ಷ ಮಾರ್ಚ್ 24)

" .... ಚಿತ್ರದ ಸಂವಿಧಾನ ಚೆನ್ನಾಗಿದೆಯೆಂದು ನನ್ನ ಅನಿಸಿಕೆ. ಆದರೆ ವಸ್ತು ನನಗೆ ಏಕೋ ಹಿಡಿಸಲಿಲ್ಲ.

ನಿನಗೆ ವೀಣೆಯ ಹುಚ್ಚು ಇರಬಹುದು, ಚಿತ್ರ ಕಲೆಯ ಹುಚ್ಚೇ ಇರಬಹುದು. ಆದರೆ ಚಿತ್ರಕ್ಕೆ ಇಳಿಸಲು ಇಂಥ ಹುಚ್ಚು ಸಾಕೆ? ಹಾಗೆಯೇ ಒಬ್ಬನಿಗೆ ಕುಡಿಯುವ ಚಟ ಇರಬಹುದು. ಆದರೆ ಅದು ಎಲ್ಲರ ಆಸಕ್ತಿಗೆ ಪಾತ್ರವಾಗಬಲ್ಲುದೆ? ನಿನ್ನ ಚಿತ್ರದಲ್ಲಿ ಶಾಶ್ವತವಾದ ಆಸಕ್ತಿಯನ್ನು ಕೆರಳಿಸಬಹುದಾದಂಥ ಏನಾದರೂ ವಸ್ತುವಿರಬೇಕು. ಹಾಗಿದ್ದರೆ ಮಾತ್ರ ಹಲವರಿಗೆ ನಿನ್ನ ಚಿತ್ರ ಹಿಡಿಸೀತು."

ಟ್ರೆಷರಿವಾಲಾ ಈ ಚಿತ್ರವನ್ನು ಪಡೆದುಕೊಳ್ಳಲಿಲ್ಲ. ಈಗ ಇದು ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲಿದೆ. ವೀಣಾ ದೇವತೆಯೆದುರು ಕಲಾವಿದ ಹುಚ್ಚೆದ್ದು ಬೇಡಿ

ಕೊಳ್ಳುತ್ತಿರುವ ಈ ಚಿತ್ರದಲ್ಲಿ, ಕಲಾವಿದ ಬೆನ್ನುಮಾಡಿರುವ ಚಿತ್ರಕಲಾ ದೇವತೆ, ಶಿಲ್ಪ ದೇವತೆಗಳು ಬಂಧನದಲ್ಲಿದ್ದಾರೆ. ಗುರುಗಳ ಶಿಲ್ಪ ಮೂಲೆಗುಂಪಾಗಿ ನಿಂತಿದೆ. ವರ್ಣಸಂಯೋಜನೆ ತುಂಬ ನಾಜೂಕಾಗಿ, ರಚನೆ ಸುಂದರವಾಗಿದೆ. ಚಿತ್ರದಲ್ಲಿ ವೀಣೆಯೇ ಎದ್ದು ಕಾಣುವ ವಿವರ. ಕಲ್ಪನೆಯ ಸೊಬಗು ಎದ್ದುಕಾಣುತ್ತದೆ. ಚಿತ್ರಕಲೆಯ ಪರಿಕರವನ್ನೂ ಹೊರಗೆ ತೆಗೆಯದೆ ಬಹುದಿನಗಳಾದುವು ಎಂಬುದನ್ನು ಚಿತ್ರದಲ್ಲಿ ಕಾಣಿಸಿದ್ದಾರೆ. ವೀಣೆಯ ಪ್ರಾಸಾದ್ಧಿಕ ದೇವತೆಯ ಒಲುಮೆಯನ್ನು ಅನುಗ್ರಹವನ್ನು ಬಯಸಿ ಕಲಾವಿದ ಹುಚ್ಚಾಗಿದ್ದಾನೆ.

ಈ ಪ್ರಸಂಗ ಜರುಗಿದ ಮರುವರ್ಷ, ವಿಶ್ವಕವಿ ರವೀಂದ್ರನಾಥ ಠಾಕುರರು ಮೈಸೂರಿಗೆ ಬಂದರು. ಅವನೀಂದ್ರನಾಥರ ಹಿರಿಯರಾದ ರವೀಂದ್ರನಾಥರನ್ನು ವೆಂಕಟಪ್ಪ ಕಲ್ಕತ್ತೆಯಲ್ಲಿರುವಾಗ ಚೆನ್ನಾಗಿ ಬಲ್ಲರು. 1922ರ ಸೆಪ್ಟೆಂಬರ್ ತಿಂಗಳಿನ ಕಡೆಯ ವಾರ ರವೀಂದ್ರನಾಥರು ಮೈಸೂರಿಗೆ ಬಂದು ಬೇಸಗೆ ಅರಮನೆಯಲ್ಲಿ ತಂಗಿದ್ದರು. ಆ ತಿಂಗಳು 27ನೆಯ ಸಂಜೆ ಕಾಲೆಜ್ ಟೆನಿಸ್ ಕೋರ್ಟ್‌ನಲ್ಲಿ ಅವರ ಭಾಷಣವೊಂದು ಏರ್ಪಾಡಾಗಿದ್ದಿತು. ಅವರೊಂದಿಗೆ ಅವರ ಮಿತ್ರ ದೀನಬಂಧು ಚಾರ್ಲಿ ಆಂಡ್ರೂಸರೂ ದಯಮಾಡಿಸಿದ್ದರು. ರವೀಂದ್ರರನ್ನು ಕಾಣಲೆಂದು 28ನೆಯ ದಿನ ಬೆಳಿಗ್ಗೆ ಹತ್ತೂ ಮುಕ್ಕಾಲು ಗಂಟೆ ವೇಳೆಗೆ ವೆಂಕಟಪ್ಪ ಬೇಸಗೆ ಅರಮನೆಗೆ ಹೋದರು; ಜೊತೆಯಲ್ಲಿ ಒಬ್ಬ ಫೋಟೊಗ್ರಾಫರನ್ನೂ ಒಯ್ದಿದ್ದರು. ಅರಮನೆಯ ಹೊರಗೆ ಆಂಡ್ರೂಸರ ಭೇಟಿಯಾಯಿತು. ಆಂಡ್ರೂಸರು ಒಳಗೆ ಹೋಗಿ ವೆಂಕಟಪ್ಪ ಬಂದಿರುವುದನ್ನು ತಿಳಿಸಲು, ರವೀಂದ್ರನಾಥರು ಒಡನೆಯೇ ಪ್ರೀತಿಯಿಂದ ವೆಂಕಟಪ್ಪನನ್ನು ಬರಮಾಡಿಕೊಂಡರು. ವೆಂಕಟಪ್ಪನನ್ನು ಕಂಡೊಡನೆ "ಏನು ವೆಂಕಟಪ್ಪ, ನೀನಿನ್ನೂ ಸಂನ್ಯಾಸಿಯಾಗಿಲ್ಲ ?" ಎಂದು ಉದ್ಗಾರ ತೆಗೆದರು. ವೆಂಕಟಪ್ಪನ ವಿರಕ್ತ ಮನೋವೃತ್ತಿಯ ಪರಿಚಯ ಕಲ್ಕತ್ತೆಯಲ್ಲಿ ಎಲ್ಲರಿಗೂ ಇದ್ದಿರಬೇಕು!

ಕವಿಯೂ ಕಲಾವಿದನೂ ಮುಕ್ಕಾಲುಗಂಟೆ ಅದು ಇದೂ ಮಾತನಾಡುತ್ತಾ ಕಳೆದರು. ಫೋಟೊಗ್ರಾಫರ್ ಸದ್ದಿಲ್ಲದೆ ಕವಿಯ ವಿವಿಧ ಭಂಗಿಗಳ ಭಾವಚಿತ್ರಗಳನ್ನು ತೆಗೆದುಕೊಳ್ಳುತ್ತಿದ್ದ. ನಡೆದ ಮಾತುಕತೆಯಲ್ಲಿ, ರವೀಂದ್ರನಾಥರು ಶೇಷಣ್ಣನವರ ವೀಣಾವಾದನವನ್ನು ಹಿಂದಿನ ದಿನ ನಡುರಾತ್ರಿಯವರೆಗೆ ಕೇಳುತ್ತಿದ್ದರೆಂದು ತಿಳಿಸಿದರು. ಅವರ ಅಭಿಪ್ರಾಯದಲ್ಲಿ, ಶೇಷಣ್ಣನವರು ಕಲೆಯ ಶಿಖರವನ್ನು ಏರಿದವರೇ; ಆದರೆ, ತಮಗೆ ಸಂಗಮೇಶ್ವರ ಶಾಸ್ತ್ರಿಗಳ ವೀಣೆ ಸೊಗಯಿಸುವಂತೆ ಶೇಷಣ್ಣನವರ ವೀಣೆ ಸೊಗಯಿಸದು. ತುಮುರಾಡ ಸಂಗಮೇಶ್ವರ ಶಾಸ್ತ್ರಿಗಳು (1874-1932) ಆಂಧ್ರಪ್ರದೇಶದ ಪಿಠಾಪುರಂ ಮಹಾರಾಜರ ಆಸ್ಥಾನ ವಿದ್ವಾಂಸರಾಗಿದ್ದವರು. ಕಲಾಭಿಮಾನಕ್ಕೆ ಹೆಸರಾದ ಪಿಠಾಪುರಂ ಮಹಾರಾಜರೂ ರವೀಂದ್ರನಾಥ ಠಾಕುರರೂ ಸ್ನೇಹಿತರು. ಪಿಠಾಪುರಂ ಮಹಾರಾಜರು ರವೀಂದ್ರನಾಥರಿಗೆ ಸಂಗಮೇಶ್ವರ ಶಾಸ್ತ್ರಿಗಳ ಪರಿಚಯವನ್ನು ಮಾಡಿಸಿಕೊಟ್ಟವರು. ರವೀಂದ್ರನಾಥರು ಶಾಸ್ತ್ರಿಗಳನ್ನು ಕಲ್ಕತ್ತೆಗೆ ಕರೆಯಿಸಿಕೊಂಡು ಎರಡು ತಿಂಗಳುಗಳ ಕಾಲ ತಮ್ಮಲ್ಲಿ ಇರಿಸಿಕೊಂಡು ಅವರಿಂದ ಹಲವಾರು ಸಂಗೀತ ಕಚೇರಿಗಳನ್ನು

ಮಾಡಿಸಿದ್ದರು. ಅವರನ್ನು ತಮ್ಮೊಂದಿಗೆ ವಿದೇಶಯಾತ್ರೆಗೂ ಕೊಂಡೊಯ್ಯಬೇಕೆಂದಿದ್ದರು. ಆದರೆ ಶಾಸ್ತ್ರಿಗಳ ಸಂಪ್ರದಾಯಶೀಲತೆ ಅವರ ವಿದೇಶಪ್ರವಾಸಕ್ಕೆ ಅಡ್ಡಿಯಾಗಿದ್ದಿತು.

ಮೈಸೂರಿಗೆ ಬಂದ ರವೀಂದ್ರನಾಥರನ್ನು ತಾವು ಕಂಡಾಗ ಫೋಟೊಗ್ರಾಫರನಿಂದ ಹಲವು ಭಾವಚಿತ್ರಗಳನ್ನು ತೆಗಿಸಿದ್ದರಷ್ಟೆ. ಅವುಗಳ ನೆರವಿನಿಂದ, ಮತ್ತು ತಮ್ಮ ನೆನಪಿನಿಂದ, ರವೀಂದ್ರನಾಥರ ಶಿಲ್ಪವೊಂದನ್ನು ಮಾಡಲು 1923ರ ಜೂನ್ ತಿಂಗಳ ಮೂವತ್ತನೆಯ ದಿನ ಆರಂಭಿಸಿದರು. ಆಗಸ್ಟ್ ತಿಂಗಳ ಕಡೆಯ ಭಾಗದಲ್ಲಿ ಅದು ಮುಗಿಯಿತು (22ನೆಯ ತಾರೀಖು); ಪ್ಲಾಸ್ಟರ್ ಎರಕವನ್ನೂ ತೆಗೆದಾಯಿತು (26ನೆಯ ತಾರೀಖು). ದೇವರ ಕೃಪೆಯೆಂದು ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ಈ ಶಿಲ್ಪದ ಕೆಲಸ ಸಾಗುತ್ತಿದ್ದಾಗ ಅವರು ಬೇರೆಲ್ಲ ಆಸಕ್ತಿಗಳನ್ನು ಒತ್ತಟ್ಟಿಗಿಟ್ಟು ತಪಸ್ಸಿನಂತೆ ಎಡೆಬಿಡದೆ ಅದರಲ್ಲೆ ತೊಡಗಿರುತ್ತಿದ್ದರು. ಕಡೆಗೆ ವೀಣೆಯನ್ನೂ ಮುಟ್ಟುತ್ತಿರಲಿಲ್ಲ. ಈ ಅವಧಿಯಲ್ಲಿ ಶೇಷಣ್ಣನವರ ಆರೋಗ್ಯವೂ ಅಷ್ಟು ಚೆನ್ನಾಗಿರಲಿಲ್ಲ. ಅವರಿಗೆ ಹಿಂದೆ ಎರಡುಮೂರು ವರ್ಷಗಳಿಂದ ಕಣ್ಣಿನ ತೊಂದರೆಯಿದ್ದು, ಆ ವರ್ಷದ ಮೇ ತಿಂಗಳಲ್ಲಿ ಬಲಗಣ್ಣಿನ ಶಸ್ತ್ರಚಿಕಿತ್ಸೆ ನಡೆದು ಆಸ್ಪತ್ರೆಯಲ್ಲಿದ್ದರು. ಅವರು ಆಸ್ಪತ್ರೆಯಲ್ಲಿದ್ದ ಆರೇಳು ದಿನಗಳು ದಿನವೂ ಸಂಜೆಯೆಲ್ಲ ವೆಂಕಟಪ್ಪ ಆಸ್ಪತ್ರೆಯಲ್ಲೆ ಇರುತ್ತಿದ್ದರು. ಶೇಷಣ್ಣ ಮನೆಗೆ ಹಿಂದಿರುಗಿದ ಮೇಲೂ ಸುಧಾರಿಸಿಕೊಳ್ಳಬೇಕಾಯಿತು. ತಮ್ಮ ವಾಡಿಕೆಯ ಪಾಠಗಳನ್ನೆಲ್ಲ ನಿಲ್ಲಿಸಿದ್ದರು. ಈ ಸಮಯದಲ್ಲೇ ವೆಂಕಟಪ್ಪ ರವೀಂದ್ರನಾಥರ ಶಿಲ್ಪದ ಕೆಲಸವನ್ನು ಕೈಗೆತ್ತಿಕೊಂಡದ್ದು. ಶಿಲ್ಪ ಮುಗಿಯುವವರೆಗೂ ವೀಣಾಭ್ಯಾಸಕ್ಕೂ ಬಿಡುವು.

ರವೀಂದ್ರನಾಥರ ಶಿಲ್ಪವನ್ನು ಆರಂಭಿಸುವ ಮೊದಲು ವೆಂಕಟಪ್ಪ ಹಲವಾರು ವರ್ಣಚಿತ್ರಗಳನ್ನು ಸಿದ್ಧಪಡಿಸಿದ್ದರು. 1923ರ ಫೆಬ್ರುವರಿ ತಿಂಗಳಲ್ಲಿ 'ರಾತ್ರಿಯ ಪೂಜೆ' ಎಂಬ ತಮ್ಮ ಜಲವರ್ಣಚಿತ್ರವೊಂದನ್ನು ಮದರಾಸ್ ಲಲಿತಕಲಾ ವಸ್ತು ಪ್ರದರ್ಶನಕ್ಕೆ ಕಳುಹಿಸಿದ್ದರು; ಅದೇ ವರ್ಷ ಮಾರ್ಚ್ ತಿಂಗಳಲ್ಲಿ ರಾಜಮಹೇಂದ್ರವರದ ಆಂಧ್ರ ಲಲಿತಕಲಾ ಸಂಘದವರು ಏರ್ಪಡಿಸಿದ್ದ ಕಲಾಪ್ರದರ್ಶನಕ್ಕೆಂದು 'ಶಿವರಾತ್ರಿ', 'ಪಕ್ಷಿ', 'ವೀಣೆಯ ಹುಚ್ಚು', ದಂತದ ಹಲಗೆಯ ಮೇಲೆ ಕಿರುಚಿತ್ರವೊಂದು ಇವನ್ನು ಕಳುಹಿಸಿದರು. ಹಿಂದಿನ ವರ್ಷ ಡಿಸೆಂಬರ್ ತಿಂಗಳಲ್ಲಿ ಅವರ ಮಿತ್ರರು ಆರ್.ಎನ್. ಸುಬ್ರಹ್ಮಣ್ಯರಾಜೆ ಅರಸಿನವರು ತಮಗೆ ಗುರುಸ್ಥಾನದಲ್ಲಿದ್ದ ಕಾಶ್ಮೀರದ ಸಂತರೊಬ್ಬರನ್ನು ವೆಂಕಟಪ್ಪನ ಸ್ಟುಡಿಯೋಗೆ ಕರೆತಂದಿದ್ದರು. ಆ ಸಂತರು ವೆಂಕಟಪ್ಪನ ಕೃತಿಗಳನ್ನು ನೋಡಿ, ಅವುಗಳಲ್ಲಿ ವೀಣೆ ಶೇಷಣ್ಣನವರ ಶಿಲ್ಪವನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದರು. ಸುಬ್ರಹ್ಮಣ್ಯರಾಜೆ ಅರಸು ಈ ಸಂತನ ಶಿಲ್ಪವನ್ನು ವೆಂಕಟಪ್ಪ ಮಾಡಬೇಕೆಂದು ಬಯಸಿದ್ದರು. ವೆಂಕಟಪ್ಪ ಇವರ ಮುಖದ ಅಳತೆಗಳನ್ನು ತೆಗೆದುಕೊಂಡಿದ್ದರು; ಕೆಲವು ಭಾವಚಿತ್ರಗಳನ್ನೂ ಪಡೆದುಕೊಂಡಿದ್ದರು. ಮರುವರ್ಷದ ಮೊದಲತಿಂಗಳುಗಳಲ್ಲಿ ಈ ಶಿಲ್ಪದ ಕೆಲಸ ನಡೆಯುತ್ತಿತ್ತು. ಮುಂದೆ ಈ ಶಿಲ್ಪ ಏನಾಯಿತೋ ತಿಳಿಯುವುದಿಲ್ಲ. ಅದೆ ವರ್ಷದ ಕಡೆಯ ಭಾಗದಲ್ಲಿ (ಸೆಪ್ಟೆಂಬರ್ ತಿಂಗಳು), ಅವರ ಮಿತ್ರರೂ, ಕಲಾಭಿಮಾನಿಯೂ, ಗ್ರಂಥಕರ್ತರೂ ಆಗಿದ್ದ ಜೇಮ್ಸ್ ಕಸಿನ್ಸ್ ಅವರು ಚಾಂದಬೀಬಿಯ ಕಿರುಚಿತ್ರವೊಂದನ್ನು ವೆಂಕಟಪ್ಪನಿಂದ

ಬಯಸಿದರು. ಕಸಿನ್ಸ್ ಕಳುಹಿಸಿದ್ದ ಒಂದೆ ಒಂದು ವರ್ಣಚಿತ್ರದ ಆಧಾರದ ಮೇಲೆ ವೆಂಕಟಪ್ಪ ಕಿರುಚಿತ್ರದ ಕೆಲಸಕ್ಕೆ ತೊಡಗಿದರು. ಇದು ಮರುವರ್ಷ (1924) ಜನವರಿ ಹದಿನೆಂಟರಂದು ಮುಗಿಯಿತು. ಅದನ್ನು ಕಸಿನ್ಸರಿಗೆ ಕಳುಹಿಸಿದ್ದನ್ನು ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಕಾಣಿಸಿದ್ದಾರೆ. ಈಗ ಈ ಚಿತ್ರ ಎಲ್ಲಿದೆಯೊ ತಿಳಿಯದು.

೬

ರವೀಂದ್ರನಾಥರ ಶಿಲ್ಪದ ಕೆಲಸಕ್ಕೆ ತೊಡಗುವಾಗಲೆ ವೆಂಕಟಪ್ಪನ ಕಣ್ಣು ತೊಂದರೆ ಕೊಡುತ್ತಿದ್ದಿತು. 1920ರಿಂದಲೂ ಅವರಿಗೆ ಕಣ್ಣಿನ ಬೇನೆ ಇದ್ದೆ ಇದ್ದಿತು. ಅರಮನೆ ಆಸ್ಪತ್ರೆಯ ವೈದ್ಯರಾಗಿದ್ದ ಶ್ರೀನಿವಾಸಾಚಾರ್ಯರೆಂಬುವರು ಚಿಕಿತ್ಸೆಮಾಡಿದ ಮೇಲೆ ಬಹುಮಟ್ಟಿಗೆ ಸುಧಾರಿಸಿತು. ಆದರೆ ಶಿಲ್ಪದ ಕೆಲಸ ಮುಗಿಯುವ ವೇಳೆಗೆ ಮತ್ತೆ ಉಲ್ಬಣಗೊಂಡಿತು. 1923ರ ಅಕ್ಟೋಬರ್ ತಿಂಗಳಲ್ಲಂತೂ ಸಹಿಸಲಾರದಷ್ಟು ವ್ಯಥೆ ತಲೆದೋರಿತು; ಯಾವ ಚಿಕಿತ್ಸೆಗೂ ಬಗ್ಗಲಿಲ್ಲ . ಗುರುಗಳಾದ ಶೇಷಣ್ಣನವರು ವೆಂಕಟಪ್ಪನ ಜಾತಕವನ್ನು ತರಿಸಿ ನೋಡಿದರು. ಶೇಷಣ್ಣನವರಿಗೆ ಜ್ಯೋತಿಷ್ಯದ ಪರಿಚಯವೂ ಚೆನ್ನಾಗಿದ್ದಿತು. ಅವರ ಗುಣಿತದ ಪ್ರಕಾರ, ಇದು ಅಂಗಾರಕ ದೋಷ. ''ಆಶ್ವೀಜ ಬಹುಳ ಸಪ್ತಮಿಯಿಂದ, ಎಂದರೆ 1923ರ ನವೆಂಬರ್ ತಿಂಗಳ ಮೊದಲ ದಿನದಿಂದ, ಗುರು ಅನುಕೂಲನಾಗಿದ್ದು, ಆ ತಿಂಗಳ ಇಪ್ಪತ್ತನಾಲ್ಕನೆಯ ದಿನದವರೆಗೂ ಅಂಗಾರಕ ಅದೇ ಸ್ಥಾನದಲ್ಲಿದ್ದರೂ ದುಷ್ಟನಾಗಿರುವುದಿಲ್ಲ; ಅವನಿಂದ ಈಗ ಇರುವ ತೊಂದರೆ ತಪ್ಪುತ್ತದೆ'' ಎಂದು ಶೇಷಣ್ಣನವರು ಫಲ ಹೇಳಿದ್ದರು. ಅಷ್ಟೇ ಅಲ್ಲದೆ, ಮುಂದೆ ವೆಂಕಟಪ್ಪನ ಕಲಾಕೃತಿಗಳಿಗೆ ಹೆಚ್ಚಿನ ಬೆಲೆ ಬರುವ ಯೋಗವೂ ಇದೆಯೆಂದು ಭವಿಷ್ಯ ನುಡಿದರು. ಇದನ್ನು ವೆಂಕಟಪ್ಪ ತಮ್ಮ ದಿನಚರಿಯಲ್ಲಿ (1923, ಅಕ್ಟೊಬರ್ 19) ದಾಖಲೆಮಾಡಿದ್ದಾರೆ.

ರವೀಂದ್ರನಾಥರ ಶಿಲ್ಪ ಮುಗಿದಮೇಲೆ ವೆಂಕಟಪ್ಪನ ದಿನಚರ್ಯೆ ಮೊದಲಿನಂತೆ ಆಯಿತು. ವೀಣಾಭ್ಯಾಸ ಮತ್ತೆ ಮೊದಲಾಯಿತು; ರಾತ್ರಿಯ ವೇಳೆ ಸುಮಾರು ಒಂಬತ್ತು ಗಂಟೆಯವರೆಗೂ ಶೇಷಣ್ಣನವರ ಮನೆಯಲ್ಲಿ ಪಾಠವೋ ಕಚೇರಿಯೋ. ಶೇಷಣ್ಣನವರ ಮನೆಗೆ ಹೋಗುವ ಮೊದಲು ಸಂಜೆ ನಿಷಾತ್‌ಬಾಗಿನ ಕಡೆ ಇಲ್ಲವೇ ಕುಕ್ಕರಹಳ್ಳಿ ಕೆರೆಯ ಕಡೆ ಮಿತ್ರರೊಡನೆ ಸಂಚಾರ; 'ಕೃಷ್ಣಮಾಚಾರಿ ಕ್ಲಬ್' ಎಂಬೆಡೆ ಲಘು ಉಪಾಹಾರ. ಮತ್ತೆ ಅವರ ಗಮನ ತಾವು ಕಲ್ಕತ್ತೆಯಲ್ಲಿ ತಯಾರಿಸಿದ್ದ ಶ್ರುತಿವೀಣೆಯ ಕಡೆ ತಿರುಗಿತು. ತಮ್ಮ ಮಿತ್ರರೂ ಸಂಗೀತರಸಿಕರೂ ಆದ ಟೈಗರ್ ವರದಾಚಾರ್ಯರು, ಯು.ಡಿ. ನಾರಾಯಣಮೂರ್ತಿ, ಟಿ.ಜಿ. ರಾಮಯ್ಯರ್ ಮೊದಲಾದವರೊಡನೆ ಶ್ರುತಿವೀಣೆಯ ವಿಚಾರ ಚರ್ಚಿಸುತ್ತಿದ್ದರು. ಮಹಾರಾಜರ ದರ್ಬಾರ್ ಬಕ್ಷಿಯ ಅಪೇಕ್ಷೆಯಂತೆ ಶ್ರುತಿವೀಣೆಯನ್ನು ಅರಮನೆಗೂ ಕಳುಹಿಸಿದ್ದರು (1924ರ ಜುಲೈ ತಿಂಗಳಲ್ಲಿ); ಮಹಾರಾಜರು ಇದನ್ನು ಪರಾಮರ್ಶಿಸಿದರು. ಅದರ ಬಗ್ಗೆ ವಿದ್ವಾಂಸರೊಂದಿಗೆ ಚರ್ಚೆಯೂ ನಡೆಯಿತಂತೆ.

1924ರ ಮೊದಲ ತಿಂಗಳುಗಳಲ್ಲಿ ವೆಂಕಟಪ್ಪ ಕೈಗೊಂಡ ಚಿತ್ರಕಲಾ ಕೆಲಸವೆಂದರೆ

ತಮ್ಮ ಸ್ನೇಹಿತರೂ ಹಿತೈಷಿಗಳೂ ಮಹಾರಾಜರ ನೆಂಟರೂ ಆಗಿದ್ದ ಸರ್ದಾರ್ ಗೋಪಾಲರಾಜೆ ಅರಸಿನವರ ಚಿತ್ರ. ಈ ಅರಸಿನವರಿಗೆ ಅಂಗಸಾಧನೆಯೆಂದರೆ ತುಂಬ ಉತ್ಸಾಹ. ಅವರು ಯಾರೊಡನೆ ಮಾತನಾಡುವಾಗಲೂ ವ್ಯಾಯಾಮದ ಪ್ರಶಂಸೆಯನ್ನು ಸೇರಿಸುವರು, ತಾವು ಅಂಗಸಾಧನೆಯಿಂದ ಪಡೆದುಕೊಂಡ ಕಟ್ಟುಮಸ್ತಾದ ಮೈಕಟ್ಟನ್ನು ತೋರಿಸುವರು. ತಾವು ಅಂಗಸಾಧನೆಯಲ್ಲಿ ತೊಡಗಿರುವ ಚಿತ್ರವೊಂದನ್ನು ವೆಂಕಟಪ್ಪನಿಂದ ಮಾಡಿಸಬೇಕೆಂದು ಅವರ ಹಂಬಲ.

ಆ ವರ್ಷದ ಜನವರಿ ತಿಂಗಳಲ್ಲಿ ವೆಂಕಟಪ್ಪ ಈ ಕೆಲಸವನ್ನು ಆರಂಭಿಸಿ ಮೇ ತಿಂಗಳ ಮೊದಲ ಭಾಗದಲ್ಲಿ ಬಹುಮಟ್ಟಿಗೆ ಮುಗಿಸಿದರು. ಜೂನ್ ತಿಂಗಳ ಮೊದಲ ವಾರದಲ್ಲಿ ಅದನ್ನು ಗೋಪಾಲರಾಜೆ ಅರಸಿನವರಿಗೆ ತೋರಿಸಿದಾಗ ಅರಸಿನವರು ತುಂಬ ಸಂತೋಷಪಟ್ಟರು. ವೆಂಕಟಪ್ಪ ತಾವೇ ಅದನ್ನು ಅರಸಿನವರ ಬಂಗಲೆಗೆ ಒಯ್ದು ಅದು ಇರಬೇಕಾದ ಸ್ಥಳವನ್ನೂ ಸೂಚಿಸಿ ಬಂದರು. ಈ ಚಿತ್ರದ ಜೊತೆಗೆ ವೆಂಕಟಪ್ಪ ತಾವು ಮಾಡಿದ್ದ ಪ್ರಕೃತಿಚಿತ್ರ (ಉದಕಮಂಡಲದ್ದು) ವೊಂದನ್ನೂ ಅರಸಿನವರಿಗೆ ನೀಡಿದರು (ಜೂನ್ ನಾಲ್ಕರಂದು).

ಗೋಪಾಲರಾಜೆ ಅರಸು ತಮಗೆ ಮಹಾರಾಜರ ಚಿತ್ರವೊಂದನ್ನು ಮಾಡಿಕೊಡುವಂತೆ ವೆಂಕಟಪ್ಪನನ್ನು ಕೇಳಿದರು. ವೆಂಕಟಪ್ಪ ಮಾಡಿಕೊಡಲು ಒಪ್ಪಿದರಾದರೂ ಮುಂದೆ ಎರಡು ವರ್ಷಗಳ ಕಾಲ ಅವರು ಇದನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಈ ನಡುವೆ ಮಹಾರಾಜರು ತಮ್ಮ ಸಮ್ಮುಖ ಕಾರ್ಯದರ್ಶಿ ತಂಬೂಚೆಟ್ಟಿಯನ್ನು ವೆಂಕಟಪ್ಪನ ಸ್ಟುಡಿಯೋವಿಗೆ ಕಳುಹಿಸಿ ಅರಮನೆಯ ದಿವಾನಖಾನೆಯಲ್ಲಿ ವೃತ್ತಾಕಾರದ ಚೌಕಟ್ಟುಗಳಿರುವಲ್ಲಿ ಏನಾದರೂ ಪ್ಯಾರಿಸ್ಸಿನ ಪ್ಲಾಸ್ಟರ್‌ನಲ್ಲಿ ಉಬ್ಬುಶಿಲ್ಪವನ್ನು ಮಾಡುವಂತೆ ಅಪ್ಪಣೆಮಾಡಿದರು. ವೆಂಕಟಪ್ಪ ಸೆಪ್ಟೆಂಬರ್ ತಿಂಗಳ ಎಂಟನೆಯ ದಿನ ಅರಮನೆಗೆ ಹೋಗಿ ಆ ಚೌಕಟ್ಟುಗಳನ್ನು ನೋಡಿಬಂದರು. ಅವರ ಜೊತೆಗಿದ್ದ ತಂಬೂಚೆಟ್ಟಿ, ಶಿಲ್ಪಕೆಲಸದ ವೆಚ್ಚ ಎಷ್ಟಾದೀತೆಂದು ಕೇಳಿದರು. ಅದಕ್ಕೆ ವೆಂಕಟಪ್ಪ "ಮೊದಲೆ ಎಷ್ಟೆಂದು ಹೇಳುವುದಾಗದು. ಕೆಲಸ ಮಾಡಿ ಮುಗಿಸುತ್ತೇನೆ. ಮಹಾರಾಜರು ಕೊಟ್ಟಷ್ಟೇ ನನಗೆ ಸಂತೋಷ" ಎಂದರು. ಕೆಲಸವನ್ನು ಎಂದು ಆರಂಭಿಸುವಿರೆಂದು ಕೇಳಲು ವೆಂಕಟಪ್ಪ "ಈಗ ನಾನು ಕೂಚ್‌ಬಿಹಾರ್ ಮಹಾರಾಜರ ಕಿರುಚಿತ್ರದ ಕೆಲಸದಲ್ಲಿ ತೊಡಗಿದ್ದೇನೆ. ಅದು ಮುಗಿಯುವವರೆಗೂ ಈ ಕೆಲಸವನ್ನು ಆರಂಭಿಸಲಾರೆ. ಅದು ಮುಗಿದ ಮೇಲೆ ನನಗೆ ಬಿಡುವು" ಎಂದುತ್ತರಕೊಟ್ಟರು.

ಈ ಮಾತಿನ ಧಾಟಿ ತಂಬೂಚೆಟ್ಟರಿಗೆ ಸೋಜಿಗವನ್ನುಂಟುಮಾಡಿತು. ಧಣಿಗಳಾದ ಮಹಾರಾಜರಿಂದ ಕರೆ, ಅರಮನೆಯ ಕೆಲಸ, ಮಾತನಾಡುತ್ತಿರುವುದು ಸಮ್ಮುಖದ ಕಾರ್ಯದರ್ಶಿಯೊಡನೆ, ಏನು ಉದ್ಧಟತನ ಈ ಊಳಿಗದವನಿಗೆ! ತನ್ನನ್ನು ಏನೆಂದು ತಿಳಿದುಕೊಂಡಿದ್ದಾನೆ? ಅದೂ ಮಹಾರಾಜರಿಗೆ ಹೆಚ್ಚೂ ಕಡಮೆ ಸರ್ವಾಧಿಕಾರವಿದ್ದ ಕಾಲ ಅದು. ದೇಶವಿದೇಶಗಳಲ್ಲೆಲ್ಲ ಜನಪ್ರಿಯತೆಯನ್ನೂ ಗೌರವಾದರಗಳನ್ನೂ ಪಡೆದುಕೊಂಡ ಮಹಾರಾಜರು ಬೇರೆ. ವೆಂಕಟಪ್ಪನ ವರ್ತನೆಯ ವರದಿ ಮಹಾರಾಜರವರೆಗೆ ಹೋಯಿತು.

ತಂಬೂಚೆಟ್ಟರಿಗೆ ಇನ್ನೊಂದು ಅಚ್ಚರಿ ಕಾದಿದ್ದಿತು. ಮಹಾರಾಜರು ಸಿಟ್ಟಾಗುವರೆಂದು ನಿರೀಕ್ಷಿಸಿದ್ದರು ಅವರು. ಆದರೆ, ಈ ಮಾತನ್ನು ಕೇಳಿ ಮಹಾರಾಜರು ನಕ್ಕು "ವೆಂಕಟಪ್ಪ ತನಗೆ ಸರಿದೋರಿದ ಚಿತ್ರವನ್ನು ಬಿಡಿಸಲಿ, ತನಗೆ ಬಿಡುವಾದಾಗ ಮಾಡಲಿ" ಎಂದುಬಿಟ್ಟರು! ಅವರಿಗೆ ವೆಂಕಟಪ್ಪನ ಮನೋಧರ್ಮವೂ ತಿಳಿದಿದ್ದಿತು; ಅವರ ಹಿರಿಮೆಯನ್ನೂ ಗುರುತಿಸಿದ್ದರು.

ವೆಂಕಟಪ್ಪ ತೊಡಗಿದ್ದ ಕೂಚ್‌ಬಿಹಾರ್ ಮಹಾರಾಜರ ಕಿರುಚಿತ್ರದ ಕೆಲಸದ ಪ್ರಸ್ತಾಪ ಬಂದಿತಷ್ಟೆ. ಸರ್ ಆಲ್‌ಬಿಯನ್ ಬ್ಯಾನರ್ಜಿ ಎಂಬ ಬಂಗಾಳಿ ಗೃಹಸ್ಥರು ಮೈಸೂರು ಸಂಸ್ಥಾನದ ಸೇವೆಯಲ್ಲಿದ್ದು ದಿವಾನಗಿರಿಯನ್ನು ಮಾಡುತ್ತಿದ್ದಾಗ (1920-1926). ಅವರಿಗೆ ಪರಿಚಿತರಾಗಿದ್ದ ಕೂಚ್‌ಬಿಹಾರ ಸಂಸ್ಥಾನದ ಮಹಾರಾಣಿ-ರೀಜೆಂಟ್ ಮೈಸೂರಿಗೆ ಭೇಟಿ ಕೊಟ್ಟಿದ್ದರು. ಆ ಸಮಯದಲ್ಲಿ ವೆಂಕಟಪ್ಪ ಮಿರ್ಜಾರವರ ಕೋರಿಕೆಯಂತೆ ಆನೆಯ ದಂತದ ಹಲಗೆಯ ಮೇಲೆ ತಯಾರಿಸಿದ್ದ ಮೈಸೂರು ಮಹಾರಾಜರ ಜಲವರ್ಣ ಚಿತ್ರವನ್ನು ನೋಡಿ, ತಮ್ಮ ದಿವಂಗತಪತಿಯ ಚಿತ್ರವನ್ನೂ ಇದೇ ರೀತಿ ಮಾಡಿಸಬೇಕೆಂದು ಬಯಸಿದರು. ಆದರೆ, ವೆಂಕಟಪ್ಪ ಕೂಚ್‌ಬಿಹಾರದ ಮಹಾರಾಜರನ್ನು ಕಂಡಿರಲಿಲ್ಲವಾದುದರಿಂದ ಮೊದಲು ಒಪ್ಪಿಕೊಳ್ಳಲಿಲ್ಲ. ಮೈಸೂರು ಯುವರಾಜರು (ನರಸಿಂಹರಾಜ ಒಡೆಯರು, ಮಹಾರಾಜರ ಕಿರಿಯ ಸೋದರ) ಒತ್ತಾಯಪಡಿಸಿದ ಮೇಲೆ ಅರೆಮನಸ್ಸಿನಿಂದ ಒಪ್ಪಿಕೊಂಡರು. ಈ ಕೆಲಸದ ಸಿದ್ಧತೆಯಾಗಿ ಆ ಮಹಾರಾಣಿ-ರೀಜೆಂಟ್ ಕೊಟ್ಟು ಕಳುಹಿಸಿದ್ದ ತಮ್ಮ ಗಂಡನ ಭಾವಚಿತ್ರಗಳನ್ನು ಅಧ್ಯಯನಮಾಡುತ್ತಿದ್ದರು. ಚಿತ್ರಣದ ಕೆಲಸ ಆರಂಭವಾದದ್ದು 1926ರ ಮೊದಲ ತಿಂಗಳಲ್ಲೇ.

ಇದೇ ವಿಚಾರವಾಗಿ ಇದನ್ನೂ ಇಲ್ಲಿ ಹೇಳಿಬಿಡಬಹುದು. ಕೂಚ್‌ವಿಹಾರದ ಮಹಾರಾಣಿ-ರೀಜೆಂಟರ ಅಪೇಕ್ಷೆಯಂತೆ ವೆಂಕಟಪ್ಪ ಅಲ್ಲಿನ ದಿವಂಗತ ಮಹಾರಾಜರ ಎರಡು ಕಿರು ಚಿತ್ರಗಳನ್ನು ಸಿದ್ಧಪಡಿಸಿದರು. ಒಂದು ಮಹಾರಾಜರು ಭಾರತೀಯ ಉಡುಪಿನಲ್ಲಿ ಕಂಡಂತೆ, ಇನ್ನೊಂದು ಪಾಶ್ಚಾತ್ಯಪೋಷಾಕಿನಲ್ಲಿ ಕಂಡಂತೆ. ಮೊದಲನೆಯ ಚಿತ್ರ (ಭಾರತೀಯ ಉಡುಪಿನಲ್ಲಿ) ಮಹಾರಾಣಿ ರೀಜೆಂಟ್‌ಗೆ ಹಿಡಿಸಿತು, ಒಪ್ಪಿಗೆಯಾಯಿತು. ಆದರೆ ಎರಡನೆಯ ಚಿತ್ರದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಸೂಚಿಸಿದರು. ವೆಂಕಟಪ್ಪ ಅವರ ಸೂಚನೆಯಂತೆ ತಿದ್ದುಪಡಿ ಮಾಡಿದರು. ಅದಾದಮೇಲೆ ಆಕೆ ಮತ್ತೊಂದು ಮಾರ್ಪಾಟನ್ನು ಮಾಡಬೇಕೆಂದಳು. ಅದು ಮೂಲ ಭಾವಚಿತ್ರದಲಿಲ್ಲದ ವಿವರ. ಅದನ್ನು ಮಾಡಲು ವೆಂಕಟಪ್ಪ ಒಪ್ಪಲಿಲ್ಲ. "ಕುಡಿತದ ಚಾಳಿಯಿದ್ದವನ ಮೂಗು ಅದು; ಅದು ಭಾವಚಿತ್ರದಲ್ಲೇ ಕಾಣುತ್ತದೆ. ಅದನ್ನು ನಾನು ಮಾರ್ಪಡಿಸಿದರೆ ವಸ್ತುಸ್ಥಿತಿಗೆ ವಿರುದ್ಧವಾದೀತು. ಹಾಗೆಂದೂ ನಾನು ಮಾಡಲಾರೆ" ಎಂದು ನಿರಾಕರಿಸಿದರು. ಅಷ್ಟಲ್ಲದೆ, ಮೊದಲು ಕೊಡುವುದಾಗಿ ಒಪ್ಪಿಕೊಂಡಿದ್ದ ಸಂಭಾವನೆಯಲ್ಲಿ ಕಡಮೆ ಮಾಡುವುದಾಗಿ ಆಕೆ ತಿಳಿಸಿದಾಗ ವೆಂಕಟಪ್ಪ ಸಿಟ್ಟಿಗೆದ್ದು "ನಿಮಗೆ ಈ ಚಿತ್ರವನ್ನು ಕೊಡುವುದೇ ಇಲ್ಲ, ಅದು ನನ್ನಲ್ಲಿಯೇ ಇರಲಿ!" ಎಂದುಬಿಟ್ಟರು. ಅನಂತರ ಆಕೆಯ ಬೇಡಿಕೆಯಾಗಲಿ, ಯುವರಾಜರ ಒತ್ತಾಯವಾಗಲಿ ಏನೂ ಫಲಕಾರಿಯಾಗಲಿಲ್ಲ. ಚಿತ್ರ ವೆಂಕಟಪ್ಪನ

ಬಳಿಯೇ ಉಳಿಯಿತು. ಹಲವಾರು ವರ್ಷಗಳಾದ ಮೇಲೆ, ಭಾವನಗರದ ಮಹಾರಾಜರು ಮದರಾಸಿನ ರಾಜ್ಯಪಾಲರಾಗಿದ್ದಾಗ, ಅವರ ಅಪೇಕ್ಷೆಯಂತೆ ಈ ಚಿತ್ರವನ್ನು ಮದರಾಸ್ ನ್ಯಾಷನಲ್ ಆರ್ಟ್ ಗ್ಯಾಲರಿಗೆ ಉಚಿತವಾಗಿ ಕೊಟ್ಟುಬಿಟ್ಟರು. ಈಗ ಇದು ಅಲ್ಲಿದೆ.

ಈ ಚಿತ್ರವನ್ನು ವೆಂಕಟಪ್ಪನ ಮಿತ್ರರಾದ ಸರ್ದಾರ್ ಗೋಪಾಲರಾಜೆ ಅರಸರು ನೋಡಿದಾಗ, ಅವರ ಮನಸ್ಸಿನಲ್ಲಿ ತಾವು ತಮ್ಮ ನೆಂಟರೂ ಮೈಸೂರು ದೇಶದ ಧಣಿಯೂ ಆದ ಮಹಾರಾಜರ ಚಿತ್ರವನ್ನು ಇದೇ ರೀತಿ ಮಾಡಿಸಿ ಅವರ ವರ್ಧಂತ್ಯುತ್ಸವದ ದಿನ ಕಾಣಿಕೆಯಾಗಿ ಸಮರ್ಪಿಸಬೇಕೆಂಬ ಹಂಬಲ ಮೂಡಿತು. ತಮ್ಮ ಬಯಕೆಯನ್ನು ವೆಂಕಟಪ್ಪನ ಮುಂದೆ ವ್ಯಕ್ತಪಡಿಸಲು, ಅವರು ಮಾಡಿಕೊಡಲೊಪ್ಪಿದರು. ಹಾಗೆ ಅರಸರಿಗಾಗಿ ಮಾಡಿದ ಚಿತ್ರ ಈಗ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯಲ್ಲಿದೆ.

೭

1924ರ ಡಿಸೆಂಬರ್ ತಿಂಗಳಿನಲ್ಲಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಬೆಳಗಾಂವಿಯಲ್ಲಿ ನಡೆಯಿತಷ್ಟೆ. ಅಧಿವೇಶನದ ಅಧ್ಯಕ್ಷರು ಮಹಾತ್ಮಾ ಗಾಂಧಿಯವರೇ. ಅದನ್ನು ಆದಷ್ಟು ಅದ್ಧೂರಿಯಿಂದ ನಡೆಸಬೇಕೆಂದು ಕರ್ನಾಟಕದ ಮುಂದಾಳುಗಳು ಬಯಸಿ, ಅಧಿವೇಶನದ ಸಮಯದಲ್ಲಿ ಸ್ವದೇಶೀ ಪ್ರದರ್ಶನದ ಅಂಗವಾಗಿ ಒಂದು ಸಂಗೀತ ಸಮ್ಮೇಳನವನ್ನೂ, ಒಂದು ಚಿತ್ರಕಲಾ ಪ್ರದರ್ಶನವನ್ನೂ ಏರ್ಪಡಿಸಿದ್ದರು. ಸಂಗೀತ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಮೈಸೂರು ಸಂಸ್ಥಾನದ ವಿದ್ವಾಂಸರಿಗೆ, ವೈಣಿಕ ಶಿಖಾಮಣಿ ಶೇಷಣ್ಣನವರೇ ಮೊದಲಾಗಿ, ಕರೆ ಬಂದಿದ್ದಿತು. ಕಾರ್ಯಕರ್ತರಾದ ಮುದವೀಡು ಕೃಷ್ಣರಾಯರು ಇದಕ್ಕಾಗಿ ಮೈಸೂರಿಗೆ ಬಂದಿದ್ದವರು ವೆಂಕಟಪ್ಪನ ಸ್ಟುಡಿಯೋಗೂ ಬಂದು (ಡಿಸೆಂಬರ್ ಹನ್ನೊಂದರಂದು) ಅವರನ್ನೂ ಆಹ್ವಾನಿಸಿದರು. ವೆಂಕಟಪ್ಪ ಬರಲಾರೆನೆಂದಾಗ ತಮ್ಮ ಚಿತ್ರಗಳನ್ನಾದರೂ ಅಧಿವೇಶನದ ಪ್ರದರ್ಶನಕ್ಕೆ ಕಳುಹಿಸಬೇಕೆಂದು ಕೇಳಿಕೊಂಡರು. ಪ್ರದರ್ಶನದ ಕಾರ್ಯದರ್ಶಿಯಾಗಿದ್ದ ಎಚ್.ಎಸ್. ಕೌಜಲಗಿ ಬೆಳಗಾಂವಿಯಿಂದ ಪತ್ರ ಬರೆದು ಡಿಸೆಂಬರ್ ತಿಂಗಳ ಹದಿನೈದನೆಯ ದಿನದೊಳಗಾಗಿ ಚಿತ್ರಗಳು ತಲುಪಬೇಕೆಂದು ತಿಳಿಸಿದರು. ಈ ಪತ್ರ ಮುಟ್ಟಿದ್ದು ಹದಿಮೂರರಂದು. ಕಾಲಾವಕಾಶ ತೀರ ಅಲ್ಪವೆಂದು ವೆಂಕಟಪ್ಪ ಚಿತ್ರಗಳನ್ನು ಕಳುಹಿಸುವುದೋ ಬೇಡವೋ ಎಂದು ಅನುಮಾನಿಸಿದರು. ಹದಿನಾರನೆಯ ತಾರೀಖು, ಕೌಜಲಗಿಯಿಂದ ಒಡನೆಯೇ ಚಿತ್ರಗಳನ್ನು ಕಳುಹಿಸಬೇಕೆಂದು ತಂತಿ ಬಂದಿತು. ಮರುದಿನ ಸ್ಥಳೀಯ ಕಾಂಗ್ರೆಸ್ ಕಚೇರಿಯಿಂದ ಯಾರೋ ಬಂದು ಚಿತ್ರಗಳನ್ನು ಬೆಳಗಾಂವಿಗೆ ಕಳುಹಿಸುವ ಹೊಣೆಯನ್ನು ತಾವು ಹೊರುವೆವೆಂದರು. ಆದರೆ ವೆಂಕಟಪ್ಪ ತಾವೇ ಚಿತ್ರಗಳನ್ನು ಪ್ಯಾಕ್‌ಮಾಡಿ, ರೈಲು ನಿಲ್ದಾಣಕ್ಕೆ ಹೋಗಿ ಕಳುಹಿಸಿ ಬಂದರು.

ಅವರು ಹೋಗುವುದು ಇನ್ನೂ ನಿಶ್ಚಿತವಿರಲಿಲ್ಲ. ಆ ತಿಂಗಳ ಒಂಬತ್ತನೆಯ ದಿನದಷ್ಟು ಮುಂಚೆಯೇ ವೀಣೆ ವೆಂಕಟಗಿರಿಯಪ್ಪ ಮೊದಲಾದವರು ವೆಂಕಟಪ್ಪ ತಮ್ಮೊಡನೆ, ಶೇಷಣ್ಣನವರ ಶಿಷ್ಯರಲ್ಲಿ ಒಬ್ಬರಾಗಿ, ಬೆಳಗಾಂವಿಗೆ ಬರಬೇಕೆಂದು ಒತ್ತಾಯ

ಮಾಡುತ್ತಿದ್ದರು. ಅಧಿವೇಶನದಲ್ಲಿ ಮಹಾತ್ಮಾಗಾಂಧಿಯವರ ಮುಂದೆ ಶೇಷಣ್ಣನವರ ವಿನಿಕೆ ಏರ್ಪಟ್ಟಿತು; ಉಳಿದ ಮೈಸೂರು ವಿದ್ವಾಂಸರಿಗೂ ಮಹಾತ್ಮರೆದುರು ತಮ್ಮ ಕೌಶಲವನ್ನು ತೋರಿಸುವ ಅವಕಾಶವನ್ನು ಕಲ್ಪಿಸುವುದೆಂದು ಗೊತ್ತಾಗಿದ್ದಿತು. ಆದರೆ ವೆಂಕಟಪ್ಪ ಒಪ್ಪಿರಲಿಲ್ಲ. ಹದಿನಾರನೆಯ ತಾರೀಖು ಶೇಷಣ್ಣನವರ ಮನೆಯಲ್ಲಿ ಶೇಷಣ್ಣನವರ ಒಡನಾಡಿಗಳೂ ವೆಂಕಟಪ್ಪನ ಮಿತ್ರರೂ ಆಗಿದ್ದ ಸಿ. ನರಸಿಂಹಯ್ಯ ಎಂಬುವರು ವೆಂಕಟಪ್ಪ ಬಂದೇ ಬರಬೇಕೆಂದು ಕೇಳಿಕೊಂಡಿದ್ದರು. ಪ್ರಯಾಣದ ವ್ಯವಸ್ಥೆಯೆಲ್ಲ ಈತನದೇ ಆಗಿದ್ದಿತು. ಇಪ್ಪತ್ತೆರಡನೆಯ ತಾರೀಖಿನಂದು ಅವರು ಮತ್ತೆ ವೆಂಕಟಪ್ಪನ ಸ್ಟುಡಿಯೋಗೆ ಬಂದು ವೆಂಕಟಪ್ಪ ಅಗತ್ಯವಾಗಿ ಬರಲೇಬೇಕೆಂದು ನಿರ್ಬಂಧಮಾಡಿದರು; ಪ್ರಯಾಣದ ಎಲ್ಲ ಸಿದ್ಧತೆಗಳನ್ನೂ ತಾವು ಮಾಡಿ, ಅಲ್ಲಿ ವೆಂಕಟಪ್ಪನವರ ವಸತಿ ಊಟೋಪಚಾರಗಳನ್ನು ತಾವೇ ಏರ್ಪಡಿಸುವುದಾಗಿ ಭರವಸೆಯಿತ್ತರು. ಆದರೆ, ಆಗಲೆ ಅಪರಿಗ್ರಹವ್ರತವನ್ನು ತೊಟ್ಟಿದ್ದ ವೆಂಕಟಪ್ಪ ''ನನ್ನ ಸ್ವಭಾವ ಬೇರೆಯವರನ್ನು ಯಾವ ವಿಚಾರಕ್ಕಾಗಿಯೂ ಅವಲಂಬಿಸುವುದಲ್ಲವೆಂದು ನಿಮಗೆ ತಿಳಿದಿದೆ. ನನ್ನ ಕೆಲಸದಿಂದ ಬಿಡುವು ದೊರೆತು, ಹಣದ ಅನುಕೂಲವಾದರೆ ನಾನೇ ಬರುತ್ತೇನೆ'' ಎಂದುಬಿಟ್ಟರು.

ಆ ತಿಂಗಳ ಇಪ್ಪತ್ತನಾಲ್ಕನೆಯ ದಿನ ಮೈಸೂರಿನಿಂದ ಹೊರಟ ಸಂಗೀತವಿದ್ವಾಂಸರ, ಮತ್ತು ಅವರ ಅಭಿಮಾನಿಗಳ ತಂಡದಲ್ಲಿ ವೆಂಕಟಪ್ಪನೂ ಸೇರಿದ್ದರು. ರೈಲು ಬಂಡಿ ಅರಸೀಕೆರೆ ಮೂಲಕವಾಗಿ ಬೆಳಗಾಂವಿಯನ್ನು ಮರುದಿನ ಮುಟ್ಟಿದಾಗ ಅವರಿಗೆಲ್ಲ ಅದ್ದೂರಿಯ ಸ್ವಾಗತ ದೊರೆಯಿತು. ವೆಂಕಟಪ್ಪನ ಬಿಡಾರ ಶೇಷಣ್ಣನವರಿಗಾಗಿ ಏರ್ಪಡಿಸಿದ್ದ ಗುಡಾರದಲ್ಲೇ ಇದ್ದಿತು. ಎಲ್ಲ ವ್ಯವಸ್ಥೆಗಳನ್ನೂ ತುಂಬ ಅಚ್ಚುಕಟ್ಟಾಗಿ ಮಾಡಿದ್ದರು. ಇಪ್ಪತ್ತಾರನೆಯ ದಿನ ಮಹಾತ್ಮಾಗಾಂಧಿಯವರ ದರ್ಶನವಾಯಿತು. ತುಂಬಿದ ಸಭೆಯಲ್ಲಿ ಸ್ವಾಗತಸಮಿತಿಯ ಅಧ್ಯಕ್ಷರಾಗಿದ್ದ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರ ಸ್ವಾಗತ, ಮಹಾತ್ಮರ ಪ್ರಾಸ್ತಾವಿಕಭಾಷಣ ಎರಡನ್ನೂ ವೆಂಕಟಪ್ಪ ಆಲಿಸಿದರು. ಮಧ್ಯಾಹ್ನ ಸ್ವದೇಶೀ ಪ್ರದರ್ಶನಾಲಯಕ್ಕೆ ಹೋದಾಗ ಅವರಿಗೊಂದು ಅಚ್ಚರಿ ಕಾದಿದ್ದಿತು. ತಾವು ಮೈಸೂರಿನಿಂದ ರೈಲಿನಲ್ಲಿ ಕಳುಹಿಸಿದ್ದ ಚಿತ್ರಗಳು ಇನ್ನೂ ಇಲ್ಲಿ ಸೇರಿಯೇ ಇರಲಿಲ್ಲ ! ಮನಸ್ಸಿಗೆ ತುಂಬ ಬೇಸರವಾಗಿ ವೆಂಕಟಪ್ಪ ತಮ್ಮ ಬಿಡಾರಕ್ಕೆ ಹಿಂದಿರುಗಿದರು. ಮರುದಿನ ಕಾಂಗ್ರೆಸ್ ಅಧಿವೇಶನಕ್ಕೆ ಹೋಗುವ ಉತ್ಸಾಹವೂ ಅವರಿಗೆ ಇರಲಿಲ್ಲ ; ಬೇರೆಲ್ಲಿಯೂ ಹೋಗುವ ಮನಸ್ಸೂ ಇರಲಿಲ್ಲ. ವೆಂಕಟಪ್ಪನೇನೋ ಬೆಳಗಾಂವಿಗೆ ಬಂದುದಾಯಿತು; ಚಿತ್ರಗಳು ಮಾತ್ರ ಬರಲಿಲ್ಲ !

ಅದಾದ ಮಾರನೆಯ ದಿನ ಮೈಸೂರಿನಿಂದ ಬಂದಿದ್ದ ಸಂಗೀತಗಾರರಿಗೆ ತಮ್ಮ ವಿನಿಕೆಗಳಿಗೆ ಅವಕಾಶ. ದೇಶ ನಾಯಕರೆಲ್ಲ ನೆರೆದಿದ್ದರು; ಮಹಾತ್ಮರು, ಮಹಮ್ಮದಾಲಿ, ಶೌಕತ್ ಆಲಿ, ಪಂಡಿತ ಮದನಮೋಹನ ಮಾಳವೀಯ, ಲಾಲಾ ಲಜಪತ್‌ರಾಯ್ ಮೊದಲಾದ ಗಣ್ಯರು. ಶೇಷಣ್ಣನವರೇ ಮೊದಲಾಗಿ ಹಿರಿಯ ವಿದ್ವಾಂಸರು ಸರದಿಯಂತೆ ತಂತಮ್ಮ ವಿನಿಕೆಗಳನ್ನು ನಡೆಸಿದರು. ನೆರೆದವರು ಮೆಚ್ಚಿಕೊಂಡರು. ಎಲ್ಲರ ಪರವಾಗಿ

ಮದನಮೋಹನ ಮಾಳವೀಯರು ಮೆಚ್ಚುಗೆ ಮಾತುಗಳನ್ನಾಡಿದರು. ಮಹಾತ್ಮರು ಕಾರ್ಯಗೌರವದಿಂದ ಸ್ವಲ್ಪ ಹೊತ್ತು ಇದ್ದು ಹೊರಟು ಹೋದರು. ಮರುದಿನ (ಮಹಾತ್ಮರ ಮೌನದಿನ) ಮಹಾತ್ಮರ ಆಶ್ರಮದಲ್ಲಿ ಅವರ ಸಮ್ಮುಖದಲ್ಲಿ ಶೇಷಣ್ಣನವರ ವೀಣಾ ಕಚೇರಿ ನಡೆಯಿತು; ಹತ್ತಿರ ಕೂತವರಲ್ಲಿ ವೆಂಕಟಪ್ಪನೂ ಒಬ್ಬರು. ಆಶ್ರಮದಿಂದ ಹೊರಟುಬರುವಾಗ ವೆಂಕಟಪ್ಪನ ಚತ್ರಿ ಕಾಣೆಯಾಗಿದ್ದಿತು. ಆಶ್ರಮದಲ್ಲಿ ಹೀಗೆ ಚತ್ರಿಯನ್ನು ಕದ್ದೊಯ್ದುದು ಅವರಿಗೆ ಅರ್ಥವಾಗಲಿಲ್ಲ ; ಇದನ್ನು ತಮ್ಮ ದಿನಚರಿಯಲ್ಲಿ ನಮೂದಿಸಿದ್ದಾರೆ.

ಮೈಸೂರಿನಿಂದ ಬಂದಿದ್ದವರೆಲ್ಲ ಮೂವತ್ತೊಂದನೆಯ ತಾರೀಖಿನಂದು ಬೆಳಗಾಂವಿಯನ್ನು ಬಿಟ್ಟುಹೊರಟರು. ವೆಂಕಟಪ್ಪ, ದೇವೇಂದ್ರಪ್ಪ, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಡಿ.ವಿ. ರಂಗಸ್ವಾಮಿ ಅಯ್ಯಂಗಾರ್ ಮೇಲ್ ಬಂಡಿಯನ್ನು ಹಿಡಿದು ಮೈಸೂರಿಗೆ ಬಂದರು; ಉಳಿದ ವಿದ್ವಾಂಸರು ಧಾರವಾಡದ ಕಡೆ ಹೋದರು. ವೆಂಕಟಪ್ಪನಿಗೆ ಬೆಳಗಾಂವಿ ಪ್ರಯಾಣದಿಂದ ಆದ ಒಂದು ಪ್ರಯೋಜನವೆಂದರೆ ಎಚ್.ಪಿ. ಕೃಷ್ಣರಾಯರ ಭೇಟಿ. ಮೈಸೂರಿನ ವೈಣಿಕರೂ, ಶಾಸ್ತ್ರಜ್ಞರೂ ಆದ ಕೃಷ್ಣರಾಯರು 'ಸೈಕಾಲಜಿ ಆಫ್ ಮ್ಯೂಸಿಕ್' ಎಂಬ ಸೊಗಸಾದ ಗ್ರಂಥವನ್ನು ಬರೆದಿದ್ದರು. ವೆಂಕಟಪ್ಪ ಕಲ್ಕತ್ತೆಯಲ್ಲಿದ್ದಾಗ 'ಶ್ರುತಿವೀಣೆ' ಯನ್ನು ಸಿದ್ಧಪಡಿಸಿದ್ದರಷ್ಟೆ. ಅದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಲು ವೆಂಕಟಪ್ಪ ಅದನ್ನು ಮೈಸೂರಿನಲ್ಲಿರುತ್ತಿದ್ದ ಕೃಷ್ಣರಾಯರಿಗೆ ಕಳುಹಿಸಿದ್ದರು. ಆಗಿನಿಂದ ಅವರಿಬ್ಬರ ನಡುವೆ ಪತ್ರವ್ಯವಹಾರ ನಡೆಯುತ್ತಿದ್ದಿತು; ಆದರೆ ಭೇಟಿಯಾದದ್ದಿಲ್ಲ ; ಮೈಸೂರಿನಿಂದ ಬೆಳಗಾಂವಿಗೆ ಅಧಿವೇಶನಕ್ಕೆ ಆಹ್ವಾನಿಸಲ್ಪಟ್ಟ ವಿದ್ವಾಂಸರಲ್ಲಿ ಅವರೂ ಒಬ್ಬರಾಗಿದ್ದರು. ಇಬ್ಬರ ಮೊದಲ ಭೇಟಿ ಬೆಳಗಾಂವಿಯಲ್ಲೇ ಆಯಿತು.

೮

ಮುಂದಿನ ವರ್ಷ ವೀಣೆಯನ್ನು ಕುರಿತು ಚೆನ್ನಾಗಿ ಅಧ್ಯಯನಮಾಡಿದ್ದ ವೆಂಕಟಪ್ಪ ಶಾಸ್ತ್ರಶುದ್ಧವಾದ ವೀಣೆಯೊಂದನ್ನು ಮಾಡಿಸಿಕೊಳ್ಳಬೇಕೆಂದು ಬಯಸಿ, ವೀಣೆಯನ್ನು ತಯಾರಿಸುವ ರುದ್ರಪ್ಪ ಎಂಬುವರನ್ನು ಕರೆಸಿ, ಅವರಿಗೆ ಅಳತೆಗಳನ್ನೂ ರೂಪವನ್ನೂ ತಿಳಿಯಹೇಳಿದರು. 1926ರ ಜನವರಿ ತಿಂಗಳ ಎರಡನೆಯ ದಿನದಂದು ರುದ್ರಪ್ಪ ಈ ವೀಣೆಯನ್ನು ವೆಂಕಟಪ್ಪನಿಗೆ ತಂದು ಕೊಟ್ಟರು; ವೀಣೆಯ ಬೆಲೆ ಐವತ್ತುರೂಪಾಯಿಗಳನ್ನು ವೆಂಕಟಪ್ಪ ಕೊಟ್ಟರು. ರುದ್ರಪ್ಪನಿಗೆ ವೀಣೆಯ ತಯಾರಿಕೆ ಮನೆತನದಲ್ಲಿ ಬಂದದ್ದು ; ಚೆನ್ನಾಗಿಯೆ ನುರಿತ ಕೈ ಅವರದ್ದು. ಆದರೆ ವೀಣೆ ನುಡಿಸಲು ಬಾರದು. ವೆಂಕಟಪ್ಪ ವೀಣೆಯನ್ನು ನುಡಿಸುತ್ತಿದ್ದಾಗ ಎದುರು ಕೂತಿದ್ದ ರುದ್ರಪ್ಪನಿಗೆ ಅವರ ಬಳಿ ವೀಣಾಭ್ಯಾಸ ಮಾಡಬಾರದೇಕೆ ಎನ್ನಿಸಿತು. ವೀಣೆಯನ್ನು ಕಲಿಸಿಕೊಡಲು ವೆಂಕಟಪ್ಪ ಒಪ್ಪಿದರು. ಬುಧವಾರ(ಹದಿನೇಳನೆಯ ದಿನ) ಒಳ್ಳೆಯ ದಿನವೆಂದೂ ಅಂದು ವೀಣೆಯ ಪಾಠ ಆರಂಭಿಸುವೆನೆಂದೂ ವೆಂಕಟಪ್ಪ ಹೇಳಿಕಳುಹಿಸಿದರು. ವೀಣೆಯ ರುದ್ರಪ್ಪ ವೆಂಕಟಪ್ಪನ ಮೊದಲ ಸಂಗೀತ ವಿದ್ಯಾರ್ಥಿ.

ಅವರ ಚಿತ್ರಕಲಾವಿದ್ಯಾರ್ಥಿಗಳು ಬಂದದ್ದು ಅದೇ ವರ್ಷವೇ. ಮಚ್ಚಲಿಪಟ್ಟಣದ ಆಂಧ್ರಜಾತೀಯ ಕಲಾಶಾಲೆಯ ಮುಖ್ಯಸ್ಥರಾಗಿದ್ದ ಸಿ. ಶ್ರೀನಿವಾಸರಾವ್ ವೆಂಕಟಪ್ಪನಿಗೆ ಪತ್ರವೊಂದನ್ನು ಬರೆದಿದ್ದು, ಆ ಶಾಲೆಯಲ್ಲಿ ಕಲಾವಿದ್ಯಾರ್ಥಿಗಳನ್ನು ತಯಾರುಮಾಡಲು ವೆಂಕಟಪ್ಪನನ್ನು ಆಹ್ವಾನಿಸಿದ್ದರಷ್ಟೆ. ವೆಂಕಟಪ್ಪ ಒಪ್ಪದಿದ್ದಾಗ, ಪ್ರಮೋದಕುಮಾರ ಚಟ್ಟೋಪಾಧ್ಯಾರೆಂಬುವರನ್ನು ನೇಮಿಸಿಕೊಂಡಿದ್ದರು. ಚಟ್ಟೋಪಾಧ್ಯಾಯರೂ ಅವನೀಂದ್ರನಾಥರ ವಿದ್ಯಾರ್ಥಿಯೇ; ಬಂಗಾಳದ ಶೈಲಿಯ ಕಲಾವಿದರೆ; ವೆಂಕಟಪ್ಪನಿಗಿಂತ ಕೆಲವು ವರ್ಷ ಕಿರಿಯ ವಿದ್ಯಾರ್ಥಿ. ಚಟ್ಟೋಪಾಧ್ಯಾಯರು ಮಚ್ಚಲಿಪಟ್ಟಣಕ್ಕೆ ಬಂದು ಈ ಶಾಲೆಗೆ ಅಧ್ಯಾಪಕರಾಗಿ ಸೇರಿದ್ದು 1920 ರಲ್ಲಿ. ಆದರೆ 1925ರಲ್ಲಿ ಅವರು ಈ ಶಾಲೆಯನ್ನು ಬಿಟ್ಟು ಬಡೋದೆಗೆ ಅಲ್ಲಿನ ಸರಕಾರೀ ಔದ್ಯಮಿಕಶಾಲೆಯ ಲಲಿತ ಕಲಾವಿಭಾಗದ ಮುಖ್ಯಸ್ಥರಾಗಿ ಹೋದರು. (ಮುಂದೆ ಅವರು ಅದನ್ನೂ ಬಿಟ್ಟು ಆಂಧ್ರದೇಶಕ್ಕೆ ಹಿಂದಿರುಗಿ, ಅಮರಾವತಿಯಲ್ಲಿ ನಿಂತು ತಮ್ಮದೇ ಕಲಾಶಾಲೆಯನ್ನು ನಡೆಸತೊಡಗಿದರು). ಮಚ್ಚಲಿಪಟ್ಟಣದ ಶಾಲೆಯಲ್ಲಿ ಅವರ ವಿದ್ಯಾರ್ಥಿಗಳಾಗಿದ್ದ ರಾಮಮೋಹನಶಾಸ್ತ್ರಿ ಮತ್ತು ಆನಂದಮೋಹನ ಶಾಸ್ತ್ರಿ ಎಂಬ ಸೋದರರು ಉತ್ತಮ ಕಲಾವಿದರಾಗುವ ಭರವಸೆಯಿದ್ದುದರಿಂದ, ಅವರಿಬ್ಬರನ್ನೂ ವೆಂಕಟಪ್ಪನ ಬಳಿಯೇ ಶಿಕ್ಷಣಕ್ಕೆಂದು ಕಳುಹಿಸುವ ಏರ್ಪಾಟನ್ನು ಆಂಧ್ರಜಾತೀಯ ವಿದ್ಯಾಪರಿಷತ್ತಿನವರು ಮಾಡಿದರು. ವೆಂಕಟಪ್ಪನೂ ಅವರನ್ನು ವಿದ್ಯಾರ್ಥಿಗಳನ್ನಾಗಿ ಸ್ವೀಕರಿಸಲು ಒಪ್ಪಿದರು.

ಶಾಸ್ತ್ರಿ ಸೋದರರು 1926ರ ಮಾರ್ಚ್ ತಿಂಗಳ ಇಪ್ಪತ್ತಾರನೆಯ ದಿನದಂದು ಮೈಸೂರಿಗೆ ಬಂದು ವೆಂಕಟಪ್ಪನನ್ನು ಕಂಡರು. ವೆಂಕಟಪ್ಪ ಅವರನ್ನು ತಮ್ಮ ಸ್ಟುಡಿಯೋಗೆ ಕರೆದೊಯ್ದು, ಅನಂತರ 'ಮೈಸೂರು ಹೋಟೆಲ್' ಎಂಬಲ್ಲಿ ಅವರ ಊಟ-ವಸತಿಗಳ ವ್ಯವಸ್ಥೆ ಮಾಡಿದರು. ಆ ತಿಂಗಳ ಮೂವತ್ತೊಂದನೆಯ ದಿನ ಅವರಿಗೆ ಕಲಾಶಿಕ್ಷಣ ಮೊದಲಾಯಿತು. ಇವರಲ್ಲಿ ಹಿರಿಯ ಸೋದರ, ರಾಮಮೋಹನ, ಕೆಲವು ದಿನಗಳಾದ ಮೇಲೆ ಮಚ್ಚಲಿಟ್ಟಣಕ್ಕೆ ಹಿಂದಿರುಗಿ ಅಲ್ಲಿನ ಕಲಾಶಾಲೆಯಲ್ಲೇ ಶಿಕ್ಷಕನಾಗಿ ಸೇರಿಕೊಂಡ. ಆನಂದಮೋಹನ ಮಾತ್ರ ಹಲವು ತಿಂಗಳುಗಳು ವೆಂಕಟಪ್ಪನ ಬಳಿ ಚಿತ್ರಕಲೆಯನ್ನು ತದೇಕ ನಿಷ್ಠೆಯಿಂದ ಕಲಿತು, ಆರೋಗ್ಯ ಸುಧಾರೆಗೆಂದು ಮದರಾಸಿಗೆ ಹೋದವನು ಅಲ್ಲಿಯೇ ಕ್ಷಯರೋಗಕ್ಕೆ ತುತ್ತಾಗಿ ತೀರಿಕೊಂಡ (1929ರ ಮೊದಲ ಭಾಗದಲ್ಲಿ). ಈ ವಿದ್ಯಾರ್ಥಿಗಳಿಬ್ಬರೂ ವಿನಯಶೀಲರು, ಸಭ್ಯರು, ಪ್ರತಿಭಾಶಾಲಿಗಳು, ವಿದ್ಯಾ ತತ್ಪರರು; ವೆಂಕಟಪ್ಪನು ಅವರನ್ನು, ಅದರಲ್ಲೂ ಆನಂದಮೋಹನನ್ನು, ತುಂಬ ಮೆಚ್ಚಿಕೊಂಡಿದ್ದರು. ಆನಂದಮೋಹನಶಾಸ್ತ್ರಿಯು ಉತ್ತಮ ಕಲೆಗಾರನಾಗಿ ತಮ್ಮ ಹೆಸರನ್ನು ಉಳಿಸುವನೆಂಬ ಆಸೆ ವೆಂಕಟಪ್ಪನಿಗಿದ್ದಿತು. ಅವನ ಸಾವು ಅವರಿಗೆ ತೀರದ ದುಃಖಕ್ಕೆ ಕಾರಣವಾಯಿತು.

ವೆಂಕಟಪ್ಪನಿಗೆ ತಮ್ಮ ಬಳಿ ಚಿತ್ರಕಲೆ, ಸಂಗೀತ ಎರಡೂ ವಿಭಾಗಗಳಲ್ಲಿ ಶಿಕ್ಷಣಕ್ಕೆಂದು ಬರುವವರ ಸಲುವಾಗಿ ಒಂದು ಕಲಾ ಶಾಲೆಯನ್ನು, ಅದಕ್ಕೆ ಸಂಬಂಧಿಸಿದಂತೆ ಒಂದು ಚಿತ್ರಶಾಲೆಯನ್ನೂ ತೆರೆಯಬೇಕೆಂಬ ಮನಸ್ಸಾದುದು ಈ ಸಮಯದಲ್ಲೇ. ಈ ಉದ್ಯಮಕ್ಕೆ ಮೈಸೂರಿಗಿಂತ ಬೆಂಗಳೂರು ಉತ್ತಮವಾದ ಸ್ಥಳವೆಂದು ವಿಶ್ವಾಸಿಗಳು ಸೂಚಿಸಿದರು.

ಅರಸೊತ್ತಿಗೆ ಮೈಸೂರಿನಲ್ಲಿದ್ದರೂ, ಆಡಳಿತದ ರಾಜಧಾನಿ ಆಗಲೂ ಬೆಂಗಳೂರೇ; ದೊಡ್ಡ ಊರು, ಹಲವು ಉದ್ಯಮಗಳ ನೆಲೆಮನೆ, ಸರಕಾರದ ಕೇಂದ್ರ, ರಸಿಕರ ತಾಣ. ಈ ವಿಚಾರವಾಗಿ ಅವರು ತಮ್ಮ ಹಲವರು ಮಿತ್ರರನ್ನು (ಡಿ.ವಿ. ಗುಂಡಪ್ಪನವರು, ನೇತ್ರವೈದ್ಯರಾಗಿದ್ದ ಬಿ.ಕೆ. ನಾರಾಯಣರಾಯರು, ಉದ್ಯಮಿಗಳೂ ಸರಕಾರದ ಉನ್ನತಾಧಿಕಾರಿಗಳೂ ಆಗಿದ್ದ ಎಸ್.ಜಿ. (ಸೋಸಲೆ ಗರಳಪುರಿ) ಶಾಸ್ತ್ರಿ, ಪ್ರಾಕ್ತನ ವಿದ್ಯೆಯಲ್ಲಿ ಅಧಿಕಾರಿಗಳೂ ತಜ್ಞರೂ ಆಗಿದ್ದ ಬಿ. ವೆಂಕೋಬರಾಯರು ಮೊದಲಾದವರನ್ನು) ಕಂಡು ಚರ್ಚಿಸಲು ಅವರೆಲ್ಲ ಬೆಂಗಳೂರಿನಲ್ಲಿ ಕಲಾಶಾಲೆಯನ್ನು ಆರಂಭಿಸುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟರು.

ವೆಂಕಟಪ್ಪ ಇದಕ್ಕಾಗಿ 1926ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿಗೆ ಬಂದು ಮಲ್ಲೇಶ್ವರಂ ವಿಸ್ತರಣದಲ್ಲಿ ತಾವು ಫೆಬ್ರುವರಿಯ ಮಧ್ಯಭಾಗದಲ್ಲಿ ನೋಡಿದ್ದ ಮತ್ತು ವೈ.ವಿ. ಕೃಷ್ಣಮೂರ್ತಿಯವರಿಗೆ ಸೇರಿದ್ದ ಎರಡು ನಿವೇಶನಗಳನ್ನು ಅವರ ಅಳಿಯ ಎಂ.ಎಸ್. ಕೃಷ್ಣರಾಯರ ಮೂಲಕ ಕೊಂಡುಕೊಂಡರು. ಏಪ್ರಿಲ್ ಹದಿನೈದನೆಯ ದಿನ ಈ ನಿವೇಶನಗಳು ವೆಂಕಟಪ್ಪನ ಹೆಸರಿಗೆ ವಿಧ್ಯುಕ್ತವಾಗಿ ದಾಖಲಾದುವು. ಆದರೆ ಒಡನೆಯೆ ಅಲ್ಲಿ ಕಲಾಶಾಲೆಯನ್ನು ಕಟ್ಟುವ ಆಲೋಚನೆಯೇನು ಅವರಿಗಿರಲಿಲ್ಲ ; ಮೈಸೂರನ್ನು ಬಿಡುವಂತೆಯೂ ಇರಲಿಲ್ಲ . ತಮ್ಮದೆ ಕಲಾಶಾಲೆಯನ್ನು ಕಾಲಾಂತರದಲ್ಲಿ ವ್ಯವಸ್ಥೆ ಮಾಡುವ ಸಂಕಲ್ಪವೇನೋ ಇದ್ದಿತು.

ಹೀಗೆ ಬೆಂಗಳೂರಿನಲ್ಲಿ ಒಂದು ಸ್ಥಳವನ್ನು ತಮ್ಮದಾಗಿ ಮಾಡಿಕೊಂಡು ವೆಂಕಟಪ್ಪ ಮೈಸೂರಿಗೆ ಹಿಂದಿರುಗಿದಮೇಲೆ, ಮುಂದಿನ ತಿಂಗಳು ದಕ್ಷಿಣದ ಗಿರಿಧಾಮವಾದ ಉದಕಮಂಡಲಕ್ಕೆ ಹೋದರು. 'ಊಟಿ'ಯೆಂದು ಮೊಟಕು ಹೆಸರನ್ನು ತಳೆದ ಈ ಊರು ಬೆಟ್ಟಗಾಡಾಗಿದ್ದು ತಣ್ಣನೆಯ ಹವೆಯಿಂದಾಗಿ ಬೇಸಗೆಯ ತಾಣವೆಂದು ಪ್ರಸಿದ್ಧವಾಗಿದ್ದಿತು. ರಾಜರೂ, ಶ್ರೀಮಂತರೂ,ಅಧಿಕಾರಿಗಳೂ ಬೇಸಗೆಯ ದಿನಗಳಲ್ಲಿ ಈ ಊರಿಗೆ ಬಂದು ಅಲ್ಲಿ ತಂಗುತ್ತಿದ್ದರು; ದೇಶ-ವಿದೇಶಗಳವರೆಲ್ಲ ಇಲ್ಲಿ ಬೇಸಗೆಯ ದಿನಗಳನ್ನು ಕಳೆಯುತ್ತಿದ್ದರು. ಅಲ್ಲಿನ ಪ್ರಕೃತಿಯ ಸೌಂದರ್ಯ ವಿಶೇಷವಾದ ಆಕರ್ಷಣೆ. ಮೈಸೂರಿಗೆ ಹತ್ತಿರವಿದ್ದುದರಿಂದ, ಮೈಸೂರಿನ ಬೇಸಗೆ ತೀಕ್ಷ್ಣವಾಗಿದ್ದುದರಿಂದ, ವೆಂಕಟಪ್ಪನೂ ಬೇಸಗೆಯನ್ನು ಕಳೆಯಲು ಅಲ್ಲಿಗೆ ಹೋಗುವ ವಾಡಿಕೆಯಿದ್ದಿತು. 1926ರ ಮೇ ಒಂಬತ್ತರಂದು ವೆಂಕಟಪ್ಪ ಮೈಸೂರಿನಿಂದ ರೈಲು ಹತ್ತಿ ಉದಕಮಂಡಲಕ್ಕೆ ಹೊರಟು, ಅಕ್ಟೋಬರ್ ಇಪ್ಪತ್ತಾರನೆಯ ತಾರೀಖಿನವರೆಗೂ ಅಲ್ಲಿಯೇ ಇದ್ದರು. ಅಲ್ಲಿನ ಪ್ರಕೃತಿಯ ವಿವಿಧ ಭಂಗಿಗಳನ್ನು ಜಲವರ್ಣದಲ್ಲಿ ಚಿತ್ರಿಸುವ ಉದ್ದೇಶ ಅವರದ್ದು . ಜೊತೆಗೆ ವೀಣೆಯನ್ನು ಕೊಂಡೊಯ್ದಿದ್ದರು. ಹಗಲೆಲ್ಲ ಅಲೆದಾಡಿ ನಿಸರ್ಗದ ಚೆಲುವಿನ ಚಿತ್ರಣ; ರಾತ್ರಿ ಬಿಡಾರದಲ್ಲಿ ಕುಳಿತು ನಾದದ ಬೆಡಗಿನ ವಾದನ. ಹೀಗೆ ಚಿತ್ರ-ಸಂಗೀತಗಳೆರಡರ ಸಮನ್ವಯ.

ಅಲ್ಲಿ ವೆಂಕಟಪ್ಪನ ಮನಸೆಳೆದ ಸ್ಥಳ ಎಲ್ಕ್-ಹಿಲ್ ಎಂಬುದು. ಮತ್ತೆ ಮತ್ತೆ ಹೋಗುತ್ತಿದ್ದರು; ಅದರ ಅನೇಕ ಚಿತ್ರಗಳನ್ನು ಮಾಡಿದರು. ಅಲ್ಲಿ ಕುಳಿತು ಸೂರ್ಯೋದಯ,

ನಡುಹಗಲು, ಸಂಜೆ, ರಾತ್ರಿ, ಮಳೆ, ಮೋಡಗಳಲ್ಲಿ ಪ್ರಕೃತಿಯ ಪ್ರಕಾರಗಳನ್ನು ನೋಡಿ, ಅನುಭವಿಸಿ, ಆನಂದಿಸಿ, ಅಧ್ಯಯನಮಾಡಿ ಚಿತ್ರಿಸಿದರು. ಮುಂಜಾನೆಯಿಂದ ನಡುರಾತ್ರಿಯವರೆಗೆ ನಿಸರ್ಗ ಮಾರ್ಪಡುವ ಬಗೆಯನ್ನು ಜಲವರ್ಣದಲ್ಲಿಳಿಸಬೇಕೆಂಬುದು ಅವರ ಹಂಬಲ. ಈ ಪ್ರಕೃತಿ ಚಿತ್ರಗಳು ಅವರಿಗೇ ತುಂಬ ಪ್ರಿಯವಾದುವು. ಅವನ್ನು ಯಾರಿಗೂ ಮಾರಲು ಅವರು ಒಪ್ಪರು. ಅವೆಲ್ಲ ಮುಂದೆ ತಾವು ಬೆಂಗಳೂರಿನಲ್ಲಿ ತೆರೆಯುವ ಕಲಾಶಾಲೆಗಾಗಿ, ಅಲ್ಲಿ ಕಲಿಯುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಎಂದು ಅವೆಲ್ಲವನ್ನೂ ಕಾದಿಟ್ಟಿದ್ದರು.

ಅವರು ಊಟಿಯಲ್ಲಿರುವಾಗ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯರ ಸತ್ಸಂಗ ಅವರಿಗೆ ದೊರಕಿತು; ಕೆಲಕಾಲ ಅವರ ಪತ್ನಿ ಕಮಲಾದೇವಿ ಚಟ್ಟೋಪಾಧ್ಯಾಯರೂ ಬಂದಿದ್ದರು. ಕಲಾವಿಮರ್ಶಕ ಜಿ. ವೆಂಕಟಾಚಲಂ ಕೂಡ ಆಗ ಸ್ವಲ್ಪ ಕಾಲ ಅಲ್ಲಿದ್ದರು. ಆದರೆ ಈ ಅವಧಿಯಲ್ಲಿ ಅವರ ಮನಸ್ಸನ್ನು ಕಲಕುವ, ಹೃದಯವನ್ನು ಒಡೆಯುವ ಪ್ರಸಂಗವೊಂದು ಜರುಗಿಹೋಯಿತು. ಅದು ಮೈಸೂರಿನಲ್ಲಿ ತಮ್ಮ ಮೆಚ್ಚಿನ ಗುರು ಶೇಷಣ್ಣನವರ ಸಾವು. 1926ರ ಜುಲೈತಿಂಗಳ ಇಪ್ಪತ್ತೈದನೆಯ ತಾರೀಖು (ಅಕ್ಷಯ ಸಂವತ್ಸರದ ಆಷಾಢ ಶುದ್ಧ ಪೂರ್ಣಿಮೆ ಭಾನುವಾರ) ಅವರು ತೀರಿಕೊಂಡರೆಂದು ಮೈಸೂರಿನಿಂದ ವೆಂಕಟಪ್ಪನ ಮಿತ್ರರು ಸಿ. ಆನಂದರಾವ್ ಎಂಬುವರು ಪತ್ರಬರೆದರು. ಆ ಪತ್ರವನ್ನು ಓದಿ ತಮಗಾದ ದುಃಖವನ್ನು ದಿನಚರಿಯಲ್ಲಿ ತೋಡಿಕೊಂಡಿದ್ದಾರೆ.

ಪತ್ರವನ್ನು ನೋಡಿದೊಡನೆ ಎಲ್ಲಿಲ್ಲದ ದುಃಖ ಕಟ್ಟೆಯೊಡೆದು ಬಂದು ಕಣ್ಣೀರು ಧಡಧಡನೆ ಸುರಿಯಿತು. ನಿಲ್ಲಲಾರದೆ ಹೋಟೆಲಿಗೆ ಬಂದು, ತಲೆಯ ಮೇಲೆ ತಣ್ಣೀರು ಸುರಿದುಕೊಂಡು ಸಚೇಲಸ್ನಾನಮಾಡಿದರು. ವಿದ್ಯಾಗುರುವೆಂದರೆ ತಂದೆಯಂತೆಯೆ ತಾನೆ? ಅಂದು ಊಟವೂ ಇಲ್ಲ, ಉಪಹಾರವೂ ಇಲ್ಲ. ಗುರುಗಳ ವಿಯೋಗವನ್ನು ನೆನಸಿಕೊಂಡು ಅಳುತ್ತಲೇ ದಿನವನ್ನೆಲ್ಲ ಕಳೆದರು. ಇನ್ನು ಅಷ್ಟು ವಾತ್ಸಲ್ಯವನ್ನು ತೋರಿಸಿದ ಗುರು ಎಲ್ಲಿ ದೊರಕಿಯಾರು? ಅಷ್ಟು ಪ್ರತಿಭೆಯುಳ್ಳ ವೈಣಿಕ ಎಲ್ಲಿಂದ ಬಂದಾನು? ಸಂಜೆ ಐದೂವರೆ ಗಂಟೆಯ ಸುಮಾರಿಗೆ ಅಲ್ಲಿ ಅವರ ಒಡನಾಡಿಯಾಗಿದ್ದ ನಂಜಪ್ಪ ಚೆಟ್ಟಿಯಾರರು ಬಂದು ಸಮಾಧಾನಪಡಿಸಲು ಯತ್ನಿಸಿದರು; ಆದರೆ ವೆಂಕಟಪ್ಪನ ದುಃಖವನ್ನು ತಡೆಯಲು ಅವರಿಂದ ಆಗದೆ ಹೋಯಿತು; ಕಣ್ಣೀರ ಹೊಳೆ ನಿಲ್ಲಲೆ ಇಲ್ಲ. ರಾತ್ರಿಯೂ ಊಟವಿಲ್ಲ; ನಿದ್ರೆಯಿಲ್ಲ. ಮರುದಿನವೂ ಇದೇ ಗುಂಗು, ಗುರುಗಳದ್ದೇ ನೆನಪು ಮತ್ತೆ ಮತ್ತೆ, ಎಲ್ಲವೂ ನಶ್ವರವೆಂಬ ದುಗುಡ ಒತ್ತಿಬಂದು ಏನೊಂದೂ ಬೇಡವಾಯಿತು. ದಿನವೆಲ್ಲ ಹಾಸಿಗೆಯ ಮೇಲೆ ಹೊರಳಾಡುತ್ತಲೇ ಇದ್ದರು. ಸಂಜೆ ಎದ್ದು ಕೋಣೆಯಿಂದ ಹೊರಟು ಗೊತ್ತುಗುರಿಯಿಲ್ಲದೆ ಅಲೆದಾಡಲು ತೊಡಗಿದರು. ಕೂನೂರು ರಸ್ತೆಯಲ್ಲಿ ಇಪ್ಪತ್ತೊಂಬತ್ತನೆಯ ಮೈಲಿಗಲ್ಲಿನವರೆಗೂ ಒಂಟಿಯಾಗಿ ನಡೆದು ಹೋದರು, ಅಲ್ಲಿಂದ ಮತ್ತೆ ಊರಕಡೆ ಹಿಂದಿರುಗಿ ಬರುತ್ತ ದಾರಿಯಲ್ಲಿ ಬೊಟಾನಿಕಲ್ ಗಾರ್ಡನ್‌ನಲ್ಲಿ ಕುಳಿತರು. ರಾತ್ರಿ ಎಂಟೂವರೆ ಗಂಟೆಯ ಸಮಯಕ್ಕೆ ತಮ್ಮ ಕೋಣೆಗೆ ಹಿಂದಿರುಗಿ ಮಲಗಿಬಿಟ್ಟರು. ಮಾರನೆಯ ದಿನವೂ ದುಗುಡವನ್ನು ಮರೆಯಲಾಗಲಿಲ್ಲ.

ಆಮೇಲೆ ಒಂದೆರಡು ದಿನಗಳು ಕಳೆದ ಮೇಲೆ ಮನಸ್ಸು ಕೊಂಚಮಟ್ಟಿಗೆ ಸ್ಥಿಮಿತಕ್ಕೆ ಬಂದು ಮತ್ತೆ ತಮ್ಮ ಚಿತ್ರಕರ್ಮದಲ್ಲಿ ಎಂದಿನಂತೆ ತೊಡಗುವುದಾಯಿತು.

ಆ ವರ್ಷದ ಅಕ್ಟೋಬರ್ ತಿಂಗಳ ಕಡೆಯ ಭಾಗದಲ್ಲಿ ವೆಂಕಟಪ್ಪ ಊಟಿಯಿಂದ ಹಿಂದಿರುಗಿದ ಮೇಲೆ ವೀಣಾಭ್ಯಾಸವನ್ನು ಒತ್ತಟ್ಟಿಗಿಟ್ಟು ತಮ್ಮ ಸ್ಟುಡಿಯೋದಲ್ಲಿಯೆ ಹೆಚ್ಚು ಕಾಲ ಕಳೆಯಲಾರಂಭಿಸಿದರು. ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ಇರಿಸಲೆಂದು ಕೆಲವಾರು ಪ್ಲಾಸ್ಟರ್ ಆಫ್ ಪ್ಯಾರಿಸ್ ಫಲಕಗಳನ್ನು ಮಾಡಲು ತಮ್ಮನ್ನು ತಾವು ತೊಡಗಿಸಿಕೊಂಡರು. ಜೇಡಿಮಣ್ಣಿನಲ್ಲಿ ಮೊದಲು ಅರ್ಧಶಿಲ್ಪ ಪದ್ಧತಿಯಲ್ಲಿ (ಬಾಸ್ ರಿಲೀಫ್) ದೊಡ್ಡ ದೊಡ್ಡ ಚಿತ್ರಗಳನ್ನು ಬಿಡಿಸುವುದು; ಉಬ್ಬುತಗ್ಗುಗಳನ್ನು ನೇವರಿಸಿ ನೆರಳು-ಬೆಳಕುಗಳಲ್ಲಿ ಸರಿಕಾಣುವಂತೆ ಮಾಡಿ ಮುಗಿಸುವುದು. ಅನಂತರ ಅದನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನಲ್ಲಿ ಎರಕ ಹುಯ್ಯುವುದು. ಎರಕ ಹುಯ್ಯುವಾಗಲಂತೂ ಊಟ ವಿಶ್ರಾಂತಿಗಳಿಲ್ಲದೆ ಮುಂಜಾನೆಯಿಂದ ಸಂಜೆಯವರೆಗೆ ಅದರಲ್ಲೇ ತೊಡಗಿರಬೇಕು. ಆ ಕಾಲಕ್ಕೆ ಅವರು ಅರಮನೆ ವೈದ್ಯಶಾಲೆಯ ಮೇಲ್ಭಾಗದ ಕಟ್ಟಡದಲ್ಲಿರುತ್ತಿದ್ದರು; ಅದನ್ನು ಆಗ ಮೋತೀಖಾನೆಯೆಂದು ಕರೆಯುತ್ತಿದ್ದರು.

೬

1928ರ ಮಧ್ಯಭಾಗದಲ್ಲಿ ಅವರ ಕೃತಿಗಳಲ್ಲಿ ಕಲಶಪ್ರಾಯವಾಗಿರುವ ಫಲಕ ಸಿದ್ಧವಾಯಿತು. ಕಾಳಿದಾಸನ ಶಾಕುಂತಲನಾಟಕದಲ್ಲಿ ನಾಲ್ಕನೆಯ ಅಂಕದಲ್ಲಿ ಬರುವ ಮನಕರಗುವ ದೃಶ್ಯ; ಸಾಕುಮಗಳಾದ ಶಕುಂತಲೆಯನ್ನು ಕಣ್ವಮುನಿಗಳು ಗಂಡನ ಮನೆಗೆ ಕಳುಹಿಸುತ್ತ ಕಣ್ಣೀರು ಸುರಿಸುವ ಸಂದರ್ಭ; ಶಕುಂತಲೆಯ ಸಾಕುಪ್ರಾಣಿಯಾದ ಜಿಂಕೆ ಅವಳನ್ನು ಬಿಟ್ಟಿರಲಾರದೆ ಸೆರಗು ಹಿಡಿದು ಎಳೆಯುತ್ತಿರುವ ವಿವರ. ಈ ಕೃತಿಯ ಮೃಣ್ಮಯ ಫಲಕ ಸೆಪ್ಟೆಂಬರ್ ಹದಿನಾರರಂದು ಪೂರೈಸಿ, ಇಪ್ಪತ್ತೆಂಟರಂದು ಅದರ ಪಡಿಯಚ್ಚು ಸಿದ್ಧವಾಗಿ, ಮರುದಿನ ಮುಂಜಾನೆಯಿಂದ ಸಂಜೆ ಏಳು ಗಂಟೆಯವರೆಗೆ ಆಹಾರವಾಗಲಿ ವಿಶ್ರಾಂತಿಯಾಗಲಿ ಇಲ್ಲದೆ ದುಡಿದ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಫಲಕ ಮೂಡಿಬಂದಿತು. ಇದು ಮಹಾರಾಜರ ಮೆಚ್ಚುಗೆಗೆ ಪಾತ್ರವಾಗಿ, ಈಗ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿದೆ.

ಮರುವರ್ಷ ಮಾರ್ಚ್‌ತಿಂಗಳಲ್ಲಿ ಮತ್ತೆ ಉದಕಮಂಡಲಕ್ಕೆ ಹೋಗಿ ಸೆಪ್ಟೆಂಬರ್ ತಿಂಗಳ ಕಡೆಯ ಭಾಗದವರೆಗಿದ್ದರು. ನೀಲಪರ್ವತದ ಹಲವು ರಮ್ಯ ನೋಟಗಳನ್ನು ಚಿತ್ರಿಸಿದರು. ಈ ಬಾರಿ ಅವರ ಮನಸೆಳೆದದ್ದು ಚರ್ಚ್‌ಹಿಲ್ ಮೇಲಣ ದೃಶ್ಯ. ಅವರು ಹೀಗೆ ಚಿತ್ರಕರ್ಮದಲ್ಲಿ ತೊಡಗಿದ್ದಾಗ ಒಮ್ಮೆ (ಜೂನ್ ತಿಂಗಳಲ್ಲಿ) ಸುಪ್ರಸಿದ್ಧ ಶ್ರೀಮಂತರೂ, ಉದ್ಯಮಿಗಳೂ, ಶಿಕ್ಷಣ ಪೋಷಕರೂ, ರಸಿಕರೂ ಆಗಿದ್ದ ಸರ್ ಅಣ್ಣಾಮಲೆ ಚೆಟ್ಟಿಯಾರರು ಇವರ ಕೃತಿರಚನೆಯ ಬಗೆಯನ್ನು ಕಂಡು ಕಲಾವಿದರ ಸ್ನೇಹವನ್ನು ಬಯಸಿದರು. ವೆಂಕಟಪ್ಪನ ಕೃತಿಗಳನ್ನು ಕೊಳ್ಳುವ ಬಯಕೆ ಅವರಿಗಿದ್ದಿತು. ಆದರೆ ಆಗ ವೆಂಕಟಪ್ಪನ ಬಳಿಯಿದ್ದುದೆಲ್ಲ ಅರ್ಧಮರ್ಧ ಸಿದ್ಧವಾಗಿದ್ದುವು. ಮೇಲಾಗಿ ಊಟಿಯ

ನಿಸರ್ಗಚಿತ್ರಗಳನ್ನು ಮಾರುವ ಮನಸ್ಸು ವೆಂಕಟಪ್ಪನಿಗಿರಲಿಲ್ಲ ; ಅವೆಲ್ಲ ತಾವು ಬೆಂಗಳೂರಿನಲ್ಲಿ ವ್ಯವಸ್ಥೆಮಾಡಲಿರುವ ಕಲಾಶಾಲೆಗಾಗಿ ಎಂದು ಮೊದಲೇ ನಿಶ್ಚಯಮಾಡಿಕೊಂಡಿದ್ದರಷ್ಟೆ. ಅಣ್ಣಾಮಲೆ ಚೆಟ್ಟಿಯಾರರೊಂದಿಗೆ ವೆಂಕಟಪ್ಪ ತಮ್ಮ ಕಲಾಶಾಲೆಯ ಆಲೋಚನೆಯನ್ನು ಚರ್ಚಿಸಿದರು. ಕಲಾಶಾಲೆಯಲ್ಲಿ ವಿಧ್ಯುಕ್ತವಾಗಿ ಹಲವಾರು ವರ್ಷಗಳ ಉಚಿತವಾದ ಶಿಕ್ಷಣವನ್ನು ಒದಗಿಸುವ ವಿಚಾರ ಕೇಳಿ ಚೆಟ್ಟಿಯಾರರು ತುಂಬ ಸಂತೋಷಪಟ್ಟರು. ವೆಂಕಟಪ್ಪನ ಅಪರಿಗ್ರಹವ್ರತದ ನಿರ್ಬಂಧವಿರದಿದ್ದರೆ, ತಮ್ಮ ದುಡಿಮೆಯ ಹಣದಿಂದಲೆ ಕಲಾಶಾಲೆಯನ್ನು ಕಟ್ಟಬೇಕೆನ್ನುವ ನಡೆಸಬೇಕೆನ್ನುವ ಹಟ ಇರದಿದ್ದರೆ, ಚೆಟ್ಟಿಯಾರರು ಆರ್ಥಿಕವಾಗಿ ನೆರವಾಗುತ್ತಿದ್ದರು.

ಈ ಬಾರಿ ಅವರು ಉದಕಮಂಡಲದಲ್ಲಿರುವಾಗ, ಅಲ್ಲಿ ಸ್ಥಳವನ್ನು ಕೊಂಡುಕೊಳ್ಳುವ ಏರ್ಪಾಟುಮಾಡಿದರು. ಇದು ಯಾತಕ್ಕೆಂದು ತಿಳಿದುಬರುವುದಿಲ್ಲ. ಉದಕಮಂಡಲದ ಬೆಟ್ಟಗಳನ್ನು, ಗಿಡಮರಗಳನ್ನು, ಅಲ್ಲಿನ ಪ್ರಕೃತಿವೈಚಿತ್ರ್ಯವನ್ನು ಅವರು ಮೆಚ್ಚಿ ಕೊಂಡಿದ್ದರೆಂಬುದೇನೋ ದಿಟ. ಆದರೆ ಅಲ್ಲಿ ತಮ್ಮದೆ ಎಂದಾದ ಜಾಗದಲ್ಲಿ ಮಾಡ ಬೇಕೆಂದಿದ್ದುದು ಏನು? ಅಂತೂ ಅಲ್ಲಿನ ಬ್ರೆಕ್ಸ್ ಮೆಮೋರಿಯಲ್ ಸ್ಕೂಲಿನ ಮುಖ್ಯಸ್ಥ ರಾಗಿದ್ದ ರೆವೆರೆಂಡ್ ಡಬ್ಲ್ಯು.ಎಂ. ತಿಯೋಡೊರ್ ಎಂಬಾತನಿಗೆ ಸೇರಿದ್ದ ವೆಲ್‌ಬ್ರಿಕ್ ಎಂಬಲ್ಲಿ ಎಕರೆಗೆ ಮೂರುಸಾವಿರದ ಐನೂರು ರೂಪಾಯಿಗಳಂತೆ ಎಕರೆಯ ಒಂದು ಭಾಗಕ್ಕೆ ಒಂದು ಸಾವಿರ ರೂಪಾಯಿಗಳನ್ನು ಮೈಸೂರಿಗೆ ಹಿಂದಿರುಗಿದೊಡನೆ ಕಳುಹಿಸಿದರು. ಈ ಸ್ಥಳದ ವಿಚಾರ ಮುಂದೇನಾಯಿತೋ ತಿಳಿಯದು.

ಉದಕಮಂಡಲದಿಂದ ಮೈಸೂರಿಗೆ ಸೆಪ್ಟಂಬರ್ ಇಪ್ಪತ್ತಮೂರರಂದು ಹಿಂದಿರುಗಿದ ಮೇಲೆ ಮತ್ತೆ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ಗೋಡೆಗಳಿಗೆ ಆನಿಸಿ ಇರಿಸುವಂತೆ ಹಲವಾರು ಅರ್ಧಶಿಲ್ಪ ಫಲಕಗಳ (ಬಾಸ್ ರಿಲೀಫ್) ಕೆಲಸದಲ್ಲಿ ತೊಡಗಿದರು. ಸಿದ್ಧಾರ್ಥನ ರಾಜ್ಯ ಪರಿತ್ಯಾಗದ ಚಿತ್ರಣ ಈ ಕಾಲದಲ್ಲೆ ಸಿದ್ಧವಾಯಿತು. ಅಜಂಟ ಗುಹೆಯಲ್ಲಿನ ಭಿತ್ತಿಚಿತ್ರಗಳಲ್ಲೊಂದಾದ ಬುದ್ಧನ ಪಾರಿವ್ರಾಜ್ಯ (ಭಿಕ್ಷಾಟನೆ)ವನ್ನು ಆಧರಿಸಿ ಒಂದು ಅರ್ಧಶಿಲ್ಪ ಫಲಕವನ್ನು ಆರಂಭಿಸಿದ್ದರು. ಮರುವರ್ಷದ ಮೊದಲ ತಿಂಗಳಲ್ಲಿ (26ನೆಯ ತಾರೀಖು) ಅವರ ಸ್ಟುಡಿಯೋಗೆ ಮಹಾರಾಜರು ಭೇಟಿ ಕೊಟ್ಟುದು ಅವರಿಗೆ ತುಂಬ ಸಂತೋಷವನ್ನೂ ಸಮಾಧಾನವನ್ನೂ ತಂದಿತು. ಮಹಾರಾಜರ ಬಾಲ್ಯದಲ್ಲಿ ಅವರಿಗೆ ಉಪಾಧ್ಯಾಯರಾಗಿದ್ದ ಭೀಮರಾಯರೆಂಬುವರು ಅನಾರೋಗ್ಯದಿಂದ ಅರಮನೆಯ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದರು. ಅವರ ರೋಗ ಉಲ್ಬಣಿಸಿ ಆಸ್ಪತ್ರೆಯಲ್ಲೆ ಒಂದು ಕೋಣೆಯಲ್ಲಿ ಅವರನ್ನು ಇರಿಸಿಕೊಳ್ಳುವ ಏರ್ಪಾಡಾಗಿದ್ದಿತು. ಅವರನ್ನು ಕಂಡು ಹೋಗಲೆಂದು ಮಹಾರಾಜರು ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯ ಮೇಲ್ಭಾಗದಲ್ಲೇ ವೆಂಕಟಪ್ಪನ ಸ್ಟುಡಿಯೋ ಇದ್ದುದು. ರೋಗಿಯನ್ನು ಕಂಡು ಅವರ ಕ್ಷೇಮವನ್ನು ವಿಚಾರಿಸಿದ ಮೇಲೆ ಮಹಾರಾಜರು ವೆಂಕಟಪ್ಪನ ಸ್ಟುಡಿಯೋಗೆ ಹೋಗಿಬರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಆ ಸಮಯದಲ್ಲಿ ವೆಂಕಟಪ್ಪ ಸ್ಟುಡಿಯೋದಲ್ಲೇ ಇದ್ದುದರಿಂದ, ಮಹಾರಾಜರನ್ನು ಸಂಭ್ರಮದಿಂದ ಬರಮಾಡಿಕೊಂಡರು.

ಬೇರೆ ಬೇರೆ ಕಡೆಗಳಿಂದ ಬೆಳಕು ಅರ್ಧಶಿಲ್ಪ ಫಲಕಗಳ ಮೇಲೆ ಬೀಳುವಂತೆ ಮಾಡಿ, ಶಕುಂತಲೆಯ ನಿರ್ಗಮನವನ್ನೂ ಭಿಕ್ಷುವಾದ ಬುದ್ಧನನ್ನೂ ಮಹಾರಾಜರಿಗೆ ತೋರಿಸಿ ವಿವರಿಸಿದರು. ಉದಕಮಂಡಲದಲ್ಲಿ ಮಾಡಿದ್ದ ನಿಸರ್ಗಚಿತ್ರಗಳನ್ನು ತೋರಿಸಿದರು. ಫಲಕಗಳಲ್ಲಿರುವ ಸೂಕ್ಷ್ಮವಿವರಗಳು, ಅದರಲ್ಲೂ ಪ್ರಾಣಿಗಳ ಮುಖದ ಮೇಲೆ ಮೂಡಿಸಿರುವ ಭಾವಸಂಪತ್ತು, ಮಹಾರಾಜರ ಗಮನವನ್ನು ಸೆಳೆದುವು. ಮಹಾರಾಜರು ಇವನ್ನೆಲ್ಲ ಮತ್ತೆ ಮತ್ತೆ ನೋಡಿ ತಮ್ಮ ಸಂತೋಷವನ್ನು ಸೂಚಿಸಿದರು; ಅಡಿಗಡಿಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಅವರೊಂದಿಗೆ ಬಂದಿದ್ದ ಲೆಫ್ಟಿನೆಂಟ್ ಕರ್ನಲ್ ಎ.ವಿ. ಸುಬ್ರಹ್ಮಣ್ಯ ರಾಜೆ ಅರಸರು ಅನಂತರ ವೆಂಕಟಪ್ಪನನ್ನು ಭೇಟಿಮಾಡಿ, ಮಹಾರಾಜರು ತುಂಬ ಸಂತೋಷಪಟ್ಟರೆಂದೂ ಅವರು ಅಷ್ಟು ಧಾರಾಳವಾಗಿ ಯಾರನ್ನೂ ಮೆಚ್ಚಿಕೊಂಡುದೇ ಇಲ್ಲವೆಂದೂ ತಿಳಿಸಿದರು.

ಮುಂದಿನ ತಿಂಗಳು ಸ್ಟುಡಿಯೋಗೆ ಭೇಟಿಕೊಟ್ಟವರಲ್ಲಿ ಪ್ರಮುಖರೆಂದರೆ ಮೈಸೂರು ಸಂಸ್ಥಾನದ ಯುವರಾಜರು, ಅಮೆರಿಕದ ಸುಪ್ರಸಿದ್ಧ ನರ್ತಕಿ ರಾಗಿಣಿದೇವಿ, ಗಾಯಕ ಶಿಖಾಮಣಿ ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಖ್ಯಾತ ಪಯೊಲಿನ್ ವಾದಕ ಮಾರುಂಗಪುರಿ ಗೋಪಾಲಕೃಷ್ಣ ಅಯ್ಯರ್, ವೇಣುವಾದನ ಪ್ರವೀಣ ಬೆಂಗಳೂರು ನರಸಿಂಗರಾವ್. ಇವರು ವೆಂಕಟಪ್ಪ ಸಿದ್ಧಪಡಿಸಿದ್ದ ಶ್ರುತಿವೀಣೆಯನ್ನೂ ನೋಡಿ, ಅದರ ವಿವರಗಳನ್ನು ತಿಳಿದುಕೊಂಡರು. ಉದಕಮಂಡಲದಲ್ಲಿ ಮಾಡಿದ ನಿಸರ್ಗಚಿತ್ರಗಳು ಇವರ ಪ್ರಶಂಸೆಗೆ ಪಾತ್ರವಾದುವು.

ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ಮೈಸೂರರಸರ ಲಾಂಛನದ ಅರ್ಧಶಿಲ್ಪ ಫಲಕವನ್ನೂ ವೆಂಕಟಪ್ಪ ತಯಾರಿಸಿದ್ದರು. ಅದರಲ್ಲಿನ ಶರಭಕ್ಕೆ ಬಂಗಾರದ ಎಲೆ ಕೆಲಸ ಮಾಡಿರಲಿಲ್ಲ. ಅದನ್ನು ಮಾಡುವುದೊ ಬಿಡುವುದೊ ಎಂಬುದು ವಿವಾದಾಸ್ಪದವಾಗಿದ್ದಿತು. ಅದರಲ್ಲಿ ಸೂಕ್ಷ್ಮ ಕೆಲಸವಿರುವುದರಿಂದ ಅದನ್ನು ಹಾಗೆಯೇ ಬಿಡುವುದು ಒಳಿತೆಂದು ಕೆಲವರು ಸೂಚಿಸಿದ್ದರು. ಮಹಾರಾಜರು "ವೆಂಕಟಪ್ಪನನ್ನು ಕೇಳಿ; ಅವರು ಇಷ್ಟಪಟ್ಟಂತೆ ಮಾಡೋಣ" ಎಂದು ಅಪ್ಪಣೆಮಾಡಿದರು. ಈ ಸಂದೇಶವನ್ನು ಹೊತ್ತು ಮಹಾರಾಜರ ಎ.ಡಿ.ಸಿ. ಆಗಿದ್ದ ಎ.ವಿ. ಸುಬ್ರಹ್ಮಣ್ಯರಾಜೆ ಅರಸರು ವೆಂಕಟಪ್ಪನ ಸ್ಟುಡಿಯೋಗೆ ಬಂದು 1932ರ ಆಗಸ್ಟ್ ತಿಂಗಳ ಇಪ್ಪತ್ತೊಂದನೆಯ ದಿನ ಅವರನ್ನು ಕರೆದುಕೊಂಡು ಅಂಬಾವಿಲಾಸ ತೊಟ್ಟಿಗೆ ಬಂದರು. ವೆಂಕಟಪ್ಪ ಆ ಭವನದ ಪರಿಸರ, ಅಲ್ಲಿದ್ದ ಕಲಾಕೃತಿಗಳು ಎಲ್ಲವನ್ನೂ ಪರಿಶೀಲಿಸಿ ರಾಜಲಾಂಛನದಲ್ಲಿರುವ ಶರಭಕ್ಕೆ ಬಂಗಾರದ ಹೊದಿಕೆಯಿಲ್ಲದೆ ಹಾಗೆಯೆ ಇರುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಶಕುಂತಲಾನಿರ್ಗಮನದ ಫಲಕ ಆಗಲೆ ಅಲ್ಲಿದ್ದಿತು. ಆದರೆ ಅದರ ಅಡಿಯಲ್ಲಿದ್ದ ಸಣ್ಣ ಫಲಕಕ್ಕೆ ಬಂಗಾರದ ಮೆರುಗು ಹಾಕಿ ಕೆಡಿಸಿದ್ದುದನ್ನು ಕಂಡು ವೆಂಕಟಪ್ಪ ದುಃಖಪಟ್ಟರು. ರಾಜಲಾಂಛನಕ್ಕೆ ಮತ್ತು ಪಕ್ಷಿಯ ಚಿತ್ರಕ್ಕೆ ಹೊಂದಿಸಿದ್ದ ಚೌಕಟ್ಟು ಸರಿಯಾಗಿಲ್ಲವೆಂದು ವೆಂಕಟಪ್ಪ ಸೂಚಿಸಲು, ಅವನ್ನು ಸ್ಟುಡಿಯೋಗೆ ಮರುದಿನವೆ ಕೊಟ್ಟುಕಳುಹಿಸುವುದಾಗಿ ಅಲ್ಲಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಬಿ.ವಿ. ನಾರಾಯಣರಾಯರು ತಿಳಿಸಿದರು.

ಮರು ವರ್ಷದ ಮೊದಲತಿಂಗಳಲ್ಲಿ ಬುದ್ಧನ ಅರ್ಧಶಿಲ್ಪಫಲಕ ಮುಗಿಯಿತು. ಭಿಕ್ಷೆ ಬೇಡಲು ಹೊರಟಿದ್ದ ಬುದ್ಧನ ಫಲಕದ ಮೇಲೆ ಕೆಲಸ ಒಂದೆರಡು ತಿಂಗಳುಗಳಿಂದ ಸಾಗಿದ್ದಿತು. ಜನವರಿಯಲ್ಲಿ ಇದು ಮುಗಿದು, ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಎರಕವೂ ಸಿದ್ಧವಾಗಿ, ಏಪ್ರಿಲ್ ಎರಡನೆಯ ವಾರದಲ್ಲಿ ಅರಮನೆಯ ಅಂಬಾವಿಲಾಸ ತೊಟ್ಟಿಗೆ ಒಯ್ಯಲ್ಪಟ್ಟಿತು. ಮೂರು ದಿನಗಳ ತರುವಾಯ ಮಹಾರಾಜರು ಬಂದು ಅದನ್ನು ನೋಡಿಕೊಂಡು ಹೋದರು; ಅವರಿಗೆ ಅದು ತುಂಬ ಹಿಡಿಸಿತು. ಈಗಲೂ ಅದು ಅಂಬಾವಿಲಾಸ ತೊಟ್ಟಿಯಲ್ಲೆ ಇದೆ.

ಅದೇ ತಿಂಗಳ ಕಡೆಯ ಭಾಗದಲ್ಲಿ ಅವರು ಕೊಡೈಕೆನಾಲಿಗೆ ಹೋಗಿ ಮೂರು ತಿಂಗಳುಗಳ ಕಾಲ ಇದ್ದು (ಏಪ್ರಿಲ್ 21ರಿಂದ ಜುಲೈ 11ರವರೆಗೆ) ಅಲ್ಲಿನ ನಿಸರ್ಗವನ್ನು ಹಲವಾರು ಚಿತ್ರಗಳಲ್ಲಿ ಮೂಡಿಸಿಕೊಂಡು ಬಂದರು. ಜನನಾಯಕಿಯೂ ಕವಯಿತ್ರಿಯೂ, ತಮ್ಮ ಮಿತ್ರರು ಹರೀಂದ್ರನಾಥ ಚಟ್ಟೋಪಾಧ್ಯಾಯರ ಸೋದರಿಯೂ ಆಗಿದ್ದ ಸರೋಜಿನಿ ನಾಯುಡು ಅವರು ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಸ್ಟುಡಿಯೋಗೆ ಭೇಟಿಕೊಟ್ಟು, ಕಲಾಕೃತಿಗಳನ್ನು ನೋಡಿ ಆನಂದಿಸಿದರು. ಆ ವರ್ಷವೂ ಮರುವರ್ಷವೂ ವೆಂಕಟಪ್ಪ ಅರಮನೆಯ ಭಿತ್ತಿಚಿತ್ರಗಳು, ಅಲಂಕರಣ ಇದರಲ್ಲಿ ತೊಡಗಿದರು. ಅಂಬಾವಿಲಾಸ ತೊಟ್ಟಿಯ ಅಲಂಕರಣ ಮಾತ್ರವಲ್ಲದೆ, ಮಹಾರಾಜರ ಖಾಸಾ ದಿವಾನಖಾನೆಯ ಅಲಂಕರಣದ ಕೆಲಸವೂ ಇವರ ಪಾಲಿಗೆ ಬಂದಿದ್ದಿತು. ನಡುನಡುವೆ ಉದಕಮಂಡಲಕ್ಕೆ ಹೋಗಿಬರುತ್ತಿದ್ದರು.

1938ರಲ್ಲಿ ವೆಂಕಟಪ್ಪನ ಸ್ವಭಾವದ ಒಂದು ವಿವರ ವ್ಯಕ್ತವಾಗುವ ಅವಕಾಶ ಒದಗಿತು. ರಾಮಕೃಷ್ಣಾಶ್ರಮದಿಂದ ಪ್ರಕಟವಾಗುತ್ತಿದ್ದ ಬಂಗಾಳಿ ಭಾಷೆಯ 'ಉದ್ಬೋಧನ' ಎಂಬ ಪತ್ರಿಕೆಯಲ್ಲಿ (1935ರ ಸೆಪ್ಟೆಂಬರ್ ತಿಂಗಳ ಸಂಚಿಕೆ) ವೆಂಕಟಪ್ಪನವರ 'ಸಿದ್ಧಾರ್ಥನ ರಾಜ್ಯ ಪರಿತ್ಯಾಗ' ಮತ್ತು 'ರಾಮನಿಂದ ಹನುಮಂತನಿಗೆ ಅಂಗುಲಿಪ್ರದಾನ' ಎಂಬ ಎರಡು ಅರ್ಧಶಿಲ್ಪ ಫಲಕಗಳ ಛಾಯಾಚಿತ್ರಗಳು ಪ್ರಕಟವಾಗಿದ್ದುವು. ಆದರೆ ಬ್ಲಾಕ್ ತಿರುಗು ಮುರುಗಾಗಿ ರಾಮನ ಬಲಭುಜದ ಮೇಲೆ ಜನಿವಾರ ಇರುವಂತೆಯೂ ರಾಮನು ತನ್ನ ಎಡಗೈಯಿಂದ ಹನುಮಂತನಿಗೆ ಮುದ್ರೆಯುಂಗುರ ನೀಡುತ್ತಿರುವಂತೆಯೂ ಕಾಣುತ್ತಿದ್ದಿತು. ಇದನ್ನು ನೋಡಿ ವೆಂಕಟಪ್ಪ ಸಿಟ್ಟಿಗೆದ್ದರು; ತಮ್ಮ ಕಲೆಗೆ ಅಪಚಾರನಡೆಯಿತೆಂದು ಆ ಪತ್ರಿಕೆಯ ವ್ಯವಸ್ಥಾಪಕರಿಗೆ ಪತ್ರ ಬರೆದರು. ಆ ಪತ್ರಿಕೆಯ ವ್ಯವಸ್ಥಾಪಕರು (ರಾಮಕೃಷ್ಣಮಠದ ಸಂನ್ಯಾಸಿಗಳು) ಪತ್ರಿಕೆಯ ಮರುಸಂಚಿಕೆಯಲ್ಲಿ ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಲಾವಿದರ ಕ್ಷಮೆ ಬೇಡಿದರು. ಆದರೆ ಈ ಕ್ಷಮಾಯಾಚನೆಯ ಪತ್ರ ವೆಂಕಟಪ್ಪನಿಗೆ ಅಷ್ಟು ಸಮಾಧಾನವಾಗದೆ, ಕಲಾವಿದನಿಗೆ ಹಿಂದೂ ಸಂಸ್ಕೃತಿಯ ವಿಚಾರವೆ ತಿಳಿದಿಲ್ಲವೆಂಬ ಭಾವನೆಯು ಜನರಲ್ಲಿ ಮೂಡುವಂತೆ ಪತ್ರಿಕೆಯು ಮಾಡಿ, ಕಲಾವಿದನ ಕೀರ್ತಿಗೆ ಕಳಂಕ ತಂದಿದೆಯೆಂದು ಆಪಾದನೆ ಮಾಡಿ ಪತ್ರಿಕೆ ವ್ಯವಸ್ಥಾಪಕರಾಗಿದ್ದ ಸ್ವಾಮಿ ವಿಜ್ಞಾನಾನಂದ, ಸ್ವಾಮಿ ಸುಧಾನಂದ, ಸ್ವಾಮಿ ಸುಂದರಾನಂದ ಮತ್ತು ಸ್ವಾಮಿ ಆತ್ಮಬೋಧಾನಂದ. ಇವರ ಮೇಲೆ ಕಲ್ಕತ್ತೆಯ ನ್ಯಾಯಾಲಯದಲ್ಲಿ 'ಲೈಬೆಲ್'

ಮೊಕದ್ದಮೆಯನ್ನು ಹೂಡಿ, ಪರಿಹಾರವಾಗಿ ಈ ನಾಲ್ವರು ಪ್ರತಿವಾದಿಗಳಿಂದ ಒಂದು ರೂಪಾಯಿಯನ್ನು ತನಗೆ ಕೊಡಿಸಬೇಕೆಂದು ಬೇಡಿದರು. ಪ್ರತಿವಾದಿಗಳು ಸಂನ್ಯಾಸಿಗಳಾಗಿದ್ದುದರಿಂದ ಅವರು ತಮ್ಮ ತಪ್ಪೆಂದು ಒಪ್ಪಿಕೊಂಡು, ಕಲಾವಿದನಿಗೆ ಅಪಚಾರವಾಗಿದೆ ಎಂದು ತಿಳಿದರೆ ಸಾಕೆಂದು ವೆಂಕಟಪ್ಪನ ಆಶಯ; ಅದಕ್ಕಾಗಿಯೆ ಸಂಕೇತವೆಂದು ಒಂದೇ ರೂಪಾಯಿಯ ಪರಿಹಾರ ಧನವನ್ನೂ ಅವರು ಬೇಡಿದ್ದು.

ಕಲ್ಕತ್ತೆಯ ರಾಬ್ಸನ್ ಎಂಬ ವಕೀಲನನ್ನು ಗೊತ್ತುಮಾಡಿ ಕಟ್ಟಳೆ ನಡೆಸಿದರು. ಮೊಕದ್ದಮೆಯು 1938ರ ಏಪ್ರಿಲ್ ಹದಿನಾರರಂದು ವಿಚಾರಣೆಗೆ ಬಂದು, ಕಲ್ಕತ್ತಾ ಉಚ್ಚನ್ಯಾಯಾಲಯದ ಮೆಕ್ನರ್ ಎಂಬ ನ್ಯಾಯಾಧೀಶರು ಪ್ರತಿವಾದಿಗಳಲ್ಲಿ ಮೊದಲನೆಯವರಾದ ಸ್ವಾಮಿ ವಿಜ್ಞಾನಾನಂದರ ತಪ್ಪು ಇದರಲ್ಲೇನು ಇರದೆಂದೂ, ಉಳಿದ ಸ್ವಾಮಿಗಳು ತಪ್ಪಿತಸ್ಥರೆಂದೂ ತೀರ್ಪು ಕೊಟ್ಟು ಅವರಿಂದ ವೆಂಕಟಪ್ಪನಿಗೆ ಅವರು ಬೇಡಿದ ಒಂದು ರೂಪಾಯಿ ಪರಿಹಾರ ದ್ರವ್ಯವನ್ನು ಕೊಡಿಸಿದರು. ವೆಂಕಟಪ್ಪ ಇದಕ್ಕಾಗಿ ಮಾರ್ಚ್ ತಿಂಗಳ ಕೊನೆಯಲ್ಲಿ ಮೈಸೂರಿನಿಂದ ಕಲ್ಕತ್ತೆಗೆ ಬಂದಿದ್ದರು. ನ್ಯಾಯಾಧೀಶರು, ವೆಂಕಟಪ್ಪನಿಗೆ ಈ ವ್ಯವಹಾರದಿಂದ ತಗುಲಿದ ವೆಚ್ಚದಲ್ಲಿ ಅರ್ಧದಷ್ಟನ್ನು ಪತ್ರಿಕೆ ತುಂಬಿ ಕೊಡತಕ್ಕದ್ದೆಂದೂ ತೀರ್ಪು ಕೊಟ್ಟರು. ವ್ಯವಹಾರದ ವೆಚ್ಚವೆಲ್ಲವನ್ನೂ ತುಂಬಿ ಕೊಡಬೇಕೆಂದು ಅರ್ಜಿಹಾಕುವಂತೆ ವಕೀಲ ಮಿತ್ರರು ವೆಂಕಟಪ್ಪನಿಗೆ ಸಲಹೆಮಾಡಿದರು. ಆದರೆ ವೆಂಕಟಪ್ಪ ಒಪ್ಪಲಿಲ್ಲ. "ಇಷ್ಟು ಸಾಕು, ಇಲ್ಲಿಗೆ ನಿಲ್ಲಿಸುತ್ತೇನೆ" ಎಂದು ಹೇಳಿ ಮೈಸೂರಿಗೆ ಹೊರಟರು. ಕಲ್ಕತ್ತೆ ಬಿಡುವ ಮುನ್ನ ತಮ್ಮ ಗುರು ಅವನೀಂದ್ರನಾಥರನ್ನೂ ಪೆರ್ಸಿ ಬ್ರೌನರನ್ನೂ ಭೇಟಿಮಾಡಿದರು.

ಕಲ್ಕತ್ತೆಯಿಂದ ಹಿಂದಿರುಗಿ ಹೊರಟವರು ಬೆಂಗಳೂರಿಗೆ ಬಂದು, ತಮ್ಮ ನಿವೇಶನದಲ್ಲಿ ಮನೆ ಕಟ್ಟುವ ಸಲುವಾಗಿ ಕೆ. ಸಿದ್ದಪ್ಪನೆಂಬ ಕಂಟ್ರಾಕ್ಟರನ್ನು ಗೊತ್ತುಮಾಡಿದರು. ಮುಂದೆ ಅದೇ ವರ್ಷ ನವೆಂಬರ್ ತಿಂಗಳ ಮೊದಲಭಾಗದಲ್ಲಿ ಮತ್ತೆ ಬೆಂಗಳೂರಿಗೆ ಬಂದು ಹತ್ತು ದಿನಗಳ ಕಾಲ ಇದ್ದು (ಆಗ ಬೆಂಗಳೂರಿನಲ್ಲಿ, ಅವರ ಸೋದರಿ ಇದ್ದರೂ, ಅವರೊಡನೆ ತಂಗದೆ ವೆಂಕಟಪ್ಪ ಮಾಡರ್ನ್ ಇಂಡಿಯನ್ ಲಾಡ್ಜ್‌ನಲ್ಲೇ ಇದ್ದರು) ತಮ್ಮ ನಿವೇಶನದಲ್ಲಿ ಕಟ್ಟಡಕ್ಕೆ ಒಳ್ಳೆಯ ಮುಹೂರ್ತದಲ್ಲಿ ಗುದ್ದಲಿ ಪೂಜೆಯನ್ನು ಮಾಡಿದರು (ನವೆಂಬರ್ ಹತ್ತರಂದು). ಸಣ್ಣದಾಗಿ ಅವರು ಏರ್ಪಡಿಸಿದ್ದ ಸಮಾರಂಭದಲ್ಲಿ ಗೋಪಾಲಕೃಷ್ಣರಾವ್ ಎಂಬ ಜ್ಯೋತಿಷಿಯ ಪರಿಚಯವಾಯಿತು. ಆಗಿನ ಎಂ.ಎಸ್.ಎಂ. ರೈಲ್ವೆಯಲ್ಲಿ ಸಿಗ್ನಲರ್ ಆಗಿ ಕೆಲಸಮಾಡುತ್ತಿದ್ದ ಇವರು ಜ್ಯೋತಿಷ್ಯವನ್ನೂ ಬಲ್ಲವರಾಗಿದ್ದು, ಮುಂದೆ ವೆಂಕಟಪ್ಪನಿಗೆ ಒಡನಾಡಿಯಾದ ಸ್ನೇಹಿತರಾದರು. ಆ ವೇಳೆಗೆ ವೆಂಕಟಪ್ಪನಿಗೂ ಜ್ಯೋತಿಷ್ಯದಲ್ಲಿ ಆಸಕ್ತಿ ತಲೆದೋರಿ ಆ ಶಾಸ್ತ್ರದ ಪರಿಚಯವನ್ನೂ ಕೊಂಚಮಟ್ಟಿಗೆ ಸಂಪಾದಿಸಿದ್ದರು. ಗುದ್ದಲಿ ಪೂಜೆಯಾಗುತ್ತಿರುವಾಗ ಶುಭಶಕುನಗಳಾಗುತ್ತಿರುವಂತೆ ಅವರಿಗೆ ತೋರಿತು. ಗುದ್ದಲಿ ಪೂಜೆಯಾದರೂ, ಕಟ್ಟಡವನ್ನೇನು ಅಷ್ಟು ಬೇಗ ಎಬ್ಬಿಸುವ ಆಲೋಚನೆಯಿರಲಿಲ್ಲ; ಮೈಸೂರನ್ನು ಬಿಡಬೇಕಾದ ಅಗತ್ಯ ಇರಲಿಲ್ಲವಷ್ಟೆ?

೧೦

1940ನೆಯ ವರ್ಷ ಅವರ ಬದುಕಿನಲ್ಲಿ ಒಂದು ಪರ್ವಕಾಲ. ಆ ವರ್ಷದ ಆಗಸ್ಟ್ ಮೂರರಂದು ಮೈಸೂರು ಮಹಾರಾಜರು (ನಾಲ್ವಡಿ ಕೃಷ್ಣರಾಜ ಒಡೆಯರು) ಬೆಂಗಳೂರಿನಲ್ಲಿ ತೀರಿಕೊಂಡರು. ವೆಂಕಟಪ್ಪನಿಗೆ ಇವರಲ್ಲಿ ವಿಶೇಷವಾದ ಗೌರವಬುದ್ಧಿ ; ಧಣಿಯೆಂದು ಮಾತ್ರವಲ್ಲ , ಕಲಾಭಿಜ್ಞರೆಂದು. ವೆಂಕಟಪ್ಪನ ಸ್ವಭಾವದಲ್ಲಿ ದುರಹಂಕಾರದ ಅಧಿಕಾರಿಗಳೆಂದರೆ ಅಸಡ್ಡೆಯೇ; ರಾಜರಾದರೇನು ಇವರ ರಾಜಭಕ್ತಿಯನ್ನು ಬಲಾತ್ಕರಿಸುವಂತಿರಲಿಲ್ಲ . ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ ವ್ಯಕ್ತಿತ್ವವೂ ದೊಡ್ಡದು. ಪಾಂಡಿತ್ಯಕ್ಕೆ, ಕಲೆಗೆ ಒಲಿಯುವ ಹೃದಯ ಅವರದ್ದು , ಮತ್ತು ಕಲಾವಿದರ ಯೋಗ್ಯತೆಯಂತೆ ನಡೆಸಿಕೊಳ್ಳುವ ಜಾಣತನವೂ ಅವರಿಗಿದ್ದಿತು. ವೆಂಕಟಪ್ಪನಿಗೆ ಅವರ ವಿಚಾರದಲ್ಲಿ ಎಷ್ಟು ನಿಷ್ಠೆ , ಭಕ್ತಿ , ಪ್ರೀತಿಗಳಿದ್ದುವೋ ಅವರಿಗೂ ವೆಂಕಟಪ್ಪನ ವಿಚಾರದಲ್ಲಿ ಅಷ್ಟೇ ವಿಶ್ವಾಸ, ನಂಬಿಕೆ, ಪ್ರೀತಿಗಳಿದ್ದುವು. ಮಹಾರಾಜರ ಒತ್ತಾಸೆಯಿರದಿದ್ದರೆ ವೆಂಕಟಪ್ಪ ಮೈಸೂರಿನಲ್ಲಿ ಇಷ್ಟುಕಾಲ ಇರುವುದೆ ಕಷ್ಟವಾಗುತ್ತಿತ್ತು . ಅಧಿಕಾರಿಗಳನ್ನು ಆದರದಿಂದಾಗಲಿ, ವಿಧೇಯತೆಯಿಂದಾಗಲಿ, ಭಯದಿಂದಾಗಲಿ ಕಾಣುವ ಸ್ವಭಾವ ವೆಂಕಟಪ್ಪನದಲ್ಲ . ಅವರನ್ನು ಕಂಡರೆ ಅಧಿಕಾರಿಗಳೆ ಭಯಪಡುವರು! ಅವರನ್ನು ತಿಳಿದವರೆಲ್ಲ ಅವರೊಂದಿಗೆ ನಾಜೂಕಾಗಿ, ಎಚ್ಚರದಿಂದ ವರ್ತಿಸುವರು.

ಅರಮನೆಯ ರಾಜಕೀಯದಲ್ಲಿ ಅವರ ವಿರುದ್ಧವಾಗಿ ಪಿತೂರಿ ನಡೆಯುತ್ತಿದ್ದುದು ಹತ್ತಾರು ವರ್ಷಗಳಿಂದ ಇದ್ದಿತು. ವೆಂಕಟಪ್ಪನಿಗೂ ಇದು ತಿಳಿದಿದ್ದಿತು. ಈ ಜನ ಎಂದಾದರೂ ಬಲಗೊಂಡು ಮಹಾರಾಜರ ಮನಸ್ಸನ್ನು ಕೆಡಿಸಿ, ತನಗೆ ತೊಂದರೆ ಕೊಟ್ಟಾರೆಂದು ಊಹಿಸಿದ್ದರು. ಹಾಗೆಂದೆ ಅವರು ಆ ವರ್ಷದ ಜುಲೈ ತಿಂಗಳಲ್ಲೇ ಬೆಂಗಳೂರಿಗೆ ಹೋಗಿದ್ದು , ಅಲ್ಲಿ ತಮ್ಮ ಕಲಾಶಾಲೆ ಕಟ್ಟುವ ಏರ್ಪಾಡನ್ನು ನಡೆಸಿ ಬಂದಿದ್ದರು. ಅದು ಮಹಾರಾಜರು ತೀರಿಕೊಳ್ಳುವ ಮೊದಲೇ.

ಮಹಾರಾಜರು ತೀರಿಕೊಂಡುದು ಅವರಿಗೆ ದಿಟವಾಗಿ ದುಃಖ ತಂದಿತು. ರಾಜರ್ಷಿ, ಕಲಾರಸಿಕ, ಮಹಾನುಭಾವನೆಂದು ರಾಜ್ಯದ ಪ್ರಜೆಗಳೆಲ್ಲ ದುಃಖಪಟ್ಟರು. ಮೈಸೂರು ಅರಸೊತ್ತಿಗೆಯಲ್ಲಿ ಸುವರ್ಣಯುಗ ಮುಗಿಯಿತೆಂದು ಬಲ್ಲವರು ಶೋಕಿಸಿದರು. ಮಹಾರಾಜರ ಶವಸಂಸ್ಕಾರವು ಆಗಸ್ಟ್ ಆರರಂದು ಮೈಸೂರಿನಲ್ಲಿ ನಡೆಯಿತಷ್ಟೆ ; ಅದರಲ್ಲಿ ವೆಂಕಟಪ್ಪನೂ ಪಾಲ್ಗೊಂಡಿದ್ದರು.

ಮುಂದೇನೆಂದು ವೆಂಕಟಪ್ಪ ಸ್ವಲ್ಪ ಕಳವಳಗೊಂಡಿದ್ದರೆ ಆಶ್ಚರ್ಯವೇನಲ್ಲ . ತಮಗೆ ಆಗದವರು ಅರಮನೆಯಲ್ಲಿ ಬಹುಮಂದಿ ಇದ್ದರು; ಸಮಯವನ್ನು ಸಾಧಿಸುತ್ತಿದ್ದವರೂ ಇದ್ದರು. ವೆಂಕಟಪ್ಪನ ದಾರಿ ನೇರವಾದುದು; ಅವರಿಗೆ ಪಿತೂರಿ, ಸನ್ನಾಹ, ಕುತಂತ್ರ, ಕುಯುಕ್ತಿ , ಸೋಗು ಇವೆಲ್ಲ ದೂರವೇ. ವೆಂಕಟಪ್ಪನ ಕಾತರ ಬಹುಕಾಲವೇನು ಕಾಯಬೇಕಾಗಿರಲಿಲ್ಲ . ಮಹಾರಾಜರು ತೀರಿಕೊಂಡದ್ದು ಆಗಸ್ಟ್ ತಿಂಗಳಲ್ಲಿ ; ಸೆಪ್ಟೆಂಬರ್ ತಿಂಗಳ ನಡುಭಾಗದಲ್ಲೇ ವೆಂಕಟಪ್ಪನಿಗೆ ಉಚ್ಚಾಟನೆಯ ಯೋಗ ಒದಗಿತು. ಕೀರ್ತಿಶೇಷ

ಮಹಾರಾಜರ ಉಪಕಾರ್ಯದರ್ಶಿಯಾಗಿದ್ದ ರಾಮರಾವ್ ಎಂಬುವರು ವೆಂಕಟಪ್ಪನ ಸ್ಟುಡಿಯೋಗೆ ಇಪ್ಪತ್ತಮೂರನೆಯ ತಾರೀಖಿನಂದು ಬಂದು, ಈಗಿನ ಮಹಾರಾಜರಿಗೆ ಅಂಬಾವಿಲಾಸ ತೊಟ್ಟಿಯಲ್ಲಿ ವೆಂಕಟಪ್ಪನ ಇತರ ಫಲಕಗಳ ಅಗತ್ಯ ಕಾಣು ವುದಿಲ್ಲವೆಂದೂ, ಈ ವಿಚಾರವಾಗಿ ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ತಂಬೂಚೆಟ್ಟಿಯನ್ನು ಕಾಣಬೇಕೆಂದೂ ತಿಳಿಸಿಹೋದರು. ವೆಂಕಟಪ್ಪ ತಂಬೂಚೆಟ್ಟಿಯನ್ನು ಕಾಣಲು, ಅವರು ಅದನ್ನೇ ಹೇಳಿ ದಸರಾ ಕಳೆದೊಡನೆ ಸ್ಟುಡಿಯೋವನ್ನು ಖಾಲಿಮಾಡಬೇಕೆಂದೂ ತಿಳಿಸಿದರು. ಹಿಂದಿನ ಮಹಾರಾಜರು ವೆಂಕಟಪ್ಪನಿಗೆ ಇನ್ನೂ ಕೆಲವು ಫಲಕಗಳನ್ನು ತಯಾರಿಸುವ ಅಪ್ಪಣೆಮಾಡಿದ್ದರು. ಇದನ್ನು ವೆಂಕಟಪ್ಪ ತಂಬೂಚೆಟ್ಟಿಗೆ ಹೇಳಲು, ಅವರು "ನೋಡೋಣ, ಈಗಿನ ಮಹಾರಾಜರಿಗೆ ಇದನ್ನು ಅರಿಕೆ ಮಾಡಿಕೊಳ್ಳುತ್ತೇನೆ" ಎಂದಷ್ಟೆ ಹೇಳಿಬಿಟ್ಟರು.

ಮರುದಿನವೆ ಮಹಾರಾಜರ ಕಛೇರಿಯಿಂದ ವೆಂಕಟಪ್ಪನಿಗೆ ಪತ್ರವೊಂದು ಬಂದಿತು. ಅದರಲ್ಲಿ , ವೆಂಕಟಪ್ಪ ಮಾಡಿ ಮುಗಿಸಿದ್ದ 'ನಟರಾಜ'ನ ಫಲಕವನ್ನು ಮಹಾರಾಜರ ಪರಿಶೀಲನೆಗಾಗಿ ಒಡನೆಯೆ ಅಂಬಾವಿಲಾಸ ತೊಟ್ಟಿಗೆ ಕಳುಹಿಸತಕ್ಕದ್ದೆಂದೂ, ಉಳಿದ ಯಾವ ಫಲಕಗಳ ಅಗತ್ಯವೂ ಅರಮನೆಗೆ ಇರದೆಂದೂ ಒಕ್ಕಣೆಯಿದ್ದಿತು. ಆಗಲೆ 'ನಟರಾಜ'ನ ಫಲಕವನ್ನು ಅರಮನೆಗೆ ಸಾಗಿಸುವ ವ್ಯವಸ್ಥೆಯನ್ನೂ ಅರಮನೆಯವರೆ ಮಾಡಿದ್ದರು. ಮರುದಿನ ಸಂಜೆ ಈ ಫಲಕ, ಈ ಫಲಕವನ್ನು ಇರಿಸಿದ್ದ ಈಸಲ್ ಜೊತೆಗೆ, ವೆಂಕಟಪ್ಪನ ಸ್ಟುಡಿಯೋದಿಂದ ಅರಮನೆಗೆ ಸಂದಿತು. ಆಗ ವೆಂಕಟಪ್ಪನ ಸ್ಟುಡಿಯೋ ಇದ್ದುದು ಅರಮನೆ ಆಸ್ಪತ್ರೆಯ ಮೇಲ್ಭಾಗದಲ್ಲೇ. ಅಕ್ಟೋಬರ್ ಐದರಂದು (ಎಂದರೆ ಹತ್ತು ದಿನಗಳ ತರುವಾಯ) ವೆಂಕಟಪ್ಪ ತಮ್ಮ ಸ್ಟುಡಿಯೋವನ್ನೂ ಖಾಲಿಮಾಡಿಕೊಟ್ಟರು. ಅಲ್ಲಿದ್ದ ಕುರ್ಚಿ, ಮೇಜು, ಮೊದಲಾದುವನ್ನೆಲ್ಲ ಅರಮನೆ ಮೋತಿಖಾನೆಯ ಮೇಲಧಿಕಾರಿಯ ವಶಕ್ಕೆ ಕೊಟ್ಟು ಹೊರಬಂದು ಅರಮನೆಯ ಋಣದಿಂದ ಮುಕ್ತರಾದರು.

ಮರುದಿನ ಮುಂಜಾನೆ ವೆಂಕಟಪ್ಪ ಮೈಸೂರಿನ ಋಣವನ್ನೂ ತೀರಿಸಿಕೊಂಡು ರೈಲಿನಲ್ಲಿ ಬೆಂಗಳೂರಿಗೆ ಹೊರಟುಬಿಟ್ಟರು. ಬೆಂಗಳೂರಿಗೆ ಬಂದವರು ಮಲ್ಲೇಶ್ವರದ ಪ್ರೌಢಶಾಲೆಯ ಬಳಿಯಿದ್ದ ಹೈಲ್ಯಾಂಡ್ ಹೋಟೆಲ್‌ನಲ್ಲಿ ಬಿಡಾರಮಾಡಿದರು. ಅವರು ಕೊಂಡಿದ್ದ ನಿವೇಶನ ಹತ್ತಿರವೇ ಇದ್ದಿತು. ಬೆಂಗಳೂರಿನಲ್ಲೇನೊ ವೆಂಕಟಪ್ಪ 1926ರಷ್ಟು ಹಿಂದೆಯೇ ಕಲಾಶಾಲೆಯನ್ನು ಕಟ್ಟುವ ಉದ್ದೇಶದಿಂದ ನಿವೇಶನವನ್ನು ಕೊಂಡಿದ್ದರು; 1938ರಲ್ಲೆ ಆ ನಿವೇಶನದಲ್ಲಿ ಗುದ್ದಲಿ ಪೂಜೆಯನ್ನೂ ಮಾಡಿದ್ದರು. ಮನೆ ಕಟ್ಟಲು ಕೆ. ಸಿದ್ದಪ್ಪನೆಂಬ ಕಂಟ್ರಾಕ್ಟರನ್ನೂ ಗೊತ್ತುಮಾಡಿದ್ದರು. ಆದರೆ ಕಟ್ಟಡದ ಕೆಲಸವೇನು ಮೊದಲಾಗಿರಲಿಲ್ಲ. ಈಗ ಸಂದರ್ಭದ ಒತ್ತಡ ಒದಗಿತಾಗಿ ಅಲ್ಲಿ ಮನೆಯನ್ನು ಕಟ್ಟಿಸುವ ಏರ್ಪಾಟನ್ನು ಒಡನೆಯೇ ಮಾಡತೊಡಗಿದರು. ಮುಂದೆ ಬೆಂಗಳೂರೇ ಅವರ ನಿವಾಸಸ್ಥಾನವಾಯಿತು. ಮತ್ತೆ ಮೈಸೂರಿಗೆ ಕೆಲವು ಬಾರಿ ಹೋಗಿ ಬರಬೇಕಾದಾಗಲೂ, ಕೆಲವು ಗಂಟೆಗಳ ಕಾಲ ಮಾತ್ರವೇ ಅಲ್ಲಿರುತ್ತಿದ್ದುದು. ಇನ್ನು ಬದುಕಿರುವವರೆಗೂ ಮೈಸೂರಿನ ಸಂಬಂಧವನ್ನು ಸಂಪೂರ್ಣವಾಗಿ ತೊಡೆದುಕೊಂಡುಬಿಟ್ಟರು.

ಬೆಂಗಳೂರಿನಲ್ಲಿ

(1940 – 1965)

೧

ಮೈಸೂರಿನಿಂದ ಬೆಂಗಳೂರಿಗೆ ಹೊರಟುಬಂದ ಮಾರನೆಯ ದಿನವೇ (ಎಂದರೆ ಅಕ್ಟೋಬರ್ ತಿಂಗಳ ಏಳನೆಯ ದಿನದಂದು), ವೆಂಕಟಪ್ಪ ಮುನಿಸಿಪಲ್ ಕಮಿಷನರ್ ಕಚೇರಿಗೆ ಹೋಗಿ ತಮ್ಮ ನಿವೇಶನದಲ್ಲಿ ಮನೆಕಟ್ಟುವ ಸಲುವಾಗಿ ಅನುಮತಿಯನ್ನು ಪಡೆದುಕೊಂಡರು. ಹಿಂದೆಯೆ (1926ರ ಮಾರ್ಚ್ ತಿಂಗಳಲ್ಲಿ) ಒಂದು ತಾತ್ಕಾಲಿಕ ಅನುಮತಿಗಾಗಿ ಅರ್ಜಿ ಹಾಕಿದ್ದರು; ಅದೇ ಸಾಕೆಂದೂ, ಕಟ್ಟಡದ ಕೆಲಸ ಆರಂಭಿಸಬಹುದೆಂದೂ ಮುನಿಸಿಪಲ್ ಕಮಿಷನರ್ ಹೇಳಿ, ಬದಲಾವಣೆಗಳಿದ್ದರೆ ಇನ್ನೊಂದು ಹೊಸ ಪ್ಲಾನನ್ನು ಸಿದ್ಧಪಡಿಸಿ ಕಳುಹಿಸಿದರೆ ಆಯಿತೆಂದೂ ಸೂಚಿಸಿದರು. ಅದರಂತೆ ಈಗ ಅಕ್ಟೋಬರ್ ಹದಿನೆಂಟರಂದು ಹೊಸ ಪ್ಲಾನಿನ ಬ್ಲೂಪ್ರಿಂಟ್‌ಗಳನ್ನು ಕಮಿಷನರ ಕಚೇರಿಗೆ ಸಲ್ಲಿಸಿದರು.

ಮರುದಿನವೇ ಬೆಳಿಗ್ಗೆ ಮೈಸೂರಿಗೆ ಹೋಗಿ ನೇರವಾಗಿ ತಮ್ಮ ವಕೀಲಮಿತ್ರರು ಎಂ.ಎ. ದೊರೆಸ್ವಾಮಿ ಅಯ್ಯಂಗಾರರನ್ನು ಕಂಡರು. ತಮಗೆ ಅರಮನೆಯ ಅಧಿಕಾರಿಗಳು ಮಾಡಿದ ಅನ್ಯಾಯಕ್ಕಾಗಿ ಅರಮನೆಯ ಮೇಲೆ, ಮಹಾರಾಜರ ಮೇಲೆ ದಾವಾ ಮಾಡುವುದರ ವಿಚಾರವಾಗಿ ವಕೀಲರೊಂದಿಗೆ ಚರ್ಚಿಸಿ ಅಂದೇ ರಾತ್ರಿ ಬೆಂಗಳೂರಿಗೆ ಹಿಂದಿರುಗಿದರು. ಮತ್ತೆ ಮೂರುದಿನಗಳನಂತರ ಮೈಸೂರಿಗೆ ಹೋಗಿ ತಮಗೆ ಪರಿಚಯವಿದ್ದ ಕುಂಬಯ್ಯ ಎಂಬ ಮರಗೆಲಸದವರನ್ನು ಕಂಡು ಮೈಸೂರಿನ ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲ ಲಾರಿಯೊಂದರಲ್ಲಿ ಕಳುಹಿಸುವ ಏರ್ಪಾಡು ಮಾಡಿ ಬೆಂಗಳೂರಿಗೆ ಹಿಂದಿರುಗಿದರು. ಆ ತಿಂಗಳ ಇಪ್ಪತ್ತನಾಲ್ಕನೆಯ ದಿನ ಮುಂಜಾನೆ ಬೆಂಗಳೂರಿಗೆ ಬಂದವರು ಮಲ್ಲೇಶ್ವರದ ಏಳನೆಯ ಅಡ್ಡರಸ್ತೆಯಲ್ಲಿ 276ನೇ ನಂಬರಿನ ಮನೆಯನ್ನು ಬಾಡಿಗೆಗೆ ಹಿಡಿದರು; ಅದು ಡಿ. ಕೃಷ್ಣಸ್ವಾಮಿ ಅಯ್ಯಂಗಾರರೆಂಬುವರ ಮನೆ. ಅಂದೇ ಬೆಳಿಗ್ಗೆ ಏಳು ಗಂಟೆಯ ಸಮಯಕ್ಕೆ ಮೈಸೂರಿನಿಂದ ಅವರ ಸಾಮಾನುಗಳನ್ನೆಲ್ಲ ಹೊತ್ತ ಲಾರಿ ಬಂದಿತು. ಅಂತೂ ಅಂದಿನಿಂದ ಬೆಂಗಳೂರಿನಲ್ಲಿ ವಾಸ್ತವ್ಯ.

ಕಟ್ಟಡದ ಕೆಲಸ 1940ರ ಡಿಸೆಂಬರ್ ನಾಲ್ಕರಂದು ಆರಂಭವಾಯಿತು; ಮುಂದಿನ ವರ್ಷ ಜನವರಿ ಹದಿಮೂರರಂದು ನಿವೇಶನಕ್ಕೆ ನೀರಿನ ಸರಬರಾಜು ಮಂಜೂರಾಯಿತು; ಫೆಬ್ರುವರಿ ಹತ್ತರಂದು ಕುಂಭಲಗ್ನದಲ್ಲಿ ಬಾಗಿಲನ್ನು ಕೂಡಿಸುವ ಶಾಸ್ತ್ರ ಜರುಗಿತು; ಜೂನ್ ನಾಲ್ಕರಂದು (ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ ದಶಮಿಯಂದು) ಮನೆಯ ಗೃಹಪ್ರವೇಶ ನಡೆಯಿತು. ಅಂದೇ ಸ್ಟುಡಿಯೋವೂ ಆರಂಭವಾಯಿತೆಂದು ಅವರ ಭಾವನೆ. ಪ್ರತಿವರ್ಷ

ಆ ದಿನ ಸ್ಟುಡಿಯೋವಿನ ವಾರ್ಷಿಕೋತ್ಸವವೆಂದು ನೆನಪಿಸಿಕೊಳ್ಳುತ್ತಿದ್ದರು. ವೆಂಕಟಪ್ಪ ತನ್ನದೇ ಆದ ನೆಲೆಯೊಂದನ್ನು ಪಡೆದುಕೊಂಡು ಸಮಾಧಾನಪಟ್ಟರು. ನಿವೇಶನವೂ ತಮ್ಮ ಹಣದಿಂದಲೇ ಕೊಂಡದ್ದು ; ಮನೆಯನ್ನು ಕಟ್ಟಿಸಿದ್ದೂ ತಮ್ಮದೇ ಹಣದಿಂದ. ಸರಕಾರಕ್ಕಾಗಲೀ ಇತರ ಯಾರಿಗಾಗಲಿ ಅವರು ಋಣಿಯಾಗಿ ತಲೆಬಾಗಬೇಕಾದು ದಿರಲಿಲ್ಲ . ಅವರು ಕೈಗೊಂಡ ಅಪರಿಗ್ರಹವ್ರತಕ್ಕೆ ಯಾವ ಕಾರಣದಿಂದಲೂ ಊನ ಬಾರದಂತೆ ಅವರು ಬದುಕಿನುದ್ದಕ್ಕೂ ಎಚ್ಚರವಹಿಸಿದ್ದರು.

ಆದರೆ ಬೆಂಗಳೂರಿಗೆ ಬಂದಮೇಲೆ ಅವರ ಮನಃಶಾಂತಿ ಅದೇಕೋ ಕದಡಿದ್ದಿತು. ತಮ್ಮ ಜಾತಕದಲ್ಲಿ ಗ್ರಹಗತಿಯ ಫಲವಾಗಿ ಈ ಬಗೆಯ ಅಶಾಂತಿಯೆಂದು ಅವರು ಭಾವಿಸಿದರು. ಅವರಿಗೆ ಆ ಸಮಯದಲ್ಲಿ ಜ್ಯೋತಿಷ್ಯದಲ್ಲಿ ನಂಬಿಕೆಯಿದ್ದಿತು. (ಮುಂದೆ ಅದು ಹೋಯಿತೆನ್ನಿ). ಅವರ ಮಿತ್ರರು ಗೋಪಾಲಕೃಷ್ಣರಾಯರು ಜಾತಕವನ್ನು ನೋಡಿ, ಗುಣಿಸಿ, ಜಾತಕನಿಗೆ ರವಿದೆಶೆ ಮೊದಲಾಗುತ್ತಿರುವುದರಿಂದ ಶಾಂತಿ ಮಾಡಿಸಬೇಕೆಂದು ಸೂಚಿಸಿದರು. ಬಸವನಗುಡಿಯ ಪೂರ್ ಹೌಸ್ ಬ್ಲಾಕಿನಲ್ಲಿರುತ್ತಿದ್ದ 'ಬುಧನಾಡಿ' ಶ್ರೀನಿವಾಸಾಚಾರ್ಯರೆಂಬ ತಾಂತ್ರಿಕರನ್ನು ಈ ಕೆಲಸಕ್ಕೆ ಗೊತ್ತುಮಾಡಿಯೂ ಕೊಟ್ಟರು. ವೆಂಕಟಪ್ಪನ ಮನೆಯಲ್ಲಿ ಪೂಜೆಗೆ ಅನುಕೂಲವಿಲ್ಲದ್ದರಿಂದ, ಶ್ರೀನಿವಾಸಾಚಾರ್ಯರುತಮ್ಮ ಮನೆಯಲ್ಲಿಯೇ ವೆಂಕಟಪ್ಪನಿಗಾಗಿ ಪೂಜೆ, ಶಾಂತಿಗಳನ್ನು 1941ರ ಸೆಪ್ಟೆಂಬರ್ ತಿಂಗಳ ಗುರುವಾರ ಹದಿನೆಂಟರಂದು ಆರಂಭಿಸಿ ನಲವತ್ತೆಂಟು ದಿನಗಳು ನಡೆಸಿ ಪ್ರಸಾದವನ್ನು ಕಳುಹಿಸಿದರು; ಒಂದು ವಾರದ ಕಾಲ ಕಟ್ಟಿಕೊಳ್ಳುವುದಕ್ಕೆ ತಾಯತಿಯೊಂದನ್ನೂ ತಯಾರಿಸಿಕೊಟ್ಟರು.

ಇದರಿಂದ ಎಷ್ಟರಮಟ್ಟಿಗೆ ಮನಃಶಾಂತಿ ದೊರಕಿತೊ ತಿಳಿಯದು. ಆದರೆ ಮರು ವರ್ಷ (1942) ಮೊದಲಾಗುವಲ್ಲೇ ಮಹಾರಾಜರ ಮೇಲೆ ಮೊಕದ್ದಮೆ ಹೂಡುವ ಆತುರ ಹೆಚ್ಚಿ ಬೆಂಗಳೂರಿನ ಸುಪ್ರಸಿದ್ಧ ವಕೀಲರಾಗಿದ್ದ ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರರಿಗೆ ವಕಾಲತ್ತನ್ನು ವಹಿಸಿಕೊಟ್ಟರು. ಈ ವಕೀಲರು ಮೈಸೂರಿನಲ್ಲಿ ವೆಂಕಟಪ್ಪನ ಮಿತ್ರರೂ ವಕೀಲರೂ ಆಗಿದ್ದ ದೊರೆಸ್ವಾಮಿ ಅಯ್ಯಂಗಾರರ ಅಣ್ಣನೆ. ವೀಣಾಭ್ಯಾಸವೇನೋ ನಿರಾತಂಕವಾಗಿ ಸಾಗಿತು. ಮನೆಯ ಸುಖವನ್ನೂ ಅನುಭವಿಸತೊಡಗಿದರು. ಮನೆಯ ನಡುವೆ ಇದ್ದ ತೊಟ್ಟಿಯಲ್ಲಿ ರಾತ್ರಿಯ ವೇಳೆ ಬೆಳದಿಂಗಳು ಹಾಲು ಚೆಲ್ಲಿದಂತೆ ಬಿದ್ದಿರು ವುದನ್ನು ನೋಡುತ್ತ ತಮ್ಮ ದುಗುಡವನ್ನೆಲ್ಲ ಮರೆತರು. ಆದರೆ ಇದು ಬಹು ಕಾಲ ನಡೆಯಲಿಲ್ಲ . ಜುಲೈ-ಆಗಸ್ಟ್ ವೇಳೆಗೆ ಮತ್ತೆ ಅವರ ಮನಸ್ಸಿನಲ್ಲಿ ಮೋಡ ಕವಿಯತೊಡಗಿತು. ಅವರ ಮನೆಯ ನೆರೆಯಲ್ಲಿ ಎಚ್.ವಿ. ವೆಂಕಟರಾಮ ಅಯ್ಯಂಗಾರರೆಂಬುವರ ನಿವೇಶನದಲ್ಲಿ ಗುಡಿಸಲು ಹಾಕಿಕೊಂಡು ವಾಸಿಸುತ್ತ ಇದ್ದ ಮರಿಗೌಡ ಎನ್ನುವ ಕೂಲಿಯಾಳು ಏನು ಕಾರಣವೊ ಇವರಿಗೆ ತೊಂದರೆ ಕೊಡಲಾರಂಭಿಸಿದ; ಮನಬಂದಂತೆ ಬಯ್ದಾಡಿ, ಕೊಂದುಬಿಡುವುದಾಗಿ ಬೆದರಿಸಿದ: ಬೇರೆ ದಾರಿ ಕಾಣದೆ ವೆಂಕಟಪ್ಪ ಮಲ್ಲೇಶ್ವರದ ಪೊಲೀಸ್ ಸ್ಟೇಷನ್ನಿನಲ್ಲಿ ದೂರಿತ್ತರು. ಅಲ್ಲಿ ಸರಿಯಾದ ಪರಿಹಾರ ದೊರೆಯುವುದೆಂಬ ಭರವಸೆ ಕಾಣದೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ

ಅರ್ಜಿ ಸಲ್ಲಿಸಿ ತಮಗೆ ರಕ್ಷಣೆ ಬೇಕೆಂದು ಬೇಡಿದರು. ಈ ಬಗೆಯ ಕಿರುಕುಳ ಅವರಿಗೆ ಬಹುವರ್ಷಗಳಾದರೂ ತಪ್ಪಲಿಲ್ಲ .

ಅಷ್ಟು ಸಾಲದೆಂಬಂತೆ, ಆ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ , ಮನೆಯ ಮುಖ್ಯಭಾಗವಾದ ಸ್ಟುಡಿಯೋದಲ್ಲಿ ನೆಲದ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ದೊಡ್ಡ ಬಿರುಕು ಕಾಣಿಸಿಕೊಂಡಿತು; ಉತ್ತರ ಮತ್ತು ದಕ್ಷಿಣಗಳ ಕಡೆಗಿದ್ದ ಗೋಡೆಗಳಲ್ಲೂ ಇದು ಹರಡಿಕೊಂಡಿದ್ದಿತು. ಒಡನೆಯೆ ವೆಂಕಟಪ್ಪ ಕಂಟ್ರಾಕ್ಟರನನ್ನೂ, ಇತರ ಮಿತ್ರರನ್ನೂ ಕರೆಸಿ ಇದನ್ನು ತೋರಿಸಿ ವಿಚಾರಿಸಿದಾಗ, ಅಡಿಪಾಯ ಸಮರ್ಪಕವಾಗಿರದೆ ಕಟ್ಟಡವು ಒಂದು ಕಡೆ ಕುಸಿಯುತ್ತಿರುವುದಾಗಿ ತಿಳಿದುಬಂದಿತು. ಇದರ ದುರಸ್ತಿಯ ಪ್ರಯತ್ನ ಮಾಡತೊಡಗಿದರು.

ಈ ಕಾಲದಲ್ಲಿ ಅವರಿಗೆ ಮಲ್ಲೇಶ್ವರದ ವೇಮಾ ಲಾಡ್ಜಿನ ರಘುನಾಥರಾವ್‌ಸಾಹಿಬ್, ಹೈದರಾಬಾದಿನ ಡಾಕ್ಟರ್ ಮಹದಿ ಹಸನ್, ವಿಖ್ಯಾತ ಉದ್ಯಮಿ ವಿಕ್ರಮ ಸಾರಾಭಾಯ್, ಅವರ ಪತ್ನಿ ಸುಪ್ರಸಿದ್ಧ ನರ್ತಕಿ ಮೃಣಾಲಿನಿ ಸಾರಾಭಾಯ್, ವಿಜ್ಞಾನಿ ಎಚ್.ಜೆ. ಭಾಭಾ, ಕಲಾರಸಿಕ ಜೇಂಸ್ ಕಸಿನ್ಸ್ ಮತ್ತು ಮಾರ್ಗರೆಟ್ ಕಸಿನ್ಸ್ ಮೊದಲಾದವರ ಪರಿಚಯವಾಯಿತು. ವೆಂಕಟಪ್ಪನ ಸ್ಟುಡಿಯೋಗೆ ಇವರೆಲ್ಲ ಬರತೊಡಗಿದರು. ಎಚ್.ಜೆ. ಭಾಭಾ ಅವರು ತಮ್ಮ ತಂದೆಯ ವರ್ಣಚಿತ್ರವನ್ನು ತಯಾರಿಸುವಂತೆ ವೆಂಕಟಪ್ಪನ ಬೆನ್ನು ಹತ್ತಿದರು. ಭಾಭಾ ಅವರ ತಂದೆ ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿದ್ದವರು; ಅವರ ಕಾಲದಲ್ಲೇ ವೆಂಕಟಪ್ಪನಿಗೆ ವಿದ್ಯಾರ್ಥಿವೇತನ ದೊರಕಿದುದು. ಆದರೆ ವೆಂಕಟಪ್ಪ ಅವರನ್ನು ಎಂದೂ ಕಂಡಿರಲಿಲ್ಲ . ತಾವು ನೋಡದೆ ಇರುವವರ ಭಾವಚಿತ್ರ ಮಾಡಲಾರೆನೆಂದು ವೆಂಕಟಪ್ಪ ಭಾಭಾ ಅವರ ಕೋರಿಕೆಯನ್ನು ನಿರಾಕರಿಸಿದರು (1943ರ ಫೆಬ್ರುವರಿ ಹದಿನೇಳರಂದು).

ಆ ಕಾಲದಲ್ಲಿ ಅವರ ಓಡಿಯಾಟ ಹೆಚ್ಚಾಗಿರುತ್ತಿದ್ದು ತಾವೇ ಅಡಿಗೆ ಮಾಡಿಕೊಳ್ಳಲಾರದೆ ವಿದ್ಯಾರ್ಥಿ ಭವನದಿಂದ ಊಟ ತರಿಸಿಕೊಳ್ಳುತ್ತಿದ್ದರು. ವೆಂಕಟಪ್ಪ ಮದುವೆ ಮಾಡಿಕೊಳ್ಳದೆ ನೈಷ್ಠಿಕ ಬ್ರಹ್ಮಚಾರಿಯಾಗಿಯೆ ಉಳಿದು ಏಕಾಂಗಿಯಾಗಿದ್ದರು. ಅವನೀಂದ್ರನಾಥರ ಬಳಿ ಕಲೆಯನ್ನು ಅಭ್ಯಾಸ ಮಾಡುತ್ತಿರುವಾಗ, ಕಲೆಯನ್ನು ಒಲಿಸಿಕೊಳ್ಳಲು ಕಲೆಯೊಂದೆ ಗೀಳಾಗಿರಬೇಕು, ಬೇರೆ ಯಾವ ಹವ್ಯಾಸವೂ ಇರಬಾರದು ಎಂದು ಅವರು ಹೇಳುತ್ತಿದ್ದರು. ಇದರಿಂದ ಪ್ರಭಾವಿತರಾಗಿ ಮದುವೆಯ ಕಡೆ ಮನಸ್ಸು ಕೊಡಲಿಲ್ಲವೋ ಏನೋ. ಆದರೆ ಅವರಿಗೆ ಮದುವೆಯ ವಿಚಾರವಾಗಿ ಆಸಕ್ತಿಯಿದ್ದಿತೆನ್ನುವುದಕ್ಕೆ ಅವರ ದಿನಚರಿಯಲ್ಲಿ ಎರಡು ಉಲ್ಲೇಖಗಳಿವೆ.

ಒಂದು, 1937ರ ಜುಲೈ ಆರರಂದು ಬರೆದಿರುವ ಒಕ್ಕಣೆ. ಅವರ ಜ್ಯೋತಿಷಿ ಮಿತ್ರರು ಗೋಪಾಲಕೃಷ್ಣರಾಯರು ವೆಂಕಟಪ್ಪನ ಜಾತಕದಲ್ಲಿ ಬುಧ ಭುಕ್ತಿಯ ನಾಲ್ಕನೆಯ ಭಾಗ ನಡೆಯುತ್ತಿರುವಾಗಲೆ ಸ್ಟುಡಿಯೋದ ಕಟ್ಟೋಣವು ಜರುಗುವುದೆಂದು ಹೇಳಿದ ಮಾತು ಅಲ್ಲಿದೆ. ಅದರ ನಂತರ-"(ನನ್ನ) ಮದುವೆಯ ವಿಚಾರವಾಗಿ ಅವರು (ಗೋಪಾಲಕೃಷ್ಣರಾಯರು) ಇನ್ನೊಬ್ಬ ಜ್ಯೋತಿಷಿ ಪರಮೇಶ್ವರ ಮಧ್ಯಸ್ಥರು ಹೇಳಿದುದನ್ನು ಒಪ್ಪಲಿಲ್ಲ"

ಎಂದು ಬರೆದುಕೊಂಡಿದ್ದಾರೆ. ಆದರೆ ಗೋಪಾಲಕೃಷ್ಣರಾಯರು ಹೇಳಿದುದು ಏನು, ಮಧ್ಯಸ್ಥರು ಹೇಳಿದುದು ಏನು ಎಂಬುದು ಸ್ಪಷ್ಟವಾಗುವುದಿಲ್ಲ. ತಮ್ಮ ಮದುವೆಯ ವಿಚಾರವಾಗಿ ಇವರು ಜ್ಯೋತಿಷಿ ಮಿತ್ರರಲ್ಲಿ ಪ್ರಸ್ತಾಪಿಸಿದ್ದರು ಎಂಬುದಂತೂ ತಿಳಿದಂತಾಯಿತು. ಇನ್ನೊಂದು, ಮಾರನೆಯ ವರ್ಷ ಮಾರ್ಚ್ ಹನ್ನೊಂದರಂದು ಕಾಣಿಸಿರುವ ವಿವರ. ಅವರ ನೆಂಟರೂ ಒಡನಾಡಿಯೂ ಆಗಿದ್ದ ಡಿ. ವೆಂಕಟಪತಿ ಎಂಬುವರು ಬಂದು ವೆಂಕಟಪ್ಪನಿಗೆ ಬೆಂಗಳೂರಿನಲ್ಲಿರುವ ಶ್ರೀಮಂತ ರತ್ನಪಡಿವ್ಯಾಪಾರಿಯೊಬ್ಬರು ತಮ್ಮ ಮಗಳನ್ನು ಮದುವೆ ಮಾಡಿಕೊಡಲು ಕಾತರರಾಗಿದ್ದಾರೆಂದು ಹೇಳಿದುದು. ಈ ಪ್ರಯತ್ನ ಏನಾಯಿತೆಂದಾಗಲೀ, ವೆಂಕಟಪತಿಯು ತಂದ ಸುದ್ದಿಗೆ ವೆಂಕಟಪ್ಪನ ಪ್ರತಿಕ್ರಿಯೆ ಏನು ಎಂದಾಗಲಿ ತಿಳಿದು ಬರುವುದಿಲ್ಲ. ಎರಡೂ ಪ್ರಸಂಗಗಳು ವೆಂಕಟಪ್ಪ ಇನ್ನೂ ಮೈಸೂರಿನಲ್ಲಿ ವಾಸಮಾಡುತ್ತಿರುವಾಗಲೇ ನಡೆದುವು. ಮತ್ತು ಆ ವೇಳೆಗೆ ವೆಂಕಟಪ್ಪನ ವಯಸ್ಸು ನಲವತ್ತು ಮೀರಿದ್ದಿತು. ಪರಿಸ್ಥಿತಿಯ ಒತ್ತಡ ಏನೋ, ಅಂತೂ ವೆಂಕಟಪ್ಪ ಮದುವೆ ಮಾಡಿಕೊಳ್ಳಲೆ ಇಲ್ಲ. ನೆಂಟರ ಬಳಿ ಸುಳಿಯಲೂ ಇಲ್ಲ, ನೆಂಟರನ್ನು ಹತ್ತಿರ ಸೇರಿಸಲೂ ಇಲ್ಲ. ಕಡೆಗಾಲದಲ್ಲಿ ಮಾತ್ರ ತಮ್ಮ ತಂಗಿಯ ಮಗನನ್ನು ಕರೆದು ತಮ್ಮ ಬಳಿ ಇರುವಂತೆ ಕೇಳಿಕೊಂಡರು. ಬದುಕಿನುದ್ದಕ್ಕೂ ಒಂಟಿಯಾಗಿಯೇ ಇದ್ದರು.

೨

ವೆಂಕಟಪ್ಪ ಬೆಂಗಳೂರಿಗೆ ಬಂದೊಡನೆ ಕೈಗೊಂಡ ಕೆಲಸವೆಂದರೆ ತಮ್ಮ ವಾಸದ ಮನೆ, ಸ್ಟುಡಿಯೋಗಳನ್ನು ಕಟ್ಟಿಸುವುದು. ಇದಾದೊಡನೆ ಅವರ ಗಮನವನ್ನು ಸೆಳೆದದ್ದು ಮೈಸೂರು ಅರಮನೆಯ ಮೇಲೆ ತಾವು ಹೂಡಿದ ಮೊಕದ್ದಮೆ. ಅದು ಸ್ವಾತಂತ್ರ್ಯ ಪೂರ್ವಯುಗ. ಆಗ ಮೈಸೂರು ಇನ್ನೂ ದೇಶೀಯ ಸಂಸ್ಥಾನ; ಮಹಾರಾಜರು ಅಲ್ಲಿನ ಎಲ್ಲ ವಿದ್ಯಮಾನಗಳಿಗೂ ಸರ್ವಾಧಿಕಾರಿ. ಅವರ ಅನುಗ್ರಹವನ್ನು ಪ್ರಜೆಗಳೆಲ್ಲರೂ ಬಯಸುವವರೆ; ಅವರಿಗೆ ಹೆದರುವವರೆ. ಹೀಗಿರುವಾಗ ಮಹಾರಾಜರ ಮೇಲೆ ಮೊಕದ್ದಮೆಯನ್ನು ಹೂಡಿ ಅರಮನೆಯನ್ನು ಕೋರ್ಟಿಗೆ ಎಳೆಯುವ ಧೈರ್ಯ, ಸಾಹಸ ಯಾರಿಗಿದ್ದೀತು? ಈ ವಿಚಾರದಲ್ಲಿ ವೆಂಕಟಪ್ಪ ಮೊಟ್ಟಮೊದಲಿಗರು. ತಮ್ಮ ಸ್ವಾಭಿಮಾನಕ್ಕೆ ಏನೊಂದು ಕುಂದು ಬಂದರೂ ಒಡನೆಯೆ ಅವರು ಸಿಡಿದೇಳುವುದು ಅವರ ಸ್ವಭಾವ. ನೆರೆಮನೆಯ ಗುಡಿಸಲಿನಲ್ಲಿರುವ ಕೂಲಿಯಾಳಾಗಲಿ, ಇಡೀ ನಾಡಿನ ಆಳರಸನಾಗಲಿ ಅವರಿಗೆ ಲೆಕ್ಕವಿಲ್ಲ, ತಮಗೆ ಅಪಚಾರಮಾಡಿದವರಿಗೆ ಸರಿಯಾಗಿ ಪಾಠಕಲಿಸಬೇಕೆಂಬ ಹಟ ಅವರದ್ದು. ವೆಂಕಟಪ್ಪನನ್ನು ಮೆಚ್ಚಿಕೊಂಡಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಹೇಳಿದ್ದಂತೆ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ದಕ್ಷಿಣಭಾಗದ ಗೋಡೆಗೆ ಆನಿಸಿ ಇರಿಸಲೆಂದು ಕೆಲವು ಅರ್ಧಶಿಲ್ಪ ಫಲಕಗಳನ್ನು ತಯಾರಿಸುವಂತೆ ಹಲವಾರು ತಿಂಗಳುಗಳ ಸಿದ್ಧತೆಮಾಡಿಕೊಂಡು 1927ರಿಂದ ಆ ಕೃತಿಗಳ ನಿರ್ಮಾಣದಲ್ಲಿ ತೊಡಗಿದ್ದರು. ಕೆಲಸ ಮುಗಿಯುವಷ್ಟರಲ್ಲೆ ಮಹಾರಾಜರು ತೀರಿಕೊಂಡ ಮಾತ್ರಕ್ಕೆ ಅವರು ಮಾಡಿದ್ದ ಅಪ್ಪಣೆಯೂ ಅಳಿಸಿಹೋಗುವುದೆ? ಮುಂದೆ ಮಹಾರಾಜರೆಂದು ಬಂದವರು ತಮ್ಮ ಹಿರಿಯರ ಆದೇಶವನ್ನು ಮನ್ನಿಸಬೇಕಲ್ಲವೆ? ವೆಂಕಟಪ್ಪನು ಅರಮನೆಗೆಂದೇ ಮಾಡಿದ,

ಇನ್ನೇನು ಮುಗಿಯುವುದರಲ್ಲಿದ್ದ ಕಲಾಕೃತಿಗಳನ್ನು ನಿರಾಕರಿಸಬಹುದೆ? ವೆಂಕಟಪ್ಪನೆಂದರೆ ಆಗದಿದ್ದ ಕೆಲವರು ಅಧಿಕಾರಿಗಳು ಮಾಡಿದ ಕುತಂತ್ರ ಇದು ಎಂದು ವೆಂಕಟಪ್ಪನಿಗೆ ಅನಿಸಿತು. ಅರಮನೆಯ ಅಧಿಕಾರಿಗಳು ಅವರ ಕೃತಿಗಳನ್ನು ಬೇಡವೆಂದುದೂ, 1924ರಿಂದಲೂ ಅರಮನೆಯ ಕೆಲಸದಲ್ಲಿ ತೊಡಗಿದ್ದು ಹಿಂದಿನ ಮಹಾರಾಜರ ನೇರವಾದ ಅಪ್ಪಣೆಯಂತೆಯೇ ಅಳವಡಿಸಿಕೊಂಡಿದ್ದ ಸ್ಟುಡಿಯೋವನ್ನು ಈಗ ಬಿಡಬೇಕೆಂದು ಹೇಳಿದುದೂ ಅವರ ಸ್ವಾಭಿಮಾನಕ್ಕೆ ಧಕ್ಕೆಯನ್ನುಂಟುಮಾಡಿದವು. ಅವರಿಗೆ ಬಿಸಿಮುಟ್ಟಿಸದೆ ಇರುವುದು ವೆಂಕಟಪ್ಪನ ಸ್ವಭಾವವಲ್ಲ.

ಈ ಕಲಾಕೃತಿಗಳನ್ನು ತಯಾರಿಸುವಂತೆ ಹಿಂದಿನ ಮಹಾರಾಜರು ಅಪ್ಪಣೆಮಾಡಿದ್ದುದನ್ನು ಈಗಿನ ಮಹಾರಾಜರು ಪರಿಪಾಲಿಸಬೇಕೆಂದೂ, ಇದಕ್ಕೆ ತಪ್ಪಿದರೆ ಕೃತಿಗಳ ತಯಾರಿಕೆಗೆ ಮುಟ್ಟುವ ವೆಚ್ಚ ನಲವತ್ತು ಸಾವಿರ ರೂಪಾಯಿಗಳನ್ನು ಮಹಾರಾಜರು ಕಲಾವಿದನಿಗೆ ಕಟ್ಟಿಕೊಡತಕ್ಕದ್ದೆಂದೂ ನ್ಯಾಯಾಲಯದಲ್ಲಿ ವೆಂಕಟಪ್ಪನ ಕಟ್ಟಳೆ. ಮೈಸೂರಿನಲ್ಲಿ ತಮ್ಮ ವಕೀಲಮಿತ್ರರು ಎಂ.ಎ. ದೊರೆಸ್ವಾಮಿ ಅಯ್ಯಂಗಾರರು ಮತ್ತು ಬೆಂಗಳೂರಿನಲ್ಲಿ ವಕೀಲರಾಗಿದ್ದ ಅವರ ಸೋದರ ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರರು ಇವರಿಗೆ ವಕಾಲತ್ತು ವಹಿಸಿ 1943ರ ಸೆಪ್ಟೆಂಬರ್ ಐದನೆಯ ದಿನ ಮಹಾರಾಜರಿಗೆ ನೋಟೀಸೊಂದನ್ನು ಜಾರಿಮಾಡಿಸಿದರು. ಉತ್ತರವಾಗಿ ಬಂದ ಪತ್ರ ಇವರಿಗೆ ಸಮಾಧಾನವನ್ನು ತಾರದೆ, ಅದೇ ತಿಂಗಳು ಮೂವತ್ತನೆಯ ತಾರೀಖಿನಂದು ಜಿಲ್ಲಾ ಕೋರ್ಟಿನಲ್ಲಿ ನಲವತ್ತು ಸಾವಿರ ರೂಪಾಯಿಗಳಿಗಾಗಿ ಅರಮನೆಯ ಮೇಲೆ (ಮಹಾರಾಜರ ಸಮ್ಮುಖ ಕಾರ್ಯದರ್ಶಿಯ ಮೂಲಕ) ದಾವಾ ಹೂಡಿದರು. ಮುಂದಿನ ವರ್ಷ ಜನವರಿ ಆರರಂದು ಆ ಕೋರ್ಟಿನ ನ್ಯಾಯಾಧೀಶರು ಅರ್ಜಿಯನ್ನು ನಿರಾಕರಿಸಿದರು. ವೆಂಕಟಪ್ಪನ ಕೋರಿಕೆಯಂತೆ ವಕೀಲ ಸೋದರರು ಮದರಾಸಿನ ಸುಪ್ರಸಿದ್ಧ ನ್ಯಾಯವಾದಿ ವಿ.ವಿ. ಶ್ರೀನಿವಾಸ ಅಯ್ಯಂಗಾರರ ಸಲಹೆಯನ್ನು ಕೇಳಲು, ಅವರು ಕೇಸನ್ನು ಪರಿಶೀಲಿಸಿ, ಉಚ್ಚ ನ್ಯಾಯಾಲಯಕ್ಕೆ ಪರಾಮರ್ಶೆಗೆ ಎಂದರೆ, ಅಪೀಲು ಹೋಗಲು ತಕ್ಕದೆಂದು ಅಭಿಪ್ರಾಯಪಟ್ಟರು; ಬೇಕಿದ್ದರೆ ತಾವೆ ಅದನ್ನು ಉಚ್ಚನ್ಯಾಯಾಲಯದಲ್ಲಿ ನಡೆಸುವುದಾಗಿಯೂ ಹೇಳಿದರು. ಅದರಂತೆ 1944ರ ಜೂನ್ ಐದರಂದು ವೆಂಕಟಪ್ಪನ ಕಟ್ಟಳೆ ಉಚ್ಚನ್ಯಾಯಾಲಯವನ್ನು ಮುಟ್ಟಿತು. ಇದು ಮುಂದೆ 'ಅರಮನೆ ಅಪೀಲ್' ಎಂದು ವಿಖ್ಯಾತವಾಯಿತು ಶ್ರೀನಿವಾಸ ಅಯ್ಯಂಗಾರರೆ ವಕಾಲತ್ತು ವಹಿಸಿ ವಾದಮಾಡಿದರು.

ಎರಡು ವರ್ಷಗಳು ವಾದವಿವಾದಗಳು ನ್ಯಾಯಾಲಯದಲ್ಲಿ ನಡೆದ ಮೇಲೆ, ಅರಮನೆಯವರು 1946ರ ಜೂನ್ ತಿಂಗಳಲ್ಲಿ ಹೊರಗೆ ಒಪ್ಪಂದಮಾಡಿಕೊಳ್ಳುವ ಹವಣಿಕೆ ಮಾಡಿದರು. ವೆಂಕಟಪ್ಪನಿಗೇನು ಇದು ರುಚಿಸಲಿಲ್ಲ; ಆದರೆ ವಕೀಲರಿಗೆ "ದೇವರು ನಿಮಗೆ ದಾರಿತೋರಿಸಿದಂತೆ ಮಾಡಿ" ಎಂದು ಹೇಳಿದರು. ವಕೀಲರಿಗೂ ಎದುರು ಪಕ್ಷದವರ ಮಾತುಕತೆಯ ಧೋರಣೆ ಹಿಡಿಸದೆ ಅದು ಅಷ್ಟಕ್ಕೇ ನಿಂತಿತು. ನ್ಯಾಯಾಲಯದಲ್ಲಿ ಕಟ್ಟಳೆ ಮುಂದುವರೆದು 1946ರ ಅಕ್ಟೋಬರ್ ತಿಂಗಳಿನ ಇಪ್ಪತ್ತೇಳನೆಯ ದಿನ ನ್ಯಾಯಾಧೀಶರು ತೀರ್ಪು ಕೊಟ್ಟು ವೆಂಕಟಪ್ಪನ ಅಹವಾಲನ್ನು ತಳ್ಳಿ ಹಾಕಿದರು. ಅರಮನೆಯು

ನ್ಯಾಯಾಲಯದ ಪರಿಧಿಯೊಳಗೆ ಬರುವ ವಿವರವಲ್ಲವೆಂದು ಅವರ ಅಭಿಪ್ರಾಯ. ನ್ಯಾಯಾಲಯದಲ್ಲಿ ವೆಂಕಟಪ್ಪನಿಗೆ ಸೋಲಾದರೂ, ಜನರ ಗಮನವನ್ನು ಈ ಕಟ್ಟಳೆ ಸೆಳೆಯಿತು. ಪತ್ರಿಕೆಗಳಲ್ಲಿ ವರದಿಗಳು ಬಂದುದಲ್ಲದೆ, ವೆಂಕಟಪ್ಪನಿಗೆ ಅನುಕೂಲವಾದ ಪ್ರತಿಕ್ರಿಯೆಗಳು ವ್ಯಕ್ತವಾದುವು.

ವೆಂಕಟಪ್ಪನ ಕಟ್ಟಳೆ ನ್ಯಾಯಾಲಯದಲ್ಲಿ ಬಿದ್ದುಹೋದರೂ ಆಗಿನ ಮಹಾರಾಜರು ವೆಂಕಟಪ್ಪನಿಗೆ ಐದುಸಾವಿರ ರೂಪಾಯಿಗಳನ್ನು ಪರಿಹಾರಧನವಾಗಿ ಕೊಡುವೆನೆಂದರು; ಅರಮನೆಗೆಂದು ಮಾಡಿದ್ದ ಕಲಾಕೃತಿಗಳನ್ನು ತಮಗೆ ಇಷ್ಟಬಂದಂತೆ ವಿನಿಯೋಗಿಸ ಬಹುದೆಂದೂ, ವೆಂಕಟಪ್ಪನು ಒಪ್ಪಿಗೆ ಸೂಚಿಸಿದೊಡನೆ ಹಣವನ್ನು ಸಲ್ಲಿಸುವುದಾಗಿಯೂ ತಿಳಿಸಿದರು. ಅರಮನೆಯ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿದ್ದ ಮಿರ್ಲೆ ಲಕ್ಷ್ಮೀನಾರಾಯಣಪ್ಪ ವೆಂಕಟಪ್ಪನ ಪರವಾಗಿ ವಾದಿಸಿದ್ದ ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರರಿಗೆ ಈ ಸಂದೇಶವನ್ನು ಮುಟ್ಟಿಸಿದರು. ಗೋಪಾಲಸ್ವಾಮಿ ಅಯ್ಯಂಗಾರರು ವೆಂಕಟಪ್ಪನಿಗೆ ಇದನ್ನು ತಿಳಿಸಿದಾಗ, ವೆಂಕಟಪ್ಪ ಹಣವನ್ನು ಸ್ವೀಕರಿಸಲು ನಿರಾಕರಿಸಿಬಿಟ್ಟರು. ಗೋಪಾಲಸ್ವಾಮಿ ಅಯ್ಯಂಗಾರರು ಮಹಾರಾಜರೇ ಯಾವ ಷರತ್ತೂ ಇಲ್ಲದೆ ಹಣವನ್ನು ಕೊಡುತ್ತಿರುವಾಗ ವೆಂಕಟಪ್ಪ ಸ್ವೀಕರಿಸುವುದು ಒಳ್ಳೆಯದೆಂದು ಸೂಚಿಸಿದರು; ಹಿರಿಯ ವಕೀಲರೂ ಸನ್ಮಾನ್ಯರೂ ಆಗಿದ್ದ ವಿ.ವಿ. ಶ್ರೀನಿವಾಸ ಅಯ್ಯಂಗಾರರೂ ಇದೆ ಅಭಿಪ್ರಾಯ ಪಟ್ಟರು. ಆದರೆ ವೆಂಕಟಪ್ಪ ತಮ್ಮ ನಿರ್ಧಾರವನ್ನು ಕದಲಿಸಲಿಲ್ಲ . ತಮಗೆ ನ್ಯಾಯವಾಗಿ ದೊರಕಬೇಕಾಗಿದ್ದ ಹಣ ಸಂದಿದ್ದರೆ ಸರಿ; ಈ ದಾನದ ಹಣ ತಮ್ಮ ಮರ್ಯಾದೆಗೆ ತಕ್ಕುದಲ್ಲ , ಅದನ್ನು ಎಷ್ಟುಮಾತ್ರಕ್ಕೂ ನಾನು ಮೂಸಿನೋಡುವುದೂ ಇಲ್ಲ ಎಂದು ಪಟ್ಟು ಹಿಡಿದರು. ವೆಂಕಟಪ್ಪನ ನಿರ್ಧಾರವನ್ನು ಅರಮನೆಯ ವಕೀಲರಿಗೆ ಅಯ್ಯಂಗಾರರು ತಿಳಿಸುವ ಪತ್ರ ಸೌಮ್ಯವಾಗಿದ್ದಿತು. ಇದನ್ನು ವೆಂಕಟಪ್ಪ ನೋಡಿ "ಈ ಕಾಗದದ ಧ್ವನಿ ನನಗೆ ರುಚಿಸುವುದಿಲ್ಲ . ಅದು ಇನ್ನೂ ಜೋರಾಗಿ ಖಂಡತುಂಡಾಗಿರಬೇಕು. ಮಹಾರಾಜರ ದಾನದ ಹಣವನ್ನು ನಾನು ಸ್ವೀಕರಿಸಲು ಎಷ್ಟುಮಾತ್ರಕ್ಕೂ ಸಿದ್ಧನಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಕಾಣಿಸಿ" ಎಂದು ಸೂಚಿಸಿದರು! ವೆಂಕಟಪ್ಪನ ಸ್ವತಂತ್ರ ಮನೋವೃತ್ತಿ , ಧೈರ್ಯ, ಆತ್ಮವಿಶ್ವಾಸ, ದಾರ್ಢ್ಯ ಇವು ಜನರಿಗೆ ವೇದ್ಯವಾದುವು.

ಈ ನ್ಯಾಯಾಲಯದ ಹಗರಣ ನಡೆಯುತ್ತಿರುವಾಗಲೆ ಅವರಿಗೆ ನೆರೆಯವರಿಂದ ತೊಂದರೆ ಹೆಚ್ಚುತ್ತ ಬಂದಿತು. ನೆರೆಯ ನಿವೇಶನದಲ್ಲಿರುತ್ತಿದ್ದ ಮರಿಗೌಡನೆಂಬ ಕೂಲಿಯಾಳಿಂದ 1942ರಷ್ಟು ಹಿಂದೆಯೇ ಒದಗಿದ ಕಿರುಕುಳದ ವಿಚಾರ ಆಗಲೇ ಹೇಳಿದೆ. ಪೊಲೀಸರಿಂದ ಅಷ್ಟೇನು ಅನುಕೂಲವಾಗಲಿಲ್ಲ . ಅವನ ಮನೆಯವರು, ಅವನ ಊರಿನವರು ಹೆಚ್ಚು ಹೆಚ್ಚಾಗಿ ಬಗೆಬಗೆಯಾಗಿ ತೊಂದರೆ ಕೊಡತೊಡಗಿದರು. ಅವರ ಮನೆಯ ಮುಂದಿನ ಹೊಂಗೆ ಮರಗಳನ್ನು ರಾತ್ರಿ ಕಡಿದೊಯ್ಯುವುದು, ಅವರ ಮನೆಗೆ ಕಲ್ಲುಗಳನ್ನೆಸೆಯುವುದು, ಅವರಿಲ್ಲದ ವೇಳೆ ತೆರೆದ ಕಿಟಕಿಯಿಂದ ಹೊಲಸನ್ನು ಅವರ ಮನೆಯೊಳಗೆ ಹಾಕುವುದು, ಆವರಣದೊಳಗೆ ಹುಲ್ಲು ಮೇಯಲು ಅವರ ಎಮ್ಮೆಗಳನ್ನು ಬಿಡುವುದು, ಅವರ ನಿವೇಶನದಲ್ಲಿನ ಹುಲ್ಲನ್ನು ಕತ್ತರಿಸಿಕೊಂಡು ಹೋಗುವುದು, ಅವರು

ಹೊರಗೆ ಕಾಣಿಸಿಕೊಂಡಾಗ ಅವರನ್ನು ಅವಾಚ್ಯಶಬ್ದಗಳಲ್ಲಿ ಬಯ್ಯುವುದು, ಬೆದರಿಸುವುದು ಇವೆಲ್ಲ ಮತ್ತೆ ಮತ್ತೆ ನಡೆಯುತ್ತಿದ್ದುವು. ನೆರೆಮನೆಯನ್ನು ಕಟ್ಟುವಾಗ ಇವರ ನಿವೇಶನವನ್ನು ಒತ್ತರಿಸಿಕೊಂಡು ಬಂದುದೂ ಉಂಟು. ಒಂದೊಂದು ತೊಂದರೆಗೂ ವೆಂಕಟಪ್ಪ ಪೊಲೀಸ್, ಕೋರ್ಟು, ಕಚೇರಿ ಎಂದು ಅಲೆದಾಡಬೇಕಾಯಿತು.

ಇದನ್ನೆಲ್ಲ ಅವರ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ. ನಿದರ್ಶನಕ್ಕೆ, 1946ರ ಜುಲೈ ಆರರಂದು ಬೆಳಿಗ್ಗೆ ತಮ್ಮ ನಿವೇಶನದಲ್ಲಿ ಹುಡುಗನೊಬ್ಬ ಹುಲ್ಲು ಕತ್ತರಿಸುತ್ತಿರುವುದನ್ನು ಕಂಡರು. ಇವರು ಹೊರಗೆ ಬಂದು ಆ ಹುಡುಗನ ಕೈಲಿದ್ದ ಕುಡುಗೋಲನ್ನು ಕಿತ್ತುಕೊಂಡರು. ಹುಡುಗ ಓಡಿಹೋದ. ಒಂದು ಗಂಟೆ ಕಳೆದಮೇಲೆ ಐವತ್ತು, ಅರವತ್ತು ಮಂದಿ ಕುಣಿಗಲು ಕಡೆಯ ಕೂಲಿಯಾಳುಗಳು (ಅದೇ ಬಡಾವಣೆಯ ಹದಿನೈದನೆಯ ಅಡ್ಡರಸ್ತೆಯ ಗುಡಿಸಲುಗಳಲ್ಲಿರುತ್ತಿದ್ದವರು) ಒಟ್ಟಾಗಿ, ವೆಂಕಟಪ್ಪ ತಮ್ಮ ಮನೆಯ ಹತ್ತಿರ ಬೀದಿಯಲ್ಲಿದ್ದಾಗ ಇವರ ತಲೆ ಕಡಿಯುವೆವೆಂದು ಬಂದು ಅವರ ಸುತ್ತ ಸೇರಿದರು; ಎಲ್ಲರ ಕೈಯಲ್ಲೂ ದೊಣ್ಣೆ, ಮಚ್ಚುಗಳಿದ್ದುವು. ಹುಲ್ಲು ಕತ್ತರಿಸುತ್ತಿದ್ದ ಹುಡುಗನನ್ನು ಹೊಡೆದದ್ದೇಕೆ ಎಂದು ಕೇಳಿ, ಕೆಟ್ಟಮಾತುಗಳಿಂದ ಬಯ್ಯತೊಡಗಿದರು. ಮನೆಗೆ ಹಿಂದಿರುಗುತ್ತಿದ್ದ ವೆಂಕಟಪ್ಪ ಮನೆಗೆ ಹೋಗದೆ ಮಲ್ಲೇಶ್ವರ ಪೊಲೀಸ್ ಠಾಣೆಗೆ ಹೋದರು; ಇವರನ್ನು ಬಯ್ಯುತ್ತ, ಬೆದರಿಸುತ್ತ ಕೂಲಿಯಾಳುಗಳ ತಂಡ ಹಿಂಬಾಲಿಸುತ್ತಲೇ ಇದ್ದಿತು. "ದೇವರ ದಯೆಯೇ ಇಂದು ನನ್ನನ್ನು ಕಾಪಾಡಿತು" ಎಂದು ವೆಂಕಟಪ್ಪ ಬರೆದುಕೊಂಡಿದ್ದಾರೆ. ಪೊಲೀಸರಿಗೆ ಸಲ್ಲಿಸಿದ ಫಿರ್ಯಾದು ಮಾತ್ರ ಯಾವ ಪ್ರಯೋಜನಕ್ಕೂ ಬರಲಿಲ್ಲ. ಇಂಥ ಹಲವಾರು ಪ್ರಸಂಗಗಳು. ಇನ್ನು ಮನಃಶಾಂತಿ ಎಲ್ಲಿ ಬರಬೇಕು?

೩

ಈ ಸಮಯದಲ್ಲಿ ವೆಂಕಟಪ್ಪ ಚಿತ್ರಕರ್ಮಕ್ಕಾಗಲಿ, ಶಿಲ್ಪಕ್ಕಾಗಲಿ ಅಷ್ಟಾಗಿ ಗಮನ ಕೊಟ್ಟಂತೆ ಕಾಣುವುದಿಲ್ಲ. ಹಾಗೆ ನೋಡಿದರೆ, ಅವರು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದ ಮೇಲೆ ಹೊಸ ಕಲಾಕೃತಿಗಳನ್ನು ಮಾಡಲೇ ಇಲ್ಲ. ಹಿಂದೆ, ಮೈಸೂರಿನಲ್ಲಿ, ಮಾಡಿದುವುಗಳನ್ನೇ ತಿದ್ದುವುದು, ಇನ್ನಷ್ಟು ಚೆಲುವನ್ನು ಮೂಡಿಸುವುದು, ಹೆಚ್ಚು ನಾಜೂಕಾದ ವಿವರಗಳನ್ನು ಒಡಮೂಡಿಸುವುದು ಇಷ್ಟೆ ಅವರು ಮಾಡಿದುದು. ಮೇಲೆ ಕಾಣಿಸಿದ ಕೋಟಲೆಗಳು ಅವರ ಕಾಲವನ್ನೂ ಮನಸ್ಸಿನ ನೆಮ್ಮದಿಯನ್ನು ಸಾಕಷ್ಟು ಕಳೆದಿದ್ದುವು. ಮೇಲಾಗಿ, ಅವರ ಆರೋಗ್ಯವೂ ಕೆಡುತ್ತ ಬಂದಿತು. 1943ರ ಮಾರ್ಚ್ ತಿಂಗಳಲ್ಲಿ ಕೈಬೆರಳುಗಳು ಸೆಟೆದುಕೊಳ್ಳುವುದು ಕಾಣಿಸಿಕೊಂಡಿತು. ಅದಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯಬೇಕಾಯಿತು. ವೃದ್ಧಾಪ್ಯದ ನಿಮಿತ್ತ ಸಂಧಿವಾತವೆಂದು ಅವರ ತೊಂದರೆಯನ್ನು ಗುರುತಿಸಿ ಅದಕ್ಕೆ ಚಿಕಿತ್ಸೆ ಮಾಡತೊಡಗಿದರು. ವೃದ್ಧಾಪ್ಯವೆಂದರೆ ಆಗ ಅವರಿಗೆ ಐವತ್ತೆಂಟು ವರ್ಷ ವಯಸ್ಸು ಅಷ್ಟೆ. ಚಿತ್ರಗಳನ್ನು ಬಿಡಿಸುವುದಾಗಲಿ ಶಿಲ್ಪವನ್ನು ಮಾಡುವುದಾಗಲಿ, ಕಡೆಗೆ ಕುಳಿತುಕೊಳ್ಳುವುದು, ನಡೆಯುವುದು ಕೂಡ ಕಷ್ಟವೆನಿಸಹತ್ತಿತು.

ಆದರೂ ವೆಂಕಟಪ್ಪನದೇನು ಸುಮ್ಮಕೂಡುವ ಪ್ರಕೃತಿಯಲ್ಲ. ಇಷ್ಟು ತೊಂದರೆಯಲ್ಲೂ ಏನಾದರೂ ಮಾಡುತ್ತಲೆ ಇರುವರು. ಸ್ವಯಂಪಾಕ ಬೇರೆ. ಸ್ಟುಡಿಯೋಗೆ ಬಂದು ಹೋಗುವವರೂ ಹೆಚ್ಚಾದರು. ಅವರ ಚಿತ್ರಗಳನ್ನೂ, ಶಿಲ್ಪಗಳನ್ನೂ, ಅರ್ಧಶಿಲ್ಪ ಫಲಕಗಳನ್ನೂ ವಿಶಾಲವಾದ ಎರಡು ಕೋಣೆಗಳಲ್ಲಿ ಅಳವಡಿಸಿ, ಬಂದವರಿಗೆ ಅವನ್ನು ಸಾವಧಾನವಾಗಿ ತೋರಿಸಿ, ಅವುಗಳ ಸಂದರ್ಭಗಳನ್ನೂ ವೈಶಿಷ್ಟ್ಯಗಳನ್ನೂ ವಿವರಿಸುವರು. ಬಂದು ಹೋಗುವವರ ಸಲುವಾಗಿ ನಿರ್ದಿಷ್ಟವಾದ ಸಮಯವನ್ನೂ ಕಾಣಿಸಿದರು. ಅಲ್ಲಿ ತಮ್ಮದೇ ಆದ, ಉಚಿತವಾದ ಕಲಾಶಾಲೆಯನ್ನು ತೆರೆಯಬೇಕೆಂಬ ಬಯಕೆಯೇನೋ ಬತ್ತಿಹೋಗಿರಲಿಲ್ಲ. ಆದರೆ ಹಲವಾರು ಜಂಜಡಗಳ ನಡುವೆ ಇದರತ್ತ ಅವರ ಗಮನ ಹರಿಯಲಿಲ್ಲ; ಅದಕ್ಕಾಗಿ ಪ್ರಯತ್ನಪಡುವ ಹುಮ್ಮಸವೂ ಇರಲಿಲ್ಲ.

ಆದರೆ ವೀಣಾಭ್ಯಾಸದ ಗೀಳು ಮಾತ್ರ ತಪ್ಪಿರಲಿಲ್ಲ. ಈ ಸಂದರ್ಭದಲ್ಲಿ ಅವರ 'ದಗಾ' ವೀಣೆಯ ವಿಚಾರ ಹೇಳಬೇಕು. ಈಗ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯ ಸಂಗ್ರಹದಲ್ಲಿ ಅವರು ತಯಾರಿಸಿದ್ದೆಂದು 'ದಗ ವೀಣೆ' ಎಂಬ ಹೆಸರನ್ನು ಹೊತ್ತ ವೀಣೆಯೊಂದಿದೆ. 'ದಗ' ವೀಣೆ ಎಂದರೇನು? ಸೋಜಿಗವಾದ ಹೆಸರು ತಾನೆ? 'ದಗ' ಎನ್ನುವುದು ಯಾವ ಶಾಸ್ತ್ರೀಯ ಪ್ರಕಾರವೂ ಅಲ್ಲ; ಕನ್ನಡದ 'ದಗಾ' (ಎಂದರೆ ವಂಚನೆ, ಮೋಸ, ಠಕ್ಕು) ಎಂಬ ಮಾತಷ್ಟೆ ಅದು! ವೀಣೆಗೆ ಈ ಹೆಸರೇನು? ಇದಕ್ಕೆ ಹಿನ್ನೆಲೆಯಾಗಿ ಸ್ವಾರಸ್ಯವಾದ ಪ್ರಸಂಗವೊಂದಿದೆ.

1926ರಷ್ಟು ಹಿಂದೆಯೇ ಇವರಿಗೆ ಅಭ್ಯಾಸದ ವೀಣೆಯೊಂದನ್ನು ತಯಾರಿಸಿಕೊಟ್ಟ ಹಿರಿಪುವಾರ ಹಳ್ಳಿ ರುದ್ರಪ್ಪ (ವೀಣೆ ರುದ್ರಪ್ಪ)ನ ವಿಚಾರ ಆಗಲೆ ಬಂದಿತಷ್ಟೆ. ಇವರು ಕೊಂಚಕಾಲ ವೆಂಕಟಪ್ಪನ ಹತ್ತಿರ ವೀಣಾಭ್ಯಾಸವನ್ನೂ ಮಾಡಿದರು. ಆಗ ವೆಂಕಟಪ್ಪ ವೀಣೆಯ ಗಾತ್ರ, ಅಳತೆ, ಮೆಟ್ಟಲು, ದಂಡಿ ಮೊದಲಾದ ವಿವರಗಳನ್ನು ಕುರಿತಂತೆ ಆಳವಾದ ಅಧ್ಯಯನ ನಡೆಸಿ, ತಮಗೆ ಸಮರ್ಪಕವೆಂದು ತೋರಿದ ವಿವರಗಳನ್ನು ಅಳವಡಿಸಿ ವೀಣೆಯೊಂದನ್ನು ತಯಾರಿಸುವಂತೆ 1938ರ ಕಡೆಯ ಭಾಗದಲ್ಲಿ (ಅಕ್ಟೋಬರ್) ರುದ್ರಪ್ಪನಿಗೆ ಹೇಳಿದರು. ಅವರು ಆ ವರ್ಷಗಳ ಬೇಸಗೆಯಲ್ಲಿ ಮೈಸೂರಿನಲ್ಲಿರಲಾರದೆ ಉದಕಮಂಡಲಕ್ಕೆ ಹೋಗಿ ಅಲ್ಲಿ ಕೆಲವು ತಿಂಗಳುಗಳನ್ನೊ ವಾರಗಳನ್ನೊ ಕಳೆಯುವ ವಾಡಿಕೆಯಿದ್ದಿತು. ಅಲ್ಲಿನ ಹವಾಮಾನಕ್ಕೂ ಅನುಕೂಲವಾಗಿರುವಂತೆ ವೀಣೆಯನ್ನು ತಯಾರಿಸಿ ತಮ್ಮೊಂದಿಗೆ ಒಯ್ಯುವ ಬಯಕೆ ಅವರದ್ದು. ಆಗ ಅವರಲ್ಲಿ ಬೇರೆ ಬೇರೆ ಗಾತ್ರದ ನಾಲ್ಕು ವೀಣೆಗಳಿದ್ದುವು. ಆದರೂ ಈ ದೊಡ್ಡ ಪ್ರಮಾಣದ ವೀಣೆಯನ್ನು ಮಾಡಿಸುವ ಮನಸ್ಸಾಯಿತು. ರುದ್ರಪ್ಪ ಒಂದು ತಿಂಗಳಲ್ಲೇ ಇದನ್ನು ಮಾಡಿ ಕೊಡುವೆನೆಂದು ಕೆಲಸ ಆರಂಭಿಸಿ, ಒಂದು ವರ್ಷವಾದರೂ ಅರ್ಧಕೆಲಸ ಮಾತ್ರ ಮುಗಿಸಿದ್ದರು; ವೆಂಕಟಪ್ಪನಿಂದ ಮುಂಗಡ ಹಣವನ್ನೂ ತೆಗೆದುಕೊಂಡಿದ್ದರು. ಆ ನಡುವೆ ಮೂರು-ನಾಲ್ಕು ಹೊಸ ವೀಣೆಗಳನ್ನು ಇತರರಿಗೆ ಮಾಡಿಕೊಟ್ಟಿದ್ದರೂ, ತಮಗೆ ವೀಣಾಗುರುಗಳೂ ಆಗಿದ್ದ ವೆಂಕಟಪ್ಪನ ಕೆಲಸವನ್ನು ಮಾತ್ರ ಮುಗಿಸದೆ ಇಟ್ಟಿದ್ದರು. ವೆಂಕಟಪ್ಪ 1939ರ ಮೇ ತಿಂಗಳ ವರೆಗೆ ಕಾದು, ರುದ್ರಪ್ಪನಿಗೆ ಹೇಳಿಕಳುಹಿಸಿದರು. ರುದ್ರಪ್ಪ "ಈ ಬಾರಿ ಉದಕಮಂಡಲಕ್ಕೆ

ಹಳೆಯ ವೀಣೆಯನ್ನೇ ತೆಗೆದುಕೊಂಡು ಹೋಗಿ'' ಎಂದು ಸೂಚಿಸಿದ ಉದ್ಧಟತನವನ್ನು ಕಂಡು ವೆಂಕಟಪ್ಪ ಸಿಟ್ಟಿಗೆದ್ದರು. ಮುಂದೆ ವೆಂಕಟಪ್ಪ ರುದ್ರಪ್ಪನನ್ನು 'ಗುರುದ್ರೋಹಿ ರುದ್ರಪ್ಪ' ಎಂದೇ ಕರೆಯತೊಡಗಿದರು. ವೆಂಕಟಪ್ಪ ಮೈಸೂರಿನಲ್ಲಿ ಇರುವವರೆಗೂ (ಎಂದರೆ 1940ರ ಅಕ್ಟೋಬರ್ ಆರರವರೆಗೂ) ರುದ್ರಪ್ಪ ಅವರನ್ನು ಕಾಣಲಿಲ್ಲ. ಮುಂದೆ ಅವರು ಬೆಂಗಳೂರಿಗೆ ಬಂದ ಮೇಲೂ 1944ರ ವರೆಗೆ ಆತ ವೆಂಕಟಪ್ಪನಿಗೆ ಮುಖವನ್ನೇ ತೋರಿಸಲಿಲ್ಲ. ಆ ವರ್ಷದ ಫೆಬ್ರುವರಿ ತಿಂಗಳಲ್ಲಿ ವೆಂಕಟಪ್ಪ ತಾವೇ ಕೂತು ರುದ್ರಪ್ಪ ಅರ್ಧ ಮುಗಿಸಿದ್ದ ವೀಣೆಯನ್ನು ಪೂರ್ತಿಮಾಡಿದರು. ವೀಣೆಯ ನಾದ ಅವರಿಗೆ ಸಮಾಧಾನವನ್ನು ತಂದಿತು. ಆ ತಿಂಗಳ ಇಪ್ಪತ್ತಾರನೆಯ ದಿನ ವೀಣೆಯ ಸೋರೆಬುರಡೆಯ ಮೇಲೆ ರುದ್ರಪ್ಪ ತಮಗೆ ದಗಾಹಾಕಿದುದರ (ಎಂದರೆ ಮೋಸ ಮಾಡಿದುದರ) ನೆನಪಿಗಾಗಿ 'ಗುರುದ್ರೋಹಿ ರುದ್ರಪ್ಪನ ದಗ ವೀಣೆ' ಎಂಬ ಬರಹವನ್ನು ಬರೆದು, ವೀಣೆಯ ತಯಾರಿಕೆ ಮೊದಲಾದ ಮತ್ತು ಮುಗಿದ ದಿನಗಳನ್ನೂ ಉಲ್ಲೇಖಿಸಿದರು. ಆದರೆ ವೀಣೆಯ ಮೇಲೆ ಆ ಗುರುದ್ರೋಹಿಯ ಹೆಸರು ಇದ್ದುದರಿಂದ ಅವರಿಗೆ ವೀಣೆ ನುಡಿಸುವ ಇಚ್ಛೆಯೇ ಬರುತ್ತಿರಲಿಲ್ಲವಂತೆ. ಕಡೆಗೆ 1946ರ ಆಗಸ್ಟ್ ಒಂಬತ್ತನೆಯ ದಿನ ನಡುಹಗಲಲ್ಲಿ 'ಗುರುದ್ರೋಹಿ ರುದ್ರಪ್ಪ'ನ ಉಲ್ಲೇಖವನ್ನು ತೊಡೆದು ಹಾಕಿದರು. 'ದಗ ವೀಣೆ' ಮಾತ್ರ ಉಳಿದುಕೊಂಡಿತು!

ರುದ್ರಪ್ಪ ಅದೇ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ವೆಂಕಟಪ್ಪನ ಸ್ಟುಡಿಯೋಗೆ ಬಂದು, ತಮ್ಮ ತಪ್ಪೊಪ್ಪಿಕೊಂಡು ಕ್ಷಮೆ ಬೇಡಿಕೊಂಡರು. ಅನಂತರ ವೆಂಕಟಪ್ಪ ಅವರ ಕ್ಷೇಮಸಮಾಚಾರ ವಿಚಾರಿಸಿ, ಒಳಗೆ ಕರೆದೊಯ್ದು ತಾವು ಮಾಡಿದ್ದ ಕಲಾಕೃತಿಗಳನ್ನೆಲ್ಲ ತೋರಿಸಿ ವಿವರಿಸಿ, ಕಳುಹಿಸಿಕೊಟ್ಟರು. ವೀಣೆಯ ವಿಚಾರ ಮಾತ್ರ ಮಾತೆತ್ತಲಿಲ್ಲ.

ಈ ಸಮಯದಲ್ಲಿ ಅವರಿಂದ ವೀಣೆಯನ್ನು ಕಲಿಯಲು ಕೆಲವರು ಬಂದುದುಂಟು. ರುದ್ರಪ್ಪನೆ ಮೊದಲ ವಿದ್ಯಾರ್ಥಿಯಷ್ಟೆ. ಬೆಂಗಳೂರಿಗೆ ಬಂದ ಮೇಲೆ 1943ರ ಜನವರಿಯಲ್ಲಿ ಅವರಿಗೆ ಪರಿಚಿತರಾಗಿದ್ದ ಶ್ರೀನಿವಾಸ ಅಯ್ಯಂಗಾರರೆಂಬ ಇಂಜಿನಿಯರ್-ಕಂಟ್ರಾಕ್ಟರ್ ಇವರ ಬಳಿ ವೀಣೆ ಕಲಿಯಲು ಶುರುಮಾಡಿದರು. ಅವರು ಮೈಸೂರಿನಲ್ಲಿ ವೆಂಕಟಪ್ಪನ ಮಿತ್ರರೂ ವಕೀಲರೂ ಆಗಿದ್ದ ದೊರೆಸ್ವಾಮಿ ಅಯ್ಯಂಗಾರರ ಭಾವಮೈದುನ. ಅದೇ ಸಮಯದಲ್ಲಿ ಇಂಡಿಯನ್ ಇನ್ಸ್‌ಟಿಟ್ಯೂಟ್‌ನಲ್ಲಿ (ತಾತಾ ವಿಜ್ಞಾನಮಂದಿರದಲ್ಲಿ) ಲ್ಯಾಬೊರೇಟರಿ ಅಸಿಸ್ಟೆಂಟ್ ಆಗಿ ಕೆಲಸಮಾಡುತ್ತಿದ್ದ ಎ.ಆರ್. ಶ್ರೀನಿವಾಸನ್ ವೀಣೆಯನ್ನು ಕಲಿಯಲು ಬಂದರು. ಅನಂತರ 1944ರ ನವೆಂಬರ್ ತಿಂಗಳಲ್ಲಿ ಮದರಾಸಿನ ವೀಣಾ ವಿದುಷಿ ವಿಶಾಲಾಕ್ಷಿಯೆಂಬಾಕೆ ಇಪ್ಪತ್ತೆರಡು ಶ್ರುತಿಗಳ ವಿಚಾರ ತಿಳಿಯಬೇಕೆಂದು ವೆಂಕಟಪ್ಪನಲ್ಲಿಗೆ ಬಂದು, ತಮಗೆ ವೀಣೆಯ ಹೆಚ್ಚಿನ ಪಾಠವನ್ನು ಹೇಳಬೇಕೆಂದು ಕೇಳಿಕೊಂಡರು. ಆಗಲೆಂದು ವೆಂಕಟಪ್ಪ ಆಕೆಗೆ ಕೆಲಕಾಲ ಪಾಠ ಹೇಳಿದರು. ಆದರೆ ತಮ್ಮ ವೀಣಾಭ್ಯಾಸಕ್ಕೂ ವೀಣೆಯ ಪಾಠಕ್ಕೂ ಅಡಚಣೆಯಾಗಿ ಅವರ ಕೈಬೆರಳುಗಳ ಸಂಧಿವಾತ ಬೇನೆ ಕಾಡತೊಡಗಿತು. 1946 ರಿಂದ 1947ರ ವರೆಗೆ ಇಡೀ ವರ್ಷ ಅವರು ವೀಣೆಯನ್ನು ನುಡಿಸಲಾಗಲಿಲ್ಲ.

೪

ವೆಂಕಟಪ್ಪನ ಸ್ಟುಡಿಯೊ ಬೆಂಗಳೂರಿನಲ್ಲಿ ಪ್ರಸಿದ್ಧವಾಯಿತು. ಊರ, ಪರವೂರ ಗಣ್ಯರು ಹಲವರು ಅಲ್ಲಿ ಬಂದು ಹೋಗತೊಡಗಿದರು. 1948ರಲ್ಲಿ ಮಲ್ಲೇಶ್ವರದ ಕಲಾಶಾಲೆಯ ವಿದ್ಯಾರ್ಥಿಗಳು ಬಂದು ಇವರಲ್ಲಿ ಚಿತ್ರಕಲೆ ಕಲಿಯುವ ಬಯಕೆಯನ್ನು ವ್ಯಕ್ತಪಡಿಸಿದರು; ಆದರೆ ಹದಿನಾಲ್ಕು ವರ್ಷ ಮೀರಿರುವ ವಿದ್ಯಾರ್ಥಿಗಳನ್ನು ತಾವು ಸ್ವೀಕರಿಸುವುದಿಲ್ಲವೆಂದು ಹೇಳಿಕಳುಹಿಸಿದರು. 1943ರ ಸುಮಾರಿಗೆ ಡಿ.ವಿ.ಜಿ.ಯವರ ಮಗನೂ ಮುಂದೆ ಸುಪ್ರಸಿದ್ಧ ವಿಜ್ಞಾನಿಯೂ ಆದ ಬಿ.ಜಿ.ಎಲ್. ಸ್ವಾಮಿ ಇವರ ಬಳಿ ಚಿತ್ರಕಲೆಯನ್ನು ಕೆಲಕಾಲ ಕಲಿತು, ತನಗೆ ಚಿತ್ರಕಲೆ ವಶವಾಗುವುದಿಲ್ಲವೆಂದು ಮನವರಿಕೆಮಾಡಿಕೊಂಡು ಪಾಠವನ್ನು ನಿಲ್ಲಿಸಿದ್ದರು. ಆಗಿನಿಂದ ವೆಂಕಟಪ್ಪ ಕಲಾವಿದ್ಯಾರ್ಥಿಯ ವಯಸ್ಸು ಹದಿನಾಲ್ಕಕ್ಕಿಂತ ಹೆಚ್ಚಾಗಿರಬಾರದೆಂದು ನಿಯಮವನ್ನು ವಿಧಿಸಿಕೊಂಡಿದ್ದರು. ಮೇಲಾಗಿ, ಕಲಾವಿದ್ಯಾರ್ಥಿಗೆ ಇತರ ಯಾವ ಹವ್ಯಾಸವೂ ಇರಬಾರದೆಂದು ಅವರ ಆಗ್ರಹವಾಗಿದ್ದಿತು. 1946ರ ಜುಲೈ ತಿಂಗಳಲ್ಲಿ ಆಂಧ್ರ ದೇಶದ ಕಾಕಿನಾಡದಿಂದ ತರುಣ ವರ್ತಕರೊಬ್ಬರು, ಬಿ.ವಿ. ನರಸಿಂಹಾರಾವು ಎಂಬುವರು, ವೆಂಕಟಪ್ಪನ ಬಳಿ ಬಂದು ತಾವು ಬೇಸಗೆಯಲ್ಲಿ ಮೂರು ತಿಂಗಳು ಬೆಂಗಳೂರಿನಲ್ಲಿ ಇರುವುದಾಗಿಯೂ, ಆಗ ವರ್ಣಚಿತ್ರವನ್ನು ಕಲಿಯುವುದಾಗಿಯೂ ಹೇಳಿದರು. ವೆಂಕಟಪ್ಪ ಕೇವಲ ಕಲೆಯೊಂದೆ ದೃಷ್ಟಿಯಲ್ಲಿರುವ, ತಮ್ಮೆಲ್ಲ ಕಾಲವನ್ನೂ ಕಲೆಗಾಗಿಯೇ ವಿನಿಯೋಗಿಸಬಲ್ಲ , ಕಲೆಗಾಗಿ ಕಾಲ, ಶ್ರಮ, ವೆಚ್ಚ ಯಾವುದನ್ನೂ ಗಣನೆಗೆ ತಂದುಕೊಳ್ಳದ ವಿದ್ಯಾರ್ಥಿಗಳಿಗೆ ಮಾತ್ರ ತಾನು ಪಾಠ ಹೇಳಿಕೊಡುವುದಾಗಿ ತಿಳಿಸಿ ಅವರನ್ನು ನಿರಾಶೆಗೊಳಿಸಿದರು. ನಾಲ್ಕು ವರ್ಷಗಳ ನಂತರ ಬಸವನಗುಡಿಯ ಕಲಾಮಂದಿರದ ವ್ಯವಸ್ಥಾಪಕರಾಗಿದ್ದ ಎ.ಎನ್. ಸುಬ್ಬರಾಯರು ವೆಂಕಟಪ್ಪನ ಬಳಿ ಬಂದು ವಾರಕ್ಕೊಮ್ಮೆ ಅಥವಾ ಪಕ್ಷಕ್ಕೊಮ್ಮೆ ತಮ್ಮ ಕಲಾಶಾಲೆಗೆ ಬಂದು ವಿದ್ಯಾರ್ಥಿಗಳಿಗೆ ಪಾಠ ಹೇಳುವಂತೆ ಕೇಳಿಕೊಂಡರು. ಹೀಗೆ ವಾರಕ್ಕೊಮ್ಮೆ ಪಕ್ಷಕ್ಕೊಮ್ಮೆ ಪಾಠ ಕೇಳಿ ಕಲೆಯನ್ನು ಕಲಿಯುವುದು ಅಸಾಧ್ಯವೆಂದೂ, ತಮಗೆ ತಮ್ಮ ಸ್ಟುಡಿಯೋದಲ್ಲೇ ಬೇಕಾದಷ್ಟು ಕೆಲಸ ವಿರುವುದಾಗಿಯೂ ಹೇಳಿ, ನಿರಾಕರಿಸಿದರು.

ಅವರು ತಮ್ಮ ಸ್ಟುಡಿಯೋದಲ್ಲೆ ಕೆಲಸಗಳನ್ನು ಹಚ್ಚಿಕೊಂಡಿದ್ದುದು ನಿಜ. ಹಳೆಯ ಕೆಲವು ಕಲಾಕೃತಿಗಳನ್ನು ಸಂಸ್ಕರಿಸುವುದು, ಉತ್ತಮ ಪಡಿಸುವುದು, ಸರಿಪಡಿಸುವುದು ಆಗ ಅವರು ಎತ್ತಿಕೊಂಡಿದ್ದ ಕೆಲಸ. ತಾವು ಮೈಸೂರಿನಲ್ಲಿರುವಾಗ, 1919ರಲ್ಲಿ ಚಾಮುಂಡಿಬೆಟ್ಟದ ಮೇಲಿಂದ ಎರಡು ನಿಸರ್ಗನೋಟಗಳ ಜಲವರ್ಣಚಿತ್ರಗಳನ್ನು, ಆಗ ಸಂಸ್ಥಾನದ ಹಿರಿಯ ಅಧಿಕಾರಿಯೂ ವೆಂಕಟಪ್ಪನ ಹಿತೈಷಿಯೂ ಆಗಿದ್ದ ದಿವಾನ್ ಬಹದ್ದೂರ್ ಪೂರ್ಣ ರಾಘವೇಂದ್ರ ರಾಯರಿಗಾಗಿ, ಸಿದ್ಧಪಡಿಸಿದ್ದರು. ಅನಂತರ ರಾಯರು ನಿವೃತ್ತರಾಗಿ ಬೆಂಗಳೂರಿಗೆ ಬಂದ ಮೇಲೆ ಆರೋಗ್ಯ ಕೆಟ್ಟು ಡಾ. ಶಿವರಾಮ್ ಅವರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು. ರಾಯರು ತೀರಿಕೊಂಡಮೇಲೆ ಶಿವರಾಮ್ ಅವರು ರಾಯರ ಮಗನಿಂದ ವೆಂಕಟಪ್ಪನ ಎರಡು ಚಿತ್ರಗಳನ್ನು ಬಹುಮಾನವಾಗಿ ಪಡೆದುಕೊಂಡರು. ಶಿವರಾಮ್ ಅವರ ಮನೆಯಲ್ಲೇ ಇವೆರಡೂ ಇದ್ದುವು. ಮಲ್ಲೇಶ್ವರದಲ್ಲೇ ವಾಸ

ಮಾಡುತ್ತಿದ್ದ ಶಿವರಾಮ್ ಅವರಿಗೂ ವೆಂಕಟಪ್ಪನಿಗೂ ಪರಿಚಯವಾದಾಗ, ಈ ಚಿತ್ರಗಳ ವಿಚಾರ ತಿಳಿದು ವೆಂಕಟಪ್ಪ ಅವನ್ನು ತಮ್ಮ ಸ್ಟುಡಿಯೋಗೆ ಕೊಡಬೇಕೆಂದು ಕೇಳಿದರು; ಶಿವರಾಮ್ ಅವರೂ ಒಪ್ಪಿ ಚಿತ್ರಗಳನ್ನು ಕೊಟ್ಟರು. ಆದರೆ ಚೌಕಟ್ಟನ್ನು ತೆಗೆದು ನೋಡಿದರೆ, ಚಿತ್ರಗಳನ್ನು ಇರಿಸಿಕೊಂಡಿದ್ದ ಬಗೆ ವೆಂಕಟಪ್ಪನಿಗೆ ದುಃಖವನ್ನೂ ಜುಗುಪ್ಸೆಯನ್ನೂ ತಂದಿತು. ನುಸಿ ಹೊಡೆದು, ಹುಳು ಹಿಡಿದು, ಚಿತ್ರಗಳ ಅಂಚೆಲ್ಲ ಮರೆಯಾಗಿದ್ದಿತು. ತೀರ ಶಿಥಿಲವಾಗಿದ್ದ ಆ ಚಿತ್ರಗಳನ್ನು ಮತ್ತೆ ವೆಂಕಟಪ್ಪ ಶ್ರಮವಹಿಸಿ ಸಾಧ್ಯವಾದಷ್ಟು ಸರಿಪಡಿಸಿದರು. ಆಗ ಶಿವರಾಮ್ ಅವರು ಕೆಲವು ದಿನಗಳು ಆ ಚಿತ್ರಗಳು ತಮ್ಮ ಮನೆಯಲ್ಲಿರಲೆಂದು ಅವನ್ನು ಕೊಂಡೊಯ್ದರು. ಇದು ನಡೆದದ್ದು 1945ರ ಆಗಸ್ಟ್ ತಿಂಗಳಲ್ಲಿ .

ವಿಜ್ಞಾನಿ ಎಚ್.ಜೆ. ಭಾಭಾ ಅವರು ತಮ್ಮ ತಾಯಿಯೊಂದಿಗೆ 1946ರ ಫೆಬ್ರುವರಿ ತಿಂಗಳಲ್ಲಿ ವೆಂಕಟಪ್ಪನ ಸ್ಟುಡಿಯೋಗೆ ಬಂದು ಭಾಭಾ ಅವರ ತಂದೆಯ ವರ್ಣಚಿತ್ರವೊಂದನ್ನು ಸಿದ್ಧಪಡಿಸಿಕೊಡಬೇಕೆಂದು ಕೇಳಿದರು. ಭಾಭಾ ಮೂರು ವರ್ಷಗಳ ಹಿಂದೆಯೇ ವೆಂಕಟಪ್ಪನನ್ನು ಇದೇ ವಿಚಾರ ಕೇಳಿ ಇಲ್ಲವೆನಿಸಿಕೊಂಡಾಗಿದ್ದಿತು. ಈಗ ಭಾಭಾ ಮತ್ತು ಅವರ ತಾಯಿ ವೆಂಕಟಪ್ಪನನ್ನು ಬಹುವಾಗಿ ಕೇಳಿಕೊಂಡಮೇಲೆ, ಅವರ ದಿವಂಗತ ಪತಿಯ ಗುಣಗಳನ್ನು ವಿವರಿಸಿದಮೇಲೆ, ''ಆಗಲಿ, ನೋಡೋಣ, ಅವರನ್ನು ನಾನು ನೋಡಿಲ್ಲವಾದ ಕಾರಣ ಅವರ ಭಾವಚಿತ್ರಗಳನ್ನು ಕೆಲವು ವಾರಗಳ• ಕಾಲ ತದೇಕಚಿತ್ತದಿಂದ ನೋಡುತ್ತೇನೆ, ಅಭ್ಯಾಸಮಾಡುತ್ತೇನೆ. ಅವರ ಚಿತ್ರ ಸ್ಪಷ್ಟವಾಗಿ ನನ್ನ ಮನಸ್ಸಿನಲ್ಲಿ ಮೂಡಿದರೆ, ವರ್ಣಚಿತ್ರ ಮಾಡಿಕೊಡುತ್ತೇನೆ; ಇಲ್ಲವಾದರೆ ಇಲ್ಲ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಚಿತ್ರವನ್ನು ನಾನು ಮಾಡುವುದಾದರೂ ಮಾರ್ಚ್‌ನಲ್ಲಿ ಆರಂಭಿಸಿ ವರ್ಷದ ಕಡೆಯ ಭಾಗದಲ್ಲೆ ಮುಗಿಸುವುದು'' ಎಂದು ಹೇಳಿ ಕಳುಹಿಸಿದರು. ಪ್ರಯತ್ನಪಟ್ಟರೂ, ಆ ವ್ಯಕ್ತಿಯ ಕಲ್ಪನೆ ಇವರಿಗೆ ಆಗದೆ ಹೋಗಿ ಚಿತ್ರವನ್ನು ಮಾಡಲಾರೆನೆಂದು ಶ್ರೀಮತಿ ಭಾಭಾ ಕೊಟ್ಟಿದ್ದ ಭಾವಚಿತ್ರಗಳನ್ನು ವಿಜ್ಞಾನಿ ಭಾಭಾಗೆ ಹಿಂದಿರುಗಿಸಿದರು (1948ರ ಜೂನ್ ಹದಿನೇಳರಂದು)

ತಮ್ಮ ಸ್ಟುಡಿಯೋವನ್ನು ಒಂದು ಘಟ್ಟಕ್ಕೆ ತರುವ ವಿಚಾರ ಅವರ ಮನಸ್ಸಿನಲ್ಲಿದ್ದಿತು. 1946ರ ನವೆಂಬರ್ ತಿಂಗಳಲ್ಲಿ ತಮ್ಮ ಸ್ಟುಡಿಯೋವಿನಲ್ಲಿದ್ದ ಕಲಾಕೃತಿಗಳ ಜೊತೆಗೆ ತಮಗೆ ಹಿಂದಿನ ದಿನಗಳಲ್ಲಿ 1910ರಿಂದಲೂ ಹಲವಾರು ಕಲಾ ಸಂಘಸಂಸ್ಥೆಗಳಿಂದ ಬಂದಿದ್ದ ಯೋಗ್ಯತಾಪತ್ರ, ಪುರಸ್ಕಾರ ಪತ್ರ, ಪ್ರಶಸ್ತಿಗಳನ್ನೆಲ್ಲ ಪ್ರದರ್ಶನ ಮಾಡುವ ಆಲೋಚನೆ ಬಂದಿತು. ಇದು ಅವರ ಸ್ವಭಾವಕ್ಕೆ ತೀರ ವಿರುದ್ಧವಾದುದು; ಮೂವತ್ತಾರು ವರ್ಷಗಳ ಕಾಲ ಅಂಥ ಬಯಕೆ ಅವರಿಗೆಂದೂ ಬಂದುದಿಲ್ಲ. ಆದರೆ ಈಗ ಅದೇನೋ ಅದು ಹೊರಹೊಮ್ಮಿ ಆ ತಿಂಗಳ ಇಪ್ಪತ್ತನೆಯ ದಿನ, ಆವರೆಗೆ ಪೆಟ್ಟಿಗೆಯಲ್ಲಿರಿಸಿದ್ದ ಪ್ರಶಸ್ತಿ ಪತ್ರಗಳನ್ನೆಲ್ಲ ಹೊರತೆಗೆದರು. ಅಷ್ಟು ವರ್ಷಗಳು ಬೆಳಕೇ ಕಾಣದಿದ್ದರೂ, ಪೆಟ್ಟಿಗೆಯಿಂದ ಒಮ್ಮೆಯೂ ಕದಲದಿದ್ದರೂ ಅವೆಲ್ಲ ಹುಳುಹಿಡಿಯದೆ ಚೆನ್ನಾಗಿಯೇ ಇದ್ದುದು ಅವರಿಗೆ ಅಚ್ಚರಿಯನ್ನುಂಟುಮಾಡಿತು.

ಆ ವರ್ಷದ ನವೆಂಬರ್ ತಿಂಗಳ ಇಪ್ಪತ್ತಮೂರನೆಯ ದಿನದಿಂದ ಮೂರುದಿನಗಳು ತಮ್ಮ ಸ್ಟುಡಿಯೋವನ್ನು ಸಾರ್ವಜನಿಕರಿಗಾಗಿ ತೆರೆದಿಟ್ಟರು. ಮಧ್ಯಾಹ್ನ ಮೂರು ಗಂಟೆಯಿಂದ ಐದು ಗಂಟೆಯವರೆಗೆ ಕಲಾಭಿಮಾನಿಗಳೂ ಕಲಾವಿದರೂ ಬಹು ಸಂಖ್ಯೆಯಲ್ಲಿ ಬಂದು ವೆಂಕಟಪ್ಪನ ಕಲಾಕೃತಿಗಳನ್ನು ನೋಡಿಕೊಂಡು ಹೋದರು. ವರ್ಷದಲ್ಲಿ ಕೆಲವು ದಿನಗಳು ಮಾತ್ರ ಈ ಬಗೆಯ ಸಾರ್ವಜನಿಕ ಪ್ರದರ್ಶನಗಳು. ಉಳಿದ ವೇಳೆ ಕಲಾಸಕ್ತರು ಬಯಸಿದರೆ, ಮೊದಲೆ ದಿನವನ್ನು ಗೊತ್ತು ಮಾಡಿಕೊಂಡಿದ್ದು ಆ ದಿನ ಅವರಿಗೆ ಮಾತ್ರ ಕಲಾಕೃತಿಗಳನ್ನು ತೆಗೆದು ತೋರಿಸುವರು. ಶಿಲ್ಪಕೃತಿಗಳು, ಅರ್ಧ ಶಿಲ್ಪ ಫಲಕಗಳು ಮಾತ್ರ ಪ್ರಧಾನ ಸ್ಟುಡಿಯೋದಲ್ಲಿರುವುವು. ವರ್ಣಚಿತ್ರಗಳನ್ನೆಲ್ಲ ಕಟ್ಟಿಟ್ಟು ಬಿಡುವರು; ಪ್ರದರ್ಶನ ಕಾಲದಲ್ಲಿ ಮಾತ್ರ ಅವನ್ನು ಹೊರಗೆ ತೆಗೆಯುವರು.

1948ರ ಇಂಥ ಒಂದು ಸಾರ್ವಜನಿಕ ಪ್ರದರ್ಶನದ ಸಮಯದಲ್ಲಿ ಅವರು ಲೋಹದಲ್ಲಿ ರಾಸಾಯನಿಕ ಪದ್ಧತಿಯಲ್ಲಿ ಎರಕಹುಯ್ದು ತಯಾರಿಸಿದ್ದ ಉಬ್ಬು ಚಿತ್ರವೊಂದು, ಬೋಧಿಸತ್ತ್ವನದು, ಪ್ರೇಕ್ಷಕರೊಬ್ಬರು ಆಕಸ್ಮಿಕವಾಗಿ ತುಳಿದುದರಿಂದ ಒಡೆದು ಹೋಯಿತು. ಅದನ್ನು ನಾಶಪಡಿಸಿದವರು ಹೈಸ್ಕೂಲೊಂದರಲ್ಲಿ ಅಧ್ಯಾಪಕರು; ಎಂ.ಎ., ಬಿ.ಟಿ. ಪದವೀಧರರು. ಅವರಿಗೆ ಕಲಾಕೃತಿಗಳಿವೆಯೆಂಬ ಎಚ್ಚರ ಇರಬಾರದೆ ಎಂದು ವೆಂಕಟಪ್ಪ ಸಿಟ್ಟಾದರು. ಆ ಪ್ರದರ್ಶನದಲ್ಲಿಯೂ, ಮುಂದಿನ ಪ್ರದರ್ಶನಗಳಲ್ಲಿಯೂ ಒಡೆದುಹೋದ ಆ ಕೃತಿಯನ್ನು ಹಾಗೆಯೇ ಪ್ರದರ್ಶಿಸಿ, ಅದರ ಮೇಲೆ "ಎರಡು ಡಿಗ್ರಿಗಳನ್ನು ಪಡೆದುಕೊಂಡು ಸುಶಿಕ್ಷಿತರಾದವರೊಬ್ಬರಿಂದ ಹಾಳಾದ ಕೃತಿ ಇದು" ಎಂಬ ಇಂಗ್ಲಿಷಿನ ಬರಹವುಳ್ಳ ಫಲಕವನ್ನು ಇಟ್ಟರು. ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲೇ ಇರುತ್ತಿದ್ದ ಆ ಸಭ್ಯಗೃಹಸ್ಥರು ತಮ್ಮಿಂದ ನಡೆದುಹೋದ ಅಪಚಾರಕ್ಕಾಗಿ ತುಂಬ ನೊಂದುಕೊಂಡರು. ವೆಂಕಟಪ್ಪನಿಗೆ ಈ ವಿಚಾರವಾಗಿ ಕ್ಷಮೆ ಬೇಡುವ ಪತ್ರವೊಂದನ್ನು ಬರೆದರು. ವೆಂಕಟಪ್ಪ ಈ ಪತ್ರವನ್ನು ನನಗೆ ತೋರಿಸಿದ್ದರು; ಆದರೆ ಅದರಿಂದ ಕಲಾವಿದರಿಗೆ ಎಷ್ಟು ಸಮಾಧಾನವಾಯಿತೊ ನಾನರಿಯೆ. ಕಲಾರಸಿಕರೆಂದು ಹೇಳಿಕೊಂಡು ಪ್ರದರ್ಶನಗಳಿಗೆ ಬರುವವರ ಪ್ರಾಮಾಣಿಕ ಆಸಕ್ತಿಯ ಬಗ್ಗೆ ಅವರಿಗೆ ಸಂಶಯವೊದಗಿದುದಂತೂ ದಿಟ.

ೞ

1948ರ ಕಡೆಯ ದಿನಗಳಲ್ಲಿ ತಾವು ಮೈಸೂರಿನಲ್ಲಿ ತಯಾರಿಸಿದ್ದ ಅರ್ಧಶಿಲ್ಪ ಫಲಕಗಳನ್ನು ಪರಿಶೀಲಿಸಿ ಅಗತ್ಯ ಕಾಣಿಸಿದ ಮಾರ್ಪಾಟುಗಳನ್ನು ಮಾಡಲು ತೊಡಗಿದರು. 1928ರಷ್ಟು ಹಿಂದೆ ಅರಮನೆಯ ಅಂಬಾವಿಲಾಸ ತೊಟ್ಟಿಗೆಂದು ಶಕುಂತಲಾ ನಿರ್ಗಮನದ ವಸ್ತುವನ್ನು ಅಧಿಕರಿಸಿ ಒಂದು ಅರ್ಧಶಿಲ್ಪ ಫಲಕವನ್ನು ರಚಿಸಿದ್ದರಷ್ಟೆ. ಮೂಲಕೃತಿ ಈಗಲೂ ಅಲ್ಲಿಯೇ ಇದೆ. ಆದರೆ ಅದರ ಒಡೆದ ಅಚ್ಚೊಂದನ್ನು ವೆಂಕಟಪ್ಪ ತಮ್ಮ ಬಳಿ ಇರಿಸಿಕೊಂಡಿದ್ದರು. ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದಾಗ ಅದನ್ನೂ ತಮ್ಮೊಡನೆ ತಂದಿದ್ದರು. ಅದನ್ನು ಸರಿಪಡಿಸಿ, ಚಿತ್ರಣದಲ್ಲಿ ಭಾವವನ್ನು ಇನ್ನಷ್ಟು ಸ್ಪಷ್ಟವಾಗಿ ಮೂಡಿಸಿ, ಸೂಕ್ಷ್ಮವಾದ ವಿವರಗಳನ್ನು ಕಂಡರಿಸಿ ಮಾಡಿದ ಕೃತಿಯು 1949ರ ಫೆಬ್ರುವರಿ ತಿಂಗಳಲ್ಲಿ ಮುಗಿಯಿತು. ಈಗ ಇದು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯ

ಸಂಗ್ರಹದಲ್ಲಿದೆ. ಇದು ಮುಗಿದೊಡನೆ, 1923ರಲ್ಲಿ ಮಾಡಿದ್ದ ರವೀಂದ್ರನಾಥ ಠಾಕುರರ ಶಿಲ್ಪವನ್ನು ಸಂಸ್ಕರಣಕ್ಕೆ ಎತ್ತಿಕೊಂಡರು. 1949ರ ಏಪ್ರಿಲ್ ಮೂರರಂದು ಮೊದಲಾದ ಈ ಕೆಲಸವು 1950ರ ಜನವರಿ ನಾಲ್ಕರವರೆಗೂ ಸಾಗಿತು.

ಮೈಸೂರಿನಲ್ಲಿ ಉಡುಪಿ ಹೋಟೆಲಿನಲ್ಲಿ ಅವರು ವಾಸಮಾಡುತ್ತಿರುವಾಗ ಅಲ್ಲಿನ ಮಾಣಿಯೊಬ್ಬನ ಶಿಲ್ಪವನ್ನು 1918ರಷ್ಟು ಹಿಂದೆ ಮಾಡಿದ್ದರಷ್ಟೆ. ಅದು 1949ರ ಮೇ ಮೂರರಂದು ಆಕಸ್ಮಿಕವಾಗಿ ಬಿದ್ದು ಒಡೆದುಹೋಯಿತು. ಪ್ರದರ್ಶನಕ್ಕೆಂದು ಹೊರತೆಗೆದಿದ್ದ ಚಿತ್ರಗಳನ್ನೆಲ್ಲ ಮತ್ತೆ ಕಟ್ಟುಕಟ್ಟಿ ಇಡುತ್ತಿರುವಾಗ, ಅವರ ಕೈ ಈ ಮಾಣಿಯ ಶಿಲ್ಪವನ್ನಿರಿಸಿದ್ದ ಸ್ಟೂಲಿಗೆ ತಾಕಿ, ಶಿಲ್ಪಕೃತಿಯು ಕೆಳಗೆ ಬಿದ್ದು ಮೈಯೂ ತಲೆಯೂ ಬೇರೆ ಬೇರೆಯಾದುವು; ಚೂರುಚೂರಾದುವು. ಮೂವತ್ತೊಂದು ವರ್ಷಗಳ ಕಾಲ ದಿನವೂ ಅದನ್ನು ನೋಡುತ್ತಿದ್ದ ವೆಂಕಟಪ್ಪನಿಗೆ ತುಂಬ ದುಃಖವಾದುದು ಸಹಜವೇ. ''ಭೂಮಿಯ ಮೇಲಿರುವ ಎಲ್ಲ ವಸ್ತುಗಳ ಗತಿಯೇನು, ನಾಶ ಎಂದು ಎಂಬುವುದನ್ನು ಭಗವಂತನೊಬ್ಬನೆ ಬಲ್ಲ'' ಎಂದು ಈ ಸಂದರ್ಭದಲ್ಲಿ ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ಇದನ್ನು ಸರಿಪಡಿಸುವ ಪ್ರಯತ್ನವನ್ನೂ ಅವರು 1950ರ ಜನವರಿ ತಿಂಗಳಲ್ಲೇ ಮಾಡಿದ್ದು. ಅಲ್ಲಿಯವರೆಗೆ ಅದರ ಕಡೆ ಅವರ ಮನಸ್ಸು ಹೋಗಲೊಲ್ಲದು. ಆದರೆ ಚೂರುಗಳನ್ನೆಲ್ಲ ಜೋಪಾನವಾಗಿ ಕಾದಿಟ್ಟುಕೊಂಡಿದ್ದರೆನ್ನಿ. 1950ರ ಜನವರಿ, ಫೆಬ್ರುವರಿ ಎರಡೂ ತಿಂಗಳುಗಳೆಲ್ಲ ಈ ಶಿಲ್ಪದ ದುರಸ್ತಿಯಲ್ಲಿಯೇ ಕಳೆದವು.

ಇದು ಮುಗಿದ ಮೇಲೆ (ಸೆಪ್ಟೆಂಬರ್ ಐದರಂದು) ಈ ಶಿಲ್ಪದ ವಸ್ತುವಾಗಿದ್ದ, ಮೂವತ್ತೆರಡು ವರ್ಷಗಳ ಹಿಂದೆ ಉಡುಪಿ ಹೋಟೆಲಿನ ಮಾಣಿಯಾಗಿದ್ದ, ನರಸಿಂಹ ತನ್ನ ಹೆಂಡತಿ-ಮಕ್ಕಳೊಂದಿಗೆ ವೆಂಕಟಪ್ಪನ ಸ್ಟುಡಿಯೋಗೆ ಬಂದು ತನ್ನ ಶಿಲ್ಪವನ್ನೇ ಕಂಡು ಹೋದುದು ಒಂದು ವಿಶೇಷ. ವೆಂಕಟಪ್ಪ ನರಸಿಂಹನನ್ನೂ ಅವನ ಕುಟುಂಬದವರನ್ನೂ ತುಂಬ ಪ್ರೀತಿಯಿಂದ ಬರಮಾಡಿಕೊಂಡು ಅವರಿಗೆ ತಮ್ಮೆಲ್ಲ ಕಲಾಕೃತಿಗಳನ್ನು ತೋರಿಸಿ, ವಿವರಿಸಿ ಬೀಳ್ಕೊಟ್ಟರು. ಅದೇ ತಿಂಗಳು ಇಪ್ಪತ್ತನೆಯ ದಿನ ತಮ್ಮ ಜಾತಕದ ಪ್ರಕಾರ ತಮ್ಮನ್ನು ಏಳೂವರೆ ವರ್ಷಗಳು ಕಾಡುತ್ತಿದ್ದ ಏಳರಾಟ ಶನಿಯ ಅವಧಿ ದೇವರ ದಯೆಯಿಂದ ಮುಗಿಯಿತೆಂದು ಸಮಾಧಾನ ಪಟ್ಟುಕೊಂಡರು.

ಮರುವರ್ಷ ನವೆಂಬರ್‌ನಲ್ಲಿ ಸಿದ್ಧಾರ್ಥನ ರಾಜ್ಯಪರಿತ್ಯಾಗದ ವೃತ್ತಾಕಾರದ ಫಲಕವನ್ನು ಎತ್ತಿಕೊಂಡು ಹಲವಾರು ವಾರಗಳ ಕಾಲ ಕೆಲಸಮಾಡಿ ಸೂಕ್ಷ್ಮವಾದ ವಿವರಗಳನ್ನು ಮೂಡಿಸತೊಡಗಿದರು. ಸಿದ್ಧಾರ್ಥನ ಮುಖದಲ್ಲಿ ವೈರಾಗ್ಯ, ಗಾಂಭೀರ್ಯ, ನಿರುದ್ವಿಗ್ನತೆಗಳ ಭಾವವನ್ನೂ, ಕುದುರೆಯ ಮುಖದಲ್ಲಿ ಶೋಕರಸವನ್ನೂ ತುಂಬಿಸಿದರು. 1952ರ ಮಾರ್ಚ್ ತಿಂಗಳಲ್ಲಿ ಈ ಕೆಲಸ ಮುಗಿಯಿತು. 1951ರಲ್ಲಿ ಅವರು ಬಹುದಿನಗಳಿಂದ ಕೈಬಿಟ್ಟಿದ್ದ ವರ್ಣಚಿತ್ರಾಭ್ಯಾಸವನ್ನೂ ಮತ್ತೆ ಆರಂಭಿಸಿದರು. ಅದೇ ವರ್ಷ ಜುಲೈ ಹದಿನೈದರಂದು ಭಾರತದ ಪ್ರಧಾನಿಯಾಗಿದ್ದ ಪಂಡಿತ ಜವಾಹರಲಾಲ ನೆಹ್ರೂ ಬೆಂಗಳೂರಿಗೆ ಬಂದಿದ್ದವರು ವೆಂಕಟಪ್ಪನ ಸ್ಟುಡಿಯೋಗೆ ಬರುವ ಯೋಜನೆ ಇದ್ದಿತಾಗಿ, ವೆಂಕಟಪ್ಪ ತನ್ನ ಕಲಾಕೃತಿಗಳನ್ನೆಲ್ಲ ಓರಣವಾಗಿ ಜೋಡಿಸಿ ಕಾದುಕೊಂಡಿದ್ದರು. ಕಾರಣಾಂತರದಿಂದ ಅವರು

ಬಾರದೆ ಹೋದುದು ಅವರ ಮನಸ್ಸನ್ನು ಚುಚ್ಚಿತು. ಇದಾದ ಮೇಲೇ ಅವರು ಸಿದ್ಧಾರ್ಥನ ರಾಜ್ಯಪರಿತ್ಯಾಗದ ಫಲಕದ ಮೇಲೆ ಕೆಲಸವನ್ನು ಮೊದಲುಮಾಡಿದ್ದು. ಇದಕ್ಕೆ ಮುಂಚೆ ಒಂದು ತಿಂಗಳ ಹಿಂದೆ ಅವರ ಹಳೆಯ ಮಿತ್ರರು, ಸುವಿಖ್ಯಾತ ಕಲಾವಿಮರ್ಶಕ ಅರ್ಧೇಂದುಕುಮಾರ ಗಂಗೊಲಿ ಕಲ್ಕತ್ತೆಯಿಂದ ಬೆಂಗಳೂರಿಗೆ ಬಂದಿದ್ದವರು ವೆಂಕಟಪ್ಪನ ಸ್ಟುಡಿಯೋಗೆ ಬಂದಿದ್ದರು. ವೆಂಕಟಪ್ಪ ಅವರೊಡನೆ ತಮ್ಮ ಗುರು ಅವನೀಂದ್ರನಾಥರಿಗಾಗಿ ನೀಲಗಿರಿತೈಲದ ಸೀಸೆಯೊಂದನ್ನು ಉಡುಗೊರೆಯಾಗಿ ಕಳುಹಿಸಿದರು. ಎರಡು ತಿಂಗಳುಗಳೊಳಗೆ ಅವನೀಂದ್ರನಾಥರು ಕಲ್ಕತ್ತೆಯ ಬಳಿ ತಮ್ಮ ಮನೆಯಲ್ಲಿ ತೀರಿಕೊಂಡರೆಂಬ ಸುದ್ದಿ ಬಂದಿತು.

1952ರ ಆದಿಭಾಗದಲ್ಲಿ ಅಮೆರಿಕದ ರಾಕ್‌ಫೆಲರ್ ಪ್ರತಿಷ್ಠಾನದ ಡಾ. ಗಿಲ್‌ಪ್ಯಾಟ್ರಿಕ್ ಅವರು ವೆಂಕಟಪ್ಪನ ಸ್ಟುಡಿಯೋಗೆ ಬಂದು ಅವರ ಕಲಾಕೃತಿಗಳನ್ನೆಲ್ಲ ನೋಡಿ ಆನಂದಿಸಿದರು. ಅದೇ ವರ್ಷದ ಫೆಬ್ರುವರಿ ತಿಂಗಳಲ್ಲಿ ಇವರ ಬಳಿ ವೀಣಾಭ್ಯಾಸ ಮಾಡಲು ಶಿವಪ್ಪನೆಂಬ ಕುರುಡು ಹುಡುಗ ಸೇರಿದನು. ವೆಂಕಟಪ್ಪನ ಮಿತ್ರರೂ, ಪೊಲೀಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರೂ ಆಗಿದ್ದ ಬಸಪ್ಪ ಎಂಬುವರ ಮಗನಾದ ಈ ಹುಡುಗ ಆ ಮೊದಲೆ ಶ್ಯಾಮರಾಯರೆಂಬುವ ಸಂಗೀತಗಾರರಿಂದ ಹಾಡಿಕೆ ಕಲಿತು ವೀಣೆಯನ್ನು ತಾನೆ ನುಡಿಸಿಕೊಳ್ಳುತ್ತಿದ್ದ. ಆದರೆ ವೆಂಕಟಪ್ಪನ ಪಾಠ ಆ ವರ್ಷದ ಅಕ್ಟೋಬರ್ ತಿಂಗಳಲ್ಲಿ ಮುಕ್ತಾಯವಾಯಿತು. ಹುಡುಗನಿಗೆ ಶ್ರದ್ಧೆಯಿಲ್ಲವೆಂದೂ, ಅಡಿಗಡಿಗೆ ಪಾಠ ತಪ್ಪಿಸಿಕೊಳ್ಳುವನೆಂದೂ, ಕಲಿಯುವಾಗ ತತ್ಪರತೆಯಿಲ್ಲವೆಂದೂ, ಶಿಸ್ತಿಲ್ಲವೆಂದೂ ಹೇಳಿ ವೆಂಕಟಪ್ಪ ಇಂಥ ಅಲಸಿಗರಿಗೆ ತಾವು ಪಾಠ ಹೇಳುವುದಿಲ್ಲವೆಂದುಬಿಟ್ಟರು.

ಅದೇ ವರ್ಷ ಸುಪ್ರಸಿದ್ಧ ಐರೋಪ್ಯ ಚಲಚ್ಚಿತ್ರ ನಿರ್ದೇಶಕರು ಅಲೆಗ್ಸಾಂಡರ್ ಮಾರ್ಕೆ ಬೆಂಗಳೂರಿಗೆ ಬಂದಿದ್ದವರು ವೆಂಕಟಪ್ಪನ ಸ್ಟುಡಿಯೋಗೆ ಬಂದು, ಅವರ ಕಲಾಕೃತಿಗಳನ್ನು ನೋಡಿ ಬಹುವಾಗಿ ಮೆಚ್ಚಿಕೊಂಡರು. ಉದಕಮಂಡಲದ ವರ್ಣಚಿತ್ರಗಳು ಅವರಿಗೆ ಬಹಳ ಹಿಡಿಸಿದುವು. ಅವುಗಳಲ್ಲಿ ಒಂದನ್ನಾದರೂ ತಮಗೆ ಮಾರಬೇಕೆಂದೂ, ಅದರೊಡನೆ ಬಾಳುವ ಅವಕಾಶ ಒದಗಿಸಬೇಕೆಂದೂ ಆತ ಕೊಳ್ಳಬೇಕೆಂದೂ ಬಯಸಿ ವೆಂಕಟಪ್ಪನನ್ನು ಅಂಗಲಾಚಿ ಬೇಡಿಕೊಂಡರು. ಆದರೆ ವೆಂಕಟಪ್ಪ ಈ ಚಿತ್ರಗಳನ್ನೆಲ್ಲ ತಮ್ಮ ಸ್ಟುಡಿಯೋವಿನ ಚಿತ್ರಶಾಲೆಗಾಗಿ ಅನೇಕ ವರ್ಷಗಳಿಂದ ಕಾದಿರಿಸಿಕೊಂಡಿರುವುದಾಗಿ ತಿಳಿಸಿ ಅವುಗಳಲ್ಲೊಂದನ್ನೂ ಮಾರಲೊಪ್ಪಲಿಲ್ಲ.

ಆದರೆ ಈ ವರ್ಷದ ಕಡೆಯ ಭಾಗದಲ್ಲಿ ಅವರ ಆರೋಗ್ಯ ತೀರ ಕೆಟ್ಟು, ಚಿತ್ರಶಾಲೆಯಿರಲಿ, ಸ್ಟುಡಿಯೋವನ್ನೆ ಸಾರ್ವಜನಿಕರಿಗೆ ಮುಚ್ಚಿಬಿಟ್ಟರು. "ಸ್ಟುಡಿಯೋ ಮುಚ್ಚಿದೆ" ಎಂಬ ಬರಹದ ಫಲಕ ಅವರ ಮುಂಬಾಗಿಲ ಮೇಲೆ ಏರಿಕೊಂಡಿತು. ಅವರ ಎಡಗಾಲಿನ ಮಂಡಿಯಲ್ಲಿ ಸಹಿಸಲಾರದ ನೋವು ತೋರಿಕೊಂಡು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು; ಗುಣವಾಗಲಿಲ್ಲ. ಮಲ್ಲೇಶ್ವರದ ಹನ್ನೊಂದನೆಯ ಅಡ್ಡರಸ್ತೆಯಲ್ಲೆ ಇರುತ್ತಿದ್ದ ವೆಂಕಟಪ್ಪ ಎಂಬ ಹೆಸರಿನ ನಾಡವೈದ್ಯನೊಬ್ಬನಿಂದ

ಅಂಗಮರ್ದನ ಮಾಡಿಸಿಕೊಂಡ ಮೇಲೆ ಸ್ವಲ್ಪ ಗುಣ ಕಂಡಿತು. ಇಂಗ್ಲಿಷ್ ಔಷಧಿಯನ್ನು ಬಿಟ್ಟು ಆಯುರ್ವೇದ ಪದ್ಧತಿಯ ಪಿಂಡತೈಲ, ಕನಕಲೇಪ, ಸುಗಂಧರಾಜ ತೈಲ, ವಾತರಕ್ಷಾವಟಿ ಮೊದಲಾದುವನ್ನು ಬಳಸಿದರು. ಹುಣಸೇಹಣ್ಣಿನ ಪಟ್ಟನ್ನು ಕಾಲಿಗೆ ಹಾಕಿಕೊಳ್ಳತೊಡಗಿದರು. ವಾತನಾರಾಯಣ ಸೊಪ್ಪನ್ನು ಅಡುಗೆಯಲ್ಲಿ ಉಪಯೋಗಿಸುತ್ತಿದ್ದರು. ಆಡು ಮುಟ್ಟದ ಸೊಪ್ಪಿನ ರಸವನ್ನು ಕಾಲುಗಳಿಗೆ ಹಚ್ಚಿ ನೀವಿಕೊಳ್ಳುತ್ತಿದ್ದರು. ಬೇನೆ ಬಹುಮಟ್ಟಿಗೆ ಸುಧಾರಿಸಿ, ಮತ್ತೆ ವೀಣಾಭ್ಯಾಸ ಮಾಡುವ ಸ್ಥಿತಿಗೆ ಬಂದರು.

ಆದರೆ ಇದು ಬಹುಕಾಲ ನಿಲ್ಲಲಿಲ್ಲ . ಎರಡು ಮೂರು ತಿಂಗಳಲ್ಲೇ ಬೇನೆ ಬಲಗಾಲಿಗೆ ಬಂದಿತು. ಇಷ್ಟು ದಿನ ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳುತ್ತಿದ್ದವರು ಈಗ ಚಾಮುಂಡೇಶ್ವರಿ ಭವನಕ್ಕೆ ಹೋಗಿ ಅಲ್ಲಿ ಊಟ ಮಾಡಬೇಕಾಗಿ ಬಂದಿತು. ಆದರೂ 1953ರ ಜೂನ್ ತಿಂಗಳಲ್ಲಿ ಒಂದೆರಡು ದಿನಗಳ ಮಟ್ಟಿಗೆ ತಮ್ಮ ಸ್ಟುಡಿಯೋವನ್ನು ಸಾರ್ವಜನಿಕರಿಗೆ ತೆರೆದಿದ್ದರು. ತಮ್ಮ ವರ್ಣಚಿತ್ರಗಳನ್ನು ಹೊರತೆಗೆದು ಪ್ರದರ್ಶನಕ್ಕೆ ಅಣಿಮಾಡಿದ್ದರು. ಅವರ ಅನಾರೋಗ್ಯ ಕೇವಲ ಸಂಧಿವಾತ ಮಾತ್ರವಲ್ಲದೆ ಮಧುಮೇಹವೂ ಇರುವುದಾಗಿ ತಿಳಿದು ಬಂದಾಗ ಆಯುರ್ವೇದ ವೈದ್ಯರಾಗಿದ್ದ ಡಾ. ಸಂಪತ್ತೈಯ್ಯಂಗಾರರ ಸಲಹೆಯಂತೆ ದಿನವೂ ಎರಡು ಬಾರಿ ತೌಡಿನ ಹುರಿಹಿಟ್ಟನ್ನು ಅಡುಗೆಯಲ್ಲಿ ಬಳಸತೊಡಗಿದರು. ಉಪ್ಪಿನ ಲಡ್ಡು ಎಂಬ ತಿನಿಸನ್ನು ಮಾಡಿಕೊಳ್ಳುವರು; ಬಂದವರಿಗೂ ಕೊಡುವರು. ಹಲ್ಲಿನ ವಸಡೂ ತೊಂದರೆ ಕೊಡಲಾರಂಭಿಸಿತು; ಡಾ. ಫೆರ್ನಾಂಡಿಸ್ ಎಂಬ ದಂತವೈದ್ಯರಲ್ಲಿ ಚಿಕಿತ್ಸೆ ಪಡೆದರು. ಈ ವೈದ್ಯರು ಬರುಬರುತ್ತ ವೆಂಕಟಪ್ಪನಿಗೆ ನಿಕಟಮಿತ್ರರೂ ಆದರು. ಪಾಶ್ಚಾತ್ಯ ಪದ್ಧತಿಯ ಹೊಸವರ್ಷದ ಮೊದಲ ದಿನದಂದು (ಜನವರಿ ಮೊದಲದಿನ) ಮುಂಜಾನೆ ಎದ್ದು ವೆಂಕಟಪ್ಪ ತಾವೆ ಲಡ್ಡುಗಳನ್ನು ಮಾಡಿಕೊಂಡು ಅವರ ಮನೆಗೆ ಹೋಗಿ ಅವನ್ನು ಕೊಟ್ಟು ಶುಭಾಶಯಗಳನ್ನು ತಿಳಿಸಿ ಬರುವ ವಾಡಿಕೆಯಾಯಿತು.

1953ರ ಜುಲೈ ತಿಂಗಳಲ್ಲಿ ಅವರ ಸೋದರಿಯ ಹಿರಿಯಮಗ ಮುದ್ದುಕೃಷ್ಣರಾಜು ಬಂದು ತಮ್ಮ ತಾಯಿ ಆರುತಿಂಗಳುಗಳಿಂದ ಸಂಧಿವಾತ ಬೇನೆಯಿಂದಾಗಿ ಹಾಸಿಗೆ ಹಿಡಿದಿದ್ದಾರೆಂದೂ, ತಮ್ಮ ಸೋದರನನ್ನು ಒಮ್ಮೆ ಕಾಣಲು ಬಯಸುತ್ತಿದ್ದಾರೆಂದೂ ತಿಳಿಸಿದರು. ವೆಂಕಟಪ್ಪನಿಗೂ ಅವರ ನೆಂಟರಿಗೂ ಇರುತ್ತಿದ್ದ ಸಂಬಂಧ ಇಷ್ಟೇ; ಸೋದರಿಯು ತಿಂಗಳುಗಳಿಂದ ಅಸ್ವಸ್ಥರಾಗಿದ್ದರೂ ವೆಂಕಟಪ್ಪನಿಗೆ ಅದು ತಿಳಿಯದು. ಅಷ್ಟು ಮಾತ್ರವಲ್ಲ . ಅವರು ಎಲ್ಲಿ ವಾಸಿಸುತ್ತಿದ್ದಾರೆಂಬುದೂ ತಿಳಿಯದು! ವೆಂಕಟಪ್ಪ ತನ್ನ ಸೋದರಳಿಯ ಮುದ್ದುಕೃಷ್ಣರಾಜುವನ್ನು ಅಂದು ಸಂಜೆ ಅವರ ಮನೆಯ ಹತ್ತಿರ ಇದ್ದ ಹನುಮಂತನ ಗುಡಿಯ ಮುಂದೆ ಕಾದಿರಲು ಹೇಳಿ, ಅಲ್ಲಿಂದ ಅವರ ಮನೆಗೆ ಹೋದರು. ಸೋದರಿಯು ತುಂಬ ಕುಗ್ಗಿಹೋದುದನ್ನು ಕಂಡು, ಆಕೆಯ ಬೇನೆಯ ಪರಿಹಾರಕ್ಕೆಂದು ತಮ್ಮೊಂದಿಗೆ ಒಯ್ದಿದ್ದ ಕನಕಲೇಪವನ್ನೂ ಪಿಂಡತೈಲವನ್ನೂ ಕೊಟ್ಟರು. ಔಷಧಗಳಿಗಿಂತ ಹೆಚ್ಚಾಗಿ ಪುಷ್ಟಿಯನ್ನು ಕೊಡುವ ಆಹಾರವನ್ನು ಸೇವಿಸಬೇಕೆಂದೂ ತಿಳಿಸಿದರು. ತಾವೆ ತಯಾರಿಸಿದ್ದ ಉಪ್ಪಿನ ಲಡ್ಡುಗಳನ್ನೂ ಸಿಹಿ ಲಡ್ಡುಗಳನ್ನೂ ಆಕೆಗಾಗಿ ಕೊಂಡೊಯ್ದಿದ್ದರು.

೬

1954ರ ವೇಳೆಗೆ ಉಚಿತ ಕಲಾಶಾಲೆಯ ಕನಸು ಕೈಗೂಡಲಾರದೆಂದು ಅವರಿಗೆ ಮನವರಿಕೆಯಾಯಿತು. ಬೆಂಗಳೂರಿಗೆ ಬಂದಾಗ ಇದ್ದ ಹುಮ್ಮಸು ಆಗಲೆ ಮರೆಯಾಗಿದ್ದಿತು. ನೆರಹೊರೆಯಿಂದ ತೊಂದರೆ ವರ್ಷವರ್ಷಕ್ಕೆ ಹೆಚ್ಚಾಯಿತೇ ವಿನಾ ಕಡಮೆಯಾಗಲಿಲ್ಲ. ಕಲಾಪ್ರೇಮಿಗಳೆಂದು ಸೋಗುಹಾಕಿಕೊಂಡು ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳುವ ಸ್ವಾರ್ಥಿಗಳೇ ಸುತ್ತಮುತ್ತ ಇದ್ದುದನ್ನು ಕಂಡು ಅವರಿಗೆ ಬೇಸರವಾಯಿತು. ಸರಕಾರದಿಂದ ಯಾವುದೆ ನೆರವನ್ನು ಅವರು ಎಂದೂ ನಿರೀಕ್ಷಿಸಿರಲಿಲ್ಲ; ಹಾಗೆ ಮಾಡುವುದು ಅವರ ವ್ರತಕ್ಕೆ ವಿರುದ್ಧವಾದುದು ತಾನೆ? ಸರಕಾರದಿಂದ ತೆರಿಗೆಯನ್ನು ಹೆಚ್ಚು ಮಾಡಿದುದು, ಮನೆಗಂದಾಯವನ್ನು ಏರಿಸಿದುದು, ನಿವೇಶನದಲ್ಲಿ ನೆರೆಯವರಿಂದ ಒತ್ತುವರಿಯಾದರೆ ಸರಿಪಡಿಸದಿರುವುದು ಹೀಗೆ ತೊಂದರೆಗಳೇ ಬರತೊಡಗಿದವು. ಸರಕಾರಕ್ಕೆ ಇವರ ಮೇಲಾಗಲಿ, ಇವರ ಕಲೆಯ ಮೇಲಾಗಲೀ ಏನೊಂದು ಆದರವೂ ಇರುವಂತೆ ಕಾಣಲಿಲ್ಲ. ಬರುವೆನೆಂದು ತಿಳಿಸಿದ್ದ ಭಾರತದ ಪ್ರಧಾನಿಯೂ ಬರಲಿಲ್ಲ; ಅದರ ಬಗ್ಗೆ ಇಲ್ಲಿನ ಸರಕಾರದವರೂ ಏನೊಂದು ಆಸಕ್ತಿಯನ್ನೂ ತೋರಿಸಲಿಲ್ಲ. ಚಿತ್ರಕಲೆಗಾಗಲಿ ಸಂಗೀತಕ್ಕಾಗಲಿ ಯೋಗ್ಯ ವಿದ್ಯಾರ್ಥಿಗಳು ಬರಲಿಲ್ಲ.

ಮೇಲಾಗಿ ಅವರ ಆರೋಗ್ಯವೂ ಕೆಡುತ್ತ ಬಂದಿತು. ಒಂಟಿಯಾಗಿಯೇ ಇರುವ ಹಟ ತೊಟ್ಟಿದ್ದರಾಗಿ ನೆರವಾಗಲು ಯಾರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ತಮ್ಮ ಅಡುಗೆ ತಾವೆ ಮಾಡಿಕೊಳ್ಳಬೇಕು, ತಮ್ಮ ಬಟ್ಟೆ ತಾವೆ ಒಗೆದುಕೊಳ್ಳಬೇಕು, ತಮ್ಮ ಮನೆಯ ಕಸ ತಾವೆ ಗುಡಿಸಿಕೊಳ್ಳಬೇಕು, ತಮಗೆ ಬೇಕಾದುದನ್ನು ತಾವೆ ತಂದುಕೊಳ್ಳಬೇಕು, ತಮ್ಮ ಬೇನೆಗೆ ತಾವೆ ಮದ್ದು ಮಾಡಿಕೊಳ್ಳಬೇಕು. ಇದು ಬರುಬರುತ್ತ ಅತಿಯಾದ ಆಯಾಸಕ್ಕೆ ಕಾರಣವಾಯಿತು. ಆಗಲೆ ಸ್ಟುಡಿಯೋ ಮುಚ್ಚಿರುವುದಾಗಿಯೂ, ಕಲಾವಿದನನ್ನು ತೊಂದರೆ ಪಡಿಸಬಾರದೆಂದೂ ಫಲಕ ಅವರ ಮನೆಯ ಮುಂದೆ ಮೂಡಿಕೊಂಡಿದ್ದಿತು.

ಕಲೆಯಲ್ಲಿ ದಿಟವಾದ ಆಸಕ್ತಿಯಿದ್ದು ಲೌಕಿಕ ಪ್ರಯೋಜನಗಳಿಗಾಗಿ ಬಾಯಿಬಿಡದೆ, ಕಲೆಗಾಗಿ ಯಾವ ಶ್ರಮವನ್ನೂ ಲೆಕ್ಕಿಸದೆ ದುಡಿಯುವ ಹಟವಿದ್ದು, ಕಲೆಗೆ ಮಾಡುವ ಸೇವೆ ಭಗವಂತನ ಪೂಜೆಯೆಂಬ ವಿಶ್ವಾಸವಿದ್ದ ವಿದ್ಯಾರ್ಥಿಗಳು ಬಂದಾರೆಂದು ಅವರ ಆಲೋಚನೆಯಿದ್ದಿತು. ಇಂಥ ವಿದ್ಯಾರ್ಥಿಗಳಿಗೆ ಉಚಿತವಾಗಿ ಕಲೆಯನ್ನು ಕಲಿಸಲೆಂದೆ ಅವರು ಕಲಾಶಾಲೆಯನ್ನು ತೆರೆಯಬೇಕೆಂದಿದ್ದುದು. ಕಲೆಯ ಪರೀಕ್ಷೆಗಳು, ಕಲೆಯಿಂದ ವೃತ್ತಿಯ ಗಳಿಕೆ ಮುಂತಾದ ವಿವರಗಳಲ್ಲಿ ಅವರಿಗೆ ಏನೊಂದು ಆಸಕ್ತಿಯೂ ಇರಲಿಲ್ಲ. ದಿಟವಾದ ಕಲೆ ತಪಸ್ಸಿನಂತೆ ಇರಬೇಕಾದುದು. ಇಂಥ ಕಲೆ ಹೇಗಿದ್ದೀತೆಂದು ವಿದ್ಯಾರ್ಥಿಗಳಿಗೆ ಅರಿವಾಗಲು ಒಂದು ಚಿತ್ರಶಾಲೆ (ಆರ್ಟ್ ಗ್ಯಾಲರಿ) ಈ ಕಲಾಶಾಲೆಗೆ ಹೊಂದಿಕೊಂಡಂತೆ ಇರಬೇಕೆಂದು ಭಾವಿಸಿ, ಅದಕ್ಕಾಗಿ ತಮ್ಮೆಲ್ಲ ಕೃತಿಗಳನ್ನೂ ಹಲವು ವರ್ಷಗಳಿಂದ ಕಾದಿರಿಸಿದ್ದರು. ಮುಂಬಯಿ, ದಿಲ್ಲಿಯ ಕಡೆ ಹಲವರು ಶ್ರೀಮಂತ ರಸಿಕರು

ಅವನ್ನು ಅವರು ಕೇಳಿದಷ್ಟು ಬೆಲೆಗೆ ಕೊಳ್ಳಲು ಕಾತರರಾಗಿದ್ದರು. ಸಹಜವಾದ ಲೋಭವನ್ನು ಹತ್ತಿಕ್ಕಿ ವೆಂಕಟಪ್ಪ ಅವನ್ನು ಮಾರಲು ಮನಸ್ಸು ಮಾಡಿರಲಿಲ್ಲ.

ತಮ್ಮ ಸ್ಟುಡಿಯೋದಿಂದ ಹೊರಗೆ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಲೂ ಅವರು ಒಪ್ಪುತ್ತಿರಲಿಲ್ಲ. ಆದರೆ ತಮಗೆ ತೀರ ಹತ್ತಿರದ ಸ್ನೇಹಿತರಾಗಿದ್ದ ಫ್ರೆಡ್ ಹಾರ್ವೆ ಅವರು ಬೆಂಗಳೂರಿನ ದಂಡಿನಲ್ಲಿರುತ್ತಿದ್ದ ತಮ್ಮ ಥಿಯೊಸಾಫಿಕಲ್ ಸೊಸೈಟಿಯ ಭವನದಲ್ಲಿ ಚಿತ್ರ ಕಲಾ ಪ್ರದರ್ಶನವೊಂದನ್ನು 1950ರಲ್ಲಿ ಏರ್ಪಡಿಸಿದ್ದಾಗ, ಅವರು ಕೇಳಿದರೆಂದು ತಮ್ಮ ಉದಕಮಂಡಲದ ಪ್ರಕೃತಿಚಿತ್ರಗಳನ್ನು ಕಳುಹಿಸಿದ್ದರು. ನಾಲ್ಕು ವರ್ಷಗಳ ತರುವಾಯ ಅವರ ಇನ್ನೊಬ್ಬ ಪರಿಚಿತರೂ ಕಲಾವಿಮರ್ಶಕರೂ ಆಗಿದ್ದ ಜಿ. ವೆಂಕಟಾಚಲಂ ಎಂಬುವರು ಈಗಿನ ಮಹಾತ್ಮಾಗಾಂಧಿ ರಸ್ತೆಯಲ್ಲಿ ಇನ್ನೊಂದು ಚಿತ್ರಕಲಾ ಪ್ರದರ್ಶನ ವನ್ನೇರ್ಪಡಿಸಿದಾಗಲೂ ವೆಂಕಟಪ್ಪನ ಕೆಲವು ಚಿತ್ರಗಳನ್ನು ಒಯ್ದು ಅಲ್ಲಿರಿಸಿದ್ದರು. ಇಷ್ಟನ್ನು ಬಿಟ್ಟರೆ, ಅವರು ಈಚಿನ ದಿನಗಳಲ್ಲಿ ಕಲಾಪ್ರದರ್ಶನಗಳಿಗೆ ತಮ್ಮ ಚಿತ್ರಗಳನ್ನು ಕಳುಹಿಸುತ್ತಿರಲಿಲ್ಲ. ತಮ್ಮ ಕಲಾಕೃತಿಗಳು ತಮ್ಮ ಕಲಾಶಾಲೆಯಲ್ಲೆ ಇರಬೇಕು, ಯಾವ ಕಾರಣದಿಂದಲೂ ಅವು ಹಾಳಾಗಬಾರದು ಕಳುವಾಗಬಾರದು, ವಿದ್ಯಾರ್ಥಿಗಳು ಅದರಿಂದ ಪ್ರಯೋಜನ ಪಡೆದುಕೊಳ್ಳಬೇಕು ಎಂಬ ಹಂಬಲ ಅವರದ್ದು.

ಆದರೆ ಈಗ ಕಲಾಶಾಲೆಯೆ ಇಲ್ಲವೆಂದ ಮೇಲೆ ಚಿತ್ರಶಾಲೆಯ ಅಗತ್ಯವೇನು? ಅದಕ್ಕಾಗಿ ತಮ್ಮ ಕಲಾಕೃತಿಗಳನ್ನು ಕಾಪಾಡಿಕೊಳ್ಳುವುದಾದರೂ ಏತಕ್ಕೆ? ತಾವು ಒಂಟಿಜೀವಿ, ತಮಗೆ ಕಡೆಗಾಲದಲ್ಲಿ ನೆರವಾಗುವ ಯಾರಾದರೂ ಕಲೆಯಲ್ಲಿ ಆಸಕ್ತರಾಗಿರುವಂತೆ ಕಾಣಲಿಲ್ಲ. ತಾವು ಸಾಧಿಸಿಕೊಂಡ ಕಲಾಕೌಶಲ ತಮ್ಮೊಂದಿಗೆ ಮರೆಯಾಗುವುದು ಕಂಡಿತ. ಇನ್ನು ಈ ಕಲಾಕೃತಿಗಳನ್ನು ನೋಡಿಕೊಳ್ಳುವವರು ಯಾರು? ಇವೆಲ್ಲ ಆಲೋಚನೆಗಳು ಅವರನ್ನು ಕಾಡತೊಡಗಿದುವು. ಅವರ ಕಲಾಶಾಲೆಯ ಯೋಜನೆಯನ್ನು ಮುಂದಾಗಲಿ ಕೈಗೂಡಿಸುವ, ಅವರ ಚಿತ್ರಶಾಲೆಯನ್ನು ಅವರ ನಂತರ ರಸಿಕರ ಪ್ರಯೋಜನಕ್ಕಾಗಿ ಕಾಪಿಡುವ ವಿದ್ಯಾರ್ಥಿಯಾಗಲಿ ಅಭಿಮಾನಿಯಾಗಲಿ ಸ್ನೇಹಿತನಾಗಲಿ ಅವರ ಕಣ್ಣೆದುರು ಕಾಣಿಸಿಕೊಳ್ಳಲಿಲ್ಲ. ಆದುದರಿಂದ ಆ ಕಲಾಕೃತಿಗಳನ್ನು ಯಾವುದಾದರೂ ಸಂಸ್ಥೆ ಕೊಳ್ಳಲು ಮುಂದೆ ಬಂದರೆ ಕೊಟ್ಟುಬಿಡುವುದೆಂದು ನಿಶ್ಚಯಿಸಿದರು.

1954ರ ಅಕ್ಟೋಬರ್ ತಿಂಗಳಿನಲ್ಲಿ ಅಖಿಲ ಭಾರತ ಕರಕುಶಲ ಕಲೆಯ ಸಂಸ್ಥೆಯ ಅಧ್ಯಕ್ಷಿಣಿ ಕಮಲಾದೇವಿ ಚಟ್ಟೋಪಾಧ್ಯಾಯರು ಬೆಂಗಳೂರಿಗೆ ಸಮಿತಿಯ ಸಭೆಯೊಂದಕ್ಕೆ ಬಂದಿದ್ದಾಗ ವೆಂಕಟಪ್ಪನನ್ನು ಕಂಡರು. ವೆಂಕಟಪ್ಪನಿಗೆ ಅವರು ತುಂಬ ಪರಿಚಿತರು; ಅವರ ಗಂಡ ಹರೀಂದ್ರನಾಥ ಚಟ್ಟೋಪಾಧ್ಯಾಯರಂತೂ ವೆಂಕಟಪ್ಪನಿಗೆ ಸ್ನೇಹಿತರಾಗಿದ್ದವರು. ಬೆಂಗಳೂರಿಗೆ ಬಂದಾಗಲೆಲ್ಲ ಕಮಲಾದೇವಿ ವೆಂಕಟಪ್ಪನ ಸ್ಟುಡಿಯೋಗೆ ಬಂದು ಹೋಗುವುದು ವಾಡಿಕೆ. ಈ ಬಾರಿ ಬಂದಿದ್ದಾಗ, ಮಾತುಕತೆಯ ನಡುವೆ ವೆಂಕಟಪ್ಪನ ಮನೋಗತವನ್ನು ಅರಿತುಕೊಂಡು ಆನೆಯ ದಂತದ ಹಲಗೆಯ ಮೇಲೆ ಮಾಡಿದ್ದ ಮೈಸೂರು ಮಹಾರಾಜರ ಕಿರುಚಿತ್ರವನ್ನೂ ಐದು ಅರ್ಧಶಿಲ್ಪಫಲಕಗಳನ್ನೂ ತಮ್ಮ ಸಂಸ್ಥೆಗೆ ಕೊಳ್ಳುವುದಾಗಿಯೂ, ವೆಂಕಟಪ್ಪ ಅದಕ್ಕೆ ಬಯಸುವ ಪ್ರತಿಫಲವನ್ನು ಸೂಚಿಸಬೇಕೆಂದೂ

ತಿಳಿಸಿದರು. ಇಷ್ಟೇ ಬೆಲೆಯೆಂದು ವೆಂಕಟಪ್ಪ ಹೇಳಲಿಲ್ಲ. "ನಿಮ್ಮ ಇಚ್ಛೆಗೆ ಬಿಟ್ಟಿದ್ದೇನೆ" ಎಂದು ಹೇಳಿಬಿಟ್ಟರು. ಆದರೆ ಈ ವ್ಯವಹಾರ ಕಾರಣಾಂತರದಿಂದ ಮುಂದುವರೆಯಲಿಲ್ಲ. ಎಲ್ಲ ಕಲಾಕೃತಿಗಳೂ ವೆಂಕಟಪ್ಪನ ಬಳಿಯೇ ಉಳಿದುಕೊಂಡುವು.

ಆ ವರ್ಷ ಅವರ ಆರೋಗ್ಯ ಇನ್ನಷ್ಟು ಕೆಟ್ಟಿತು. ಹಲವಾರು ಬಗೆಯ, ಪಾಶ್ಚಾತ್ಯ ಮತ್ತು ಆಯುರ್ವೇದ ಪದ್ಧತಿಗಳ ಔಷಧಗಳನ್ನು ಸೇವಿಸಿ, ಉಪಚಾರಗಳನ್ನು ಮಾಡಿಕೊಂಡರೂ ದೇಹಸ್ಥಿತಿ ಮಾತ್ರ ನೆಟ್ಟಗಾಗಲಿಲ್ಲ. ಅವರಿಗೆ ಬೇಸರ ಬಂದು ಔಷಧಗಳನ್ನು ಸೇವಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ವೈದ್ಯರೊಬ್ಬರು ತಾವು ಚಿಕಿತ್ಸೆಮಾಡುವೆನೆಂದು ಮುಂದೆ ಬಂದಾಗ ವೆಂಕಟಪ್ಪ "ನನ್ನ ದೇಹದಲ್ಲಿ ಮದ್ದನ್ನು ತುರುಕುವುದನ್ನು ನಿಲ್ಲಿಸಿದ್ದೇನೆ" ಎಂದುತ್ತರ ಕೊಟ್ಟು ಹಿಂದಿರುಗಿಸಿದರು (ನವೆಂಬರ್ ಹತ್ತರಂದು). ಸಂಧಿವಾತ, ಮಧುಮೇಹ ಮೊದಲಾದ ಹಲವು ಬೇನೆಗಳು ಕಾಡುತ್ತಿದ್ದರೂ ಕಲೆಯ ಗೀಳನ್ನೇನು ಕೈಬಿಡಲಿಲ್ಲ. ತಾವು ಹಿಂದೆ ಜೇಡಿಮಣ್ಣಿನಲ್ಲಿ ಮಾಡಿದ್ದ ಪರ್ಸಿ ಬ್ರೌನರ ಶಿಲ್ಪವನ್ನು ಸಂಸ್ಕರಣಕ್ಕಾಗಿ ಮತ್ತೆ ಎತ್ತಿಕೊಂಡರು; ಇದನ್ನು ಮುಗಿಸಿ ಡಿಸೆಂಬರ್ ಇಪ್ಪತ್ತನಾಲ್ಕರಂದು ತಮ್ಮ ಸೋದರಳಿಯ ರಾಮರಾಜುವಿನಿಂದ ಛಾಯಾಗ್ರಹಣ ಮಾಡಿಸಿದರು. ರಾಮರಾಜು ಛಾಯಾಚಿತ್ರದ ಸ್ಟುಡಿಯೋ ಒಂದನ್ನು ನಡೆಸುತ್ತಿದ್ದರು. ಈಗ ಆ ಕೃತಿಯಾಗಲಿ, ಛಾಯಾಚಿತ್ರವಾಗಲಿ ಎಲ್ಲಿದೆಯೊ ತಿಳಿಯದು. ತಮ್ಮ ಮಿತ್ರರೂ ಕಲಾಪ್ರೇಮಿಯೂ ಆಗಿದ್ದ ಫ್ರೆಡ್ ಹಾರ್ವೆಯ ಭಾವಚಿತ್ರವೊಂದನ್ನು ಮರುವರ್ಷದ ಮೊದಲ ಭಾಗದಲ್ಲಿ ಹಿಗ್ಗಿಸುವ ಕೆಲಸದಲ್ಲಿ ತೊಡಗಿದರು. ರಾಮರಾಜುವಿನಿಂದಲೆ ಛಾಯಾಗ್ರಹಣ ಮಾಡಿಸಿ, ಇದಕ್ಕೆ ಪ್ರತಿಯಾಗಿ ಅವರ ಬಳಿಯಿದ್ದ ಬೆಲೆಬಾಳುವ ರೇಷ್ಮೆ ಅಂಗವಸ್ತ್ರವೊಂದನ್ನು ಕೊಟ್ಟರು. ಅವರ ಅಪರಿಗ್ರಹ ವ್ರತದ ನಿಷ್ಠೆ ಅವರನ್ನು ಆ ಪರಿಸ್ಥಿತಿಯಲ್ಲೂ ಬಿಟ್ಟಿರಲಿಲ್ಲ.

ಮಂಡಿಯ ನೋವು ತೀರ ಹೆಚ್ಚಿ ಕಳೆದ ವರ್ಷದ ನಿರ್ಧಾರವನ್ನು ಅವರು ಬದಲಿಸಬೇಕಾಯಿತು; 1955ರಲ್ಲಿ ಔಷಧ ಸೇವನೆಯನ್ನು ಮತ್ತೆ ಮೊದಲು ಮಾಡಿದರು. ಈ ಬಾರಿ ಮಲಬಾರಿನ ಕೊಟ್ಟಕ್ಕಲ್ ಆರ್ಯ ವೈದ್ಯಶಾಲೆಯಿಂದ ಧಾನ್ವಂತರ ತೈಲವನ್ನು ತರಿಸಿ ಮಂಡಿಗೆ ನೀವಿಕೊಳ್ಳತೊಡಗಿದರು. ಅದು ಸ್ವಲ್ಪ ಮಟ್ಟಿಗೆ ಸಮಾಧಾನವನ್ನು ತಂದಿತು. ಬಹಳ ವರ್ಷಗಳಿಂದ ಅವರು ದಿನವೂ ಎಳನೀರನ್ನು ಕುಡಿಯುವ ಪದ್ಧತಿಯನ್ನು ಇರಿಸಿಕೊಂಡಿದ್ದರು. ಈಚೆಗೆ ಎಳನೀರಿನ ಬೆಲೆ ತೀರ ದುಬಾರಿಯೆನಿಸಿ ನಿಲ್ಲಿಸಿದ್ದರು. ಪ್ರಕೃತಿ ಚಿಕಿತ್ಸೆಯ ಪದ್ಧತಿಯಲ್ಲಿ ಎಳನೀರಿನ ಸೇವನೆ ಅಗತ್ಯವೆಂದು ತಿಳಿದು, ಮಂಡಿಯ ಸಂಧಿವಾತದ ಚಿಕಿತ್ಸೆಗಾಗಿ ನಲವತ್ತೆಂಟು ದಿನಗಳ ನಿರಂತರ ಸೇವನೆಯನ್ನು ಮೊದಲು ಮಾಡಿದರು (ಏಪ್ರಿಲ್ ಹದಿನಾಲ್ಕರಂದು). ಬೇರಾವ ಮದ್ದನ್ನೂ ತೆಗೆದುಕೊಳ್ಳಲಿಲ್ಲ.

ಸ್ವಲ್ಪ ದಿನ ಗುಣವಾದಂತೆ ಕಂಡರೂ, ಬೇನೆ ಬಲಿಯಿತೆ ವಿನಾ ಮರೆಯಾಗಲಿಲ್ಲ. ಮಂಡಿಯ ಊತ, ನೋವು, ಸೆಳೆತ ಇವು ತುಂಬ ತೊಂದರೆ ಕೊಡಲಾರಂಭಿಸಿದಾಗ, ಕೆಲವು ಮಿತ್ರರ ಸಲಹೆಯಂತೆ ಬೌರಿಂಗ್ ಆಸ್ಪತ್ರೆಗೆ ಹೋಗಿ ಅಲ್ಲಿ ದೈಹಿಕ ಪರೀಕ್ಷೆಗಳನ್ನೆಲ್ಲ ಮಾಡಿಸಿಕೊಂಡು ಎಕ್ಸ್‌ರೇ ಮತ್ತು ಡಯಾಥರ್ಮಿಕ್ ಚಿಕಿತ್ಸೆಯನ್ನು ಮಾಡಿಸಿಕೊಂಡರು.

ಇದು ಹೆಚ್ಚೂ ಕಡಮೆ, ಬಿಟ್ಟು ಬಿಟ್ಟು ಒಂದು ವರ್ಷದವರೆಗೂ ನಡೆಯಿತು. ಪರಿಸ್ಥಿತಿ ಸುಮಾರಾಗಿ ಹತೋಟಿಗೆ ಬಂದಂತೆ ತೋರಿತು. ಕಾಲಿನ ಊತವೇನೋ ಇಳಿಯಿತು. ಆರೋಗ್ಯ ಬಹುಮಟ್ಟಿಗೆ ಸುಧಾರಿಸಿತು. ಹಲವಾರು ತಿಂಗಳುಗಳ ಕಾಲ ವೆಂಕಟಪ್ಪ ಬೇನೆಗಳಿಂದ ತೊಂದರೆಪಟ್ಟರು. ಅವರ ನೆಂಟರು ಯಾರೂ ಹತ್ತಿರ ಸುಳಿಯಲಿಲ್ಲ; ಇವರು ಅವರನ್ನು ಸೇರಿಸುತ್ತಲೂ ಇರಲಿಲ್ಲವೆನ್ನಿ. ಹಲವು ತಿಂಗಳುಗಳ ಮೇಲೆ ತಮ್ಮ ಸೋದರಳಿಯ ಬಂದು ತಮ್ಮ ಆರೋಗ್ಯವನ್ನು ವಿಚಾರಿಸಿಕೊಂಡು ಹೋದುದನ್ನು ಅವರ ದಿನಚರಿಯಲ್ಲಿ ಕಾಣುತ್ತೇವೆ.

ಅವರ ಆರೋಗ್ಯ ಎಷ್ಟು ಸುಧಾರಿಸಿತೆಂದರೆ ಅವರು ಚಿತ್ರಮಂದಿರಗಳಿಗೆ ಹೋಗಲೂ ಮೊದಲುಮಾಡಿದರು. ಒಳ್ಳೆಯ ಇಂಗ್ಲಿಷ್, ತೆಲುಗು, ತಮಿಳು ಚಿತ್ರಗಳನ್ನು ನೋಡುವ ಅಭ್ಯಾಸ ಅವರಿಗೆ ಮೊದಲಿಂದ ಇದ್ದಿತು. ಅದೂ, ಚಿತ್ರ ಚೆನ್ನಾಗಿದ್ದರೆ ಮತ್ತೆ ಮತ್ತೆ ನೋಡುವುದೂ ಇದ್ದಿತು. 1945ರ ಮಾರ್ಚ್ ತಿಂಗಳಲ್ಲಿ ವಾಲ್ಟ್ ಡಿಸ್ನಿಯ 'ಫೆಂಟಾಸಿಯಾ' ಚಿತ್ರವನ್ನು ಏಳು ಎಂಟು ಬಾರಿ ನೋಡಿದ್ದರು. ಹಿಂದಿಯ 'ಬೈಜುಬಾವರಾ' ಚಿತ್ರವನ್ನು ನಾಲ್ಕೈದು ಬಾರಿ ನೋಡಿದ್ದರು. ರೆಕ್ಸ್ ಚಿತ್ರಮಂದಿರದಲ್ಲಿ ನಡೆಯುತ್ತಿದ್ದ ವಾಲ್ಟ್ ಡಿಸ್ನಿಯ 'ಸ್ಟೋರಿ ಆಫ್ ರಾಬಿನ್‌ಹುಡ್' ಮತ್ತು 'ವಾಟರ್ ಬೇಬೀಸ್' ಎಂಬ ಚಿತ್ರಗಳನ್ನು 1952ರ ನವೆಂಬರ್ ತಿಂಗಳಲ್ಲಿ ಒಂದೇ ವಾರದಲ್ಲಿ ಮೂರು ಬಾರಿ ನೋಡಿದ್ದರು. ತಮ್ಮ ಅನಾರೋಗ್ಯ ಹೆಚ್ಚಿದಾಗ ಚಲಚ್ಚಿತ್ರಗಳನ್ನು ನೋಡುವುದು ನಿಂತಿದ್ದಿತು. ಈಗ ಮತ್ತೆ ಅದನ್ನು ಆರಂಭಿಸಿದರು. ದಂಡು ಪ್ರದೇಶದಲ್ಲಿರುವ ಲಿಬರ್ಟಿ ಚಿತ್ರಮಂದಿರದವರೆಗೆ ಹೋಗಿ ಅಲ್ಲಿ 'ರಿವರ್ ಆಫ್ ನೋ ರಿಟರ್ನ್' ಎಂಬ ಚಿತ್ರವನ್ನು ನೋಡಿಬಂದುದೇ ಮೊದಲು(1955ರ ಫೆಬ್ರುವರಿ ಹದಿನೇಳರಂದು). ಅದಲ್ಲದೆ, ಅವರ ಓಡಿಯಾಟವೂ ಮೊದಲಿನಂತೆ ಮೊದಲಾಯಿತು.

ಅವರ ಅನಾರೋಗ್ಯ ಹೆಚ್ಚಾದಾಗಿನಿಂದ ಅವರು ಮನೆಯಲ್ಲಿ ಅಡುಗೆ ಮಾಡಿಕೊಳ್ಳುವುದನ್ನು ಬಿಟ್ಟು ಚಾಮುಂಡೇಶ್ವರಿ ಭವನದಲ್ಲೆ ಊಟಮಾಡಲು ತೊಡಗಿದರು. ಅಲ್ಲಿ ಅವರಿಗಾಗಿ ವಿಶೇಷ ಉಪಚಾರವೂ ನಡೆಯುತ್ತಿದ್ದಿತು. ಹೋಟೆಲಿನ ಮಾಲೀಕರಿಗೆ (ಶ್ಯಾಮಲಾಲ್) ವೆಂಕಟಪ್ಪನೆಂದರೆ ತುಂಬ ಗೌರವ, ವಿಶ್ವಾಸ; ವೆಂಕಟಪ್ಪನ ಅನಾರೋಗ್ಯವನ್ನು ಗಮನಿಸಿ ಅವರಿಗೆ ಬೇಕಾದಂಥ ಉಪ್ಪು ಹಾಕದ ಪಲ್ಯಗಳನ್ನು ಇತರ ಭಕ್ಷ್ಯಗಳನ್ನು ಮಾಡಿಸಿಡುವರು. ಅವರಿಗಾಗಿ ಒಂದು ಕೋಣೆಯನ್ನೆ ಮೀಸಲಾಗಿಯೂ ಇಟ್ಟಿದ್ದರು; ಇಲ್ಲಿ ಬೇಕೆಂದಾಗ ವಿಶ್ರಮಿಸಿಕೊಳ್ಳುವ ಸೌಕರ್ಯವೂ ಇದ್ದಿತು.

ವರ್ಷದಲ್ಲಿ ಅವರ ಹುಟ್ಟುಹಬ್ಬದ ದಿನ, ಆಷಾಢ ಶುದ್ಧ ದ್ವಿತೀಯೆಯಂದು, (ಆಧುನಿಕ ಎಣಿಕೆಯಂತೆ ಜೂನ್ ತಿಂಗಳಲ್ಲಿ ಒಂದು ದಿನ), ತಮ್ಮ ಕೆಲವು ಸ್ನೇಹಿತರನ್ನು ಕರೆದು ಯಾವುದಾದರು ಹೋಟೆಲಿನಲ್ಲಿ ಊಟ ಹಾಕಿಸುವ ಪದ್ಧತಿಯನ್ನು 1955ರಿಂದ (ತಮ್ಮ ಅರವತ್ತೊಂಬತ್ತನೆಯ ಹುಟ್ಟು ಹಬ್ಬದ ದಿನದಿಂದ) ಆರಂಭಿಸಿದರು. ಚಾಮುಂಡೇಶ್ವರಿ ಭವನದಲ್ಲೇ ಇದು ನಡೆಯುವುದು. ಸುಮಾರು ಇಪ್ಪತ್ತು ಜನ ನೆರೆಯುವರು. ಇವರಲ್ಲಿ ವೈದ್ಯರು, ವಕೀಲರು, ದರ್ಜಿ, ಹತ್ತಿರದ ನೆಂಟರು, ತೀರ ಪರಿಚಿತರು ಇರುವರು. ಮಧ್ಯಾಹ್ನ

ಹನ್ನೆರಡೂವರೆ ಗಂಟೆಯ ಸುಮಾರಿಗೆ ಭೋಜನಕೂಟ ಮೊದಲಾಗಿ ಒಂದೆರಡು ಗಂಟೆಗಳಲ್ಲಿ ಮುಗಿಯುವುದು. ತಮ್ಮ ತಂಗಿಯ ಮನೆಗೆ ಊಟವನ್ನು ಹೋಟೆಲಿನಿಂದಲೇ ಕಳುಹಿಸುವರು. ಅತಿಥಿಗಳ ಊಟ ಮುಗಿದು ಅವರೆಲ್ಲ ಹೊರಟುಹೋದ ಮೇಲೆ ತಾವು ಊಟಮಾಡುವುದು ಅವರ ಪದ್ಧತಿ. ಹೋಟೆಲಿನ ಮಾಲೀಕ ಶ್ಯಾಮಲಾಲ್ ಮತ್ತು ಆತನ ಮಗ ಗೋಪಾಲ್ ಎಲ್ಲ ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ಮಾಡುವರು.

೭

ಮೈಸೂರಿನಲ್ಲಿ ಜನಪ್ರಿಯ ಸರಕಾರ ಬಂದುದನ್ನು ವೆಂಕಟಪ್ಪ ತುಂಬ ಪ್ರೀತಿಯಿಂದ ಸ್ವಾಗತಿಸಿದ್ದರು. ಮಹಾರಾಜರ ಪೋಷಣೆ, ಪ್ರೋತ್ಸಾಹಗಳಿಂದಲೇ ಬೆಳೆದವರಾದರೂ ಅವರಿಗೆ ರಾಷ್ಟ್ರೀಯ ಮನೋವೃತ್ತಿ ಮೊದಲಿಂದ ಇದ್ದಿತು. 1946ರ ಸೆಪ್ಟೆಂಬರ್ ಎರಡರಂದು ತಮ್ಮ ದಿನಚರಿಯಲ್ಲಿ

> "ಜೈ ಹಿಂದ್. ಆಧುನಿಕ ಭಾರತದ ಇತಿಹಾಸದಲ್ಲಿ ಇದು ಸ್ವರ್ಣಾಕ್ಷರಗಳಿಂದ ಉಲ್ಲೇಖಿಸಬೇಕಾದ ದಿನ. ಈ ಬೆಳಿಗ್ಗೆ ಹನ್ನೊಂದು ಗಂಟೆಯಿಂದ ನವದೆಹಲಿಯಲ್ಲಿ ಪಂಡಿತ ಜವಹರಲಾಲ ನೆಹ್ರೂರವರ ನೇತೃತ್ವದಲ್ಲಿ ಹೊಸ ತಾತ್ಕಾಲಿಕ ಸರಕಾರ ಏರ್ಪಟ್ಟಿತು. ದಿಟವಾಗಿ ಇದು ಸಂತೋಷಪಡಬೇಕಾದ ದಿನ. ನಿಸ್ಪೃಹರಾದ ಭಾರತ ನೇತಾರರಿಗೆಲ್ಲ ಭಗವಂತನು ದೀರ್ಘಾಯುಸ್ಸನ್ನೂ, ಜನರಿಗೆ ಸೇವೆಯನ್ನು ಸಲ್ಲಿಸುವ ಧೈರ್ಯವನ್ನೂ ದಯಪಾಲಿಸಲಿ. ಭಾರತಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯ ದೊರಕುವಂತಾಗಲಿ"

— ಎಂದು ಬರೆದಿದ್ದಾರೆ. ಆಗ ಅವರಿಗೂ ಮೈಸೂರು ಅರಮನೆಗೂ ವಿರಸವೊದಗಿ, ಅದು ನ್ಯಾಯಾಲಯದ ಮುಂದೆ ವಿಚಾರಣೆಗಿದ್ದಿತು. ಆದುದರಿಂದ ದೇಶೀಯ ಸಂಸ್ಥಾನದ ಮೇಲೆ ಅವರಿಗೆ ವಿಶೇಷವಾಗಿ ಮಮತೆಯೇನು ಇದ್ದಿರಲು ಅವಕಾಶವಿಲ್ಲ. ಆದರೆ ಅವರ ರಾಷ್ಟ್ರೀಯ ಭಾವನೆಗೆ ಅದೇನು ಕಾರಣವಲ್ಲ. 1924ರಲ್ಲಿ ಬೆಳಗಾಂವಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನೆರೆದಾಗ ವೆಂಕಟಪ್ಪನೂ ಅಲ್ಲಿಗೆ ಹೋಗಿದ್ದರಷ್ಟೆ. ಆಗಲೆ ಅವರು ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿ ಅವರಿಂದ ಪ್ರಭಾವಿತರಾಗಿದ್ದರು. ಸ್ವಾತಂತ್ರ್ಯಪೂರ್ವದಲ್ಲೇ 1927ರಲ್ಲಿ ಗಾಂಧಿಯವರು ಮೈಸೂರಿಗೆ ಬಂದಿದ್ದಾಗ ವೆಂಕಟಪ್ಪ ಅವರನ್ನು ಕಂಡು ಅವರಿಗೆ ತಮ್ಮ ಉದಕಮಂಡಲದ ಚಿತ್ರಗಳನ್ನು ತೋರಿಸಿದ್ದರು. ಆಗಲೆ ವೆಂಕಟಪ್ಪ ಉಚಿತವಾಗಿ ಶಿಕ್ಷಣವನ್ನು ನೀಡುವ ಕಲಾಶಾಲೆಯನ್ನು ತೆರೆಯುವ ತಮ್ಮ ಇಚ್ಛೆಯನ್ನು ಅವರ ಮುಂದೆ ವ್ಯಕ್ತಪಡಿಸಿದಾಗ ಮಹಾತ್ಮರು ಅದನ್ನು ಕೇಳಿ ಸಂತೋಷಪಟ್ಟು ಆಶೀರ್ವದಿಸಿದ್ದರು. ಇದಕ್ಕಾಗಿಯೆ ವೆಂಕಟಪ್ಪ ತಮ್ಮ ಉದಕಮಂಡಲದ ಪ್ರಕೃತಿ ಚಿತ್ರಗಳನ್ನು ಯಾರಿಗೂ ಮಾರದೆ ತಮ್ಮ ಕಲಾಶಾಲೆಗೆಂದೇ ಕಾದಿರಿಸಿಕೊಂಡಿದ್ದುದು. ಗಾಂಧೀಜಿಯ ಹತ್ಯೆಯಾದಾಗ ತುಂಬ ದುಃಖಪಟ್ಟರು; ಅವರ ವರ್ಷಾಬ್ದಿಕದ ದಿನ (1949ರ ಜನವರಿ 30 ರಂದು) ಅವರ ನೆನಪಿಗಾಗಿ ಇಡೀ ದಿನ ಉಪವಾಸಮಾಡಿದರು.

1949ರ ಜನವರಿ ಇಪ್ಪತ್ತಾರರಂದು ಭಾರತವು ಗಣತಂತ್ರರಾಜ್ಯವೆಂದು ಮಾರ್ಪಟ್ಟ ದಿನ

ಅವರು ಸಂತೋಷಪಟ್ಟರು. ತಮ್ಮ ದಿನಚರಿಯಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಇದನ್ನು ಒಕ್ಕಣಿಸಿದ್ದಾರೆ. ಪಂಡಿತ ಜವಹರಲಾಲ ನೆಹ್ರೂ, ಸರ್ದಾರ್ ವಲ್ಲಭಭಾಯಿ ಪಟೇಲ್ ಮುಂತಾದ ನೇತಾರರ ವಿಚಾರವಾಗಿ ಅವರಿಗೆ ಗೌರವಬುದ್ಧಿಯಿದ್ದಿತು. ಮೈಸೂರು ಅರಸೊತ್ತಿಗೆಯ ಆಡಳಿತ ಮುಗಿದು ಪ್ರಜಾಪ್ರಭುತ್ವ ಮೊದಲಾದಾಗಲೂ ಸಂತೋಷಪಟ್ಟಿದ್ದರು. ಆದರೆ ಈ ಸರಕಾರದಿಂದ ತಮಗೆ ಮನ್ನಣೆಯಾಗಲಿ ಪ್ರೋತ್ಸಾಹ ವಾಗಲಿ ದೊರೆತೀತೆಂದು ಅವರು ಆಶಿಸಲೂ ಇಲ್ಲ, ನಿರೀಕ್ಷಿಸಲೂ ಇಲ್ಲ. ಅದಕ್ಕಾಗಿ ಅವರು ಪ್ರಯತ್ನಪಡುವವರೂ ಅಲ್ಲ. ಕೆ. ಹನುಮಂತಯ್ಯ ರಾಜ್ಯದ ಮುಖ್ಯಮಂತ್ರಿಯಾದಾಗ ವಿಧಾನಸೌಧವನ್ನು ಕಟ್ಟಿಸಲು ತೊಡಗಿದರಷ್ಟೆ. ಅದು ಅತ್ಯಂತ ಕಲಾತ್ಮಕವಾಗಿರಬೇಕೆಂದು ಅವರ ಬಯಕೆ. ಇದಕ್ಕಾಗಿ ಅವರು ವಿಧಾನಸೌಧದ ಅಲಂಕರಣಕ್ಕೆಂದೆ ಸಲಹಾ ಸಮಿತಿಯೊಂದನ್ನು ನೇಮಿಸಿದರು. ಅದರಲ್ಲಿ ಎ.ಎನ್. ಸುಬ್ಬರಾವ್, ಎಸ್.ಬಿ. ಶಂಕರ್, ಎಸ್.ಎನ್. ಸ್ವಾಮಿ, ಪುರುಷೋತ್ತಮರಾವ್ ಮೊದಲಾದ ಕಲಾವಿದರಿದ್ದರು; ಇಡೀ ರಾಷ್ಟ್ರದಲ್ಲಿ ಶ್ರೇಷ್ಠ ಕಲಾವಿದರೆಂದು ಪ್ರಖ್ಯಾತರಾಗಿದ್ದ ವೆಂಕಟಪ್ಪ ಇರಲಿಲ್ಲ !

ಕೆ. ಹನುಮಂತಯ್ಯ ಮುಖ್ಯಮಂತ್ರಿಯಾಗಿರುವಾಗ ವೆಂಕಟಪ್ಪನ ಸ್ಟುಡಿಯೋಗೆ ಒಮ್ಮೆ ಬಂದುದುಂಟು (1954ರ ಸೆಪ್ಟೆಂಬರ್ ಇಪ್ಪತ್ತೈದರಂದು). ಬಂದಾಗ ಬೆಂಗಳೂರಿನಲ್ಲಿ ಒಂದು ಚಿತ್ರ ಸಂಗ್ರಹ ಶಾಲೆಯನ್ನು (ಆರ್ಟ್ ಗ್ಯಾಲರಿಯನ್ನು) ಏರ್ಪಡಿಸಬೇಕೆಂಬುದು ತಮ್ಮ ಬಯಕೆಯೆಂದೂ, ಅದಕ್ಕೆ ವೆಂಕಟಪ್ಪನ ಸಹಕಾರ ಬೇಕೆಂದೂ ಹೇಳಿದುದುಂಟು. ತಾವು ಕಟ್ಟಿಸುತ್ತಿರುವ ವಿಧಾನಸೌಧದ ಅಲಂಕರಣದಲ್ಲಿ ವೆಂಕಟಪ್ಪನ ಸಲಹೆಗಳನ್ನು ತಾವು ಪಡೆಯುವುದಾಗಿಯೂ ತಿಳಿಸಿದುದುಂಟು. ಆದರೆ ಅದು ಅಲ್ಲಿಗೇ ಮುಗಿದ ಕಥೆ. ವೆಂಕಟಪ್ಪನಿಗೆ ಈ ವಿಚಾರಗಳಲ್ಲಿ ಆಸಕ್ತಿಯಿಲ್ಲವೆಂದಲ್ಲ. ಸರಕಾರವು ಸಹಕಾರವನ್ನು ಬಯಸಿದ್ದರೆ ವೆಂಕಟಪ್ಪ ನಿರಾಕರಿಸುತ್ತಿರಲಿಲ್ಲ. 1955ರ ಆಗಸ್ಟ್ ಐದರಂದು, ರಾಜ್ಯದ ಶಿಕ್ಷಣ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಗಣತಂತ್ರರಾಜ್ಯ ದಿನದ ಆಚರಣೆಗೆಂದು ಉಪಸಮಿತಿಯೊಂದನ್ನು ಮಾಡಿ, ಅದರಲ್ಲಿ ವೆಂಕಟಪ್ಪ ಇರಬೇಕೆಂದು ಬೇಡಿದಾಗ ವೆಂಕಟಪ್ಪ ಒಪ್ಪಿಕೊಂಡಿದ್ದರು. ಅದರ ಸಭೆಗೂ ಹೋಗಿದ್ದರು. 1956ರ ಆಗಸ್ಟ್ ತಿಂಗಳಿನಲ್ಲಿ, ಮೈಸೂರಿನಲ್ಲಿ ಲಲಿತ ಕಲೆಗಳ ಕಾಲೇಜೊಂದನ್ನು ಸ್ಥಾಪಿಸುವ ಸಲುವಾಗಿ ಸೆಂಟ್ರಲ್ ಕಾಲೆಜಿನಲ್ಲೊಂದು ತಜ್ಞರ ಸಭೆ ನೆರೆದಾಗ ವೆಂಕಟಪ್ಪನೂ ಅದರಲ್ಲಿ ಪಾಲ್ಗೊಂಡಿದ್ದರು. ಆಗಿನ ರಾಜ್ಯ ಸರಕಾರ ಅವರನ್ನು ಅನಾದರದಿಂದಲೇ ಕಂಡಿತೆಂಬುದನ್ನು ಯಾರೂ ಸುಳ್ಳೆನ್ನಲಾರರು. ಅವರು ತೀರಿಕೊಂಡಮೇಲೇ ಸರಕಾರದ ಆದರ ಅವರ ಕಡೆಗೆ ಹರಿದದ್ದು !

ಇದಕ್ಕೆ ವೆಂಕಟಪ್ಪನ ಪ್ರವೃತ್ತಿಯೂ ಕೊಂಚಮಟ್ಟಿಗೆ ಕಾರಣವಿದ್ದೀತು. ಸರಕಾರದಲ್ಲಿ, ರಾಜಕಾರಣದಲ್ಲಿ ಪ್ರಭಾವಶಾಲಿಗಳನ್ನು ಅನುಸರಿಸಿ, ಅವರಿಗೆ ಅನುಕೂಲವಾಗಿದ್ದುಕೊಂಡು ಹೊಗಳಿ, ತಲೆಬಾಗಿಸಿ ತನ್ನ ಕೆಲಸವನ್ನು ಸಾಧಿಸಿಕೊಳ್ಳುವ ಪ್ರವೃತ್ತಿ ಅವರದ್ದಲ್ಲ. ಅಷ್ಟಿಗೆ ಯಾರ ಅಂಜಿಕೆಯೂ ಇರದು, ಯಾರ ಹಂಗೂ ಇರದು, ಯಾರಿಗೂ ಟೊಂಕ ಬಗ್ಗಿಸಿ ಸಲಾಮು ಹಾಕುವವರಲ್ಲ. ತಮಗೆ ತಪ್ಪೆಂದು ಕಂಡುದನ್ನು

ಹಿಂದೆ-ಮುಂದೆ ನೋಡದೆ ಹೇಳಿಬಿಡುವರು; ಅನ್ಯಾಯವೆಂದು ತೋರಿದುದರೊಂದಿಗೆ ಎಂದಿಗೂ ಸಹಕರಿಸರು. ತಮ್ಮಪಾಡಿಗೆ ತಾವು ಇರುವವರಾದರೂ, ತಮ್ಮನ್ನು ಕೆಣಕಿದವರಿಗೆ ಬೆಂಕಿನವಾಬರೇ. ತಮ್ಮ ಗೌರವಕ್ಕೆ ಊನ ಬಂದೀತೆಂದು ಕಂಡರೆ ಕೆಂಡವಾಗುವರು. ಇವರ ಸಹವಾಸ ಕಷ್ಟವೆಂಬುದನ್ನು ಅಧಿಕಾರಿಗಳೆಲ್ಲ ಬಲ್ಲವರೇ; ಸಾಧ್ಯವಾದಷ್ಟು ದೂರ ವಿರುತ್ತಿದ್ದರು. ಅವರಿಗೆ ಶ್ರೀಮಂತರು, ಅಧಿಕಾರಿಗಳು, ಪ್ರತಿಷ್ಠಿತರು, ಪ್ರಭಾವಶಾಲಿಗಳು ಎಂದರೆ ಅಸಡ್ಡೆಯೇ. ಸಮಯಸಾಧಕರಾದ ಕಲಾವಿದರಂತೂ ಒಳಗೊಳಗೆ ಇವರ ವಿರುದ್ಧ ಕೆಲಸಮಾಡುವರು.

ಆ ಕಾಲದಲ್ಲಿ ಅವರ ಆರೋಗ್ಯವೂ ತಕ್ಕಮಟ್ಟಿಗೆ ಸುಧಾರಿಸಿದ್ದಿತು. ಅವರ ಕಟ್ಟಡದಲ್ಲಿ ತೊಂದರೆಗಳು ಆಗಾಗ ಒದಗುತ್ತಲೇ ಇದ್ದುವಷ್ಟೆ. ನೆಲದಲ್ಲಿ, ಗೋಡೆಗಳಲ್ಲಿ, ಸೂರಿನಲ್ಲಿ ಬಿರುಕುಗಳು ತೋರಿಕೊಳ್ಳುತ್ತಿದ್ದುವು. ಕೆಲಸಗಾರರಿಂದ, ಕಂಟ್ರಾಕ್ಟರಿಂದ ದುರಸ್ತಿ ಮಾಡಿಸುತ್ತಿದ್ದುದು ಉಪಯೋಗವಾಗಲಿಲ್ಲ. 1951ರಲ್ಲಿ ಮನೆಯ ಸೂರಿನಲ್ಲಿ ಬಿರುಕು ತೋರಿಕೊಂಡುದನ್ನು ತಾವೇ ಸರಿಪಡಿಸಿದರು; ಹಲವಾರು ವರ್ಷಗಳು ಮಳೆಗಾಲದಲ್ಲಿ ಸೋರುತ್ತಿದ್ದುದು ಆ ವರ್ಷ ನಿಂತಿತು. ಮತ್ತೆ 1956ರಲ್ಲಿ ನೆಲದ ಬಿರುಕು, ಸೂರಿನ ಬಿರುಕು ಎರಡೂ ತೊಂದರೆ ಕೊಡಲಾರಂಭಿಸಿದಾಗ, ತಾವೊಬ್ಬರೇ ನಿಂತು ಹಗಲು-ರಾತ್ರಿ ದುಡಿದು ಕಡೆಗೂ ಅವನ್ನು ಸರಿಪಡಿಸಿದರು. ಅವರ ಆರೋಗ್ಯ ಸುಧಾರಿಸಿದ್ದಕ್ಕೆ ನಿದರ್ಶನ ಇದು.

1958ರ ಫೆಬ್ರುವರಿ ತಿಂಗಳಿನಲ್ಲಿ ಅಖಿಲ ಭಾರತ ಆಕಾಶವಾಣಿ ಕೇಂದ್ರದವರು ವೀಣೆ ಶೇಷಣ್ಣನವರ ಹುಟ್ಟು ಹಬ್ಬದ ದಿನ ಪ್ರಸಾರಕ್ಕೆಂದು ಇವರ ಭಾಷಣವನ್ನು ಇವರ ಸ್ಟುಡಿಯೋಗೇ ಬಂದು ಧ್ವನಿಮುದ್ರಣಮಾಡಿಕೊಂಡು ಹೋದರು. ವೀಣೆ ಶೇಷಣ್ಣನವರು ವೆಂಕಟಪ್ಪನ ಗುರು ತಾನೆ? ಮೇಲಾಗಿ ವೆಂಕಟಪ್ಪನಿಗೆ ಶೇಷಣ್ಣನವರೆಂದರೆ ತುಂಬ ಭಕ್ತಿ. ಸಂದರ್ಭದ ಅಗತ್ಯವನ್ನು ಗಮನಿಸಿ, ಭಾಷಣವನ್ನು ಸಿದ್ಧಮಾಡಿದರು; ಧ್ವನಿಮುದ್ರಣಕ್ಕೆ ನೆರವು ಮಾಡಿಕೊಟ್ಟರು; ಆಕಾಶವಾಣಿಯ ಅಧಿಕಾರಿಗಳನ್ನು ಆದರದಿಂದ ತಮ್ಮ ಸ್ಟುಡಿಯೋಗೆ ಬರಮಾಡಿಕೊಂಡರು. ಈ ಅಧಿಕಾರಿಗಳಲ್ಲಿ ವೀಣೆ ದೊರೆಸ್ವಾಮಿ ಅಯ್ಯಂಗಾರರೂ ಒಬ್ಬರು; ಶೇಷಣ್ಣನವರ ಶಿಷ್ಯರೂ, ವೆಂಕಟಪ್ಪನಿಗೆ ಸ್ನೇಹಿತರೂ ಆಗಿದ್ದ ವೆಂಕಟಗಿರಿಯಪ್ಪನ ಶಿಷ್ಯರು. ಇದೇ ಸಂದರ್ಭದಲ್ಲಿ ಶೇಷಣ್ಣನವರ ದರ್ಬಾರಿ ಕಾನಡರಾಗದ ತಿಲ್ಲಾನವೊಂದರ ಪಾಠ ತಮ್ಮ ಬಳಿಯಿದ್ದುದನ್ನು ದೊರೆಸ್ವಾಮಿ ಅಯ್ಯಂಗಾರರಿಗೆ ಕೊಟ್ಟರು. ನಮ್ಮ ನಡುವೆ ಇಂದು ಈ ತಿಲ್ಲಾನ ಬಳಕೆಯಲ್ಲಿದ್ದರೆ ಅದರ ಶ್ರೇಯಸ್ಸು ವೆಂಕಟಪ್ಪನಿಗೂ ದೊರೆಸ್ವಾಮಿ ಅಯ್ಯಂಗಾರರಿಗೂ ಸಲ್ಲಬೇಕು.

ಈ ಕಾರ್ಯಕ್ರಮವೆ ವೆಂಕಟಪ್ಪನ ಬದುಕಿನಲ್ಲಿ ಕಟ್ಟಕಡೆಯ ಸಾರ್ವಜನಿಕ ಸೇವೆ. ಮರುತಿಂಗಳೆ ಅವರ ಆರೋಗ್ಯ ಹದಗೆಟ್ಟಿತು. ಮಧುಮೇಹ ಉಲ್ಬಣಗೊಂಡಿತು; ನಿತ್ರಾಣ ಹೆಚ್ಚಿತು. ಸಂಧಿವಾತವೂ ಹರಡಿಕೊಂಡಿತು. ಓಡಿಯಾಡುವುದು ಕಷ್ಟವೆನಿಸಿತು; ಬಿದಿರು ಕೋಲನ್ನು ಆಸರೆಯಾಗಿ ಹಿಡಿದೆ ಮೆಲ್ಲಗೆ ನಡೆಯಬೇಕಾಯಿತು. ರಾತ್ರಿ ನಿದ್ರೆ ಬಾರದು, ಅಡಿಗಡಿಗೆ ತಲೆತಿರುಗು, ಕಣ್ಣು ಕತ್ತಲೆ. ವೆಂಕಟಪ್ಪನಿಗೆ ತಮ್ಮ ದೇಹಸ್ಥಿತಿಯನ್ನು ಕುರಿತು

ಆತಂಕ ತಲೆದೋರಿತು. ಆ ತಿಂಗಳಲ್ಲಿ ಅವರು ಹಿಂದೆಂದೂ ಮಾಡದ ಕೆಲಸವೊಂದನ್ನು ಮಾಡಲೇಬೇಕಾಯಿತು — ಬೇರೆಯವರ ನೆರವನ್ನು ಬೇಡುವುದು. ಮಾರ್ಚ್ ತಿಂಗಳ ಹದಿಮೂರನೆಯ ದಿನ ವೆಂಕಟಪ್ಪ ಮನಸ್ಸಿಲ್ಲದ ಮನಸ್ಸಿನಿಂದ, ತುಂಬ ಸಂಕಟದಿಂದ, ತಮ್ಮ ತಂಗಿಯ ಮಗ ರಾಮರಾಜುವಿನ ಫೊಟೋಗ್ರಫಿ ಸ್ಟುಡಿಯೋಗೆ ಬಂದು ಅವರನ್ನು ತಮ್ಮ ಮನೆಗೆ ಬಂದು ಅಲ್ಲೆ ಮಲಗಲು ಸಾಧ್ಯವೇ ಎಂದು ಕೇಳಿದರು. ರಾಮರಾಜು ಒಪ್ಪಿ ಬರುವೆನೆಂದರು; ತಮ್ಮ ಆಳನ್ನು ವೆಂಕಟಪ್ಪನ ಜೊತೆಯಲ್ಲಿ ಅವರ ಮನೆಯವರೆಗೂ ಕಳುಹಿಸಿದರು. ಅಂದಿನಿಂದ ರಾತ್ರಿಯ ಹೊತ್ತು ವೆಂಕಟಪ್ಪನ ಕಾವಲಿಗೆ ಸೋದರಳಿಯ ರಾಮರಾಜು.

ವೆಂಕಟಪ್ಪನ ಆರೋಗ್ಯ ಮತ್ತೆ ಸುಧಾರಿಸಲಿಲ್ಲ ; ಇನ್ನಷ್ಟು ಕೆಟ್ಟಿತು. ಹಾಸಿಗೆಯನ್ನೇ ಹಿಡಿದರು. ತಲೆತಿರುಗು, ಕಣ್ಣುಕತ್ತಲೆ ಅಡಿಗಡಿಗೆ ಅವರನ್ನು ಕಾಡತೊಡಗಿತು. ಕೈಕಾಲುಗಳು ಸೆಟೆದುಕೊಳ್ಳತೊಡಗಿದುವು. ಪಕ್ಕದಲ್ಲೇ ಇದ್ದ ಬಚ್ಚಲುಮನೆಗೆ ಹೋಗಬೇಕಾದರೂ ತುಂಬ ಕಷ್ಟವೆನಿಸಿತು; ಬಿದಿರಿನ ಕೋಲನ್ನೂರಿಕೊಂಡೇ ಮೆಲ್ಲಗೆ ಹೋಗಿ ಬಂದ ಮೇಲೆ ಅರ್ಧಗಂಟೆ ಸುಧಾರಿಸಿಕೊಳ್ಳಬೇಕು. ಬರುಬರುತ್ತ ಹಾಸಿಗೆಯನ್ನು ಬಿಟ್ಟೇಳುವುದೇ ಅಸಾಧ್ಯವೆನಿಸಿತು. ಈ ಪರಿಸ್ಥಿತಿಯಲ್ಲಿ ಸೋದರಳಿಯ ರಾಮರಾಜು ಅವರನ್ನು ಅಕ್ಕರೆಯಿಂದ ನೋಡಿಕೊಂಡರು.

ಅದೇ ತಿಂಗಳ ಕೊನೆಯ ಭಾಗದಲ್ಲಿ ಅವರ ಅನಾರೋಗ್ಯವನ್ನು ಕೇಳಿ ಅವರ ಸೋದರಿ ಯೆಲ್ಲಮ್ಮನೂ ಆಕೆಯ ಹಿರಿಯ ಮಗನೂ ಅವರನ್ನು ನೋಡಲು ಬಂದರು. ಆಕೆಯೂ ಅಸ್ವಸ್ಥಳೇ, ಹಾಸಿಗೆ ಹಿಡಿದಿದ್ದವಳೇ. ತಮ್ಮನ್ನು ನೋಡಿಕೊಂಡು ಹೋಗಲು ಶ್ರಮವಹಿಸಿ ರಿಕ್ಷಾದಲ್ಲಿ ಬಂದುದನ್ನು ಕಂಡು ವೆಂಕಟಪ್ಪ ತುಂಬ ನೊಂದುಕೊಂಡರು. ಆಕೆ ಕೆಲವೆ ನಿಮಿಷಗಳು ಅಲ್ಲಿ ಇರಲಾದದ್ದು. ವೆಂಕಟಪ್ಪನ ನಿತ್ರಾಣ ಹೆಚ್ಚುತ್ತ ಹೋಯಿತು. ಯಾರಾದರೂ ಬಂದು ಮಾತನಾಡುತ್ತಿದ್ದರೂ ಅವರಿಗೆ ಆಯಾಸವಾಗುವುದು; ಯಾವುದರ ಮೇಲಾಗಲಿ ಅವರಿಗೆ ಮನಸ್ಸಿರಲಿಲ್ಲ. ಮಲ್ಲೇಶ್ವರದಲ್ಲೇ ವಾಸಿಸುತ್ತಿದ್ದ, ವೆಂಕಟಪ್ಪನಿಗೆ ಪರಿಚಿತರಾಗಿದ್ದ, ಕಲಾಭಿಮಾನಿಯಾಗಿದ್ದ, ಸಜ್ಜನರು ಕ್ಯಾಪ್ಟನ್ ಡಾ. ರಂಗಾಚಾರ್ಯರು ಆ ತಿಂಗಳ ಇಪ್ಪತ್ತನೆಯ ತಾರೀಖಿನಿಂದ ಅವರ ಚಿಕಿತ್ಸೆಯನ್ನು ಮಾಡತೊಡಗಿದರು. ಅವರ ಪರೀಕ್ಷೆಯ ಪ್ರಕಾರ ಅವರ ಹೃದಯದ ಸ್ಥಿತಿ ಚೆನ್ನಾಗಿಯೇ ಇದ್ದಿತು. ಆದರೆ ಮೂತ್ರದ ತೊಂದರೆಯಿದ್ದಿತು. ಕಾಲುಗಳಲ್ಲಿ ಊತವಿದ್ದಿತು; ಸಂಧಿಗಳು ಸೆಟೆದುಕೊಂಡಿದ್ದುವು, ತೀರ ನಿಃಶಕ್ತಿ

ವೆಂಕಟಪ್ಪ ಸ್ವಲ್ಪ ದಿನಗಳ ಕಾಲ ಊರನ್ನು ಬಿಟ್ಟು ನಂದೀಬೆಟ್ಟಕ್ಕೆ ಹೋಗಿ ಅಲ್ಲಿದ್ದು ಬಂದರೆ ಒಳ್ಳೆಯದೆಂದು ವೈದ್ಯರು ಸೂಚಿಸಿದರು. ವೆಂಕಟಪ್ಪ "ನೋಡೋಣ" ಎಂದಷ್ಟೆ ಹೇಳಿದರು. ಅವರನ್ನು ನೋಡಿಕೊಳ್ಳುತ್ತಿದ್ದ ಸೋದರಳಿಯ ರಾಮರಾಜು ಮತ್ತು ಅವರನ್ನು ಕಾಣಲು ಆಗಾಗ ಬರುತ್ತಿದ್ದ ಎಸ್.ಬಿ. ಶಂಕರ್ (ಜಿ. ವೆಂಕಟಾಚಲಂನ ಸ್ನೇಹಿತರು) ಇವರಿಬ್ಬರೂ ಕಲೆತು ಏಪ್ರಿಲ್ ನಾಲ್ಕರಂದು ವೆಂಕಟಪ್ಪನನ್ನು ನಂದಿಬೆಟ್ಟಕ್ಕೆ ಕಾರಿನಲ್ಲಿ ಕರೆದೊಯ್ಯಲು ನಿಶ್ಚಯಿಸಿದರು. ಆದರೆ ಹಿಂದಿನ ದಿನ ಮಧ್ಯಾಹ್ನದಿಂದಲೇ ವೆಂಕಟಪ್ಪನಿಗೆ

ಜ್ವರ ತಲೆ ಹಾಕಿತು; ತಲೆತಿರುಗುವುದು ಹೆಚ್ಚಾಯಿತು. ಏಪ್ರಿಲ್ ನಾಲ್ಕರ ಬೆಳಿಗ್ಗೆ ಕಾರನ್ನು ತಂದ ಶಂಕರ್ ವೈದ್ಯರ ಮನೆಗೆ ಹೋಗಿ ಅವರನ್ನು ಕರೆತರಬೇಕಾಯಿತು. ಬಂದು ಪರೀಕ್ಷೆ ಮಾಡಿದ ವೈದ್ಯರು ರೋಗಿಯನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸುವಂತೆ ಸಲಹೆಮಾಡಿದರು. ಆದರೆ ವೆಂಕಟಪ್ಪ ಒಪ್ಪಲಿಲ್ಲ; ಸಾಯುವುದಿದ್ದರೆ ತಮ್ಮ ಸ್ಟುಡಿಯೋನಲ್ಲೇ ಸಾಯುವೆನೆಂದರು.

ಮುಂದೆ ಮೂರು ವರ್ಷಗಳು ಹೆಚ್ಚು ಕಡಮೆ ಇದೇ ಪರಿಸ್ಥಿತಿಯಲ್ಲೇ ವೆಂಕಟಪ್ಪ ಇದ್ದರು. ರಾಮರಾಜು ಸೇವಕನೊಬ್ಬನ ನೆರವಿನಿಂದ ರೋಗಿಯನ್ನು ನೋಡಿಕೊಳ್ಳುತ್ತಿದ್ದರು. ಹೊರಗಣ ವಿಚಾರಗಳಲ್ಲಿ ವೆಂಕಟಪ್ಪನಿಗೆ ಏನೇನೂ ಆಸಕ್ತಿ ಉಳಿದಿರಲಿಲ್ಲ. 1961ರ ಜೂನ್ ಹದಿನೇಳರಂದು ಕೇಂದ್ರೀಯ ಲಲಿತಕಲಾ ಅಕಾಡಮಿಯು ವೆಂಕಟಪ್ಪನನ್ನು 'ಫೆಲೋ' ಆಗಿ ಆರಿಸಿಕೊಂಡು ಅವರಿಗೆ ಪುರಸ್ಕಾರರೂಪವಾಗಿ ತಾಮ್ರಪತ್ರವನ್ನು ನೀಡಿ ಗೌರವಿಸಲು ನಿರ್ಧರಿಸಿತು. ವ್ಯವಸ್ಥಾಪಕರು 1962ರ ಮಾರ್ಚ್ ತಿಂಗಳಲ್ಲಿ ದಿಲ್ಲಿಯಲ್ಲಿ, ಅವರಿಗಾಗಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ, ಬರಬೇಕೆಂದು ವೆಂಕಟಪ್ಪನಿಗೆ ಬರೆದರು. ಆದರೆ ತೀರ ನಿತ್ರಾಣದಿಂದ ಹಾಸಿಗೆ ಹಿಡಿದಿದ್ದ ವೆಂಕಟಪ್ಪ ಪ್ರಯಾಣಮಾಡುವ ಸ್ಥಿತಿಯಲ್ಲಿರಲಿಲ್ಲ. ವ್ಯವಸ್ಥಾಪಕರು ಬೆಂಗಳೂರಲ್ಲೇ ಸಮಾರಂಭವನ್ನು ಏರ್ಪಡಿಸುವೆವೆಂದಾಗಲೂ ವೆಂಕಟಪ್ಪ ಒಪ್ಪಲಿಲ್ಲ. "ಮೈಯೂ ಮನಸ್ಸೂ ತುಂಬ ದಣಿದಿದೆ, ಎಳ್ಳಷ್ಟೂ ತ್ರಾಣವಿಲ್ಲ. ಸಮಾರಂಭವೆಂದರೆ ಕೆಲವು ನಿಮಿಷಗಳಾದರೂ ಕೂತಿರಬೇಕು, ಪ್ರಶಸ್ತಿಯನ್ನು ಸ್ವೀಕರಿಸಬೇಕು. ಅದಕ್ಕೂ ನನಗೆ ಅನುಕೂಲವಿಲ್ಲ" ಎಂದು ಹೇಳಿ ಸಮಾರಂಭವನ್ನು ರದ್ದುಪಡಿಸಿರೆಂದು ಸೂಚಿಸಿದರು. ಆದರೆ ಕೇಂದ್ರೀಯ ಲಲಿತಕಲಾ ಅಕಾಡಮಿಯ ವ್ಯವಸ್ಥಾಪಕರು ದಿಲ್ಲಿಯಿಂದ ಬೆಂಗಳೂರಿಗೆ ಬಂದು ಅದೇ ವರ್ಷದ ಆಗಸ್ಟ್ ಏಳರಂದು ಅವರ ಮನೆಯಲ್ಲೇ ಸಣ್ಣದೊಂದು ಸಮಾರಂಭವನ್ನು ನಡೆಸಿ ಅವರಿಗೆ ತಾಮ್ರಪತ್ರ, ಅಂಗವಸ್ತ್ರಗಳನ್ನು ನೀಡಿ ಗೌರವಿಸಿದರು. ಕೇಂದ್ರ ಲಲಿತ ಕಲಾ ಅಕಾಡಮಿಯ ಅಧ್ಯಕ್ಷರೂ, ಗುಜರಾತಿನ ರಾಜ್ಯಪಾಲರೂ ಆಗಿದ್ದ ಮೇಧಿ ನವಾಬ್ ಜಂಗ್ ಬಹದೂರ್ ಅವರೂ ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಿದ್ದವನಹಳ್ಳಿ ನಿಜಲಿಂಗಪ್ಪನವರೂ ಮತ್ತು ವೆಂಕಟಪ್ಪನ ಅಭಿಮಾನಿಗಳು ಕೆಲವರೂ ಈ ಸಮಾರಂಭದಲ್ಲಿ ಪಾಲ್ಗೊಂಡರು. ಆದರೆ ವೆಂಕಟಪ್ಪನ ದೃಷ್ಟಿ ಈ ಕಡೆಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತಿತ್ತು.

1962ರ ಡಿಸೆಂಬರ್ ಎರಡರಂದು ಕರ್ನಾಟಕ (ಆಗ ಮೈಸೂರು ಪ್ರದೇಶ) ಚಿತ್ರಕಲಾ ಪರಿಷತ್ತಿನ ವ್ಯವಸ್ಥಾಪಕರು ವೆಂಕಟಪ್ಪನ ಮನೆಯಲ್ಲೇ ಮತ್ತೊಂದು ಸಣ್ಣ ಸಮಾರಂಭವನ್ನೇರ್ಪಡಿಸಿ, ಅವರಿಗೆ ಸನ್ಮಾನಮಾಡಿದರು. ಆಗ ವೆಂಕಟಪ್ಪ ಹೇಳಿದ್ದು — "ಈ ಸನ್ಮಾನಕ್ಕೆ ನಾನು ಅರ್ಹನಲ್ಲ, ನಾನೊಬ್ಬ ಕಲಾವಿದ್ಯಾರ್ಥಿ ಅಷ್ಟೆ. ನಾನು ಇನ್ನೂ ಕಲಿಯಬೇಕಾದದ್ದು ಬಹಳ ಇದೆ. ಅದಕ್ಕೆ ಒಂದು ಜೀವಮಾನ ಸಾಕಾಗುವುದಿಲ್ಲ" ಎಂದು. ಈ ಸಭೆಯಲ್ಲಿ ವೆಂಕಟಪ್ಪನ ಕಲಾಕೃತಿಗಳನ್ನು ರಾಜ್ಯಸರಕಾರವು ಕೊಳ್ಳಬೇಕೆಂಬ ಸಲಹೆ ಕೆಲವು ಗಣ್ಯರಿಂದ ವ್ಯಕ್ತವಾಗಿ, ಆ ದಿನದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ನಿಜಲಿಂಗಪ್ಪನವರು ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದರು. ಮರುವರ್ಷ ಜುಲೈ ವೇಳೆಗೆ

ರಾಜ್ಯಸರಕಾರವು ವೆಂಕಟಪ್ಪನವರ ಕಲಾಕೃತಿಗಳಲ್ಲಿ ಕೆಲವನ್ನು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕೊಂಡು ಅವರ ಹೆಸರಿನಲ್ಲಿ ಸಂಗ್ರಹಾಲಯ (ಆರ್ಟ್ ಗ್ಯಾಲರಿ)ಯನ್ನು ತೆರೆಯುವ ಪ್ರಯತ್ನ ನಡೆಸಿತು.

ಮುಂದೆ ಮೂರು ವರ್ಷಗಳು ವೆಂಕಟಪ್ಪನ ಆರೋಗ್ಯ ಕೆಡುತ್ತಲೇ ಬಂದಿತು. 1965ರ ಮೇ ತಿಂಗಳಲ್ಲಿ ಇಪ್ಪತ್ತೈದನೆಯ ದಿನ ಮಂಗಳವಾರ ಮಧ್ಯಾಹ್ನ ಒಂದು ಗಂಟೆಯ ಸಮಯಕ್ಕೆ ತಮ್ಮ ಮನೆಯಲ್ಲೇ ತೀರಿಕೊಂಡರು. ಮರುದಿನ ನಡುಹಗಲಿಗೆ ಮುಂಚೆ ಹರಿಶ್ಚಂದ್ರ ಘಾಟಿನಲ್ಲಿ ಅವರ ಅಂತ್ಯಕ್ರಿಯೆಗಳು ನಡೆದುವು. ಅದೇ ತಿಂಗಳ ಕೊನೆಯಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತು ಅವರನ್ನು ಕುರಿತು ಸಂತಾಪ ಸಭೆಯನ್ನು ಸೇರಿಸಿ, ವೆಂಕಟಪ್ಪನ ನೆನಪು ಉಳಿಯುವಂತೆ ಮಾಡಬೇಕಾದುದು ಸರಕಾರದ, ಪ್ರಜೆಗಳ ಕರ್ತವ್ಯವೆಂದು ಕಾಣಿಸಿತು. ಮುಂದೆ ರಾಜ್ಯ ಸರಕಾರವು ಮ್ಯೂಸಿಯಂನ ನೆರೆಯಲ್ಲಿ ಕಟ್ಟಿಸಿದ ಚಿತ್ರಸಂಗ್ರಹಾಲಯದಲ್ಲಿ ವೆಂಕಟಪ್ಪನ ಕಲಾಕೃತಿಗಳನ್ನೆಲ್ಲ ಇರಿಸಿದುದಲ್ಲದೆ, ಅವರ ಹೆಸರಿನಲ್ಲೆ ಚಿತ್ರಸಂಗ್ರಹಾಲಯವನ್ನೂ 1974ರಲ್ಲಿ ಏರ್ಪಡಿಸಿತು.

. . . . . ವ್ಯಕ್ತಿ . . . . .

೧

ವೆಂಕಟಪ್ಪನವರ ವ್ಯಕ್ತಿತ್ವ ಅವರ ಕಲೆಯಷ್ಟೇ ಸ್ವಾರಸ್ಯವಾದುದು. ಆ ವ್ಯಕ್ತಿತ್ವ ಹಲವಾರು ವಿವರಗಳಲ್ಲಿ ಅಸಾಧಾರಣವಾದುದು; ಓರೆಕೋರೆಗಳು ಹೆಚ್ಚು ಎಂದರೂ ತಡೆದೀತು. ಕಲೆಯ ಗೀಳು ಬಾಳುವೆಯನ್ನೆಲ್ಲ ಒಳಗೊಂಡಿದ್ದ ವ್ಯಕ್ತಿತ್ವ ಅದು. ಕಲೆಯೊಂದೇ ಅವರ ಆಸಕ್ತಿ; ಎಚ್ಚರದ ಒಂದೊಂದು ಗಳಿಗೆಯೂ ಅದರದ್ದೇ ಗುಂಗು. ತಲೆಯ ತುಂಬೆಲ್ಲ ಅದರದ್ದೇ ಆಲೋಚನೆ. ಆ ಅಲೆಗಳು ಮಸೆಯುತ್ತ ಅವರ ನೋಟ, ನುಡಿ, ನಡಿಗೆ, ಉಡುಗೆ ಎಲ್ಲವೂ ಕಲಾತ್ಮಕವಾದುವು. ಹಾಗೆ ಕಲೆಗೆಂದೆ ಬಾಳನ್ನು ಮುಡಿಪಾಗಿಟ್ಟ, ಎಷ್ಟು ಎಡರುತೊಡರುಗಳು ಬಂದರೂ ಎದೆಗುಂದದೆ ಮುಂದೆ ನಡೆದ ಕಲಾವಿದರು ಈ ಕಾಲಕ್ಕೆ ಅಪರೂಪವೆ. "ಕಲೆಯೆ ಅವನಿಗೆ ಮಡದಿ, ಕಲೆಯೆ ಅವನಿಗೆ ಮಕ್ಕಳು" ಎಂದು ಗುರು ಅವನೀಂದ್ರನಾಥರು ವೆಂಕಟಪ್ಪನ ವಿಚಾರವಾಗಿ ಹೇಳುತ್ತಿದ್ದರಂತೆ. ಮದುವೆಯಾದರೆ, ಸಂಸಾರದ ನಿರ್ವಹಣೆಯಲ್ಲಿ ಕಲೆಯ ಕಡೆ ಗಮನ ಕಡಮೆಯಾದೀತೆಂಬ ಭಯದಿಂದ ಅವರು ಮದುವೆಯಾಗಲೆ ಇಲ್ಲ; ನೈಷ್ಠಿಕ ಬ್ರಹ್ಮಚಾರಿಯಂತೆ ಬಾಳನ್ನು ಕಳೆದರು. ಮತ್ತೆ ಯಾವ ಆಕರ್ಷಣೆಯಾಗಲಿ, ಆಸಕ್ತಿಯಾಗಲಿ ಅವರನ್ನು ಸೆಳೆಯಲಿಲ್ಲ. ನೆಂಟರಿಷ್ಟ ರೊಡನೆಯೂ ಅವರು ಕೂಡಿ ಬಾಳಲಿಲ್ಲ. ತಾವಾಯಿತು, ತಮ್ಮ ಕಲೆಯಾಯಿತು; ಮೂರನೆಯದರ ಹವ್ಯಾಸವಿಲ್ಲ.

ಇಷ್ಟಾಗಿ, ಅವರನ್ನು ಯಾರಾದರೂ 'ಕಲಾವಿದ'ನೆಂದು ಕರೆದರೆ, "ನಾನು ಕಲಾವಿದನಲ್ಲ, ಕಲಾವಿದ್ಯಾರ್ಥಿಯಷ್ಟೇ!" ಎಂದು ತಿದ್ದುವರು. ಕಲೆಯ ಉದ್ದ, ಅಗಲ, ಆಳಗಳನ್ನು ಯಾರಾಗಲಿ ಅಳೆಯಬಲ್ಲರೆ? ಒಂದು ಬಾಳಿನಲ್ಲಿ ಕಲೆಯ ಗುಟ್ಟನ್ನೆಲ್ಲ ಅರಿಯುವುದಾದೀತೆ? ಎಷ್ಟು ಜನ್ಮಗಳನ್ನೆತ್ತಿ ಕಲೆಯ ಸ್ವಾರಸ್ಯವನ್ನು ಸವಿಯಬಹುದೊ! "ಕಲೆಯು ಒಂದು ಸಾಗರ; ನಾನೋ ಸಣ್ಣ ಒಂದು ಬಿಂದಿಗೆಯನ್ನೆತ್ತಿಕೊಂಡು ನೀರನ್ನು ತರಲು ಹೊರಟಿದ್ದೇನೆ. ಸಾಗರದ ನೀರನ್ನೆಲ್ಲ ಬಿಂದಿಗೆಯಲ್ಲಿ ತುಂಬಿಸುವುದಾದೀತೆ?" ಎನ್ನುವರು. ಇದು ಬರಿಯ ತೋರಿಕೆಯ ಔಪಚಾರಿಕ ವಿನಯವಲ್ಲ; ದಿಟವಾಗಿ ಅವರ ಅನಿಸಿಕೆಯೆ ಹಾಗೆ. ಯಾವೊಬ್ಬನೂ ತನ್ನನ್ನು ಕಲಾವಿದನೆಂದು ಅರ್ಥವತ್ತಾಗಿ ಕರೆದುಕೊಳ್ಳಲಾರ; ಇಡೀ ಬಾಳನ್ನು ಕಲೆಯ ಸಾಕ್ಷಾತ್ಕಾರದಲ್ಲಿ ಕಳೆದರೂ ಕಲೆಯು ಕೈವಶವಾಗದು, ಎಂದು ಅವರ ನಂಬುಗೆ. ಕಲೆಯಲ್ಲಿ ಆಸಕ್ತಿಯಿರುವವರೆಲ್ಲ ಕಲಾವಿದ್ಯಾರ್ಥಿಗಳೇ; ಕಲೆಯ ಹರವನ್ನು ಅರಿತವರು ವಿನಯವಂತರೆ.

ಆದರೆ ವೆಂಕಟಪ್ಪನವರು ಎಲ್ಲ ವಿಚಾರಗಳಲ್ಲೂ ಹೀಗೆಯೇ ವಿನಯಶಾಲಿ

ಗಳಾಗಿದ್ದರೆಂದು ಭಾವಿಸಬಾರದು. ಅವರಲ್ಲಿ ಆತ್ಮವಿಶ್ವಾಸವೂ ವಿನಯದಷ್ಟೆ ಬಲವಾಗಿದ್ದಿತು. ಕಲೆಗಾಗಿಯೇ ಬಾಳನ್ನೆಲ್ಲ ಮುಡಿಪಿಟ್ಟುದರಿಂದ, ಕಲೆಯ ಕ್ಷೇತ್ರದಲ್ಲಿ ಮತ್ತಾವ ಆಸೆ-ಆತಂಕಗಳಿಲ್ಲದೆ ದುಡಿದುದರಿಂದ, ಯಾರ ಹಂಗಿಗೂ ಸಿಕ್ಕಿಕೊಳ್ಳದೆ, ಯಾವ ಹೀನಾಯದ ಕೆಲಸಕ್ಕೂ ಕೈಹಾಕದೆ, ಬದುಕಿನ ಹೆದ್ದಾರಿಯನ್ನೆ ಹಿಡಿದು ನಡೆಯುತ್ತಿದ್ದುದರಿಂದ ಅವರಿಗೆ ತಮ್ಮ ಮೇಲೆ ವಿಶೇಷವಾದ ಅಭಿಮಾನ ಬಂದುದು ಸಹಜವೇ. ತಮ್ಮ ನಡತೆ ನೇರವಾಗಿದೆ, ಯಾರಿಗಾಗಲಿ ತಲೆಬಾಗಬೇಕಾಗಿಲ್ಲ, ಯಾವುದಕ್ಕಾಗಲಿ ಮರುಗಬೇಕಾದ ಕಾರಣವಿಲ್ಲ, ಯಾವುದನ್ನೂ ಬಚ್ಚಿಡಬೇಕಾದುದಿಲ್ಲ, ಯಾರೊಬ್ಬರೂ ತಮ್ಮ ವಿಚಾರದಲ್ಲಿ ಏನೊಂದು ಅಪವಾದವನ್ನು ಹೊರಿಸುವ ಹಾಗಿಲ್ಲ ಎಂಬ ಅರಿವು ಅವರಿಗಿದ್ದಿತು; ಹಾಗೆಂದೇ ಅವರ ಆತ್ಮವಿಶ್ವಾಸ ಕಡೆಯವರೆಗೂ ಅಚಲವಾಗಿದ್ದಿತು. ಅವರು ಹಿಡಿದ ದಾರಿ ಸುಸಂಸ್ಕೃತ, ಸಂಪ್ರದಾಯಶೀಲರಿಗೆ ಪರಂಪರೆಯಿಂದ ಹೇಳಿದ ದಾರಿಯೆ; ನಾಲ್ಕೂ ಜನ ಮೆಚ್ಚಿಕೊಂಡದ್ದು. ಅದರಲ್ಲಿ ಒಳಗೆ, ಹೊರಗೆ ಎಂಬ ಒಡಕಿಲ್ಲ; ತೋರಿಕೆ, ವಾಸ್ತವಿಕತೆ ಎಂಬ ಭೇದವಿಲ್ಲ. ತಮ್ಮ ಬಾಳಿನಲ್ಲಿ ಯಾವುದನ್ನು ತಾವು ಸಲ್ಲದೆಂದು ಬಿಟ್ಟಿದ್ದರೋ ಅದನ್ನು ಬೇರೆಯವರಲ್ಲಿ ಕಂಡರೂ ಅವರು ಸಹಿಸುತ್ತಿರಲಿಲ್ಲ. ಹೀಗಾಗಿ ಅವರ ಪ್ರಾಮಾಣಿಕತೆ ಹಲವರಿಗೆ ಪ್ರಿಯವೆನಿಸಲಿಲ್ಲ. ಕಲೆಯೊಂದನ್ನು ಬಿಟ್ಟು ಉಳಿದ ಯಾವ ವಿಚಾರದಲ್ಲೂ ಇತರರು ಅವರ ವಿನಯವನ್ನು ಗುರುತಿಸುವಂತಿರಲಿಲ್ಲ.

ಅಷ್ಟು ಮಾತ್ರವಲ್ಲ, ತಮಗೆ ತಪ್ಪೆಂದು ತೋರಿದುದನ್ನು ಸ್ಪಷ್ಟವಾದ ಮಾತುಗಳಲ್ಲಿ ತೋರಿಸುವರು, ಹಿಂದೆ ಮುಂದೆ ನೋಡುತ್ತಿರಲಿಲ್ಲ. ತಾವು ಬೇರೆಯವರ ಗೊಡವೆಗೆ ಹೋಗುತ್ತಿರಲಿಲ್ಲ; ಬೇರೆಯವರು ತಮ್ಮ ಗೊಡವೆಗೆ ಬಂದರೆ ಬಿಡುತ್ತಿರಲಿಲ್ಲ. ತಾವು ಬೇರೆಯವರೊಂದಿಗೆ ವ್ಯವಹರಿಸಬೇಕಾಗಿಬಂದಾಗ ಯಾವ ಆಸಕ್ತಿ, ಅಭಿಮಾನ, ನಂಬಿಕೆ, ತೆರೆದ ಮನಸ್ಸುಗಳನ್ನು ತೋರಿಸುವರೋ ಅವರೂ ಅದೇ ಆಸಕ್ತಿ, ಅಭಿಮಾನ, ನಂಬಿಕೆ, ತೆರೆದ ಮನಸ್ಸುಗಳನ್ನು ತೋರಿಸಬೇಕೆಂದು ಅವರ ನಿರೀಕ್ಷೆ. ಎದುರಿಗೆ ಹೊಗಳಿ, ಬೆನ್ನ ಹಿಂದೆ ತೆಗಳುವುದನ್ನು ಅವರು ಎಂದೂ ಮಾಡಲಿಲ್ಲ; ಬೇರೆ ಯಾರಾಗಲಿ ಹಾಗೆ ಮಾಡಿದರೆ ಒಡನೆಯೇ ಖಂಡಿಸುವರು. ನಾಟಕ, ಬೂಟಾಟಿಕೆ, ಸೋಗು, ಹಾರಿಕೆಯ ಮಾತು ಇವೆಲ್ಲ ಅವರಿಗೆ ಆಗದು. ಆಡಿದ ಮಾತನ್ನು ನಡೆಸಿಕೊಳ್ಳಲಾರದವರನ್ನು ಹತ್ತಿರ ಸೇರಿಸರು. ಗೊತ್ತಿರದಿದ್ದರೂ ಗೊತ್ತಿದ್ದವರಂತೆ ಮಾತನಾಡುವ ಸಾಹಸ ಮಾಡಿದವರಿಗೆ ಮುಖಭಂಗ ಕಟ್ಟಿಟ್ಟದ್ದೆ.

ತಮ್ಮನ್ನು ಜನ ಮೆಚ್ಚಿಕೊಳ್ಳಬೇಕು, ತಮ್ಮ ಕಲೆಯನ್ನು ಎಲ್ಲರೂ ಪುರಸ್ಕರಿಸಬೇಕು ಎನ್ನುವ ಬಯಕೆ ಅವರಿಗೆ ಎಂದೂ ಇರಲಿಲ್ಲ. ಯಾರಾದರೂ ತಮ್ಮ ವಿಚಾರವಾಗಿ ಹೊಗಳಿಕೆಯ ಮಾತನಾಡಿದರೆ ಅವರಿಗೆ ಸಂತೋಷವಾಗುವ ಬದಲು ಅವರು ಸಿಟ್ಟಿಗೇಳುವರೆ! "ನನ್ನ ವಿಚಾರ ನಿಮಗೇನು ತಿಳಿದಿದೆ?" ಎಂದೊ, "ನನ್ನ ಕಲೆಯನ್ನು ನೀವೇನು ಅರ್ಥ ಮಾಡಿಕೊಂಡಿದ್ದೀರಿ?" ಎಂದೊ ಕೇಳಿಯೆ ಬಿಡುವರು. ಮನಸ್ಸಿಲ್ಲದಿದ್ದರೂ ಬಾಯಉಪಚಾರಕ್ಕೆ ಒಳ್ಳೆಯ ಮಾತುಗಳನ್ನಾಡುವುದು ಅವರ ಸ್ವಭಾವಕ್ಕೆ ಒಗ್ಗಲಿಲ್ಲ. ಅವರು ಯಾರನ್ನಾಗಲಿ ಬರಿದೆ, ಎಂದರೆ ಕಾರಣವಿಲ್ಲದೆ ಹೊಗಳುತ್ತಿರಲಿಲ್ಲ; ಯಾರಾಗಲಿ

ತಮ್ಮನ್ನು ಹಾಗೆ ಹೊಗಳಿದರೂ ಸಹಿಸುತ್ತಿರಲಿಲ್ಲ . ಹೀಗಾಗಿ, ಅವರಿಗೆ ಒದಗಿದ ಸ್ನೇಹಿತರು ಕೆಲವರೇ. ಪರಿಚಿತರೂ ಕೂಡ ಇವರನ್ನು ಕಂಡರೆ ಬೇಗ ಸಿಟ್ಟಿಗೇಳುವ 'ಬೆಂಕಿ ನವಾಬ' ನೆಂದೋ ಮುಖ ನೋಡದೆ ಹಂಗಿಸುವ ಒರಟು ಮನುಷ್ಯನೆಂದೋ ಬೆದರಿ ಸಾಧ್ಯವಾದಷ್ಟು ದೂರವಿರುವರು. ಇನ್ನು ಇತರ ಕಲಾವಿದರು ಇವರ ಹತ್ತಿರ ಸುಳಿಯಲು ಅಂಜುತ್ತಿದ್ದುದು ಸಹಜವೇ. ಕಲೆಯಲ್ಲಿ ಆಳವಾದ ಅಭ್ಯಾಸವಿಲ್ಲದೆ, ದಿಟವಾದ ಆಸಕ್ತಿಯಿಲ್ಲದೆ, ಲೌಕಿಕ ಪ್ರಯೋಜನಕ್ಕೆಂದೇ ಕಲಾಕೃತಿಗಳನ್ನು ಮಾಡಿ ಹೊಟ್ಟೆಹೊರೆದುಕೊಂಡು, ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆದುಕೊಳ್ಳುವ ಹಂಬಲದಿಂದ ತಮ್ಮ ಸ್ವಾಭಿಮಾನವನ್ನು ಒತ್ತೆಯಿರಿಸುವ ಸಣ್ಣತನವನ್ನು ಕಲಾವಿದರಲ್ಲಿ ಕಂಡಾಗ ಅವರು ಕೆರಳುತ್ತಿದ್ದರು. ಮತ್ತೆ, ಹರಿತವಾದ ನಾಲಗೆ, ಸ್ಪಷ್ಟವಾದ ಮಾತುಗಳು, ಅಳುಕಿಲ್ಲದ ಧೈರ್ಯ! ಹೀಗಾಗಿ ಅವರಿಗೆ ಮಿತ್ರರಿಗಿಂತ ಶತ್ರುಗಳೆ ಬಹುಮಂದಿ ಆದರು. ಸೌಜನ್ಯ ಅವರಲ್ಲಿದ್ದುದು ದಿಟ; ಆದರೆ ಅದನ್ನು ಅನುಭವಿಸಿದವರು ವಿರಳ.

ಅವರು ಮಾತನಾಡುತ್ತಿದ್ದುದು ಎಷ್ಟು ಸ್ಪಷ್ಟವಾಗಿಯೊ ಅವರು ಇರುತ್ತಿದ್ದುದೂ ಅಷ್ಟೆ ಕಟ್ಟುನಿಟ್ಟಾಗಿ. ತಮ್ಮ ವಿಚಾರವಾಗಿ, ತಮ್ಮ ಕಲೆಯ ವಿಚಾರವಾಗಿ ಅವರು ಬಾಳಿನುದ್ದಕ್ಕೂ ತೋರಿಸಿದ ಆದರ, ಆಸಕ್ತಿ, ಸಂಯಮ, ನಿಷ್ಠೆ ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಬೇರೆಯವರನ್ನು ಕಂಡರೆ ಅವರಿಗೆ ಗೌರವ ಭಾವನೆಯಿದ್ದರೂ ಕಡಮೆಯೆ. ಆದರೆ ಯಾರ ವಿಚಾರದಲ್ಲೂ ನಿಕೃಷ್ಟ ಭಾವನೆಯಿರಲಿಲ್ಲ. ಹಾಲು ಮಾರುವ ಹೆಂಗಸಾಗಲಿ, ಗಾರೆ ಕೆಲಸದ ಕೂಲಿಯಾಳಾಗಲಿ, ಬಡಗಿಯಾಗಲಿ ತಮ್ಮ ಕಲಾಕೃತಿಗಳನ್ನು ನೋಡಬಯಸಿದರೆ ಸಾವಧಾನವಾಗಿ ಎಲ್ಲವನ್ನೂ ತೋರಿಸಿ ವಿವರಿಸಿ ಕಳುಹಿಸುವರು. ಅಧಿಕಾರಿಗಳು, ಶ್ರೀಮಂತರು, ಪ್ರಭಾವಶಾಲಿಗಳು ಎಂದರೆ ವಿಶೇಷವಾದ ಆದರವೇನಿಲ್ಲ. ಬಡವರು, ಬಲ್ಲಿದರು ಎಲ್ಲರಿಗೂ ಒಂದೆ ತೆರನಾದ ಉಪಚಾರ. ಆದರೆ ಅಧಿಕಾರದ ಹಿರಿಮೆಯನ್ನು ಮೇಲೇರಿಸಿಕೊಂಡವರನ್ನು ಕಂಡರೆ ಅಸಡ್ಡೆಯೆ; ಶ್ರೀಮಂತಿಕೆಯ ತೋರಿಕೆಗೆ ಒಲಿದವರನ್ನು ಕಂಡರೆ ಬೇಸರವೆ. ಇಂಥವರನ್ನು ಹತ್ತಿರ ಸೇರಿಸುತ್ತಿರಲಿಲ್ಲ.

ಅರಮನೆಯ ವಾತಾವರಣದಲ್ಲಿ ಎಳೆತನವನ್ನು ಕಳೆದರಾಗಿ ರಾಜಗಾಂಭೀರ್ಯ ಅವರಲ್ಲಿ ಮನೆಮಾಡಿತ್ತು; ಏನನ್ನು ಮಾಡಿದರೂ ಅಚ್ಚುಕಟ್ಟು, ಯಾವುದಕ್ಕೂ ನಿರ್ದಿಷ್ಟವಾದ ಸಮಯ, ಯಾವುದೂ ನಿರೀಕ್ಷೆಯಂತೆ ನಡೆಯಬೇಕೆನ್ನುವ ಕಾತರ, ವ್ಯವಹಾರದಲ್ಲಿ ಸ್ಪಷ್ಟವಾದ ನಿಲುವು, ಮಾತುಕತೆಯಲ್ಲಿ ಜಾಗರೂಕತೆ, ಮಿತಿ. ದಿಟವಾಗಿ ಸರಳಸ್ವಭಾವವೆ ಅವರದ್ದು ; ಆದರೆ ಸಲುಗೆಗೆ ಅವಕಾಶವಿಲ್ಲ. ಎಷ್ಟು ಬೇಕಾದವರಾದರೂ ಒಂದು ಎಲ್ಲೆಕಟ್ಟು; ಅದನ್ನು ತಾವೂ ಮೀರುವುದಿಲ್ಲ; ಬೇರೆಯವರನ್ನೂ ಮೀರಗೊಡುವುದಿಲ್ಲ. ವ್ಯವಹಾರದಲ್ಲೂ ಅಷ್ಟೆ, ನಿತ್ಯ ಜೀವನದಲ್ಲೂ ಅಷ್ಟೆ, ಎಷ್ಟು ಅಗತ್ಯವೋ ಅಷ್ಟು; ಯಾವುದರಲ್ಲೂ ಅತಿ ಎಂಬುದಿಲ್ಲ. ಉಡುಗೆ, ತೊಡುಗೆ, ಊಟ, ಉಪಚಾರ, ಸಂಚಾರ, ವಿಚಾರ, ಅಭ್ಯಾಸ, ಆಚಾರ, ವ್ಯಾಯಾಮ, ವಿಶ್ರಾಂತಿ ಎಲ್ಲದರಲ್ಲೂ ಔಚಿತ್ಯಪ್ರಜ್ಞೆ. ಬಂದವರೊಂದಿಗೆ ಮಾತುಕತೆಯಾಗಲಿ, ಕಲೆಯ ಅಭ್ಯಾಸವಾಗಲಿ, ಹೊರಗಡೆ ವಿಹಾರವಾಗಲಿ ಎಲ್ಲವೂ ಅಗತ್ಯವಿದ್ದಷ್ಟೆ. ಬೇರೆಡೆ ಹೋದಾಗ ತಮ್ಮ ಕೆಲಸ

ಮುಗಿಯಿತೆಂದರೆ ಒಂದು ಗಳಿಗೆಯೂ ನಿಲ್ಲದೆ ಹೊರಟುಬಿಡುವರು. ಹಾಗೆಯೇ ತಮ್ಮ ಬಳಿ ಬಂದವರು ಬಂದ ಕೆಲಸ ಮುಗಿದೊಡನೆ ಹೊರಡಬೇಕೆಂದು ನಿರೀಕ್ಷಿಸುವರು; ಹತ್ತು -ಹದಿನೈದು ನಿಮಿಷಗಳು ಸೌಜನ್ಯಕ್ಕೆ ವಿನಾಯತಿ; ಅದನ್ನೂ ಗಮನಿಸದೆ ಇದ್ದರೆ ತಾವೆ ಎದ್ದು ಒಳಗೆ ಹೋಗಿಬಿಡುವರು! ವೇಳೆಯನ್ನು ಹಾಳುಮಾಡಲು ಅವರೆಂದೂ ಸಿದ್ಧರಿರಲಿಲ್ಲ

ಕಾಲದ ಬೆಲೆಯನ್ನರಿಯದ ಹಲವರು ವೆಂಕಟಪ್ಪನವರನ್ನು ಕಾಡುತ್ತಿದ್ದುದುಂಟು. ಬೇಸರಗೊಂಡ ಅವರು ಕೆಲವೊಮ್ಮೆ ಅದನ್ನು ತಮ್ಮ ದಿನಚರಿಯಲ್ಲಿ ತೋಡಿಕೊಳ್ಳುತ್ತಿದ್ದುದೂ ಉಂಟು. ನಿದರ್ಶನಕ್ಕೆ 1942ರ ಡಿಸೆಂಬರ್ ಇಪ್ಪತ್ತನಾಲ್ಕರಂದು, ಮಲ್ಲೇಶ್ವರದಲ್ಲಿರುತ್ತಿದ್ದ 'ಪ್ರೇಮ ಮಂದಿರ'ದವರೊಬ್ಬರು (ಅವರ ಹೆಸರು ದಿನಚರಿಯಲ್ಲಿ ದೆಯೆನ್ನಿ) ವೆಂಕಟಪ್ಪನವರ ಬಳಿ ಬಂದು ಪ್ರೇಮಾಯತನದ ಪಂಡಿತ ತಾರಾನಾಥರ ಶಿಲ್ಪ ಕೃತಿಯನ್ನು ಮಾಡಿಕೊಡಬೇಕೆಂದು ಬಯಸಿದರು. ವೆಂಕಟಪ್ಪನವರಿಗೆ ತಾರಾನಾಥರ ವಿಚಾರವಾಗಿ ಅಷ್ಟೇನು ಗೌರವಭಾವನೆಯಿರಲಿಲ್ಲ. ಬಂದವರ ಬಯಕೆ ತಿಳಿದೊಡನೆ ವೆಂಕಟಪ್ಪನವರು ಮಾಡಲಾರೆನೆಂದು ಹೇಳಿಬಿಟ್ಟರು. ಆದರೆ ಬಂದ ಮಹನೀಯರು ಅಷ್ಟಕ್ಕೆ ಬಿಡದೆ ತಾರಾನಾಥರ ಪರ ವಕಾಲತ್ತು ವಹಿಸಿ ಅವರ ಹಿರಿಮೆ, ಹೆಗ್ಗಳಿಕೆಗಳನ್ನು ವಿಸ್ತಾರವಾಗಿ ಬಣ್ಣಿಸತೊಡಗಿದರು. ಅದನ್ನೆಲ್ಲ ಕೇಳುವಷ್ಟು ಸಮಯವಾಗಲಿ ಸಮಾಧಾನವಾಗಲಿ ಬಯಕೆಯಾಗಲಿ ವೆಂಕಟಪ್ಪನವರಿಗಿದ್ದಿತೊ ಎಂಬುದನ್ನು ಆತ ಗಮನಿಸಲಿಲ್ಲ; ವೆಂಕಟಪ್ಪನವರು ಹೇಳಿದುದನ್ನೆಲ್ಲ ಕೇಳಿದರೊ, ಬೇಸರ ಬಂದು ಎಬ್ಬಿಸಿ ಕಳುಹಿಸಿದರೊ ತಿಳಿಯದು; ದಿನಚರಿಯಲ್ಲಂತೂ "ನನ್ನ ಅಮೂಲ್ಯವಾದ ಕಾಲದಲ್ಲಿ ಎಪ್ಪತ್ತೈದು ನಿಮಿಷಗಳು ಹಾಳಾದುವು!" ಎಂದು ಬರೆದುಕೊಂಡಿದ್ದಾರೆ. ಇಂಥ ಪ್ರಸಂಗಗಳು ಎಷ್ಟೊ.

ಆದರೆ ಕಲೆಯಲ್ಲಿ ದಿಟವಾದ ಆಸಕ್ತಿಯಿದ್ದವರು ಬಂದರೆ, ತಾವೂ ಆಸಕ್ತಿವಹಿಸಿ ಎಷ್ಟು ಕಾಲ ಬೇಕಾದರೂ ಅವರೊಂದಿಗೆ ಕೂಡುವರು. ಕುಕ್ಕೆ, ಇನಾಮತಿ, ಎಸ್.ಆರ್. ಸ್ವಾಮಿ ಮೊದಲಾದ ಕಲಾವಿದರೂ (ವೆಂಕಟಪ್ಪನವರ ಮಾತಿನಲ್ಲಿ 'ಕಲಾವಿದ್ಯಾರ್ಥಿ'ಗಳು) ತಾವು ಮಾಡಿದ ಚಿತ್ರಗಳನ್ನು ಕೊಂಡೊಯ್ದು ಅವರಿಗೆ ತೋರಿಸುತ್ತಿದ್ದುದುಂಟು. ಗಂಟೆಗಳ ಕಾಲ ಅವರು ಇವನ್ನೆಲ್ಲ ನೋಡಿ ತಮ್ಮ ಅಭಿಪ್ರಾಯವನ್ನು ತಿಳಿಸುವರು. ಎಷ್ಟೆ ಕೆಲಸವಿದ್ದರೂ, ಆಯಾಸವಾಗಿದ್ದರೂ ಬೇಗನೆ ನೋಡಿ ಏನೋ ಹೇಳಿ ಕಳುಹಿಸುವ ಪ್ರವೃತ್ತಿಯಲ್ಲ ಅವರದ್ದು. ಕಲೆಯ ವಿಚಾರವಾಗಿ ಅವರಿಗಿದ್ದ ಆದರ, ತಮ್ಮ ಅಭಿಪ್ರಾಯಗಳನ್ನು ತಿಳಿಸುವಲ್ಲಿ ಪ್ರಾಮಾಣಿಕತೆ ಇವನ್ನು ಆ ಕಲಾವಿದರೆಲ್ಲರೂ ಬಲ್ಲರು. ಅವರ ಆರೋಗ್ಯ ಕೆಟ್ಟು ಬಹು ವೇಳೆ ಮಲಗಿಯೇ ಇರಬೇಕಾದಾಗಲೂ, ಕೆಲವರು ತಮ್ಮ ಕಲಾಕೃತಿಗಳನ್ನು ಅವರಲ್ಲಿಗೆ ಕೊಂಡೊಯ್ದು ಅವರ ಅಭಿಪ್ರಾಯಗಳನ್ನು ಪಡೆದುಬಂದರು. ನಿದರ್ಶನಕ್ಕೆ, ಎಸ್.ಬಿ. ಶಂಕರ್ ಎನ್ನುವ ಶಿಲ್ಪಿ ವೆಂಕಟಾಚಲಂಗೆ ತುಂಬ ಆಪ್ತರು; ಹಾಗಾಗಿ ವೆಂಕಟಪ್ಪನವರಿಗೂ ಪರಿಚಿತರು. ಬೆಂಗಳೂರಿನ ಡಿಸೈನ್ ಸೆಂಟರಿನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬಳಪದ ಕಲ್ಲಿನಲ್ಲಿ ಮಾಡಿದ್ದ ಒಂದು ಕೃತಿಯನ್ನು ಅವರಲ್ಲಿಗೆ

1957ನೆಯ ಸೆಪ್ಟೆಂಬರ್ ಹದಿನೇಳರಂದು ಕೊಂಡೊಯ್ದುದರ ವಿವರಗಳು ದಿನಚರಿಯಲ್ಲಿವೆ. ಆಗ ವೆಂಕಟಪ್ಪನವರ ಆರೋಗ್ಯ ಏನೇನೂ ಚೆನ್ನಾಗಿರಲಿಲ್ಲ. ಆದರೂ ಅವರು ಆದ ಆಯಾಸವನ್ನು ಲೆಕ್ಕಿಸದೆ ಅದನ್ನು ಸಾವಧಾನವಾಗಿ ನೋಡಿ, ಅದರಲ್ಲಿದ್ದ ಹಲವು ದೋಷಗಳನ್ನು ಎತ್ತಿತೋರಿಸಿದರು; ಅದನ್ನು ತಿದ್ದುವುದು ಸಾಧ್ಯವೇ ಇಲ್ಲವೆಂದೂ ತಿಳಿಸಿದರು. ತಾವು ಮಾಡಬೇಕೆಂದಿರುವುದನ್ನು ಮೊದಲು ಕಾಗದದ ಮೇಲೆ ರೇಖಾಚಿತ್ರದಲ್ಲಿ ಮೂಡಿಸಿಕೊಂಡು, ಅನಂತರ ಮೇಣದಲ್ಲೊ ಪ್ಲಾಸ್ಟಿಸಿನ್‌ನಲ್ಲೊ ಮಾಡಿ, ಕೈ ಕುದುರಿದ ಮೇಲೆ ಕಲ್ಲಿನಲ್ಲಿ ಕಡೆಯಬೇಕೆಂದು ತಿಳಿಯಪಡಿಸಿದರು.

೨

ಕಲೆಯ ಬಗ್ಗೆ ಅವರಿಗಿದ್ದ ಆದರ, ಕಲಾವಿದರಿಗೆ ಇರಬೇಕಾದ ಆತ್ಮಗೌರವ, ಸ್ವಾತಂತ್ರ್ಯಗಳ ವಿಚಾರವಾಗಿ ಅವರಿಗಿದ್ದ ಕಳಕಳಿ ಇವನ್ನು ಎಲ್ಲರೂ ಬಲ್ಲರು. ತಮ್ಮ ಕಲೆಗೆ ಏನಾದರೂ ಅಪಚಾರ ಸಂದಿತೆಂದು ಕಂಡುಕೊಂಡೊಡನೆ ಸಿಡಿದೆದ್ದು ನಿಲ್ಲುವರು. ಅಪಚಾರಮಾಡಿದವರನ್ನು ನೇರವಾಗಿಯೊ, ಪತ್ರದ ಮೂಲಕವೊ ತರಾಟೆಗೆ ತೆಗೆದು ಕೊಳ್ಳುವರು; ತಮ್ಮ ತಪ್ಪೆಂದು ಅವರಿಗೆ ಅರಿವಾಗದಿದ್ದರೆ, ಕ್ಷಮೆ ಬೇಡದಿದ್ದರೆ ಅವರನ್ನು ನ್ಯಾಯಾಲಯದ ಕಟ್ಟಳೆಗೊಯ್ಯುವರು. ಹೀಗಾಗಿ ಅವರು ತಮ್ಮ ಬದುಕಿನಲ್ಲಿ ತಮ್ಮ ಸ್ಟುಡಿಯೋನಲ್ಲಿ ಕಳೆದಷ್ಟೆ ಕಾಲವನ್ನು ವಕೀಲರೊಂದಿಗೂ ನ್ಯಾಯಾಲಯಗಳಲ್ಲಿಯೂ ಕಳೆಯಬೇಕಾಗಿ ಬಂದಿತು. ಅವರು ಹೂಡಿದ ಮೊಕದ್ದಮೆಗಳೂ ನಡೆಸಿದ ಕಟ್ಟಳೆಗಳೂ ಕಲೆಯ ಗೌರವವನ್ನೂ ಕಲಾವಿದರ ಮರ್ಯಾದೆಯನ್ನೂ ಉಳಿಸಲೆಂದೆ. ಇದಕ್ಕಾಗಿ ತಮ್ಮ ಸಮಯವನ್ನು ಮಾತ್ರವಲ್ಲ, ಹಣವನ್ನೂ ವೆಚ್ಚಮಾಡಲು ಸಿದ್ಧರಿದ್ದರು. ಅರಮನೆಯ ಹಗರಣದ ವಿಚಾರ ಈಗಾಗಲೇ ಬಂದಿತು. ಅರಮನೆಯಿಂದ ತಮಗೆ ನ್ಯಾಯವಾಗಿ ಬರಬೇಕಾಗಿದ್ದ ಹಣ ಬರಲಿಲ್ಲವೆಂಬ ಕಾರಣಕ್ಕಿಂತ ಪ್ರಬಲವಾಗಿದ್ದುದು ತಮ್ಮ ಕಲಾಕೃತಿಗಳನ್ನು ಅರಮನೆಯ ಅಧಿಕಾರಿಗಳು ತಿರಸ್ಕರಿಸಿದರು ಎಂಬುದು. ಕಲಾರಸಿಕರೂ, ಜ್ಞಾನವಂತರೂ, ವಿವೇಕಿಗಳೂ ಆಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರೇ ಮೆಚ್ಚಿಕೊಂಡ ಕೃತಿಗಳು ಅವರು ತೀರಿಕೊಂಡೊಡನೆಯೆ ಮುಂದಿನವರಿಗೆ ಬೇಡವಾಗಿಬಿಟ್ಟುವಲ್ಲ ಎಂದೆ ಅವರು ಸಿಟ್ಟಿಗೆದ್ದುದು. ಕಲಾವಿದನನ್ನು ಅಸಡ್ಡೆಯಿಂದ ಕಂಡ ಅರಮನೆಯ ಮರ್ಯಾದೆಯನ್ನು ಬೀದಿಗೆಳೆಯುವೆನೆಂದು ಹಟತೊಟ್ಟರು. ಅರಮನೆಯು ಹಣವನ್ನು ತೆತ್ತು ಒಪ್ಪಂದ ಮಾಡಿಕೊಂಡು ವೆಂಕಟಪ್ಪ ಕಟ್ಟಳೆಯನ್ನು ಕೈಬಿಡುವಂತೆ ಮಾಡಿದ ಪ್ರಯತ್ನ ಈ ಹಟದ ಎದುರಿನಲ್ಲಿ ನಡೆಯಲಿಲ್ಲ. ಕಡೆಗೆ ನ್ಯಾಯಾಲಯದ ತೀರ್ಪು ಕಲಾವಿದನಿಗೆ ಅನುಕೂಲವಾಗದೆ, ವೆಂಕಟಪ್ಪನಿಗೆ ತಗಲಿದ ವೆಚ್ಚದಲ್ಲಿ ಒಂದು ಭಾಗವನ್ನು ವಹಿಸಿಕೊಳ್ಳಲು ಅರಮನೆ ಮುಂದೆ ಬಂದಾಗ ಅದೇ ಹಟ ಹಿಡಿದು ಅದನ್ನು ತಿರಸ್ಕರಿಸಿದರು. ಅವರಿಗೆ ಬೇಕಾಗಿದ್ದುದು ಹಣವಲ್ಲ, ಮರ್ಯಾದೆ; ದಾನವಲ್ಲ, ನ್ಯಾಯ.

ಅವರು ಒಂಟಿಯಾಗಿದ್ದುದರಿಂದ, ಸರಳ ಜೀವನ ನಡೆಸುತ್ತಿದ್ದುದರಿಂದ, ನಿಷ್ಠೆಯನ್ನು ಮೈಗೂಡಿಸಿಕೊಂಡಿದ್ದುದರಿಂದ, ಹೆಚ್ಚು ಹಣದ ಅಗತ್ಯ ಅವರಿಗೆ ಕಾಣಲಿಲ್ಲವೆಂಬುದು ದಿಟ. ಮೇಲಾಗಿ, ಮನೆತನದ ಆಸ್ತಿ ಸ್ವಲ್ಪ ಮಟ್ಟಿಗೆ ಇದ್ದಿತು. ಬೆಂಗಳೂರಿಗೆ ಬರುವ ಮುನ್ನ

ತಮ್ಮ ಕಲಾಕೃತಿಗಳ ಮಾರಾಟದಿಂದ ಅಷ್ಟಿಷ್ಟು ಹಣವನ್ನು ಪಡೆದುಕೊಂಡಿದ್ದರು. ಅರಮನೆಯ ವೃತ್ತಿಯೂ ಇದ್ದಿತಷ್ಟೆ. ಅವರ ಜೀವನೋಪಾಯಕ್ಕೇನು ಆರ್ಥಿಕವಾದ ತೊಂದರೆಯಿರಲಿಲ್ಲ. ಶ್ರೀಮಂತರೆನ್ನಲಾಗದಿದ್ದರೂ ಅನುಕೂಲ ಸ್ಥಿತಿಯಲ್ಲೆ ಇದ್ದರು. ಹೆಚ್ಚು ಹಣವನ್ನು ಸಂಪಾದಿಸಬೇಕೆಂಬ ಹಂಬಲವೂ ಅವರಿಗಿರಲಿಲ್ಲ. ಮಲ್ಲೇಶ್ವರದಲ್ಲಿ ವಿಶಾಲವಾದ ಜಾಗ, ಸುಮಾರಾಗಿ ಸೊಗಸಾದ ಮನೆ, ಕಾರ್ಪಣ್ಯವಿಲ್ಲದೆ ಬದುಕಬಹುದಾದ ಹಣ ಬ್ಯಾಂಕಿನಲ್ಲಿ; ಇನ್ನೇನನ್ನೂ ಅವರು ಬಯಸಲಿಲ್ಲ. ತಮ್ಮ ಕಲಾಕೃತಿಗಳನ್ನು ಮಾರುವ ಮನಸ್ಸು ಮಾಡಿದ್ದಿದ್ದರೆ, ಬೇರೆಯವರು ಬಯಸಿದ ಕಲಾಕೃತಿಗಳನ್ನು ಸಿದ್ಧಪಡಿಸಿಕೊಡಲು ಒಪ್ಪಿದ್ದಿದ್ದರೆ, ಸರಕಾರದೊಡನೆ ಅನುನಯ ತೋರಿಸಿ ರಾಜಕಾರಣಿಗಳ ಬಾಲ ಹಿಡಿಯುವ ಸ್ವಭಾವ ಅವರದ್ದಾಗಿದ್ದಿದ್ದರೆ, ಅವರು ಶ್ರೀಮಂತರಾಗುವುದು ಕಷ್ಟವೇನಿರಲಿಲ್ಲ. ಆದರೆ ತಮ್ಮ ಕಲಾಕೃತಿಗಳನ್ನೆಲ್ಲ ಮಾರದೆ ಅವರ ಕನಸಾಗಿದ್ದ ಸ್ಟುಡಿಯೋವಿಗಾಗಿ ಎಂದು ಮೀಸಲಾಗಿರಿಸಿಕೊಂಡಿದ್ದರು. ದಿಲ್ಲಿಯ, ಮುಂಬಯಿಯ, ವಿದೇಶಗಳ ಕಲಾವಿಲಾಸಿಗಳು ಇವನ್ನು ಬಹು ಬೆಲೆಗೆ ಕೊಳ್ಳಬಂದುದೂ ಉಂಟು; ವೆಂಕಟಪ್ಪ ಒಪ್ಪಲಿಲ್ಲ. ಹಣದ ಮೇಲೆ ಅವರ ಕಣ್ಣು ಅಷ್ಟಾಗಿ ಇರಲಿಲ್ಲ. ಯಾವುದೋ ನಿಷ್ಠೆ, ಏನೋ ಆದರ್ಶ, ಎಂಥದೊ ವ್ರತ, ಅವರು ಬಾಳನ್ನು ಕಳೆದದ್ದು ಹೀಗೆ.

ಅಪರಿಗ್ರಹವ್ರತ ಬೇರೆ. ತಮ್ಮ ಅಗತ್ಯಕ್ಕಿಂತ ಮಿಗಿಲಾಗಿ, ಅಥವಾ ತಮ್ಮ ದುಡಿಮೆಯಿಲ್ಲದೆ ಒದಗಿ ಬಂದ ಹಣವನ್ನು ಅವರು ಮುಟ್ಟಲಿಲ್ಲ. ಕಲೆಯ ಕೆಲಸಕ್ಕೆ ಬೆಲೆ ಕಟ್ಟುವುದಾಗದು ಎಂಬುದು ಅವರಿಗೆ ಮನವರಿಕೆಯಾಗಿದ್ದರೂ, ತಮ್ಮ ಕಲಾಕೃತಿಗಳನ್ನು ಮಾರುತ್ತಿದ್ದ ಕಾಲದಲ್ಲಿಯೂ ಅವರು ತಮ್ಮ ಕೃತಿಗಳಿಗೆ ಹೆಚ್ಚಿನ ಬೆಲೆಯನ್ನು ಹಚ್ಚುತ್ತಿರಲಿಲ್ಲ. ಅವರ ಕಡೆಗಾಲದಲ್ಲಿ, ಸ್ಟುಡಿಯೋ ಕಲ್ಪನೆ ಬರಿಯ ಹಗಲುಗನಸು ಎಂಬುದನ್ನು ಗಟ್ಟಿಮಾಡಿಕೊಂಡು ತಾವು ಸಂಗ್ರಹಿಸಿದ್ದ ತಮ್ಮ ಕಲಾಕೃತಿಗಳನ್ನೆಲ್ಲ ಮಾರಲು ಮನಸ್ಸುಮಾಡಿದಾಗಲೂ, ಅವರಲ್ಲಿ ಗೌರವಭಾವನೆಯನ್ನು ತಳೆದಿದ್ದ, ಪ್ರಭಾವಶಾಲಿಯಾಗಿದ್ದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಕೇಂದ್ರ ಸರಕಾರದ ಪರವಾಗಿ ಅವನ್ನು ಕೊಳ್ಳಲು ಸಿದ್ಧರಿದ್ದಾಗಲೂ, ವೆಂಕಟಪ್ಪ ಬೆಲೆಯನ್ನು ಹೇಳಲಿಲ್ಲ. ಅವರು ಕೇಳಿದಷ್ಟು ಬೆಲೆಯನ್ನು ಕೊಟ್ಟು ಸರಕಾರ ಅವನ್ನು ಕೊಳ್ಳುತ್ತಿದ್ದ ಸಂದರ್ಭ ಅದು ವೆಂಕಟಪ್ಪ ತಾವಾಗಿ ಮೇಲೆ ಬಿದ್ದು ಹೋಗಲಿಲ್ಲ; ತಮ್ಮ ಕೃತಿಗಳಿಗೆ ಬೆಲೆಯೆಷ್ಟೆಂದು ಕಾಣಿಸಲಿಲ್ಲ. ''ಬೆಲೆಯ ವಿಚಾರ ನಿಮಗೇ ಬಿಟ್ಟಿದ್ದೇನೆ. ನನ್ನನ್ನು ಕೇಳಬೇಡಿ'' ಎಂದು ಅವರು ಕಮಲಾದೇವಿಯವರಿಗೆ ಸ್ಪಷ್ಟವಾಗಿ ಹೇಳಿಬಿಟ್ಟರು. ಆದರೆ ಅವರು ಬದುಕಿರುವವರೆಗೂ ಅವರ ಕಲಾಕೃತಿಗಳು ಅವರ ಕೈಬಿಟ್ಟು ಹೋಗಲಿಲ್ಲವೆನ್ನಿ.

ಕಲಾಕೃತಿಗಳನ್ನು ಮಾಡಿ, ಮಾರಿ, ಹಣವನ್ನು ಪಡೆದುಕೊಂಡು ಕಲಾವಿದ ಬದುಕಬೇಕು; ಅವನಿಗೆ ಬೇರೆ ಆಸರೆಯೇನಿದೆ? ಇದನ್ನು ವೆಂಕಟಪ್ಪ ಅಲ್ಲವೆನ್ನಲಿಲ್ಲ. ಆದರೆ ಕಲಾಕೃತಿಗಳನ್ನು ಮಾಡುವಾಗ ಮಾರುವ ಮನಸ್ಸಿದ್ದರೆ, ಮಾರುವಾಗ ಲಾಭದ ಕಡೆ ಕಣ್ಣಿದ್ದರೆ, ಹಣವನ್ನು ಪಡೆದುಕೊಳ್ಳುವಾಗ ಕಲಾವಿದನ ಮರ್ಯಾದೆಗೆ ಕುಂದು ಬಂದರೆ, ಅಂಥ ಕಲೆ ಊರ್ಜಿತವಾಗದು ಎಂದು ವೆಂಕಟಪ್ಪನ ಎಣಿಕೆ. ವೃತ್ತಿಗಾಗಿ ಶಿಕ್ಷಣ ಎಂಬ

ವಾದ ಕಲೆಗೂ ಅನ್ವಯಿಸುವುದೆಂದು ವೆಂಕಟಪ್ಪ ಒಪ್ಪಲಿಲ್ಲ. ತಾವು ಕಲೆಯನ್ನು ಕೈಗೂಡಿಸಿಕೊಂಡದ್ದು ವೃತ್ತಿಯ ಆಸೆಯಿಂದಲ್ಲ. ಕಲೆಯ ಒಳಹೊಕ್ಕು ಅದರ ಸ್ವಾರಸ್ಯವನ್ನು ಅರಿತುಕೊಂಡದ್ದು ಕಲೆಯ ಮೇಲಿನ ಆದರದಿಂದಲೆ, ಆಸಕ್ತಿಯಿಂದಲೆ; ತದೇಕಧ್ಯಾನದಿಂದಲೆ. ಬದುಕಿನ ಒಲವೆಲ್ಲ ಕಲೆಯ ಕಡೆಗಿದ್ದರೆ ಬದುಕಿನ ಜಂಜಡ ಮನಸ್ಸನ್ನು ಕದಡಲಾರದು; ಬಾಳಿನ ಸಮಸ್ಯೆಗಳು ಹದಮೀರಿ ಎದುರಿಗೆ ನಿಲ್ಲಲಾರವು, ಎದೆಗುಂದಿಸಲಾರವು. ಕಲೆಯನ್ನು ಕೇವಲ ಜೀವನೋಪಾಯಕ್ಕೆಂದು ಬಳಸಿಕೊಳ್ಳುವುದು ಕಲೆಗೆ ಅಪಚಾರಮಾಡಿದಂತೆ. ಕಲೆಯಿಂದ ಹಣವನ್ನು ಗಳಿಸುವಾಗಲೂ ಕಲೆಯ ಮೇಲ್ಮೆಯನ್ನು ಮರೆಯಬಾರದು. ಇತರ ವೃತ್ತಿಗಳಂತಲ್ಲದೆ, ಕಲೆ ಒಬ್ಬನ ಸ್ವಭಾವಕ್ಕೆ ಸೇರಿದ್ದು; ಸಂಸ್ಕಾರಕ್ಕೆ ಸೇರಿದ್ದು, ಸಾಧನೆಗೆ ಸೇರಿದ್ದು, ಸಂತೋಷಕ್ಕೆ ಸೇರಿದ್ದು. ಕಲಾವಿದನು ತಪಸ್ವಿ. ಅವನ ದುಡಿಮೆಯನ್ನು ಗಳಿಕೆಗೆ ಮೀಸಲಾಗಿರಿಸಬಹುದೆ?

ಕಲಾವಿದ್ಯಾರ್ಥಿಗಳಿಗೆ ಜೀವನೋಪಾಯವನ್ನು ಕಲ್ಪಿಸುವ ವಿಚಾರ ಅವರಿಗೆ ತಿಳಿದಿರಲಿಲ್ಲವೆಂದಲ್ಲ. 1950ರ ಏಪ್ರಿಲ್ ತಿಂಗಳ ಇಪ್ಪತ್ತರಂದು ಮಧುರೆಯ ಕಲಾಶಾಲೆಯ ಮುಖ್ಯಸ್ಥರು, ಎಸ್. ಸುಂದರಂ, ವೆಂಕಟಪ್ಪನ ಬಳಿ ಬಂದು, ತಮ್ಮ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಜೀವನೋಪಾಯವನ್ನು ಒದಗಿಸುವ ವಿಚಾರವಾಗಿ ಸಲಹೆಗಳನ್ನು ಕೇಳಿದರು. ಅದಕ್ಕೆ ವೆಂಕಟಪ್ಪನ ಉತ್ತರ ಹೀಗೆ — "ಕಲಾವಿದ್ಯಾರ್ಥಿಗಳ ಜೀವನೋಪಾಯದ ವಿಚಾರ ನನಗೇನೂ ತಿಳಿಯದು, ನಾನೆಂದೂ ಅದನ್ನು ಕುರಿತು ಆಲೋಚನೆ ಮಾಡಿದ್ದಿಲ್ಲ. ನನ್ನ ಗಮನವೆಲ್ಲ ಕಲೆಯನ್ನು ಕಲಿಯುವುದು ಹೇಗೆ, ಕಲಿಸುವುದು ಹೇಗೆ ಎಂಬಷ್ಟರ ಕಡೆಗೇ ಹರಿದಿದೆ". ಅವರ ದೃಷ್ಟಿಯಲ್ಲಿ, ಕಲೆ ಯಾವೊಂದು ಕಸುಬಿಗಾಗಿ ಅಲ್ಲ. ಮೊದಮೊದಲು ತಮ್ಮ ಕಲಾಕೃತಿಗಳನ್ನು ಪ್ರದರ್ಶನಗಳಿಗೆ ಕಳುಹಿಸಲೊಪ್ಪಿದ್ದರು; ಅವನ್ನು ಮಾರಲೂ ಒಪ್ಪಿದ್ದರು. ತಮ್ಮ ಗುರುಗಳೇ ಆರಂಭಮಾಡಿದ್ದ ಕಲ್ಕತ್ತೆಯ ಸೊಸೈಟಿ ಆಫ್ ಓರಿಯಂಟಲ್ ಆರ್ಟ್‌ನ ಮೂಲಕ ಈ ವ್ಯವಹಾರವೆಲ್ಲ ನಡೆಯುವಂತೆ ವ್ಯವಸ್ಥೆಮಾಡಿದ್ದರು. ಆದರೆ ಕೆಲವು ವರ್ಷಗಳ ಮೇಲೆ ಕಲಾ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದನ್ನು ನಿಲ್ಲಿಸಿದರು; ತಮ್ಮ ಕೃತಿಗಳನ್ನು ಮಾರುವುದನ್ನೂ ಬಿಟ್ಟರು. ತಮ್ಮದೆ ಕಲಾಶಾಲೆಯನ್ನು ತೆರೆಯಬೇಕೆಂಬ ಬಯಕೆ ಅವರಿಗೆ ಪ್ರಬಲವಾಗಿಯೆ ಇದ್ದಿತು; ಆದರೆ ಈ ಕಲಾಶಾಲೆಯಲ್ಲಿ ಯೋಗ್ಯ ವಿದ್ಯಾರ್ಥಿಗಳಿಗೆ (ಎಂದರೆ ಕಲೆಯಲ್ಲಿ ಆಸಕ್ತಿಯಿದ್ದವರಿಗೆ) ಮಾತ್ರ ಪ್ರವೇಶವೆಂದೂ ಆ ಶಿಕ್ಷಣ ಉಚಿತವಾಗಿಯೆ ನಡೆಯುವುದೆಂದೂ ತೀರ್ಮಾನಿಸಿದ್ದರು. ಕಲೆಯನ್ನಿರಲಿ, ಕಲಾಶಾಲೆಯನ್ನೂ ಜೀವನೋಪಾಯಕ್ಕಾಗಿ ಬಳಸಿಕೊಳ್ಳುವುದು ಅವರಿಗೆ ಒಗ್ಗದ ಮಾತು.

ತಾವು 'ಆಜೀವ ಕಲಾವಿದ್ಯಾರ್ಥಿ'ಯಾಗಿ (ಇದು ಅವರು ತಮ್ಮನ್ನು ಬಣ್ಣಿಸಿಕೊಳ್ಳುತ್ತಿದ್ದ ಬಗೆ) ಕಲೆಯ ಮರ್ಯಾದೆಯನ್ನು ಕಾಪಿಡಬೇಕಾದುದು ತಮ್ಮ ಧರ್ಮವೆಂದು, ಕರ್ತವ್ಯವೆಂದು ಅವರು ಭಾವಿಸಿದ್ದರು. ಕೂಚ್-ಬಿಹಾರದ ಮಹಾರಾಣಿ ತನ್ನ ಗಂಡನ ಕಿರುದಂತ ಚಿತ್ರವನ್ನು ವೆಂಕಟಪ್ಪನಿಂದ ಮಾಡಿಸಿಕೊಂಡು, ಅದರ ಬೆಲೆಯ ವಿಚಾರ ಚೌಕಾಸಿಮಾಡಿದಾಗ, ವೆಂಕಟಪ್ಪ ಚಿತ್ರವನ್ನು ಅವರಿಗೆ ಕೊಡುವುದೇ ಇಲ್ಲವೆಂದು ಹಟ ಹಿಡಿದ ಪ್ರಸಂಗ ಈಗಾಗಲೆ ಬಂದಿದೆ. ಕಲಾಕೃತಿಗೆ ಬೆಲೆ ಇಳಿಸಬೇಕೆಂದು ಕೇಳುವವಳು ಅವಳೆಂಥ

ಮಹಾರಾಣಿ? ಅಂಥವಳಿಗೆ ನನ್ನ ಕಲಾಕೃತಿಯನ್ನು ಮಾರಿದರೆ ನನಗೇ ಮರ್ಯಾದೆಯಿಲ್ಲ ಎಂದು ವೆಂಕಟಪ್ಪನ ವಾದ. ಮಹಾರಾಣಿಯೆ ತಪ್ಪಾಯಿತೆಂದು ಕೇಳಿಕೊಂಡರಾಗಲಿ, ಮೈಸೂರು ಅರಸೊತ್ತಿಗೆಯ ಹಲವರು ಪ್ರಭಾವಶಾಲಿಗಳು ಮಹಾರಾಣಿಯ ಪರವಾಗಿ ಬೇಡಿಕೊಂಡರಾಗಲಿ, ಮೊದಲು ಹೇಳಿದುದಕ್ಕಿಂತ ಹೆಚ್ಚು ಹಣವನ್ನು ಕೊಡುವುದಾಗಿ ಮುಂದೆ ಬಂದರಾಗಲಿ ವೆಂಕಟಪ್ಪ ತನ್ನ ನಿರ್ಧಾರವನ್ನು ಬದಲಾಯಿಸಲಿಲ್ಲ . ಅವರಿಗೆ ಅದು ಹಣದ ಪ್ರಶ್ನೆಯಲ್ಲ , ಕಲೆಯ ಮರ್ಯಾದೆಯ ಮಾತು. ಹಲವು ವರ್ಷಗಳನಂತರ ಇದೇ ಚಿತ್ರವನ್ನು ಮದರಾಸಿನ ಚಿತ್ರಸಂಗ್ರಹಾಲಯಕ್ಕೆ ಉಚಿತವಾಗಿಯೇ ಕೊಟ್ಟುಬಿಟ್ಟರು.

ತಾವು ಕಲಾವಿದರಾಗಿ (ಕಲಾವಿದ್ಯಾರ್ಥಿಯಾಗಿ) ಕಲೆಯನ್ನಾಗಲಿ ಕಲಾವಿದರನ್ನಾಗಲಿ ಅಗ್ಗವಾಗಿ ಲಘುವಾಗಿ ಕಾಣಿಸದಿರುವುದು ತಮ್ಮ ಹೊಣೆಯೆಂದು ಅವರ ಭಾವನೆ. ಅವರೆಂದೂ ಯಾರ ಮುಂದೂ ಕೈಯೊಡ್ಡಿದವರಲ್ಲ ; ಅಧಿಕಾರಿಗಳ ಬೆನ್ನುಹಿಡಿದು ಅಲೆದಾಡಿದವರಲ್ಲ ; ರಾಜಕಾರಣಿಗಳನ್ನು ಅನುಸರಿಸಿದವರಲ್ಲ ; ಪ್ರಭಾವಶಾಲಿಯೆಂದು ಯಾರನ್ನೂ ಆಶ್ರಯಿಸಿದವರಲ್ಲ . ಕಲೆಯ ಗೌರವವನ್ನು ಬಾಳಿನುದ್ದಕ್ಕೂ ಕಾಪಾಡಿಕೊಂಡು ಬಂದರು. ಅವರು ಬೆಂಗಳೂರಿನಲ್ಲಿ ನಿವೇಶನವನ್ನು ಕೊಂಡದ್ದು , ಅಲ್ಲಿ ಮನೆಯನ್ನು ಕಟ್ಟಿಸಿಕೊಂಡದ್ದು , ಸ್ಟುಡಿಯೋ ಏರ್ಪಡಿಸಬೇಕೆಂದಿದ್ದುದು ಎಲ್ಲ ತಮ್ಮ ದುಡಿಮೆಯ ಹಣದಿಂದಲೇ. ಸರಕಾರದಿಂದಾಗಲಿ, ಹಣವಂತರಿಂದಾಗಲಿ, ಯಾರಿಂದಾಗಲಿ ಮೂರು ಕಾಸನ್ನು ದಾನವಾಗಿ, ದತ್ತಿಯಾಗಿ ಎಂದೂ ಪಡೆಯಲಿಲ್ಲ ; ಪಡೆಯುವ ಮನಸ್ಸೂ ಅವರಿಗಿರಲಿಲ್ಲ . ಕಲೆಯಿಂದ ತಾವು ಲಾಭ ಪಡೆಯಬೇಕೆಂಬ ಬುದ್ಧಿ ಅವರಿಗೆಂದೂ ಬಂದುದಿಲ್ಲ . ತಾವು ಬಾಳಿನುದ್ದಕ್ಕೂ ಕೈಗೊಂಡದ್ದು ಕಲೆಯ ಸೇವೆ; ಕಲೆಯು ತಮ್ಮ ಸೇವೆಮಾಡಬೇಕೆಂದು ಬಯಸಲಿಲ್ಲ ಅವರು. ಈ ನಿಷ್ಠೆ ಅವರ ಬಾಳ ಉಸಿರಾಗಿದ್ದಿತು.

ಇದು ಅವರ ಸ್ವತಂತ್ರ ಮನೋವೃತ್ತಿಯ ಪ್ರತೀಕವೂ ಹೌದು. ಅವರು ಹಿಮಾಲಯದ ಯಾತ್ರೆಯ ಸಂದರ್ಭದಲ್ಲಿ ಕೈಗೊಂಡ ಅಪರಿಗ್ರಹ ವ್ರತದ ವಿಚಾರ ಆಗಲೇ ಬಂದಿತಷ್ಟೆ. ಇದರ ಫಲವಾಗಿ, ಅವರು ಯಾರಿಂದ ಏನನ್ನೂ ದಾನವಾಗಿ ಪಡೆದುಕೊಳ್ಳುತ್ತಿರಲಿಲ್ಲ . ಕಡೆಗೆ, ತಮ್ಮ ಸೋದರಿ ಯೆಲ್ಲಮ್ಮ (ಲಕ್ಷ್ಮೀದೇವಮ್ಮ) ತಮ್ಮ ಮನೆಗೆ ಬಂದು ಉಪ್ಪಿನಕಾಯನ್ನೋ ಹಣ್ಣನ್ನೋ ತಾವುಮಾಡಿದ್ದ ಭಕ್ಷ್ಯವನ್ನೋ ತಂದುಕೊಟ್ಟರೆ ಅವರು ಮುನಿದುಕೊಳ್ಳುವರು; "ಇವೆಲ್ಲ ಯಾಕೆ ತರುತ್ತೀ?" ಎಂದು ಬೇಸರಪಟ್ಟುಕೊಳ್ಳುವರು. ತಾವು ಅವರಿಗೆ ರಾಗಿ, ಭತ್ತ, ಕೊತ್ತಂಬರಿ ಬೀಜ ಮೊದಲಾಗಿ ಏನನ್ನಾದರೂ ಕೊಟ್ಟಮೇಲೇ ಅವರು ತಂದುದನ್ನು ಸ್ವೀಕರಿಸುವರು. ಆಕೆಯ ಮಗ ರಾಮರಾಜು ಫೊಟಾಗ್ರಾಫಿಯನ್ನು ವೃತ್ತಿಯಾಗಿ ಕೈಗೊಂಡು ಸ್ಟುಡಿಯೋ ನಡೆಸುತ್ತಿದ್ದರು. ವೆಂಕಟಪ್ಪನವರಿಗೆ ಆಗಾಗ ತಮ್ಮ ಕಲಾಕೃತಿಗಳ ಛಾಯಾಚಿತ್ರಗಳನ್ನು ಪಡೆಯುವ ಅಗತ್ಯ ಬಿದ್ದಾಗ ರಾಮರಾಜುವಿನ ಬಳಿ ಹೋಗುವರು. ಕೆಲಸ ಆದಮೇಲೆ ತಮ್ಮ ಸೋದರಳಿಯನಿಗೆ ಏನನ್ನಾದರೂ ಪ್ರತಿಫಲವಾಗಿ ಕೊಟ್ಟೇಕೊಡುವರು. ವೈದ್ಯರು ಮಾಡಿದ ಚಿಕಿತ್ಸೆಯನ್ನು ಅವರು ಎಂದೂ ಉಚಿತವಾಗಿ ಪಡೆದುದಿಲ್ಲ . ಹಲವು ವೇಳೆ ಅವರ ವಿಶ್ವಾಸಿಗಳಿಗೆ ಇದರಿಂದ ತುಂಬ ಮುಜಗರವಾಗುತ್ತಿದ್ದುದುಂಟು. ಯಾರ ಮನೆಗಾದರೂ

ಹೋದರೆ, ಉಪಚರಿಸಲು ಏನನ್ನಾದರೂ ತಂದಿಟ್ಟರೆ ಅದನ್ನು ಮುಟ್ಟುತ್ತಿರಲಿಲ್ಲ. ಮದುವೆಯ ಮನೆಗೆ ಹೋದರೆ ಅಲ್ಲಿ ದೊರೆತ ತಾಂಬೂಲವನ್ನು ಯಾರಿಗಾದರೂ ಕೊಟ್ಟುಬರುವರು.

ಒಮ್ಮೆ ಅವರ ಅಭಿಮಾನಿಗಳೂ ಮಹಾರಾಜರ ಸರಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದವರೂ ಸಜ್ಜನರೂ ಆದ ದಿವಾನ್ ಬಹದ್ದೂರ್ ಪೂರ್ಣ ರಾಘವೇಂದ್ರರಾಯರು ನಿವೃತ್ತರಾಗಿ ಬೆಂಗಳೂರಿನಲ್ಲಿದ್ದಾಗ, ಅವರ ಮನೆಗೆ ಯಾವುದೋ ನಿಮಿತ್ತ ವೆಂಕಟಪ್ಪ ಹೋಗಿಬರಬೇಕಾಯಿತು. ಕೆಲಸ ಮುಗಿಸಿ ಹೊರಡುವಾಗ ಯಜಮಾನರು ವೆಂಕಟಪ್ಪನಿಗೆ ಫಲತಾಂಬೂಲವನ್ನು ಕೊಟ್ಟರು. ಆದರೆ ವೆಂಕಟಪ್ಪ ತೆಗೆದುಕೊಳ್ಳೆನೆಂದರು. ಯಜಮಾನರು ಒತ್ತಾಯಮಾಡಿದಾಗ, ವೆಂಕಟಪ್ಪ "ಇದನ್ನು ನನಗೆ ನೀವು ಕೊಟ್ಟಮೇಲೆ ಇದು ನನ್ನದಾಯಿತು. ಆಗ ನಾನು ಇದನ್ನು ಬೇರೆ ಯಾರಿಗಾದರೂ ಕೊಟ್ಟುಬಿಟ್ಟರೆ ನಿಮ್ಮದೇನು ಆಕ್ಷೇಪಣೆ ಇಲ್ಲವಷ್ಟೆ?" ಎಂದು ಕೇಳಿದರು. ಯಜಮಾನರು ನಗುತ್ತ "ಆಗಬಹುದು" ಎಂದು ಸಮ್ಮತಿಸಿದ ಮೇಲೇ ತಾಂಬೂಲವನ್ನು ಸ್ವೀಕರಿಸಿದರು. ಮನೆಗೆ ಹಿಂದಿರುಗಿ ಬರುತ್ತ ದಾರಿಯಲ್ಲಿ ಯಾರಿಗೋ ಅದನ್ನು ಕೊಟ್ಟುಬಿಟ್ಟರು. ಈ ಪ್ರಸಂಗವನ್ನು ಅವರೆ ತಮ್ಮ ದಿನಚರಿಯಲ್ಲಿ (1942ರ ಸೆಪ್ಟೆಂಬರ್ ಹದಿನೇಳರಂದು) ಕಾಣಿಸಿದ್ದಾರೆ. ಯಾರ ಹಂಗೂ ತಮಗಿರಬಾರದೆಂಬ ಕಾತರ ಅವರದ್ದು. ಹೀಗಾಗಿ ಅವರನ್ನು ಯಾರಾದರೂ ಉಪಚರಿಸಿದಾಗ ಇಕ್ಕಟ್ಟಿನ ಪರಿಸ್ಥಿತಿ ಏರ್ಪಡುತ್ತಿತ್ತು. ಹಲವು ವೇಳೆ "ಇದು ಅತಿರೇಕವಾಯಿತು" ಎಂದು ನಮಗೆ ತೋರುತ್ತಿದ್ದುದುಂಟು.

೩

ಎಂದರೆ ಅವರು ಸ್ನೇಹಪರರಲ್ಲ, ಮನುಷ್ಯ ಮುಟ್ಟದ ಮುಸಂಡಿ, ಸೌಜನ್ಯವಿರಲಿಲ್ಲ ಎಂದು ಭಾವಿಸಬಾರದು. ಒಂಟಿಯಾಗಿಯೇ ಇಡೀ ಬಾಳನ್ನು ಕಳೆದರಾದರೂ ಅವರು ಸ್ನೇಹಿತರನ್ನು ತುಂಬ ವಿಶ್ವಾಸದಿಂದ ಕಂಡುಕೊಳ್ಳುತ್ತಿದ್ದರು. ಅವರ ಸ್ನೇಹಿತರಲ್ಲಿ ಮೈಸೂರಿನಲ್ಲಿರುವಾಗ, ಸಂಗೀತ ಕಲಾನಿಧಿ 'ಟೈಗರ್' ವರದಾಚಾರ್ಯರು, ಸರ್ದಾರ್ ಗೋಪಾಲರಾಜೇ ಅರಸಿನವರು, ಕರ್ನಲ್ ಸುಬ್ರಹ್ಮಣ್ಯರಾಜೇ ಅರಸಿನವರು, ಸಿ. ಆನಂದರಾಯರು, ವಕೀಲ ಡಿ. ಶ್ರೀನಿವಾಸಯ್ಯಂಗಾರರು, ಬಿ. ಲಿಂಗಪ್ಪಯ್ಯ, ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು, ಸಂಗೀತಶಾಸ್ತ್ರರತ್ನ ಕೆ. ವಾಸುದೇವಾಚಾರ್ಯರು, ವೀಣೆ ಲಕ್ಷ್ಮೀನಾರಾಯಣಪ್ಪನವರು, ಸಂಗೀತದ ಚಿಕ್ಕರಾಮರಾಯರು ಮೊದಲಾದವರೂ ಬೆಂಗಳೂರಿಗೆ ಬಂದಮೇಲೆ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯರು ಮತ್ತು ಅವರ ಪತ್ನಿ ಕಮಲಾದೇವಿ ಚಟ್ಟೋಪಾಧ್ಯಾಯರು, ಫ್ರೆಡ್ ಹಾರ್ವೆ, ಉದ್ಯಮಿ ವಿಕ್ರಮ ಸಾರಾಭಾಯಿ, ವಿಜ್ಞಾನಿ ಎಚ್.ಜೆ. ಭಾಭಾ, ಸಾಹಿತಿ ದೇವುಡು ನರಸಿಂಹಶಾಸ್ತ್ರಿ, ವಿ. ಸೀತಾರಾಮಯ್ಯ, ಕಲಾರಸಿಕ ಜೇಮ್ಸ್ ಕಸಿನ್ಸ್ ಮತ್ತು ಅವರ ಪತ್ನಿ ಮಾರ್ಗರೆಟ್ ಕಸಿನ್ಸ್, ದಂತವೈದ್ಯ ಜೆ.ಎಂ. ಫೆರ್ನಾಂಡಿಸ್, ಹೋಟೆಲ್ ಮಾಲೀಕರು ಶ್ಯಾಮಲಾಲ್ ಮೊದಲಾದವರು ಅವರ ದಿನಚರಿಯ ಹಾಳೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾರೆ. ಇವರೆಲ್ಲರ ಬಗ್ಗೆ ಅವರು ದಿಟವಾದ ಪ್ರೀತಿಯಿಂದ ನಡೆದುಕೊಂಡರು.

ಕಮಲಾದೇವಿಯವರಿಗೆ, ಫ್ರೆಡ್ ಹಾರ್ವೆಗೆ, 'ಟೈಗರ್' ವರದಾಚಾರ್ಯರಿಗೆ, ಸಿ. ಆನಂದರಾಯರಿಗೆ, ಕರ್ನಲ್ ಸುಬ್ರಹ್ಮಣ್ಯರಾಜೇ ಅರಸಿನವರಿಗೆ ಅವರು ಬರೆದಿರುವ ಪತ್ರಗಳಲ್ಲಿ ಅವರ ಹೃದಯವಂತಿಕೆಯ ಹೊನಲನ್ನು ಗುರುತಿಸಬಹುದು.

ಸ್ನೇಹಿತರಿರಲಿ, ಪರಿಚಿತರಾದವರೊಡನೆಯೂ ಅವರು ವಿಶ್ವಾಸದಿಂದಲೇ ವರ್ತಿಸುವರು. ಮನೆಕಟ್ಟುವ ತಮ್ಮಯ್ಯನಾಗಲಿ, ಕಂಟ್ರಾಕ್ಟರ್ ಸಿದ್ದಪ್ಪನಾಗಲಿ, ಹಾಲು ಮಾರುವ ಹನುಮಂತನಾಗಲಿ, ಮೊದಲು ಹೋಟೆಲು ಮಾಣಿಯಾಗಿದ್ದ ನರಸಿಂಹನಾಗಲಿ, ದರ್ಜಿಯಾದ ಮುನ್ನೂರಾವ್ ಆಗಲಿ, ನೆರೆಮನೆಯ ಕೆಲಸದಾಳು ತಿಮ್ಮನಾಗಲಿ ಸ್ಟುಡಿಯೋಗೆ ಬಂದರೆ ಪ್ರೀತಿಯಿಂದ ಬರಮಾಡಿಕೊಂಡು ತಮ್ಮ ಕಲಾಕೃತಿಗಳನ್ನೆಲ್ಲ ತೋರಿಸುವರು. ಗರ್ವವಾಗಲಿ, ಠೇಂಕಾರವಾಗಲಿ ಅವರಲ್ಲಿ ಕಾಣುತ್ತಿರಲಿಲ್ಲ. ತಮ್ಮ ಸ್ನೇಹಿತರು, ಪರಿಚಿತರು, ಪ್ರತಿಷ್ಠಿತವ್ಯಕ್ತಿಗಳೆಂದು ಹೆಚ್ಚಿನ ಆದರವೇನಿಲ್ಲ, ಜನಸಾಮಾನ್ಯರೆಂದು ಅಸಡ್ಡೆಯೇನಿಲ್ಲ. ಯಾರಿಂದಲೂ ತಮಗೆ ಆಗಬೇಕಾದುದೇನು ಇರದೆಂಬ ನಂಬಿಕೆ ಬೇರೂರಿರುವಾಗ ಪಕ್ಷಪಾತವೇಕೆ? ಪರಿಚಿತರಲ್ಲೂ ಅವರ ಆದರವನ್ನು ಸಂಪೂರ್ಣವಾಗಿ ಪಡೆದುಕೊಳ್ಳದವರಿದ್ದರು. ಅವರ ವಿಚಾರದಲ್ಲಿಯೂ ಸಂಯಮದಿಂದ, ಅಭಿಮಾನದಿಂದಲೆ ವರ್ತಿಸುವರು.

ಇತರರು ತಮ್ಮಿಂದ ನೆರವನ್ನು ಬಯಸಿದರೆ ಎಂದೂ ನಿರಾಕರಿಸುತ್ತಿರಲಿಲ್ಲ. ಅವರು ಮೈಸೂರಿನಲ್ಲಿದ್ದಾಗ, ಸಂಗೀತಶಾಸ್ತ್ರವಿಶಾರದ ಕೆ. ವಾಸುದೇವಾಚಾರ್ಯರು ಆಸ್ಥಾನ ವಿದ್ವಾಂಸರಾಗಿದ್ದರೂ ಇನ್ನೂ ಅಷ್ಟು ಪ್ರಸಿದ್ಧಿಗೆ ಬಂದಿರಲಿಲ್ಲ; ಶಾಸ್ತ್ರಪಾಂಡಿತ್ಯವೂ ಅಷ್ಟಾಗಿ ಇರಲಿಲ್ಲ. ಮಹಾರಾಜರ ಗಮನವನ್ನು ಸೆಳೆಯಬೇಕೆಂಬ ಹಂಬಲವೇನೊ ಅವರಿಗಿದ್ದಿತು. ಮಹಾರಾಜರು ಒಮ್ಮೆ ಯಾವುದೋ ಸಂದರ್ಭದಲ್ಲಿ, ಇಂಥ ವೇಳೆಯಲ್ಲಿ ಇಂಥ ರಾಗವನ್ನು ಹಾಡಬೇಕೆಂದು ಶಾಸ್ತ್ರ ವಿಧಿಸುತ್ತದೆಯೇ? ಎಂದು ಆಸ್ಥಾನದ ಸಂಗೀತ ವಿದ್ವಾಂಸರನ್ನು ಕೇಳಿದಾಗ, ವಾಸುದೇವಾಚಾರ್ಯರು ಸಂಗೀತಶಾಸ್ತ್ರವನ್ನು ಚೆನ್ನಾಗಿ ಬಲ್ಲವರೆಂದು ಆಗಲೆ ಹೆಸರಾಗಿದ್ದ ವೆಂಕಟಪ್ಪನ ಬಳಿ ಬಂದು ರಾಗಗಳ, ಅವುಗಳಿಗೆ ತಕ್ಕ ಸಮಯನಿರ್ದೇಶನದ ಪಟ್ಟಿಯನ್ನು ಸಿದ್ಧಪಡಿಸಿಕೊಡುವಂತೆ ಕೇಳಿಕೊಂಡರು. ವೆಂಕಟಮಖಿಯ ಗ್ರಂಥ, ಶಾರ್ಙ್ಗದೇವನ ಗ್ರಂಥ ವಾಸುದೇವಾಚಾರ್ಯರಿಗೆ ಆ ಕಾಲಕ್ಕೆ ತಿಳಿದಿರಲಿಲ್ಲವಂತೆ (ಹೀಗೆ ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ, 1922ರ ಮಾರ್ಚ್ ಹತ್ತರಂದು). ವೆಂಕಟಪ್ಪ ಆಗಲೆಂದು ಒಪ್ಪಿ, ಶ್ರಮವಹಿಸಿ ವೆಂಕಟಮಖಿ ಹೇಳುವ ರಾಗಗಳ ಮತ್ತು ಅವುಗಳಿಗೆ ಸೂಕ್ತವಾದ ವೇಳೆಗಳ ಪಟ್ಟಿಯನ್ನೂ, ಶಾರ್ಙ್ಗದೇವ ಹೇಳುವ ಹಿಂದೂಸ್ಥಾನೀ ರಾಗಗಳ ಇನ್ನೊಂದು ಅಂಥದೆ ಪಟ್ಟಿಯನ್ನೂ, 'ಸಂಗೀತರತ್ನಾಕರ'ವನ್ನು ಬರೆದ ಶಾರ್ಙ್ಗದೇವನ ವಿಚಾರವಾಗಿ ಒಂದು ಟಿಪ್ಪಣಿಯನ್ನೂ ಸಿದ್ಧಪಡಿಸಿ ವಾಸುದೇವಾಚಾರ್ಯರಿಗೆ ಕೊಟ್ಟರು. ನಾಲ್ಕುದಿನಗಳ ನಂತರ ವಾಸುದೇವಾಚಾರ್ಯರು ತಮ್ಮನ್ನು ಕಂಡು ಕೃತಜ್ಞತೆ ಸಲ್ಲಿಸಿದಾಗ "ಇವರು ಮಹಾರಾಜರ ಗಮನಕ್ಕೆ ಬರಲು ನನ್ನ ಕೈಲಾದುದನ್ನು ಮಾಡಿದೆ ಅಷ್ಟೆ, ಹೆಚ್ಚೇನೂ ಇಲ್ಲ" ಎಂದು ವೆಂಕಟಪ್ಪ ತಮ್ಮ ದಿನಚರಿಯಲ್ಲಿ ಕಾಣಿಸಿದ್ದಾರೆ. ವಾಸುದೇವಾಚಾರ್ಯರು ಮಹಾರಾಜರಿಗೆ ಒಪ್ಪಿಸಿದ ಮಾಹಿತಿಗಳನ್ನು

ವೆಂಕಟಪ್ಪ ಸಿದ್ಧಪಡಿಸಿಕೊಟ್ಟರು ಎಂಬುದು ಅವರ ಡೈರಿಯಿಂದ ತಿಳಿಯಬೇಕೇ ವಿನಾ ವೆಂಕಟಪ್ಪ ಯಾರೆದುರಾದರೂ ಇದನ್ನು ಹೇಳಲಿಲ್ಲ; ಅವರ ಡೈರಿಯನ್ನು ಅವರು ಬದುಕಿರುವವರೆಗೂ ಯಾರೂ ನೋಡುವ ಹಾಗೂ ಇರಲಿಲ್ಲ.

ತಮ್ಮ ಮನೆಯಲ್ಲಿ ಮರಗೆಲಸ ಮಾಡುತ್ತಿದ್ದ ಗುರುಮೂರ್ತಪ್ಪನಿಗೆ ತಮ್ಮನ್ನು ಕಾಡಿದಂಥದೆ ಸಂಧಿವಾತ ಬೇನೆ ಕಾಣಿಸಿಕೊಂಡಾಗ ಅವರೆ ಆತನನ್ನು ದಿನವೂ 'ಎಲೆಕ್ಟ್ರೋತೆರಪಿ' ಮತ್ತು 'ಇನ್‌ಫ್ರ-ರೆಡ್-ರೇ ತೆರಪಿ'ಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು (1943ರ ಮೇ ತಿಂಗಳಿನಲ್ಲಿ). ಹೀಗೆಯೇ ಚಿನಿವಾರ ಪುಟ್ಟಣ್ಣರಾಜು, ಮೃದಂಗ ವಿದ್ವಾನ್ ಮೂಗಯ್ಯ (ಪುಟ್ಟಸ್ವಾಮಯ್ಯ), ನೆರೆಮನೆಯ ಊಳಿಗದ ತಿಮ್ಮಯ್ಯ ಮೊದಲಾದವರಿಗೆಲ್ಲ ನೆರವಾದ ನಿದರ್ಶನಗಳಿವೆ. ಮೈಸೂರಿನಲ್ಲಿ ಮನೆಗೆ ಆಗಾಗ ಬರುತ್ತಿದ್ದ ದೂರದ ಬಡ ನೆಂಟ ಕಿಟ್ಟ, ತನ್ನ ಪ್ರಯೋಜನಕ್ಕಾಗಿ ಕ್ಲೋಸ್‌ಪೇಟೆಯ ಶ್ರೀಮಂತವರ್ತಕರೊಬ್ಬರ ಭಾವಚಿತ್ರವನ್ನು ದೊಡ್ಡದುಮಾಡುವ ಕೆಲಸವನ್ನು ಒಪ್ಪಿಕೊಂಡು ಬಂದಾಗ, ಅವನಿಗಾಗಿ ವೆಂಕಟಪ್ಪ ಈ ಕೆಲಸವನ್ನು ಮಾಡಿಕೊಡಲು ಸಮ್ಮತಿಸಿದರು (1920ರ ಜೂನ್ ಹನ್ನೊಂದರಂದು). ವೆಂಕಟಪ್ಪ ಅಂಥ ಕೆಲಸಗಳನ್ನು ಕೈಗೊಳ್ಳುತ್ತಲೇ ಇರಲಿಲ್ಲ; ಆದರೆ ಕಿಟ್ಟನಿಗೆ ಆ ಶ್ರೀಮಂತರಿಂದ ಅಲ್ಪಸ್ವಲ್ಪ ಉಪಕಾರವಾದೀತೆಂದು ಬಗೆದು ಮಾಡಿಕೊಟ್ಟರು.

ಉತ್ತರ ಭಾರತದ ಸಂಗೀತ ಕ್ಷೇತ್ರದಲ್ಲಿ ಈಗ ಸುಪ್ರಸಿದ್ಧರಾಗಿರುವ ಪ್ರೊ|| ಎಂ.ಆರ್. ಗೌತಮರು 1954ರ ವೇಳೆಗೆ ಇನ್ನೂ ಬೆಂಗಳೂರಲ್ಲೆ ಇದ್ದು ಪ್ರಖ್ಯಾತಿ ಪಡೆದಿರಲಿಲ್ಲ. ಮಲ್ಲೇಶ್ವರದಲ್ಲೆ ವಾಸಮಾಡುತ್ತಿದ್ದ ಅವರು ವೆಂಕಟಪ್ಪನಿಗೆ ಪರಿಚಿತರು. ಒಮ್ಮೆ (1954ರ ಫೆಬ್ರುವರಿ ಇಪ್ಪತ್ತನಾಲ್ಕರಂದು) ಗೌತಮರು ರಷ್ಯಾದೇಶದ ಕಲಾವಿದನೊಬ್ಬನನ್ನು ಭೇಟಿಯಾದರು; ಆತ ವೆಂಕಟಪ್ಪನ ಚಿತ್ರಗಳನ್ನು ನೋಡಬಯಸಿದರು. ಗೌತಮರು ವೆಂಕಟಪ್ಪನ ಸ್ಟುಡಿಯೋಗೆ ಆತನನ್ನು ಕರೆದುಕೊಂಡು ಹೋಗಲು ಒಪ್ಪಿದರು. ವೆಂಕಟಪ್ಪನವರನ್ನು ಭೇಟಿಯಾಗಿ ಆ ದಿನ ಸಂಜೆ ನಾಲ್ಕು ಗಂಟೆಗೆ ಆ ಕಲಾವಿದರನ್ನು ಕರೆದುಕೊಂಡು ಬರಲೆ ಎಂದು ಕೇಳಿದರು. ವೆಂಕಟಪ್ಪ, "ಯಾರಾಗಲಿ ತಾವೇ ಬಂದು ನನ್ನ ಕಲಾಕೃತಿಗಳನ್ನು ನೋಡಬಯಸಿದರೆ ಮಾತ್ರ ನಾನು ತೋರಿಸುತ್ತೇನೆ. ಹೀಗೆ ಬೇರೆಯವರ ಮೂಲಕ ಹೇಳಿಕಳುಹಿಸಿದರೆ ಅಂಥವರನ್ನು ಆದರದಿಂದ ಬರಮಾಡಿ ಕೊಳ್ಳುವುದು ನನ್ನ ನಿಯಮಕ್ಕೆ ವಿರುದ್ಧ. ಆದರೂ ನೀವು ಒಪ್ಪಿಕೊಂಡು ಬಂದಿದ್ದೀರಿ, ಕರೆದುಕೊಂಡು ಬನ್ನಿ" ಎಂದು ಒಪ್ಪಿಕೊಂಡರು. ನಿಯಮಪಾಲನೆಗೆ ಎಷ್ಟು ಕಳಕಳಿಯಿದ್ದಿತೊ ಅಷ್ಟೇ ಸೌಜನ್ಯವೂ ಅವರಲ್ಲಿದ್ದಿತು ಎಂಬುದಕ್ಕೆ ನಿದರ್ಶನ ಇದು.

ಆದರೆ ಇವಕ್ಕೆಲ್ಲ ವಿರುದ್ಧವೆನ್ನಬಹುದಾದ ನಿದರ್ಶನಗಳೂ ಹಲವಿದ್ದವು. ಅವರ ಸ್ವಭಾವದಲ್ಲಿ ವಿರೋಧಾಭಾಸಗಳು ಅಪೂರ್ವವೇನಲ್ಲ. ಅವರ ವ್ಯಕ್ತಿತ್ವ ದಿಟವಾಗಿ ಒಂದು ಒಗಟು. ನೆಂಟರಿಂದ ದೂರವಿದ್ದುದು ದಿಟ. ಮಲ್ಲೇಶ್ವರದಲ್ಲೆ ಹತ್ತಿರವೆ ಇರುತ್ತಿದ್ದ ಒಬ್ಬಳೆ ಸೋದರಿಯ ಮನೆಗೂ ಅವರು ಹೋಗುತ್ತಿರಲಿಲ್ಲ. ಆಕೆಯೆ ಕರುಳು ತಡೆಯದೆ ಒಮ್ಮೊಮ್ಮೆ ವೆಂಕಟಪ್ಪನ ಮನೆಗೆ ಬಂದು ನೋಡಿಕೊಂಡು ಹೋಗುವರು; ಬಂದಾಗ ಏನಾದರೂ

ತಿನಿಸನ್ನು ತಂದುಕೊಡುವರು. ಆದರೆ ಆಕೆಯ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದಾಗ ಆ ಸುದ್ದಿ ಕೇಳಿ ವೆಂಕಟಪ್ಪ ಆಕೆಯ ಮನೆಗೆ ಹೋಗಿ ಆಕೆಯ ಆರೋಗ್ಯ ವಿಚಾರಿಸಿಕೊಂಡು ಬಂದರು, ತಮಗೆ ತಿಳಿದ ವೈದ್ಯವನ್ನೂ ಸೂಚಿಸಿದರು. ತಾವು ಹಾಸಿಗೆ ಹಿಡಿದಾಗ ಆಕೆ ಬಂದುದನ್ನು ವೆಂಕಟಪ್ಪ ತಮ್ಮ ಡೈರಿಯಲ್ಲಿ ಮಮತೆಯಿಂದ ಗುರುತಿಸಿದ್ದಾರೆ. ಹೀಗೆ ಮನುಷ್ಯಸಹಜವಾದ ವಿಶ್ವಾಸ ಅವರಲ್ಲಿ ಇರಲಿಲ್ಲವೆಂದಲ್ಲ, ಅದನ್ನು ತೋರ್ಪಡಿಸುತ್ತಿರಲಿಲ್ಲ ಅಷ್ಟೆ; ಕಾರಣವೇನೊ ತಿಳಿಯದು.

ಅವರ ಬದುಕಿನಲ್ಲಿ ಬಾಲ್ಯ, ತಾರುಣ್ಯಗಳನ್ನು ಹೇಗೆ ಕಳೆದರೊ ತಿಳಿದುಬರುವುದಿಲ್ಲ. ಅವರ ತಂದೆ-ತಾಯಿಯರ ವಿಚಾರವೂ ಏನೂ ಗೊತ್ತಾಗುವುದಿಲ್ಲ. ಚಿಕ್ಕಂದಿನ ಅನುಭವಗಳು ಏನೊ ಅವುಗಳ ಪ್ರಭಾವ ಇವರ ಮೇಲೆ ಹೇಗೆ ಮೂಡಿಕೊಂಡುಬಂದಿತೊ ತಿಳಿಯಲಾರೆವು. ಆದರೆ ನೆಂಟರಿಂದ ದೂರವಾಗಿದ್ದುದು, ನೆಂಟರನ್ನು ಹತ್ತಿರ ಸೇರಿಸದೆ ಇದ್ದುದು, ಮದುವೆಯಾಗದೆ ಒಂಟಿಯಾಗಿ ಉಳಿದುದು, ವಿಷಯಸುಖಗಳಿಗೆ ಬೆನ್ನು ತಿರುಗಿಸಿ ನಿಂತುದು, ನೆರೆಯವರೊಂದಿಗೆ ಹಗರಣದಲ್ಲಿ ತೊಡಗುವುದು, ಸಣ್ಣ ಕಾರಣಗಳಿಗೆ ಸ್ನೇಹವನ್ನೇ ತೊರೆಯುವುದು, ಇತರರ ಲೋಪದೋಷಗಳನ್ನು ಸಹಿಸದೆ ಇದ್ದುದು, ಕಲೆಗಾಗಿ ತಮ್ಮ ಇಡೀ ಬಾಳನ್ನು ಮುಡಿಪಾಗಿಟ್ಟುದು ಇವೆಲ್ಲವನ್ನೂ ಗಮನಿಸಿದಾಗ ಅವರ ಚಿಕ್ಕಂದಿನ ಅನುಭವಗಳು ಕಹಿಯಾಗಿದ್ದುವೊ ಎಂಬ ಸಂದೇಹ ಒದಗುತ್ತದೆ. ಆದರೆ ಸಂದೇಹದ ಪರಿಹಾರಕ್ಕೆ ಯಾವ ದಾರಿಯೂ ಇಲ್ಲವಾಗಿದೆ.

ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಅವರು ಹಲವು ಕಹಿಯಾದ ಅನುಭವಗಳನ್ನು ಪಡೆದರು; ಅವನ್ನೆಲ್ಲ ತಮ್ಮ ಡೈರಿಯಲ್ಲಿ ಕಾಣಿಸಿಯೂ ಇದ್ದಾರೆ. ಆದರೆ ಇವುಗಳಲ್ಲಿ ಹಲವು ಸಾಮಾನ್ಯವಾಗಿ ಎಲ್ಲರಿಗೂ ಒದಗುವಂಥವೆ, ಯಾರೂ ಅವುಗಳ ವಿಚಾರವಾಗಿ ಅಷ್ಟಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ವೆಂಕಟಪ್ಪನವರ ಕಣ್ಣಿಗೆ ಮಾತ್ರ ಅವು ದೊಡ್ಡದಾಗಿ ಕಂಡವು. ವೀಣೆಯನ್ನು ಮಾಡುವೆನೆಂದು ಹೇಳಿ ವರ್ಷವಾದರೂ ಮಾಡಿಕೊಡದಿದ್ದ ವೀಣೆ ರುದ್ರಪ್ಪನ ವಿಚಾರ ಬಂದಿತಷ್ಟೆ. ಅವನನ್ನು ಗುರುದ್ರೋಹಿಯೆಂದು ಕರೆದು ಆ ವಿಶೇಷಣವನ್ನು ಅವನ ಹೆಸರಿನೊಂದಿಗೆ ಸೇರಿಸಿ ವೀಣೆಯ ಮೇಲೆ ಬರೆದಿಟ್ಟುದು ಒಂದು ನಿದರ್ಶನ. ಬೇರೆ ಯಾರು ಹೀಗೆ ಮಾಡಿಯಾರು? ಆತ ಮಾಡಿದ ವೀಣೆಗೆ 'ದಗಾ ವೀಣೆ'ಯೆಂದೆ ಹೆಸರಿಡುವುದು ಎಲ್ಲಾದರೂ ಉಂಟೆ? ಹಲವು ವರ್ಷಗಳ ಮಿತ್ರರು (ಮೈಸೂರಿನಲ್ಲಿರುವಾಗ ಆಪ್ತರೂ ಹೌದು), ಸಿ. ಆನಂದರಾಯರು ತೀರಿಕೊಂಡಾಗ ಡೈರಿಯಲ್ಲಿ (1952ರ ಏಪ್ರಿಲ್ ಆರರಂದು) "ನನ್ನ ಮಿತ್ರದ್ರೋಹಿಗಳಲ್ಲೊಬ್ಬರು ತೀರಿಕೊಂಡರು" ಎಂದು ಕಾಣಿಸಬಹುದೆ? ಯಾವುದೋ ಅಲ್ಪಕಾರಣಕ್ಕಾಗಿ (ಹೇಳಿದ ಸಮಯಕ್ಕೆ ಸರಿಯಾಗಿ ವೀಣೆ ಮಾಡಿಕೊಡಲಿಲ್ಲವೆಂದು) ವೀಣೆ ರುದ್ರಪ್ಪ 'ಗುರುದ್ರೋಹಿ' ಯಾದಂತೆ ಆನಂದರಾಯರೂ ಇನ್ನೊಂದು ಅಷ್ಟೇ ಅಲ್ಪ ಕಾರಣಕ್ಕೆ 'ಮಿತ್ರ ದ್ರೋಹಿ' ಯಾದರೆಂದು ತೋರುತ್ತದೆ! 1948ರ ಜನವರಿ ತಿಂಗಳಲ್ಲಿ ಇವರ ಕಲಾಕೃತಿಗಳ ಪ್ರದರ್ಶನ ನಡೆದಾಗ, ಮಲ್ಲೇಶ್ವರದ ಎಂ.ಆರ್. ಶ್ರೀಪತಿರಾವ್ (ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದವರು; ಎಂ.ಎ., ಬಿ.ಟಿ) ಎಂಬ ಸಭ್ಯರೊಬ್ಬರ ಕಾಲು ತಾಕಿ ವೆಂಕಟಪ್ಪನವರ

ಎಲೆಕ್ಟ್ರೋಕಾಪರ್ ಡಿಪಾಸಿಟ್ ಕ್ರಮದಲ್ಲಿ ಮಾಡಿದ್ದ ಲೋಹ ಫಲಕವೊಂದು ಆಕಸ್ಮಿಕವಾಗಿ ಒಡೆದುಹೋಯಿತು. ಮರುದಿನವೇ ಅವರು ತುಂಬ ನೊಂದುಕೊಂಡು, ಪಶ್ಚಾತ್ತಾಪ ವ್ಯಕ್ತಪಡಿಸಿ, ಕಲಾವಿದರ ಕ್ಷಮೆ ಬೇಡಿ, ದುಗುಡ ತುಂಬಿದ ಪತ್ರವೊಂದನ್ನು ಬರೆದರು. ಆ ಪತ್ರವನ್ನು ನಾನು ನೋಡಿದ್ದೇನೆ. ಅದು ರಾಜ್ಯಪತ್ರಾಗಾರದ ಸಂಗ್ರಹದಲ್ಲಿದೆ. ಅದರ ಒಕ್ಕಣೆ ಯಾರ ಮನಸ್ಸನ್ನಾದರೂ ಕರಗಿಸಬಲ್ಲದು. ಆದರೆ ವೆಂಕಟಪ್ಪ ಆ ಒಡೆದ ಫಲಕವನ್ನು ತಮ್ಮ ಸ್ಟುಡಿಯೋನಲ್ಲಿರಿಸಿ ಅದರ ಮೇಲೆ "ವಿಶ್ವವಿದ್ಯಾನಿಲಯದ ಎರಡು ಪದವಿಗಳನ್ನು ಪಡೆದ ವಿದ್ಯಾವಂತರೊಬ್ಬರು ಮಾಡಿದ ಕೆಲಸ'' ಎಂಬ ಬರಹವನ್ನು ಕಾಣಿಸಿದ್ದರು! ಇದಕ್ಕೇನನ್ನಬೇಕು?

ತಾತಾವಿಜ್ಞಾನ ಮಂದಿರದಲ್ಲಿ ಲ್ಯಾಬೊರೆಟರಿ ಅಸಿಸ್ಟೆಂಟ್ ಆಗಿ ಕೆಲಸಮಾಡುತ್ತಿದ್ದ ಎ.ಆರ್. ಶ್ರೀನಿವಾಸನ್ ಎಂಬುವರು ವೆಂಕಟಪ್ಪನ ಬಳಿ ವೀಣೆಯನ್ನು ಕಲಿಯುತ್ತಿದ್ದರು; 1957ರ ವೇಳೆಗೆ. ಒಂದು ದಿನ ರಾತ್ರಿ ಎಂಟೂವರೆ ಗಂಟೆಗೆ ಅವರನ್ನು ಪಾಠಕ್ಕೆ ಬರಲು ಹೇಳಿದ್ದರು. ಶ್ರೀನಿವಾಸನ್ ಬಂದಾಗ ಎಂಟು ಗಂಟೆ ಐವತ್ತು ನಿಮಿಷಗಳಾಗಿದ್ದುವು. ತಡವೇಕೆಂದು ಕೇಳಿದಾಗ ಶ್ರೀನಿವಾಸನ್ "ತಾವು ಎಂಟೂ ಮುಕ್ಕಾಲು ಗಂಟೆಗೆ ಬರಹೇಳಿದ್ದಿರಲ್ಲ?'' ಎಂದರು. ವೆಂಕಟಪ್ಪನಿಗೆ ತಾಳ್ಮೆ ತಪ್ಪಿತು. ಅವರನ್ನು ಶುದ್ಧ ಸುಳ್ಳುಗಾರನೆಂದು ಜರಿದು,ಸುಳ್ಳು ಹೇಳಬಾರದೆಂದೂ ಪ್ರಾಮಾಣಿಕವಾಗಿರಬೇಕೆಂದೂ ಸುದೀರ್ಘವಾದ ಉಪನ್ಯಾಸ ಮಾಡಿದರು. ಇದನ್ನು ತಮ್ಮ ಡೈರಿಯಲ್ಲೂ ಬರೆದುಕೊಂಡಿದ್ದಾರೆ; ಅವರಿಂದಲೆ ಈ ಪ್ರಸಂಗದ ವಿಚಾರ ಕೇಳಿಯೂ ಇದ್ದೇನೆ. ಶ್ರೀನಿವಾಸನ್ ಮತ್ತೆ ಮತ್ತೆ ಬಂದರೂ ವೆಂಕಟಪ್ಪ ಅವರಿಗೆ ಬೇಕೆಂದೆ ಪಾಠ ಹೇಳುವುದನ್ನು ಕಡಮೆಮಾಡಿದರು; ಒಂದು ತಿಂಗಳ ನಂತರ ನಿಲ್ಲಿಸಿಯೂ ಬಿಟ್ಟರು. ಸಣ್ಣ ಪ್ರಸಂಗವೊಂದನ್ನು ಔಚಿತ್ಯ ಮೀರಿ ದೊಡ್ಡದು ಮಾಡಿದುದಕ್ಕೆ ಇದೊಂದು ನಿದರ್ಶನ; ಅವರ ವ್ಯಕ್ತಿತ್ವದಲ್ಲಿದ್ದ ಕೊಂಕಿಗೂ ಉದಾಹರಣೆ.

ಅಪರಿಗ್ರಹವ್ರತವೇನೊ ಸರಿಯೆ. ಆದರೆ ಅದಕ್ಕೊಂದು ಮಿತಿ ಇರಬೇಡವೆ ಎನಿಸುತ್ತದೆ. ಅವರ ಡೈರಿಯಲ್ಲೆ ದಾಖಲಾಗಿರುವ ಒಂದು ಪ್ರಸಂಗ. 1950ರಲ್ಲಿ ವಿನಾಯಕ ಚತುರ್ಥಿ ದಿನ ವೆಂಕಟಪ್ಪನ ಮನೆಗೆ ಅವರ ಸೋದರಿ ಬಂದು ಹಬ್ಬಕ್ಕೆಂದು ಮನೆಯಲ್ಲಿ ಮಾಡಿದ್ದ ತಿಂಡಿಗಳನ್ನು ತಂದುಕೊಟ್ಟರು. ಒಬ್ಬನೆ ಸೋದರ ಹೀಗೆ ಒಂಟಿಯಾಗಿರುವನಲ್ಲ ಎಂಬ ಕರುಳು ಆಕೆಯದು. ಆದರೆ ವೆಂಕಟಪ್ಪ ಆಕೆ ತಂದ ತಿಂಡಿಗೆ ಪ್ರತಿಯಾಗಿ ಒಂದು ರೂಪಾಯಿಯನ್ನು ಕೊಟ್ಟು ಕಳುಹಿಸುವುದೆ? ಮತ್ತೊಮ್ಮೆ ಬಂದು ಸೋದರನಿಗೆ ಪ್ರಿಯವೆನಿಸಿದ ಹೇರಳೆ ಹಣ್ಣಿನ ಉಪ್ಪಿನಕಾಯಿ ಹಾಕಿದ ಜಾಡಿಯೊಂದನ್ನು ತಂದು ಕೊಟ್ಟರೆ, ಈ ಅಪರಿಗ್ರಹವ್ರತಿ ಅದಕ್ಕೆ ಬದಲಾಗಿ ಮೂರೂಕಾಲು ಸೇರು ಗೋಧಿಯನ್ನು ತಂದು ಮುಂದಿಟ್ಟರು! ಆಕೆಗೆ ಇದರಿಂದ ಆಗಿರಬಹುದಾದ ಅಳಲನ್ನು ಇವರು ಅರಿತುಕೊಂಡರೆ? ಅದರ ಕಡೆ ಗಮನವಾದರೂ ಇದ್ದಿತೊ?

೪

ಬ್ರಹ್ಮಚರ್ಯ, ಅಪರಿಗ್ರಹವ್ರತ, ಕಲೆಯ ತಪಸ್ಸು ಎಂದಮಾತ್ರಕ್ಕೆ ಅವರಿಗೆ ಪ್ರಾಪಂಚಿಕ ವಿಚಾರಗಳಲ್ಲೆಲ್ಲ ವಿರಕ್ತಿ ಎನ್ನುವಹಾಗಿಲ್ಲ . ಊಟ-ತಿಂಡಿಯ ನಚ್ಚು , ಉಡುಗೆಯ ಶಿಸ್ತು ,

ಚಲಚ್ಚಿತ್ರಗಳ ನೋಟ, ಹುಟ್ಟುಹಬ್ಬದ ಆಚರಣೆ, ಚೆಲುವಿನ ತಾಣಗಳಲ್ಲಿ ವಿಹಾರ ಮೊದಲಾದುವೆಲ್ಲ ಅವರಲ್ಲಿ ವಿಶೇಷವೆ. ಒಂಟಿಯಾಗಿಯೆ ಇರುತ್ತಿದ್ದರೂ ಬಗೆಬಗೆಯ, ರುಚಿಯಾದ ತಿಂಡಿ-ತಿನಿಸುಗಳನ್ನು ಮಾಡಿಕೊಳ್ಳುವರು. ಅವರ ಡೈರಿಯನ್ನು ನೋಡುವಾಗ ಅಡಿಗಡಿಗೆ ಶ್ಯಾವಿಗೆ ಪಾಯಸ, ಪೊಂಗಲು, ಲಡ್ಡು, ಖಿಚಡಿ, ತೌಡಿನ ಹುರಿಹಿಟ್ಟು ಮೊದಲಾದುವುಗಳ ಉಲ್ಲೇಖ ಬರುತ್ತದೆ. ಅವರು ಹೋಟೆಲಿನಲ್ಲೇ ಊಟಮಾಡುತ್ತಿದ್ದ ಕಾಲದಲ್ಲೂ, ಶುಚಿಯಿರದಿದ್ದರೆ, ಅನ್ನ ಬಿರುಸಾಗಿದ್ದರೆ, ಸಾರು ರುಚಿಯಾಗಿರದಿದ್ದರೆ ಒಡನೆಯೆ ಆ ಹೋಟೆಲನ್ನು ಬಿಟ್ಟು ಬೇರೆ ಹೋಟೆಲಿಗೆ ಹೋಗುವರು. ಮೈಸೂರಿನಲ್ಲಿರುವಾಗ ಕೃಷ್ಣಮಾಚಾರಿ ಕ್ಲಬ್ ಇವರಿಗೆ ಪ್ರಿಯವಾದ ತಾಣ. ಬೆಂಗಳೂರಿಗೆ ಬಂದ ಮೇಲೆ ಇವರ ಬಯಕೆಗೆ ತಕ್ಕಂತೆ, ಇವರ ಮನಸ್ಸು ಒಪ್ಪುವಂತೆ ತಿಂಡಿ-ತಿನಿಸುಗಳನ್ನು ಮಾಡಿಕೊಡುತ್ತಿದ್ದ 'ಚಾಮುಂಡೇಶ್ವರಿ ಭವನ' ಅವರಿಗೆ ತುಂಬ ಹಿಡಿಸಿತು. ತಮ್ಮ ಮುಪ್ಪಿನ ದಿನಗಳಲ್ಲಿ ಸಾಮಾನ್ಯವಾಗಿ ಇಲ್ಲೆ ಊಟ-ಉಪಚಾರ. ಅಲ್ಲಿ ಅವರಿಗೆ ಎಂದೂ ಆದರದ ಸ್ವಾಗತ, ವಿಶೇಷವಾದ ಮರ್ಯಾದೆ, ಉಪ್ಪು ಹಾಕದ ಪುಲ್ಕಗಳನ್ನು ಮಾಡಿಕೊಡುತ್ತಿದ್ದರು. ತಾವೂ ಮನೆಯಲ್ಲಿ ಬಗೆಬಗೆಯ ಲಡ್ಡುಗಳನ್ನು ಮಾಡುವರು. ಹಿಮಾಲಯ ಯಾತ್ರೆಯಲ್ಲಿಯೂ ಮೈಸೂರುಪಾಕನ್ನು ಮಾಡಿಕೊಂಡು ತಿಂದುದುಂಟು.

ಉಡುಗೆ ಸರಳವಾದರೂ ಮಲ್‌ಪಂಚೆಯೆ ಆಗಬೇಕು; ಜರಿಯಿಲ್ಲದ ಮಲ್‌ಬಟ್ಟೆಯ ರುಮಾಲು ಇರಬೇಕು. ಕತ್ತುಮುಚ್ಚುವ ಕೋಟು ಉತ್ತಮಮಟ್ಟದ ಬಟ್ಟೆಯದೇ ಆಗಿರಬೇಕು; ಹೊಲಿಗೆ, ಅಳತೆ ಅಚ್ಚುಕಟ್ಟಾಗಿರಬೇಕು. ಅವರ ಅಚ್ಚುಮೆಚ್ಚಿನ ದರ್ಜಿ ಮುನ್ನೂರಾವ್‌ಗೆ ಅವರ ಸ್ಟುಡಿಯೋದಲ್ಲಿ ಎಂದೂ ಆದರದ ಸ್ವಾಗತ. ಬಟ್ಟೆಗಳನ್ನು ತಾವೆ ಅಡಿಗಡಿಗೆ ಎಚ್ಚರಿಕೆಯಿಂದ ಒಗೆದು ಮಡಿ ಮಾಡಿಕೊಳ್ಳುವರು. ಉಣ್ಣೆಯ ಕೋಟು ಮಾತ್ರ ಅಗಸನಿಗೆ ಹೋಗಬೇಕು; ಅಗಸನು ರುಮಾಲನ್ನು ಇಸ್ತ್ರಿಮಾಡಿಕೊಡಬೇಕು. ದಿನವೂ ಮುಖಕ್ಷೌರವಾಗಬೇಕು; ವಾರಕ್ಕೊಮ್ಮೆ ತಲೆಯ ವಪನ. ಸ್ನಾನಕ್ಕೆ 'ಷವರ್‌ಬಾತಿ'ನ ವ್ಯವಸ್ಥೆಯಿದ್ದಿತು.

ಚಲಚ್ಚಿತ್ರಗಳನ್ನು ನೋಡುವುದೆಂದರೆ ಮೊದಲಿಂದ ಅವರಿಗೆ ಪ್ರಿಯವಾದ ಹವ್ಯಾಸವೆ. ಅದು ಬೆಂಗಳೂರಿಗೆ ಬಂದಮೇಲೆ ಹೆಚ್ಚಾಯಿತು. ಭಾಷೆ ಯಾವುದಾದರಿರಲಿ, ವಸ್ತು ಪೌರಾಣಿಕವೊ ಸಾಮಾಜಿಕವೊ ಶೈಕ್ಷಣಿಕವೊ ಏನಾದರಿರಲಿ, ಸ್ವಾರಸ್ಯ ಕಂಡುಬಂದರೆ ಮತ್ತೆ ಮತ್ತೆ ಹೋಗಿ ನೋಡುವರು. ಸಾಮಾನ್ಯವಾಗಿ ಇಂಗ್ಲಿಷ್ ಚಿತ್ರಗಳ ಮೇಲೆ ಒಲವು ಹೆಚ್ಚು. ತಮ್ಮ ಮೆಚ್ಚುಗೆಯನ್ನು ಸೂರೆಗೊಂಡ ಚಿತ್ರಗಳ ಹೆಗ್ಗಳಿಕೆಯನ್ನು ಕುರಿತು ಮಾತನಾಡುತ್ತಿದ್ದುದೂ ಉಂಟು; ಡೈರಿಯಲ್ಲೇನೊ ಉಲ್ಲೇಖ ಸರಿಯೆ ಸರಿ. 'ಸೀಸರ್ ಮತ್ತು ಕ್ಲಿಯೋಪಾತ್ರ', ಚಾರ್ಲಿ ಚಾಪ್ಲಿನ್ನನ 'ಮಾನ್ಸಿಯರ್ ನೆರ್ದೊ', 'ರೇಜರ್ಸ್ ಎಡ್ಜ್', 'ಹೋಲಿ ಯಿಯರ್ 1950', ವಾಲ್ಟ್ ಡಿಸ್ನಿಯ 'ಫಾಂಟಸಿಯ' ಮತ್ತು 'ಸ್ಟೋರಿ ಆಫ್ ರಾಬಿನ್‌ಹುಡ್', 'ವಾಟರ್ ಬೇಬೀಸ್', 'ಬೈಜು ಬಾವರಾ', 'ಹಾಕ್ ಆಫ್ ದಿ ವಿಲ್ಡರ್‌ನೆಸ್', 'ರಿವರ್ ಆಫ್ ನೊ ರಿಟರ್ನ್', '20,000 ಲೀಗ್ಸ್', ಎಂಜಿಎಂ ಅವರ 'ಲ್ಯಾಂಡ್ ಆಫ್ ಫೇರೋಸ್' ಮೊದಲಾದುವೆಲ್ಲ ಅವರ ಮನಮೆಚ್ಚಿದ ಚಿತ್ರಗಳು. ಒಂದೊಂದನ್ನು ನಾಲ್ಕೈದು ಬಾರಿ

ನೋಡಿಕೊಂಡು ಬಂದರು. ಸಾಮಾನ್ಯವಾಗಿ ಅವರು ರೆಕ್ಸ್, ನ್ಯೂ ಗ್ಲೋಬ್, ಲಿಬರ್ಟಿ, ನ್ಯೂ ಇಂಪೀರಿಯಲ್, ಸ್ವಸ್ತಿಕ್ ಚಿತ್ರಮಂದಿರಗಳಿಗೆ ಹೋಗುತ್ತಿದ್ದರು. ಚಿತ್ರ ನೋಡಿಬರುವುದು ಒಂಟಿಯಾಗಿಯೆ.

ಇನ್ನು ಅವರು ತಮ್ಮ ಹುಟ್ಟು ಹಬ್ಬದ ಆಚರಣೆಯಲ್ಲಿ ವಹಿಸುತ್ತಿದ್ದ ಆಸಕ್ತಿ ಮೊದಲೆ ಪ್ರಸ್ತಾಪಕ್ಕೆ ಬಂದಿದೆ. ವರ್ಷದಲ್ಲಿ ಅದೊಂದು ಸಂಭ್ರಮದ ದಿನ ಅವರಿಗೆ. ಸಾಮಾನ್ಯವಾಗಿ ಚಾಮುಂಡೇಶ್ವರಿ ಭವನದಲ್ಲಿ ಭೋಜನ ಕೂಟ; ಅದರ ಮಾಲೀಕ ಶ್ಯಾಮಲಾಲರ ಮೇಲ್ವಿಚಾರಣೆ, ವ್ಯವಸ್ಥೆ. ತಮ್ಮ ಸ್ನೇಹಿತರಿಗೆಲ್ಲ ಬರಹದ ಮೂಲಕ ಕರೆ. ಸುಮಾರು ಇಪ್ಪತ್ತು ಜನರಿಗೆ ನಡುಹಗಲಲ್ಲಿ ಚೊಕ್ಕ ಭೋಜನ. ಬಡಿಸುವ ಬಂದೊಂದು ಪದಾರ್ಥವೂ ಶುಚಿಯಾಗಿ, ರುಚಿಯಾಗಿ ಇರಬೇಕೆಂಬ ಆಸಕ್ತಿ. ತಾವು ಅರ್ಧ ಗಂಟೆ ಮುಂಚೆಯೇ ಬಂದಿದ್ದು ಆಹ್ವಾನಿತರನ್ನು ಬರಮಾಡಿಕೊಳ್ಳುವರು; ಅವರ ಊಟ ಮುಗಿದ ಮೇಲೆ, ತಾಂಬೂಲ ಕೊಟ್ಟು ಕಳುಹಿಸಿದ ಮೇಲೆ ತಮ್ಮ ಊಟ. ಊಟ ತೀರಿಸಿ ಭೋಜನ ಕೂಟಕ್ಕೆ ತಗುಲಿದ ವೆಚ್ಚವನ್ನು ಸಲ್ಲಿಸಿ, ಮನೆಗೆ ಹಿಂದಿರುಗುವರು. ಅವರ ಅರವತ್ತೊಂಬತ್ತನೆಯ ವರ್ಷದ ಹುಟ್ಟುಹಬ್ಬದಂದು (1955ರ ಜೂನ್ ಇಪ್ಪತ್ತೊಂದರಂದು) ನಡೆದ ಭೋಜನಕೂಟದಲ್ಲಿ ಎಸ್. ನಾರಾಯಣಪ್ಪ ಎಂಬುವರು (ಇವರು ಯಾರೆಂಬುದು ನನಗೆ ತಿಳಿಯದು) ವೆಂಕಟಪ್ಪನಿಗೆ ಅಭಿನಂದನೆಗಳನ್ನು ಹೇಳಿ ಹಾರವನ್ನು ಹಾಕಲು, ಫಲ ಸಮರ್ಪಣೆ ಮಾಡಲು ಮುಂದೆ ಬಂದರು; ಆದರೆ ವೆಂಕಟಪ್ಪ ತಮ್ಮ ನಿಯಮದಂತೆ ಅವನ್ನು ಸ್ವೀಕರಿಸಲಿಲ್ಲ ; ಪ್ರತಿಯಾಗಿ ವಂದನೆಗಳನ್ನೇನೊ ಸಲ್ಲಿಸಿದರು. ಮಲ್ಲೇಶ್ವರದಲ್ಲಿರುತ್ತಿದ್ದ ಪ್ಲಾಂಟರ್ಸ್ ಕಾಫೀ ಹೌಸಿನ ಮಾಲೀಕರು ಎಚ್.ಎಸ್. ನಾಗಪ್ಪಯ್ಯ ಹಂದೆ ಎಂಬುವರ ಪರಿಚಯವಾದಮೇಲೆ, ಅವರು ಮಾಡುತ್ತಿದ್ದ ಲಡ್ಡುಗಳ ರುಚಿ ಹತ್ತಿದ ಮೇಲೆ, ತಮ್ಮ ಹುಟ್ಟುಹಬ್ಬದ ಭೋಜನಕೂಟಗಳಲ್ಲಿ ಇವರಿಂದ ಲಡ್ಡುಗಳನ್ನು ಮಾಡಿಸಿ ತರಿಸುತ್ತಿದ್ದರು. ಆಹ್ವಾನಿತರು ಇವನ್ನು ತುಂಬ ಮೆಚ್ಚಿಕೊಳ್ಳುತ್ತಿದ್ದರು.

ಹೀಗೆ, ಬದುಕಿನ ಸ್ವಾರಸ್ಯಗಳನ್ನು ತಿರಸ್ಕರಿಸಿದವರಲ್ಲ ಅವರು. ತಮಗೆ ರುಚಿಸುವಂಥ ಉಪನ್ಯಾಸ, ಕವಿಸಮ್ಮೇಳನ ಮುಂತಾದ ಕಾರ್ಯಕ್ರಮಗಳಿಗೆ ಎಷ್ಟು ದೂರವಾಗಲಿ ಹೋಗುವರು. ಸಂಗೀತ ಕಚೇರಿಗಳಲ್ಲಂತೂ ತಪ್ಪದೆ ಹಾಜರಾಗುವರು. ಅವರಿಗೆ ಕರ್ಣಾಟಕ ಸಂಗೀತದಲ್ಲೆ ಹೆಚ್ಚಿನ ಪರಿಶ್ರಮ, ಒಲವು ಇದ್ದರೂ ಹಿಂದೂಸ್ಥಾನೀ ಸಂಗೀತವನ್ನೂ ಆಗಾಗ ಕೇಳುವರು. ಮೈಸೂರಿನಲ್ಲಿದ್ದಾಗ ಬಿಡಾರದ ಕೃಷ್ಣಪ್ಪನವರು, ಟೈಗರ್ ವರದಾಚಾರ್ಯರು, ಮುತ್ತಯ್ಯ ಭಾಗವತರು, ವಾಸುದೇವಾಚಾರ್ಯರು, ವೀಣೆ ಧನಮ್ಮಾಳ್ ಇವರ ಸಂಗೀತವೆಂದರೆ ಇವರಿಗೆ ಸೊಗಸು; ತಮ್ಮ ಗುರು ವೀಣೆ ಶೇಷಣ್ಣನವರದ್ದಂತೂ ಸರಿಯೆ ಸರಿ. ಅವರ ಮನೆಯಲ್ಲೆ ಮತ್ತೆ ಮತ್ತೆ ಸಂಗೀತಸಮಾರಾಧನೆ. ಬೆಂಗಳೂರಿಗೆ ಬಂದಮೇಲೆ ಸಂಗೀತ ಕಚೇರಿಗಳಿಗೆ ಹೋಗುವುದು ಬಹುಮಟ್ಟಿಗೆ ಕಡಮೆಯಾಯಿತೆನ್ನಿ. ಆದರೂ ತಾವು ಪಂಡಿತ ರವಿಶಂಕರ್, ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ ಮೊದಲಾದವರ ಕಚೇರಿಗಳಿಗೆ ಹೋಗಿ ಸಂತೋಷಪಟ್ಟುದನ್ನು ಡೈರಿಯಲ್ಲಿ ಕಾಣಿಸಿದ್ದಾರೆ. ಸಂಗೀತಗಾರರ ಸಂಪರ್ಕವನ್ನು ಉಳಿಸಿಕೊಂಡಿದ್ದುದೂ ಉಂಟು.

ತಾವೇ ವೀಣಾವಾದನದಲ್ಲಿ ನುರಿತವರು. ಬೆಂಗಳೂರಿನಲ್ಲಿ ಮನೆ ಕಟ್ಟಿದ ಹೊಸದರಲ್ಲಿ ರಾತ್ರಿ ಬೆಳದಿಂಗಳು ಅಂಗಳದಲ್ಲಿ ಚೆಲ್ಲಿರುವಾಗ ವೀಣೆಯನ್ನು ನುಡಿಸುತ್ತ ರಾಗಾಲಾಪನೆ ಮಾಡುತ್ತಿದ್ದರು. ವಾದ್ಯಗಳಿಗೆಂದೇ ಪ್ರತ್ಯೇಕ ಆವರಣವನ್ನೂ ಮನೆಯಲ್ಲಿ ಕಲ್ಪಿಸಿ ಕೊಂಡಿದ್ದರು. ಮೈಸೂರಿನಲ್ಲಿರುವಾಗ, ಬಿಡುವು ದೊರೆತು ಗಿರಿಧಾಮಗಳಿಗೆ ಹೋದಾಗ ವೀಣೆಯನ್ನೂ ತಮ್ಮೊಂದಿಗೆ ಒಯ್ಯುವ ವಾಡಿಕೆ. ಮೈಸೂರಿನಲ್ಲಿರುವಾಗ ದರಿಯಾ ದೌಲತ್‌ನಲ್ಲಿ ನಡೆಯುತ್ತಿದ್ದ ಟೆನಿಸ್ ಆಟದ ಕೊನೆಯ ದಿನದ ಪಂದ್ಯವನ್ನು ನೋಡಲೆಂದೆ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಹೋಗುತ್ತಿದ್ದುದೂ ಉಂಟು.

ಧರ್ಮದಲ್ಲಿ ಅವರಿಗೆ ಶ್ರದ್ಧೆಯಿದ್ದುದು ದಿಟ. ಆದರೆ ಅದನ್ನು ಮೇಲೇರಿಸಿಕೊಂಡು ಹೋದವರಲ್ಲ. ದಿನವೂ ಮುಂಜಾನೆ ಎದ್ದು ಸ್ನಾನಮಾಡಿ, ಸಂಧ್ಯಾವಂದನೆ ಮುಗಿಸುವರು, ದೇವರ ಸ್ತೋತ್ರಗಳನ್ನು ಹೇಳಿಕೊಳ್ಳುವರು. ಹೆಗಲಮೇಲೆ ಎಂದೂ ಜನಿವಾರ ಇದ್ದೇ ಇರುತ್ತಿತ್ತು. ಮತಾಚಾರದಂತೆ ಹಣೆಯ ಮೇಲೆ ನೀಟಾದ ಕೆಂಪುನಾಮ; ತಲೆಯ ಮೇಲೆ ಸಣ್ಣದಾದ ಶಿಖೆ. ಕುಲಾಚಾರದಂತೆ ವರ್ಷಂಪ್ರತಿ ಕುಲದೇವತೆಯಾದ ನಿಮಿಷಾಂಬಾದೇವಿಯ ವರ್ಧಂತ್ಯುತ್ಸವದ ದಿನ ಆರ್ಯ ಕ್ಷತ್ರಿಯ ಸೇವಾಸಂಘಕ್ಕೆ ಪೂಜೆಗೆಂದು ಹಣ್ಣು ಕಾಯಿ, ಹೂವು, ಹಣ ಕೊಟ್ಟು ಕಳುಹಿಸುವರು. ತಮ್ಮ ಕಲಾನಿರ್ಮಾಣದ ಎಲ್ಲ ಯಶಸ್ಸಿಗೂ ದೇವರ ದಯೆಯೇ ಕಾರಣವೆಂದು ದೃಢವಾಗಿ ನಂಬಿದ್ದರು. ಇದನ್ನು ತಮ್ಮ ಡೈರಿಯಲ್ಲಿ ಮತ್ತೆ ಮತ್ತೆ ಕಾಣಿಸಿದ್ದಾರೆ. ಒಬ್ಬರೇ ಇರುವರಾದರೂ ವರ್ಷದ ಉಪಾಕರ್ಮ, ಯುಗಾದಿ, ದೀಪಾವಳಿ, ಗಣೇಶಚೌತಿ, ರಾಮನವಮಿ ಮೊದಲಾದ ಹಬ್ಬಗಳನ್ನು ಲಘುವಾಗಿ ಆಚರಿಸುವರು; ಪೊಂಗಲು, ಪಾಯಸ ಮೊದಲಾದ ವಿಶೇಷ ಅಡುಗೆಯೂ ನಡೆಯುವುದು. ಆದರೆ ಇಷ್ಟನ್ನು ಮೀರಿ ಯಾವ ಆಚರಣೆಯಾಗಲಿ, ದಿನನಿತ್ಯ ಗುಡಿಗುಂಡಾರಗಳಿಗೆ ಹೋಗುವುದಾಗಲಿ, ಕರ್ಮಗಳಾಗಲಿ ಅವರ ಆಸಕ್ತಿಯನ್ನು ಸೆಳೆಯಲಿಲ್ಲ. 'ಗುರು ದ್ರೋಹಿ' ರುದ್ರಪ್ಪ ಮಾಡಲು ತೊಡಗಿ ಅರ್ಧದಲ್ಲಿ ನಿಲ್ಲಿಸಿದ್ದ 'ದಗವೀಣೆ'ಯನ್ನು ತಾವೇ ಕುಳಿತು ಪೂರಯಿಸಿದಮೇಲೆ, ಸಂಜೆ ಗಣೇಶನ ಗುಡಿಗೆ ಹೋಗಿ ಪೂಜೆ ಮಾಡಿಸಿ ಪ್ರಸಾದವಾಗಿ ದೊರೆತ ಕುಂಕುಮ, ವಿಭೂತಿ, ಪತ್ರೆಗಳನ್ನು ತಂದು ವೀಣೆಯ ಮೇಲಿರಿಸಿ, ಅನಂತರವೇ ಆ ವೀಣೆಯನ್ನು ನುಡಿಸ ಲಾರಂಭಿಸಿದರು (1944ರ ಫೆಬ್ರವರಿ ತಿಂಗಳಲ್ಲಿ), ಧರ್ಮಶ್ರದ್ಧೆ ಹೀಗೆ ಜನಸಾಮಾನ್ಯ ರಲ್ಲಿದ್ದಂತೆ ಇದ್ದಿತು, ಅಷ್ಟೆ.

ಇನ್ನು, ಜ್ಯೋತಿಷ್ಯದಲ್ಲಿ ಅವರಿಗೆ ಮೊದಮೊದಲು ತುಂಬ ನಂಬಿಕೆಯಿದ್ದಿತು. ಆ ಶಾಸ್ತ್ರವನ್ನು ಸ್ವಲ್ಪಮಟ್ಟಿಗೆ ಅಧ್ಯಯನಮಾಡಿಯೂಇದ್ದರು. ಅವರ ಸಂಗ್ರಹದಲ್ಲಿ 'ಉತ್ತರ ಕಲಾಮೃತ', 'ನಾಡಿಜ್ಯೋತಿಷ', 'ಪ್ರತ್ಯಕ್ಷ ಫಲ ಜ್ಯೋತಿಷ' ಮೊದಲಾದ ಪುಸ್ತಕಗಳೂ ಇದ್ದುವು. ಜ್ಯೋತಿಷ್ಯ ಬಲ್ಲ ಮಿತ್ರರೊಂದಿಗೆ ಇದರ ವಿಚಾರ ಚರ್ಚೆಮಾಡುತ್ತಿದ್ದರು. ಮುಖ್ಯವಾಗಿ ಅವರಿಗೆ ತಮ್ಮ ಜಾತಕ, ಅದರ ಫಲಗಳನ್ನು ಅರಿತುಕೊಳ್ಳಬೇಕೆಂಬ ಕುತೂಹಲವೆ. ಈ ಹವ್ಯಾಸ ಯಾವಾಗ ಮೊದಲಾಯಿತೆಂದು ಹೇಳುವುದು ಕಷ್ಟ. ಬಹುಶಃ ಇವರು ಮೈಸೂರಿನಲ್ಲಿದ್ದುಕೊಂಡು ಶೇಷಣ್ಣನವರ ಬಳಿ ವೀಣಾಭ್ಯಾಸ ಮಾಡುತ್ತಿರುವಾಗ,

1922-23ರ ಸುಮಾರಿಗೆ ಯಾವ ಚಿಕಿತ್ಸೆಗೂ ಬಗ್ಗದ ಕಣ್ಣಿನ ತೊಂದರೆಯನ್ನು ಅನುಭವಿಸಿದರು. ಆಗ ಶೇಷಣ್ಣನವರು ವೆಂಕಟಪ್ಪನ ಜಾತಕವನ್ನು ತರಿಸಿ ನೋಡಿ ಅಂಗಾರಕದೋಷವೆಂದು ತಿಳಿಸಿದರಷ್ಟೆ (ಈ ವಿಚಾರ ಮೊದಲೆ ಬಂದಿದೆ). ಬಹುಶಃ ಆಗಿನಿಂದ ವೆಂಕಟಪ್ಪನಿಗೆ ಜ್ಯೋತಿಷದ ಮೇಲೆ ಆಸಕ್ತಿ ಮೂಡಿಕೊಂಡಿರಬೇಕು. ಮುಂದೆ 1938ರಲ್ಲಿ ಬೆಂಗಳೂರಿನಲ್ಲಿ ಮನೆ ಕಟ್ಟಿಸಲು ತೊಡಗಿದಾಗ ಆರ್. ಗೋಪಾಲಕೃಷ್ಣ ರಾಯರೆಂಬ ಜ್ಯೋತಿಷಿಯ ಪರಿಚಯವಾದ ಮೇಲೆ ಇದರ ಗೀಳು ಹೆಚ್ಚಿತೆಂದು ತೋರುತ್ತದೆ. ಬೆಂಗಳೂರಿನಲ್ಲಿ ವಾಸಿಸುವ ಹೊಸದರಲ್ಲಿ ಅವರಿಗೆ ಕಷ್ಟಗಳು ಒಂದರಮೇಲೊಂದು ಕಾಡಿದಾಗ ಅವರು ತಮ್ಮ ಜಾತಕದಲ್ಲಿಯೆ ದೋಷವಿದೆಯೊ ಎಂದು ಶಂಕೆಪಟ್ಟುದು ಸಹಜ. ಮಲ್ಲೇಶ್ವರದಲ್ಲಿಯೆ ಇರುತ್ತಿದ್ದು ನಗರದ ಮಾರುಕಟ್ಟೆಯ ಬಳಿ ಕರ್ಣಾಟಕ ಆಟೋಮೊಬೈಲ್ಸ್ ಎಂಬ ಸಂಸ್ಥೆಯ ಮಾಲೀಕರಾಗಿದ್ದ ವೇಮಾ ಲಾಡ್ಜಿನ ರಘುನಾಥರಾವ್ ಸಾಹೆಬ್ ಎಂಬ ಸದ್ಗೃಹಸ್ಥರ ಸ್ನೇಹ ಬೆಳೆದ ಮೇಲೆ, (ಇವರ ಪರಿಚಯ ನನಗೂ ಇದ್ದಿತು) ಅವರಿಗಿದ್ದ ಜ್ಯೋತಿಷ್ಯದ ಜ್ಞಾನದಿಂದ ಇವರ ಜ್ಯೋತಿಷ್ಯದಲ್ಲಿನ ಆಸಕ್ತಿ ಇನ್ನಷ್ಟು ಹೆಚ್ಚಿತು.

ಆದರೆ ಬರುಬರುತ್ತಾ ಅವರಿಗೆ ಜ್ಯೋತಿಷ್ಯದಲ್ಲಿ ನಂಬಿಕೆ ಶಿಥಿಲವಾಯಿತು. ತಮ್ಮ ಜ್ಯೋತಿಷಿ ಮಿತ್ರರು ಹೇಳಿದ ಜಾತಕ ಫಲಗಳೊಂದೂ ಅನುಭವದಲ್ಲಿ ಬರದಿದ್ದುದು ಮುಖ್ಯ ಕಾರಣ. 1956ರ ವೇಳೆಗೆ ಅವರಿಗೆ ಜ್ಯೋತಿಷ್ಯದಲ್ಲಿ ನಂಬಿಕೆ ಸಂಪೂರ್ಣವಾಗಿ ಮರೆಯಾಗಿದ್ದಿತು. ಆ ವರ್ಷದ ನವೆಂಬರ್ ತಿಂಗಳಿನಲ್ಲಿ ಮುಂಬಯಿಯ ದೇವಕರರೆಂಬ ಕಲಾವಿದರು ವೆಂಕಟಪ್ಪನ ಸ್ಟುಡಿಯೋಗೆ ಬಂದು ಮಾತುಕತೆಯಲ್ಲಿ ತೊಡಗಿದ್ದಾಗ, "ನಿಮಗೆ ಜ್ಯೋತಿಷ್ಯದಲ್ಲಿ ನಂಬಿಕೆಯಿದೆಯೆ" ಎಂದು ಕೇಳಿದರು. ಒಡನೆಯೆ ವೆಂಕಟಪ್ಪ "ನನಗೆ ನಂಬಿಕೆಯೆ ಇಲ್ಲ. ತುಂಬ ಸಮರ್ಥರಾದ ಜ್ಯೋತಿಷಿಗಳು ನನ್ನ ಬದುಕಿನ ಎರಡು ಮುಖ್ಯ ಪ್ರಸಂಗಗಳ ವಿಚಾರ ಫಲ ಹೇಳಲಿಲ್ಲ. ಅವರು ಹೇಳಿದಂತೆ ನಡೆಯಲಿಲ್ಲ." ಎಂದುತ್ತರ ಕೊಟ್ಟರು. ಈ ವಿಚಾರ ತಮ್ಮ ಡೈರಿಯಲ್ಲಿ ಬರೆಯುತ್ತ 'ನಂಬಿಕೆ ಇಲ್ಲ' ಎನ್ನುವುದನ್ನು ದಪ್ಪಕ್ಷರಗಳಲ್ಲಿ ಕಾಣಿಸಿದ್ದಾರೆ. ಆದರೆ ಆ ಎರಡು ಮುಖ್ಯ ಪ್ರಸಂಗಗಳು ಯಾವುವು ಎಂದು ನಿರ್ದಿಷ್ಟವಾಗಿ ತಿಳಿಯಬರಲಾರದು. ಬಹುಶಃ ಅವರ ಮದುವೆಯ ವಿಚಾರ ಒಂದು (ಇದರ ಸೂಚನೆ ಅವರ ಡೈರಿಯ 1940ರ ಜುಲೈ ಆರರ ಒಕ್ಕಣೆಯಲ್ಲಿದೆ); ಸ್ಟುಡಿಯೋ-ಕಲಾಶಾಲೆಯ ವಿಚಾರ ಇನ್ನೊಂದು (ಇದರ ಉಲ್ಲೇಖ ಡೈರಿಯ 1948ರ ಜೂನ್ ಹದಿನೈದರ ಒಕ್ಕಣೆಯಲ್ಲಿದೆ). ಎರಡೂ ಅವರಿಗೆ ಕೈಗೂಡಲಿಲ್ಲವೆನ್ನುವುದೇನೊ ದಿಟವೆ.

ವೆಂಕಟಪ್ಪನಿಗೆ ಸಂಪ್ರದಾಯದಲ್ಲಿ ನಂಬಿಕೆಯಿದ್ದಿತಾಗಿ ವಾಡಿಕೆಯಂತೆ ಜ್ಯೋತಿಷ್ಯದಲ್ಲೂ ನಂಬಿಕೆ ತಲೆದೋರಿದುದು ಸಹಜ. ಆದರೆ ನಂಬಿಕೆಗೆ ಅರ್ಹವಾದುದಲ್ಲ ಎಂಬುದು ಅರಿವಾದಮೇಲೆ ಅದರ ಗೊಡವೆಗೆ ಹೋಗಲಿಲ್ಲ; ಅದನ್ನು ಅಷ್ಟಕ್ಕೆ ಕೈಬಿಟ್ಟರು. ಮನುಷ್ಯರ ವಿಚಾರದಲ್ಲೂ ಅವರದ್ದು ಇದೇ ಧೋರಣೆ. ಮೊದಲು ನಂಬುವರು; ನಂಬಿಕೆಗೆ ಅರ್ಹನಲ್ಲ ಎಂದು ತೋರಿದೊಡನೆ ಕೈಬಿಡುವರು. ಕೈಬಿಟ್ಟಮೇಲೆ ಹಗೆತನವಿಲ್ಲ, ಮುನಿಸಿಲ್ಲ, ಕೆಟ್ಟ ಮನಸ್ಸಿಲ್ಲ; ಮತ್ತೆ ಅವರೊಂದಿಗೆ ವ್ಯವಹಾರವಿಲ್ಲ, ಅಷ್ಟೆ.

೫

ವೆಂಕಟಪ್ಪನ ಸ್ವಭಾವದಲ್ಲಿ ಎದ್ದು ಕಾಣುತ್ತಿದ್ದುದು ಅವರ ಸ್ವತಂತ್ರಮನೋವೃತ್ತಿ. ಇದರ ಅನೇಕ ನಿದರ್ಶನಗಳು ಈ ನಿರೂಪಣೆಯಲ್ಲಿ ಈಗಾಗಲೆ ಬಂದಿವೆ. ಅವರ ಉಳಿದೆಲ್ಲ ಗುಣಧರ್ಮಗಳಲ್ಲೂ ಇದು ಹಾಸುಹೊಕ್ಕಾಗಿ ಸೇರಿಬಂದಿದ್ದಿತು. ಬೇರೊಂದು ಹವ್ಯಾಸವಿಲ್ಲದೆ ಕಲೆಗೆಂದೇ ಬಾಳನ್ನು ಮುಡಿಪಿಟ್ಟರಾದರೂ, ಸಂಸಾರವಿಲ್ಲದೆ ಒಂಟಿಯಾಗಿ ಬಾಳುತ್ತಿದ್ದರಾದರೂ, ಬದುಕಿನುದ್ದಕ್ಕೂ ಹೋರಾಟ ತಪ್ಪಲಿಲ್ಲ, ಹಗರಣ ತಪ್ಪಲಿಲ್ಲ ಒಂದಲ್ಲ ಒಂದು ತಾಪ, ಅವರನ್ನು ಕಾಡುತ್ತಲೆ ಇದ್ದಿತು. ಇಷ್ಟಾದರೂ ಅವರು ಎದೆಗುಂದಲಿಲ್ಲ; ಅಡರಿಬಂದ ಎಡರು ತೊಡರುಗಳನ್ನೆಲ್ಲ ಎದುರಿಸಲು ಎಂದೂ ಟೊಂಕ ಕಟ್ಟಿದವರೆ. ಕಡೆಯ ದಿನಗಳವರೆಗೆ ಅವರು ಯಾರ ಹಂಗಿಗೂ ಸಿಲುಕಿಕೊಳ್ಳಲಿಲ್ಲ. ಯಾರೊಬ್ಬರ ಆಶ್ರಯವನ್ನಾಗಲಿ, ನೆರವನ್ನಾಗಲಿ ಬಯಸಲಿಲ್ಲ; ಯಾರ ಬೆದರಿಕೆಗೂ ಅಂಜಲಿಲ್ಲ, ಯಾರ ದಾನಕ್ಕೂ ಕೈಯೊಡ್ಡಲಿಲ್ಲ. ತಮಗೆ ಸರಿದೋರಿದಂತೆ ನಡೆಯುವರೆ ವಿನಾ ಬೇರೆಯವರು ಹೇಳಿದರೆ ಒಪ್ಪರು.

ಈ ಗುಣ ಅವರಲ್ಲಿ ಚಿಕ್ಕಂದಿನಿಂದಲೆ ಇದ್ದಿತು. ಕಲ್ಕತ್ತೆಯಲ್ಲಿರುವಾಗ ಅವನೀಂದ್ರನಾಥರಿಗೂ ಪರ್ಸಿ ಬ್ರೌನರಿಗೂ ಇದು ತಿಳಿದಿದ್ದಿತು. ಮೈಸೂರಿಗೆ ಹಿಂದಿರುಗಿದ ಮೇಲೆ ಮಹಾರಾಜರಿಗೂ ಇದರ ಅರಿವಾಯಿತು. ಅವರು ಅರಮನೆಯಲ್ಲಿ ಕೆಲಸವನ್ನು ಮಾಡುತ್ತಿರುವಾಗ ಮಹಾರಾಜರಿಂದಲೆ ಅವರಿಗೊಂದು ಪರವಾನಿಗೆ ಇದ್ದಿತು, ವಾಡಿಕೆಯ ನಿರ್ಬಂಧಗಳು ಅವರಿಗಿರಬಾರದೆಂದು. ಆ ಕಾಲದಲ್ಲಿ ಅರಮನೆಯೊಳಗೆ ಬರುವವರು ಅಲ್ಲಿಗೆ ತಕ್ಕ ಸಾಂಪ್ರದಾಯಿಕ ಉಡುಪನ್ನು ತೊಡಬೇಕಾಗಿದ್ದಿತು. ಲೌಕಿಕರಾದರೆ ಕರಿಯ ನಿಲುವಂಗಿ (ಕೋಟು), ಬಿಳಿಯ ಷರಾಯಿ, ಸೊಂಟಕ್ಕೆ ಸುತ್ತಿದ ಜರಿ ಉತ್ತರೀಯ, ತಲೆಯ ಮೇಲೆ ಜರತಾರಿ ರುಮಾಲು. ಆದರೆ ವೆಂಕಟಪ್ಪ ಅರಮನೆಗೆ ಹೋಗುವಾಗ ಈ ಉಡುಪನ್ನು ಎಂದೂ ತೊಟ್ಟವರಲ್ಲ. ತಾವು ಎಂದೂ ತೊಡುತ್ತಿದ್ದ ಕತ್ತುಮುಚ್ಚುವ ಕೋಟು, ಸಾದಾ ಕಚ್ಚೆ ಪಂಚೆ, ಜರಿಯಿಲ್ಲದ ರುಮಾಲು ಅಷ್ಟೆ; ಕೈಯಲ್ಲೊಂದು ಚತ್ರಿ. ಮಹಾರಾಜರನ್ನು ಕಾಣುವಾಗಲೂ ಇದೇ ಉಡುಪು. ಅರಮನೆಯಲ್ಲಿ ಹಂತ ಹಂತದ ಅಧಿಕಾರಿಗಳ ಆಡಳಿತ; ಒಬ್ಬೊಬ್ಬ ಅಧಿಕಾರಿ ವರ್ತಿಸುವುದೂ ತಾನೇ ಮಹಾರಾಜರೊ ಎನ್ನುವಂತೆ. ಚಿತ್ರಗಾರನೆಂದರೆ ಸಾಮಾನ್ಯ ಕೆಲಸದವನು. ಅವನ ಮೇಲೆ ಹತ್ತಾರು ಅಧಿಕಾರಿಗಳು; ಕಡೆಗೆ ಎಲ್ಲೊ ದೂರದಲ್ಲಿ ಮಹಾರಾಜರು, ಅವರ ಗಮನಕ್ಕೆ ಇವನ ಕೆಲಸ ಬಂದರೂ ಆಯಿತು ಬರದಿದ್ದರೂ ಆಯಿತು; ಅವರ ಅಭಿಪ್ರಾಯ ಇವರಿಗೆ ಮುಟ್ಟಿದರೂ ಸರಿ, ಮುಟ್ಟದಿದ್ದರೂ ಸರಿ. ನಡುವೆ ಇರುವ ಅಧಿಕಾರಿಗಳೇ ಇಂದ್ರ-ಚಂದ್ರರು. ವೆಂಕಟಪ್ಪ ಈ ವ್ಯವಸ್ಥೆಗೆ ಬಗ್ಗುವಂಥ ಚಿತ್ರಗಾರನಲ್ಲವೆಂಬುದು ಮಹಾರಾಜರಿಗೆ ತಿಳಿದು ಅವನ ಮೇಲೆ ನಡುವಣ ಅಧಿಕಾರಿಗಳ ಹಿಡಿತವನ್ನು ತಪ್ಪಿಸಿದ್ದರು. ನೇರವಾಗಿ ಮಹಾರಾಜರ ಸಮ್ಮುಖದ ಕಾರ್ಯದರ್ಶಿ (ಹುಜೂರ್ ಸೆಕ್ರೆಟರಿ)ಯೊಂದಿಗೆ ವೆಂಕಟಪ್ಪನ ಸಂಪರ್ಕ. ಮತ್ತು ಕೆಲಸದಲ್ಲಿ ವೆಂಕಟಪ್ಪನಿಗೆ ಸರ್ವಸ್ವಾತಂತ್ರ್ಯವನ್ನು ಮಹಾರಾಜರೇ ಏರ್ಪಡಿಸಿದ್ದರು.

ಅವರಿಗೆ ಮಹಾರಾಜರ ಮೇಲೆ ರಾಜಭಕ್ತಿ ವಿಶೇಷವಾಗಿದ್ದಿತು. ನಾಲ್ವಡಿ ಕೃಷ್ಣರಾಜ

ಒಡೆಯರ ಘನತೆ, ಗಾಂಭೀರ್ಯ, ಕಲಾದೃಷ್ಟಿ, ಪ್ರಜಾನುರಾಗ ಇವೆಲ್ಲ ಆಗ ಮೈಸೂರು ಸೀಮೆಯಲ್ಲೆಲ್ಲ ಮನೆಮಾತು; ಅವರೆಂದರೆ ಎಲ್ಲರಿಗೂ ಆದರ, ಗೌರವಬುದ್ಧಿ. ವೆಂಕಟಪ್ಪ ಅವರನ್ನು ಹತ್ತಿರದಿಂದ ನೋಡಿ ಅವರ ಗುಣಗಳನ್ನು ಮೆಚ್ಚಿಕೊಂಡಿದ್ದರಾಗಿ ಅವರಲ್ಲಿ ರಾಜಭಕ್ತಿಯನ್ನಿರಿಸಿಕೊಂಡಿದ್ದುದು ಸಹಜವೆ. ಆದರೆ ತಾವು ಅರಮನೆಯ ಊಳಿಗದವರೆಂದು ವೆಂಕಟಪ್ಪ ಎಂದೂ ಭಾವಿಸಿಕೊಂಡಿದ್ದಿಲ್ಲ. ಅರಮನೆಯ ಆಸ್ಥಾನ ವಿದ್ವಾಂಸರೂ, ಸುಪ್ರಸಿದ್ಧ ಗಾಯಕರೂ ಆಗಿದ್ದ 'ಟೈಗರ್' ವರದಾಚಾರ್ಯರು ವೆಂಕಟಪ್ಪನ ಸ್ನೇಹಿತರು. ಅವರೊಮ್ಮೆ ಮದರಾಸಿನಿಂದ ವೆಂಕಟಪ್ಪನಿಗೆ ಪತ್ರವೊಂದನ್ನು ಬರೆದು, ವಿಳಾಸವಾಗಿ 'ಅರಮನೆಯ ಚಿತ್ರಗಾರರು' ಎಂದು ಕಾಣಿಸಿದ್ದರು. ವೆಂಕಟಪ್ಪ ಆಗ ಅರಮನೆಯ ಚಿತ್ರಗಾರರಾಗಿದ್ದುದು ದಿಟ. ಆದರೆ ವೆಂಕಟಪ್ಪ ಅವರಿಗೆ ಉತ್ತರ ಬರೆದ ಮೇಲೆ, ಕಡೆಯಲ್ಲಿ ಮರುಮಾತಾಗಿ, "ನಾನು ಅರಮನೆಯ ಚಿತ್ರಗಾರನಲ್ಲ, ಸ್ವತಂತ್ರ ವ್ಯಕ್ತಿ" ಎಂದು ಒಂದು ಸಾಲನ್ನು ಸೇರಿಸಿದರು (1935ರ ನವೆಂಬರ್ ಐದರಂದು ಬರೆದ ಪತ್ರ).

ಹೊಟ್ಟೆಪಾಡಿನ ಸಲುವಾಗಿ ತಮ್ಮನ್ನೆಂದೂ ಮಾರಿಕೊಂಡವರಲ್ಲ ಅವರು; ತಮ್ಮ ಕಲೆಯನ್ನಾಗಲಿ ಹಣಕ್ಕೆಂದು ಎಂದೂ ಬಳಸಿಕೊಂಡವರಲ್ಲ. ಕಲೆ ತನಗೆ ರಕ್ತಗತವಾಗಿ ಬಂದದ್ದು; ವರ್ಷಗಟ್ಟಳೆ ಎಡೆಬಿಡದೆ ದುಡಿಮೆಯಿಂದ ಅದರಲ್ಲಿ ತಕ್ಕಮಟ್ಟಿಗೆ ನಿಪುಣತೆಯನ್ನು ಪಡೆದುಕೊಂಡರು. ಅದರಿಂದ ಜೀವನೋಪಾಯ ಆಗುವುದಾದರೂ ಕಲೆಯ ಮುಖ್ಯ ಪ್ರಯೋಜನವೆ ಅದಲ್ಲ. ಕಲೆ ಅಗತ್ಯವಾದದ್ದು ಬದುಕಿಗೆ; ಹೊಟ್ಟೆ ಹೊರೆದುಕೊಳ್ಳುವುದಕ್ಕಲ್ಲ. ಅರಮನೆಯಲ್ಲಿ ತಾನು ಚಿತ್ರದ ಕೆಲಸಮಾಡುತ್ತಿರುವುದು ದಿಟ; ಅರಮನೆಯಿಂದ ಅದಕ್ಕೆ ಪ್ರತಿಯಾಗಿ ಹಣ ತನಗೆ ಸಂದಾಯವಾಗುತ್ತಿರುವುದೂ ದಿಟ. ಹಾಗೆಂದಮಾತ್ರಕ್ಕೆ ತಾನೇನು ಅರಮನೆಯ ಊಳಿಗದವನೇ? ತನ್ನ ಕಲೆ ಅರಮನೆಗೆ ಮೀಸಲೆ? ತಾನು ಅರಮನೆಗೆ ತನ್ನನ್ನು ಒತ್ತೆಯಿಟ್ಟುಕೊಂಡಂತೆ ಆಯಿತೆ? ಅರಮನೆಯಿಂದ ಹಣ ಬರುತ್ತಿರುವುದು ದಾನವಾಗಲ್ಲ, ತಾನು ಮಾಡಿದ ಕೆಲಸಕ್ಕೆ ಬದಲು. ಹೀಗಿರುವುದರಿಂದ ತಾನು 'ಅರಮನೆಯ ಚಿತ್ರಗಾರ'ನೆಂಬುದು ಹೇಗೆ? ತನಗೆ ಬೇರೆ ಸ್ವತಂತ್ರವಾದ ವ್ಯಕ್ತಿತ್ವಯಿದೆಯಲ್ಲವೆ? ಇದು ಅವರ ತರ್ಕ. ಆದರೆ, ಪಾಪ, ವರದಾಚಾರ್ಯರು ಹಾಗೆ ಬರೆದಾಗ ಅವರಿಗೆ ವೆಂಕಟಪ್ಪನನ್ನು ಕೆಣಕಬೇಕೆಂಬ ಬಯಕೆಯಿದ್ದಿರಲಿಲ್ಲವೆನ್ನಿ.

ಮುಂದೆ, 1955ರಲ್ಲಿ ಮೇ ಇಪ್ಪತ್ತಮೂರರಂದು, ಅವರ ವಕೀಲಮಿತ್ರರಾದ ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರರು ವೆಂಕಟಪ್ಪನ ಬಳಿ ಬಂದು ಮುಂದಿನ ತಿಂಗಳು ಮೂರನೆಯ ತಾರೀಖು ಭಾರತದ ಉಪಾಧ್ಯಕ್ಷರಾಗಿದ್ದ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಬೆಂಗಳೂರಿಗೆ ಭೇಟಿಕೊಡಲಿದ್ದಾರೆಂದೂ, ವೆಂಕಟಪ್ಪ ಅವರನ್ನು ತಮ್ಮ ಸ್ಟುಡಿಯೋಗೆ ಬರಮಾಡಿಕೊಳ್ಳಬೇಕೆಂದೂ ಸೂಚಿಸಿದರು. ಅವರಿಗೆ ವೆಂಕಟಪ್ಪ ಕೊಟ್ಟ ಉತ್ತರ — "ನಾನಾಗಿ ಯಾರನ್ನೂ ನನ್ನ ಸ್ಟುಡಿಯೋಗೆ ಬರುವಂತೆ ಕೇಳಿಕೊಳ್ಳುವುದಿಲ್ಲ. ಅವರಾಗಿ ಬಂದರೆ ಸಂತೋಷದಿಂದ ಬರಮಾಡಿಕೊಳ್ಳುತ್ತೇನೆ. ಅಷ್ಟೆ" ಎಂದು. ಇದು

ಅವರ ಸ್ವತಂತ್ರವಾದ ವ್ಯಕ್ತಿತ್ವದ ನಿಷ್ಠೆ. ರಾಜ್ಯದ ಮಹಾರಾಜರಾದರೇನು, ನಾಡಿನ ಉಪಾಧ್ಯಕ್ಷರಾದರೇನು, ವೆಂಕಟಪ್ಪನಿಗೆ ಅವರ ಬೆಲೆ ಅವರಲ್ಲಿ ಕಲಾಭಿಮಾನ ಇದ್ದರೆ ಮಾತ್ರ; ಇರುವಷ್ಟು ಮಾತ್ರ. ತಾನಾಗಿ ಅವರ ಅನುಗ್ರಹವನ್ನು ಪಡೆದುಕೊಳ್ಳಬೇಕೆಂಬ ಕಾತರ ಅವರಿಗೇನಿರದು. ಕಡೆಗೆ ಪ್ರಧಾನಿ ಜವಹರಲಾಲ ನೆಹ್ರು ಅವರು ಬೆಂಗಳೂರಿಗೆ ಬಂದಾಗಲೂ (1951ರ ಜುಲೈ ತಿಂಗಳಲ್ಲಿ) ರಾಜ್ಯ ಸರಕಾರದ ಮೇಲೆ ಪ್ರಭಾವ ಬೀರಿದ ಯಾರೊ ನೆಹ್ರುರವರನ್ನು ವೆಂಕಟಪ್ಪನ ಸ್ಟುಡಿಯೋಗೆ ಕರೆತರುವ ಪ್ರಯತ್ನಮಾಡಿದರು. ವೆಂಕಟಪ್ಪನೇನು ಅವರನ್ನು ಬರಬೇಕೆಂದು ಕೇಳಿಕೊಳ್ಳಲಿಲ್ಲ, ರಾಜ್ಯದ ಆಗಿನ ಮುಖ್ಯಮಂತ್ರಿ ತಮಗೆ ಪರಿಚಿತರಾಗಿದ್ದರೂ ಅವರನ್ನೇನೂ ಕೇಳಲಿಲ್ಲ. ನೆಹ್ರುರವರು ಬರುವೆನೆಂದು ಹೇಳಿಕಳುಹಿಸಿದಾಗ ಮಾತ್ರ, ತಮ್ಮ ಕಲಾಕೃತಿಗಳನ್ನೆಲ್ಲ ಅವರಿಗೆ ತೋರಿಸಲು ಸಿದ್ಧರಾದರು, ಅಷ್ಟೆ.

ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆ. ಹನುಮಂತಯ್ಯನವರು 1956ರ ಮಾರ್ಚ್ ತಿಂಗಳಲ್ಲಿ ರಾಜ್ಯದ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿದ್ದ ಟಿ.ಎನ್. ಕೃಷ್ಣರಾಯರನ್ನು ವೆಂಕಟಪ್ಪನ ಮನೆಗೆ ಕಳುಹಿಸಿ ಅವರು ಬೆಂಗಳೂರು ನಗರದ ವಿಕ್ಟರಿಹಾಲನ್ನು ಸಂದರ್ಶಿಸಿ, ಅಲ್ಲಿ ಸರಕಾರದ ಚಿತ್ರ ಸಂಗ್ರಹಾಲಯವನ್ನು ತೆರೆಯುವ ಸಾಧ್ಯತೆಯ ಬಗ್ಗೆ ತಮ್ಮ ಸಲಹೆಗಳನ್ನು ನೀಡಬೇಕೆಂದು ಪ್ರಾರ್ಥಿಸಿದ್ದರು. ಟಿ.ಎನ್. ಕೃಷ್ಣರಾಯರು ವೆಂಕಟಪ್ಪನನ್ನು ಭೇಟಿಯಾಗಿ ಈ ವಿಚಾರವನ್ನು ತಿಳಿಸಿದಾಗ, ವೆಂಕಟಪ್ಪ "ಈ ವಿಚಾರದಲ್ಲಿ ನೆರವಾಗಲು ನಾನು ಎಂದೂ ಸಿದ್ಧನೆ. ಆದರೆ ನನ್ನ ನೆರವನ್ನು ಬಯಸಿ ಮುಖ್ಯಮಂತ್ರಿಗಳು ನನಗೊಂದು ಪತ್ರ ಬರೆದರೆ ಒಳ್ಳೆಯದು" ಎಂದು ಹೇಳಿ ಕಳುಹಿಸಿದರು.

ಒಮ್ಮೆ (1957ರ ಜುಲೈ ಹದಿನೆಂಟರಂದು), ಅವರಿಗೆ ಪರಿಚಿತರಾಗಿದ್ದ ಸುಪ್ರಸಿದ್ಧ ಕಲಾವಿಮರ್ಶಕ ಜಿ. ವೆಂಕಟಾಚಲಂ ಅವರು ವೆಂಕಟಪ್ಪನನ್ನು ಭೇಟಿಯಾಗಿ ಬೆಂಗಳೂರಿನಲ್ಲಿ ಕೇಂದ್ರ ಸರಕಾರವು ಏರ್ಪಡಿಸಿದ್ದ ಆರ್ಟ್ ಡಿಸೈನ್ ಸೆಂಟರಿನಲ್ಲಿ ನಿರ್ದೇಶಕರ ಸ್ಥಾನ ತೆರವಾಗಿರುವುದನ್ನು ತಿಳಿಸಿ ವೆಂಕಟಪ್ಪ ಅರ್ಜಿ ಹಾಕಿಕೊಳ್ಳುವಂತೆ ಸಲಹೆ ಮಾಡಿದರು. ಅವನೀಂದ್ರನಾಥರ ಬಳಿ ವೆಂಕಟಪ್ಪನ ಸಹಾಧ್ಯಾಯಿಯೂ, ಸ್ನೇಹಿತರೂ ಆಗಿದ್ದ ಅಶೀತಕುಮಾರ ಹಾಲದಾರರು ಈ ಸ್ಥಾನದಲ್ಲಿದ್ದು ಕಾರಣಾಂತರದಿಂದ ಅದನ್ನು ಬಿಟ್ಟಿದ್ದರು. ಅವರಿಗೂ ಮೇಲಿನ ಅಧಿಕಾರಿಗಳಿಗೂ ವಿರಸ ತಲೆದೋರಿ ಅವರೆ ಬಿಟ್ಟಿದ್ದರೊ, ಸರಕಾರವೆ ಅವರನ್ನು ಕೆಲಸದಿಂದ ತೆಗೆದಿದ್ದಿತೊ ಏನೊ ಆಗಿದ್ದಿತು. ಈ ಸ್ಥಾನಕ್ಕೆ ತಕ್ಕ ವ್ಯಕ್ತಿಯನ್ನು ಆರಿಸುವುದರಲ್ಲಿ ವೆಂಕಟಾಚಲಂ ಕೈವಾಡ ಇದ್ದಿತು; ಆ ಕಾಲಕ್ಕೆ ಅವರು ಸರಕಾರದಲ್ಲಿ ಕಲೆಗೆ ಸಂಬಂಧಿಸಿದ ವಿಚಾರಗಳಲ್ಲಿ ತುಂಬ ಪ್ರಭಾವಶಾಲಿಗಳಾಗಿದ್ದರು. ವೆಂಕಟಪ್ಪ ಅವರ ಸೂಚನೆಯಂತೆ ನಡೆದುಕೊಂಡಿದ್ದರೆ ಆಗ (ತಿಂಗಳಿಗೆ) ಒಂದು ಸಾವಿರದ ಐನೂರು ರೂಪಾಯಿಗಳ ಸಂಬಳದ, ಅಧಿಕಾರ ವ್ಯಾಪ್ತಿಯ, ಪ್ರಭಾವವುಳ್ಳ, ಪ್ರತಿಷ್ಠೆಯ ಸರಕಾರಿ ಹುದ್ದೆ ದೊರಕುತ್ತಿದ್ದಿತು. ಆದರೆ ವೆಂಕಟಪ್ಪ ವೆಂಕಟಾಚಲಂಗೆ ಹೇಳಿದುದು "ಎಪ್ಪತ್ತು ವರ್ಷಗಳು ಗೌರವದಿಂದ ಬಾಳಿ, ಈ ಎಪ್ಪತ್ತೊಂದನೆಯ ವಯಸ್ಸಿನಲ್ಲಿ ಸರಕಾರಿ ಹುದ್ದೆಯೊಂದಕ್ಕೆ ಕೈವೊಡ್ಡುವವನೆಂದು ನನ್ನನ್ನು ಭಾವಿಸಿದಿರಲ್ಲವೆ? ಹಾಗೆ ನಾನೆಂದೂ

ಮಾಡಲಾರೆ! ಕೇಂದ್ರ ಸರಕಾರವು ನನ್ನನ್ನು ಪ್ರಾರ್ಥಿಸಿಕೊಂಡರೆ ಅದು ಬೇರೆ ಮಾತು'' ಎಂದು.

ಮದರಾಸಿನ (ಈಗಿನ ತಮಿಳುನಾಡಿನ) ರಾಜ್ಯಪಾಲರಾಗಿದ್ದ ಕೃಷ್ಣಕುಮಾರ ಸಿನ್ಹಜಿ (ಭವನಗರದ ಮಹಾರಾಜರಾಗಿದ್ದವರು) ವೆಂಕಟಪ್ಪನವರ ಕಲೆಗಾರಿಕೆಯನ್ನು ಮೆಚ್ಚಿಕೊಂಡಿದ್ದವರು. ಅವರು ಮದರಾಸಿನ ಚಿತ್ರಸಂಗ್ರಹಾಲಯಕ್ಕೆ ವೆಂಕಟಪ್ಪನ ಚಿತ್ರವೊಂದನ್ನು ಬಯಸಿದಾಗ, ವೆಂಕಟಪ್ಪ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದರು; ಆದರೆ ಸಾಕಷ್ಟು ಸಮಯವಾದೀತೆಂದೂ ತಿಳಿಸಿದ್ದರು. ಮರುವರ್ಷದ ವೇಳೆಗೆ ಆ ರಾಜ್ಯಪಾಲರು ಹೋಗಿ ಇನ್ನೊಬ್ಬರು ಬಂದಿದ್ದರು. ಮದರಾಸ್ ಸರಕಾರದ ಮ್ಯೂಸಿಯಂನ ನಿರ್ದೇಶಕರು ವೆಂಕಟಪ್ಪನಿಗೆ ಪತ್ರವೊಂದನ್ನು ಬರೆದು, ಅವರು ಹಿಂದಿನ ರಾಜ್ಯಪಾಲರಿಗೆ ಮಾಡಿದ್ದ ವಾಗ್ದಾನವನ್ನು ನೆನಪಿಗೆ ತಂದರು. ಅದಕ್ಕೆ ವೆಂಕಟಪ್ಪನ ಉತ್ತರ (1952ರ ಜುಲೈ ಇಪ್ಪತ್ತಮೂರರದ್ದು) ಸ್ವಾರಸ್ಯವಾಗಿದೆ —

''ನಾನು ಮದ್ರಾಸಿನ ರಾಜ್ಯಪಾಲರಿಗೆ 1951ರ ಸೆಪ್ಟೆಂಬರ್ ಹನ್ನೆರಡರಂದು ಬರೆದ ಪತ್ರದ ಪ್ರತಿಯೊಂದನ್ನಿರಿಸಿ, ನೀವು ಬರೆದಿರುವ ಪತ್ರ (7-7-52ರದ್ದು) ತಲುಪಿದೆ. ಆದರೆ ಆ ಪತ್ರದ ಕಡೆಯ ವಾಕ್ಯವನ್ನು ಏಕೆ ಬಿಟ್ಟಿದ್ದೀರೊ ತಿಳಿಯಲಿಲ್ಲ. ಆ ವಾಕ್ಯ ಇದು — '(ಈ ಚಿತ್ರವನ್ನು ಮುಗಿಸಲು) ನನಗೆ ಸಾಕಷ್ಟು ಸಮಯ ಬೇಕು, ಏಕೆಂದರೆ, ತಮಗೆ ತಿಳಿದಿರುವಂತೆ ಸೃಜನಾತ್ಮಕ ಕೆಲಸವನ್ನು ಮಾಡಲು ತಕ್ಕ ಮನೋವ್ಯವಧಾನ ಬೇಕು, ಇಂಥ ಕೆಲಸವನ್ನು ಆತುರದಿಂದ ಮಾಡಲಾಗದು'.

ಕಲೆಗಾರನ ಅಥವಾ ಕಲಾವಿದ್ಯಾರ್ಥಿಯ ನಿಘಂಟುವಿನಲ್ಲಿ 'ಸಾಕಷ್ಟು ಸಮಯ'ವೆಂದರೆ ವರ್ಷಗಳು. ಹಳೆಯ ರಾಜ್ಯಪಾಲರಿಗೆ ನಾನು ವಾಗ್ದಾನ ಮಾಡಿ ಹತ್ತೂವರೆ ತಿಂಗಳುಗಳು ಕೂಡ ಕಳೆದಿಲ್ಲ. ನನ್ನ ವಾಗ್ದಾನ ಇದ್ದೇ ಇದೆ; ಅದನ್ನು ಮುಂದೆ ಕಂಡಿತ ಕೈಗೂಡಿಸಿ ಕೊಡುತ್ತೇನೆ.

ನನ್ನ ಪತ್ರದ ಕಡೆಯ ವಾಕ್ಯವನ್ನು ನೀವು ಗಮನಿಸಿದ್ದರೆ, ಹೀಗೆ ನೆನಪಿನ ಪತ್ರಗಳನ್ನು ಬರೆಯುತ್ತ ನಿಮ್ಮ ಕಾಲವನ್ನಾಗಲಿ, ಶಕ್ತಿಯನ್ನಾಗಲಿ, ಕಾಗದವನ್ನಾಗಲಿ ಹಾಳುಮಾಡುತ್ತಿರಲಿಲ್ಲ! ನಿಮಗೆ ಪತ್ರವನ್ನು ಬರೆಯುವಂತೆ ಯಾರು ಆದೇಶ ನೀಡಿದರೊ ತಿಳಿಯದು!

ಸದ್ಯಕ್ಕೆ ಕೆಲವು ತಿಂಗಳುಗಳಿಂದ ಅರ್ಧಶಿಲ್ಪ ಫಲಕದ ಕಲ್ಪನೆಯ ಕೆಲಸವೊಂದರಲ್ಲಿ ರಾತ್ರಿ ಹಗಲು, ಕೆಲವೊಮ್ಮೆ ವಿಶ್ರಾಂತಿಯೂ ಇಲ್ಲದೆ, ತೊಡಗಿದ್ದೇನೆ. ಅದು ಮುಗಿದ ಮೇಲೇ ಬೇರೆ ಕಡೆ ನನ್ನ ಮನಸ್ಸು ಹರಿದೀತು''.

೬

ಪ್ರಾಮಾಣಿಕತೆ ಅವರ ಸ್ವತಂತ್ರ ಮನೋವೃತ್ತಿಯ ಇನ್ನೊಂದು ಮುಖ. ಅವರು ಯಾವುದೇ ಕೆಲಸವನ್ನು ಕೈಗೊಳ್ಳಲಿ, ಯಾವುದೇ ಆಸಕ್ತಿಯನ್ನು ತಳೆಯಲಿ ಅದರಲ್ಲಿ ಆಳವಾಗಿ ಮುಳುಗುವರು. ತೋರಿಕೆಯ, ಹಾರಿಕೆಯ ಪ್ರವೃತ್ತಿ ಅವರಲ್ಲಿ ಎಳ್ಳಷ್ಟೂ

ಇರಲಿಲ್ಲ. ಚಿತ್ರವಾಗಲಿ ಶಿಲ್ಪವಾಗಲಿ, ತಮಗೆ ತೃಪ್ತಿಯಾಗುವವರೆಗೆ ಅದರಲ್ಲೆ ತೊಡಗಿರುವರು, ತಾಳ್ಮೆಗೆ ಅವರಲ್ಲಿ ಮಿತಿಯೆ ಇರಲಿಲ್ಲ; ತಮಗೆ ಸಮಾಧಾನವಾದರೆ ಮಾತ್ರ ಬೇರೆಯವರಿಗೆ ತೋರಿಸಿಯಾರು. ಅವರು ತಮ್ಮ ವೀಣಾವಾದನವನ್ನು ಬೇರೆಯವರಿಗೆ ಕೇಳಿಸದೆ ಇರುವುದಕ್ಕೆ ಇದೇ ಮುಖ್ಯಕಾರಣ. ವೀಣೆಯ ಮೇಲೆ ತಮ್ಮ ಬೆರಳುಗಳಾಟ ಒಪ್ಪಿಗೆಯಾಗಲಿಲ್ಲ, ನುಡಿಸಾಣಿಕೆ ತೃಪ್ತಿಕರವಾಗಲಿಲ್ಲ ಎಂದು ಅವರ ಡೈರಿಯಲ್ಲಿ ಪದೇ ಪದೇ ಒಕ್ಕಣೆ ಕಾಣಬರುತ್ತದೆ. ಬಹುಮಟ್ಟಿಗೆ ಎಡೆಬಿಡದೆ ವೀಣಾಭ್ಯಾಸವೇನೋ ಬದುಕಿನುದ್ದಕ್ಕೂ ಸಾಗಿತು, ಕಡೆಯ ಆರೇಳು ವರ್ಷಗಳನ್ನು ಬಿಟ್ಟು. ಆದರೆ ವೀಣಾವಾದನದಲ್ಲಿ ಪರಿಣತಿ ಬಂದಿತೆಂದು ಅವರಿಗೆ ಎಂದೂ ಅನಿಸಲಿಲ್ಲ. ಆದುದರಿಂದಲೆ ಅವರು ಇತರರೆದುರು ನುಡಿಸಲು ಒಪ್ಪುತ್ತಿರಲಿಲ್ಲ. ಕೆಲವೊಮ್ಮೆ ನುಡಿಸಲು ಒಪ್ಪಿದುದೇನೊ ಉಂಟು; ತೀರ ಅಪುರೂಪವಾಗಿ. ವ್ಯಕ್ತಿಚಿತ್ರವಾಗಲಿ ಮೂರ್ತಿಶಿಲ್ಪವಾಗಲಿ ಹಲವು ಕಾಲ ವ್ಯಕ್ತಿಯನ್ನು ಅಧ್ಯಯನಮಾಡಿಯೆ ಕೃತಿರಚನೆಗೆ ತೊಡಗುವರು. ತಾನು ವ್ಯಕ್ತಿಯನ್ನು ನೋಡಿರದಿದ್ದರೆ ಅವರ ಚಿತ್ರವನ್ನು ಬಿಡಿಸಲು, ಶಿಲ್ಪವನ್ನು ಮಾಡಲು ಸಾಮಾನ್ಯವಾಗಿ ಒಪ್ಪುತ್ತಲೆ ಇರಲಿಲ್ಲ. ದಾಕ್ಷಿಣ್ಯಕ್ಕೆ ಒಪ್ಪಿಕೊಂಡರೂ, ವ್ಯಕ್ತಿಯ ಛಾಯಾಚಿತ್ರಗಳನ್ನು ಹಲವು ವಾರಗಳವರೆಗೆ ತದೇಕಚಿತ್ತದಿಂದ ಅಧ್ಯಯನಮಾಡುವರು. ಮನಸ್ಸಿನಲ್ಲಿ ವ್ಯಕ್ತಿಯ ಸ್ಪಷ್ಟವಾದ ಚಿತ್ರ ಮೂಡಿಕೊಂಡರೆ ಮಾತ್ರ ಕೃತಿರಚನೆ. ಸುಪ್ರಸಿದ್ಧ ವಿಜ್ಞಾನಿ ಭಾಭಾ ವೆಂಕಟಪ್ಪನ ಮಿತ್ರರೆ; ಅವರ ತಂದೆಯ ಕಿರು ಚಿತ್ರವನ್ನು ಮಾಡಲು ಈ ಕಾರಣಕ್ಕಾಗಿಯೆ ನಿರಾಕರಿಸಿದ ವಿಚಾರ ಮೊದಲೆ ಬಂದಿದೆ. ವ್ಯಕ್ತಿಯನ್ನು ತಾವು ನೋಡಿದ್ದರೂ, ತಮಗೆ ಆ ವ್ಯಕ್ತಿಯಲ್ಲಿ ಗೌರವವೊ ವಿಶ್ವಾಸವೊ ಇದ್ದರೆ ಆಸಕ್ತಿಯಿಂದ ಮಾಡಿಯಾರು. ಚಿತ್ರದಲ್ಲಿ ಅವನೀಂದ್ರನಾಥರು, ನಾಲ್ವಡಿ ಕೃಷ್ಣರಾಜ ಒಡೆಯರು, ಶಿಲ್ಪದಲ್ಲಿ ರವೀಂದ್ರನಾಥರು, ವೀಣೆ ಶೇಷಣ್ಣನವರು, ಮಾಣಿ(ನರಸಿಂಹ) ಇವೆಲ್ಲ ವಿಶೇಷ ಕಳೆಗೂಡಿ ಬಂದಿರುವುದು ಹೀಗೆಯೆ.

ಕಲಾಕೃತಿಯೊಂದನ್ನು ಮಾಡತೊಡಗಿದರೆ ಅದರಲ್ಲೆ ದಿನಗಳು, ವಾರಗಳು, ತಿಂಗಳುಗಳು ಉರುಳಿದರೂ ಅವರ ಸಮಾಧಾನ ಒಂದು ಘಟ್ಟ ಮುಟ್ಟುತ್ತಿರಲಿಲ್ಲ. ಒಮ್ಮೆ ಸಮಾಧಾನವೆಂದು ತೋರಿದರೂ, ಮತ್ತೆ ಮತ್ತೆ ಅದೇ ಕೃತಿಯನ್ನು ಸಾವಧಾನವಾಗಿ ಪರಿಶೀಲಿಸಿ ಅದರಲ್ಲಿರಬಹುದಾದ ಲೋಪದೋಷಗಳನ್ನು ತಿದ್ದುವರು, ಇನ್ನಷ್ಟು ಚೆಲವು ಮೂಡಿಸಬಹುದಾದರೆ ಮೂಡಿಸುವರು. ಆದುದರಿಂದಲೆ ಅವರ ಕೃತಿಗಳು, ಚಿತ್ರಗಳಾಗಲಿ, ಶಿಲ್ಪವಾಗಲಿ, ಕಲ್ಪನಾಫಲಕಗಳಾಗಲಿ, ಹಲವು ಬಾರಿ ಪರಿಷ್ಕೃತವಾದುವು. ಒಮ್ಮೆ ಸಿದ್ಧವಾದುದು ಪರಿಪೂರ್ಣವೆಂಬ ಹಟ ಅವರಿಗಿರಲಿಲ್ಲ; ಅದರ ಮೇಲೆ ಮತ್ತೆ ಕೈಯಾಡಿಸಬಾರದೆಂಬ ನಿಷೇಧವೂ ಇರಲಿಲ್ಲ. ತಮ್ಮ ಮನಸ್ಸಿಗೆ ಸಮಾಧಾನವಾಗುವ ವರೆಗೂ ಅದು ಮುಗಿಯದ ಕೃತಿಯೆ. ತಮಗೇ ಮೆಚ್ಚುಗೆಯಾಗದಿದ್ದರೆ ಬೇರೆಯವರಿಗೆ ಮೆಚ್ಚುಗೆಯಾಗುವುದು ಹೇಗೆಂದು ಅವರ ಎಣಿಕೆ. ವಿಶ್ವಾಸಿಗಳ ಮೆಚ್ಚುಗೆಯ ಮಾತುಗಳಿಗೆ ಅವರು ಸೋತವರಲ್ಲ; ಅದು ಔಪಚಾರಿಕವೊ ಅಪ್ರಾಮಾಣಿಕವೊ ಇದ್ದೀತೆಂದು ಅವರು ಬಲ್ಲರು. ಆದರೆ ಬೇರೆ ಕಲಾವಿದರು ತಮ್ಮ ಕಲಾಕೃತಿಗಳನ್ನು ವಿಮರ್ಶೆಗೆ, ಪರಿಶೀಲನೆಗೆ, ಸಲಹೆಗೆ ಅವರಲ್ಲಿಗೆ ಕೊಂಡೊಯ್ದಾಗ, ಅವರು ಉಪಚಾರಕ್ಕಾಗಲಿ ದಾಕ್ಷಿಣ್ಯಕ್ಕಾಗಲಿ ಕಟ್ಟು

ಬೀಳದೆ ತಮಗೆ ತೋರಿದುದನ್ನು ಮುಚ್ಚುಮರೆಯಿಲ್ಲದೆ ಹೇಳುವರು. ಪ್ರಾಮಾಣಿಕತೆಯ ನೆಲೆಯಿಂದ ಅವರು ಜಾರಬೇಕಾದ ಅಗತ್ಯ ಅವರಿಗೆಂದೂ ಕಾಣಲಿಲ್ಲ .

ತಮ್ಮನ್ನು ತಾವು ಕಲಾವಿದ್ಯಾರ್ಥಿಯೆಂದು, ಸಾಧಕನೆಂದು ಬಗೆದದ್ದು ಪ್ರಾಮಾಣಿಕವಾಗಿಯೆ, ಕಲೆಯ ಕ್ಷೇತ್ರ ಸಮುದ್ರಗಂಭೀರವೆಂದೂ ಗಗನವಿಶಾಲವೆಂದೂ ದಿಟವಾಗಿಯೆ ನಂಬಿದ್ದವರು ಅವರು; ಅದರ ಮೇಲೆ ಪ್ರಭುತ್ವವನ್ನು ಪಡೆದುಕೊಳ್ಳಲು ಒಂದು ಜೀವಿತವು ಸಾಲದೆಂದೂ ಅವರ ದೃಢವಾದ ನಂಬಿಕೆಯೆ. ಹೀಗಿದ್ದುದರಿಂದ ಅವರು ತಮ್ಮ ಹೆಗ್ಗಳಿಕೆಯನ್ನು ಸಭೆಗಳಲ್ಲಿ, ಪತ್ರಿಕೆಗಳಲ್ಲಿ ಮೆರೆದುಕೊಳ್ಳಬೇಕೆಂಬ ಹಂಬಲ ಅವರನ್ನೆಂದೂ ಕಾಡಲಿಲ್ಲ . 1951ರ ನವೆಂಬರ್ ತಿಂಗಳಲ್ಲಿ ಮದರಾಸಿನ ವಿಮರ್ಶಕರಾದ ವಿ.ಆರ್. ರತ್ನಂ ಎಂಬಾತ ವೆಂಕಟಪ್ಪನ ಕಲೆಯನ್ನು ಕುರಿತು ಜನಪ್ರಿಯ ಪತ್ರಿಕೆಯೊಂದರಲ್ಲಿ ಲೇಖನ ಬರೆಯಬೇಕೆಂದು ಬಯಸಿ ವೆಂಕಟಪ್ಪನ ಬಾಳವಿವರಗಳನ್ನು ತಿಳಿದುಕೊಳ್ಳುವ ಸಲುವಾಗಿ ಅವರಿಗೆ ಪತ್ರವೊಂದನ್ನು ಬರೆದರು. ಅದಕ್ಕೆ ವೆಂಕಟಪ್ಪನ ಉತ್ತರ —

"ನನ್ನನ್ನು ಕುರಿತು ನೀವು ಪತ್ರಿಕೆಗಳಲ್ಲಿ ಬರೆಯಬೇಕೆಂದು ಬಯಸಿದ್ದೀರಷ್ಟೆ, ಆ ವಿಚಾರವಾಗಿ ನಾನು ಸ್ಪಷ್ಟವಾಗಿ ಹೇಳುವುದು ಇಷ್ಟು. ಇಂಥ ಪ್ರಚಾರಗಳಲ್ಲಿ ನನಗೇನು ಇಷ್ಟವಿಲ್ಲ . ತನ್ನನ್ನು ತಾನು ಜಾಹಿರಾತು ಮಾಡಿಕೊಳ್ಳುವುದನ್ನು ನಾನೆಂದೂ ಒಪ್ಪಲಾರೆ. ಹಿಂದೆ ಹಲವು ಬಾರಿ ಈ ಬಗೆಯ ಬರಹಗಳಿಗೆ ನಾನು ಸಮ್ಮತಿಯನ್ನು ನಿರಾಕರಿಸಿದ್ದೇನೆ. ಅವೆಲ್ಲ ಒಣಜಂಬವೆಂದು ನನ್ನ ಅನಿಸಿಕೆ; ನನಗೆ ಸುತರಾಂ ಇಷ್ಟವಿಲ್ಲ."

ಬೆಂಗಳೂರಿನ ಕಲಾವಿದ ರುಮಾಲೆ ಚೆನ್ನಬಸವಯ್ಯನವರು ವೆಂಕಟಪ್ಪನನ್ನು ಬಲ್ಲವರು; ಅವರ ಬಳಿ ಹೋಗಿಬರುತ್ತಿದ್ದವರು; ಅವರನ್ನು ಕಂಡರೆ ಗೌರವಬುದ್ಧಿಯುಳ್ಳವರು. 1946ರಷ್ಟು ಹಿಂದೆಯೆ ಅವರು ವೆಂಕಟಪ್ಪನವರ ಬಾಳವಿಚಾರವಾಗಿ ಒಂದು ಟಿಪ್ಪಣಿಯನ್ನು ಅವರಿಂದ ಬಯಸಿದ್ದರು. ಆದರೆ ವೆಂಕಟಪ್ಪ ಕೊಡಲು ನಿರಾಕರಿಸಿದ್ದರು. ಅದಕ್ಕೂ ಹಿಂದೆ 1954ರಲ್ಲಿ ರಾಮನಾಡು ಜಿಲ್ಲೆಯ ಚೊಕ್ಕಲಿಂಗಂ ಎಂಬ ನ್ಯಾಯಾಂಗವಿದ್ಯಾರ್ಥಿಯು ಪತ್ರಕರ್ತರೂ ಆಗಿದ್ದು ಬೆಂಗಳೂರಿಗೆ ಬಂದಾಗ ವೆಂಕಟಪ್ಪನ ಕಲಾಕೃತಿಗಳನ್ನು ನೋಡಿ ಬೆರಗಾಗಿ, ಅವರ ವಿಚಾರ ತಮಿಳುನಾಡಿನ ಜನರಿಗೆ ಪತ್ರಿಕಾ ಪ್ರಕಟನೆಯ ಮೂಲಕ ತಿಳಿಯಪಡಿಸುವುದಾಗಿ ಹೇಳಿದಾಗ ವೆಂಕಟಪ್ಪ "ನನ್ನ ವಿಚಾರ ತಿಳಿದು ಯಾರಿಗೂ ಏನೂ ಆಗಬೇಕಾದದ್ದಿಲ್ಲ" ಎಂದು ಅವರ ಆಸೆಯನ್ನು ಅಷ್ಟಕ್ಕೆ ಮೊಟಕುಮಾಡಿದರು. 1956ರಲ್ಲಿ ಬೆಂಗಳೂರು ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿದ್ದ ಡಿ.ಕೆ. ಸೇನಗುಪ್ತ ವೆಂಕಟಪ್ಪನ ಸ್ಟುಡಿಯೋಗೆ ಬಂದು ಅವರ ಕಲಾಕೃತಿಗಳನ್ನೆಲ್ಲ ನೋಡಿ ಸಂತೋಷಪಟ್ಟು, ಕರ್ನಾಟಕದ ಹಿರಿಮೆಯ ಕಲಾವಿದನೆಂದು ವೆಂಕಟಪ್ಪನ ಭಾವಚಿತ್ರವೊಂದನ್ನು ಆಕಾಶವಾಣಿಯ ಕೇಂದ್ರದಲ್ಲಿ ಜನರು ನೋಡುವಂತಾಗಲೆಂದು ಕೇಳಿದರು. ವೆಂಕಟಪ್ಪ ಬೇಡವೆಂದು ಹೇಳಿ, ಅಂಥ ಜಾಹಿರಾತುಗಳಲ್ಲಿ ತಮಗಿಷ್ಟವಿರದೆಂದು ಸ್ಪಷ್ಟಪಡಿಸಿದರು.

ಜನರ ಕಣ್ಣಿಗೆ ತಾವು ಬೀಳಬೇಕೆಂದಾಗಲಿ, ಜನರೆದುರು ಮೆರೆಯಬೇಕೆಂದಾಗಲಿ, ತಮ್ಮ ಪ್ರತಿಭೆ ಜನರಿಗೆ ಮನವರಿಕೆಯಾಗಬೇಕೆಂದಾಗಲಿ, ತಮ್ಮ ಕಲಾಕೃತಿಗಳು ನಾಲ್ಕು ಕಡೆ

ಹರಡಬೇಕೆಂದಾಗಲಿ ಅವರೆಂದೂ ಬಯಸಲಿಲ್ಲ. ಅದಕ್ಕೆ ಮುಖ್ಯಕಾರಣ, ತಾವು ಇನ್ನೂ ಸಿದ್ಧಿಯನ್ನು ಪಡೆದವರಲ್ಲ, ಸಾಧನೆಯ ದಾರಿಯಲ್ಲಿ ನಡೆಯುತ್ತಿರುವವರು, ಜನರು ಮೆಚ್ಚಿಕೊಳ್ಳಬೇಕಾದ ಹಿರಿಮೆ ತಮಗಿನ್ನೂ ಕೈಗೂಡಿಲ್ಲ ಎಂಬ ದೃಢವಾದ ನಂಬಿಕೆ. ತಮಗಿಲ್ಲದ ಗುಣವನ್ನು ಇದೆಯೆಂದು ಕಾಣಿಸಿದರೆ, ಅಥವಾ ಇರುವುದಕ್ಕಿಂತ ಹೆಚ್ಚು ತೋರಿಸಿದರೆ, ಅದು ಮೋಸವಾಯಿತು, ಕಪಟವಾಯಿತು. ಅಪರಿಗ್ರಹ ವ್ರತವನ್ನು ತೊಟ್ಟ ತಾವು ಬಾಳಿನುದ್ದಕ್ಕೂ ಪ್ರಾಮಾಣಿಕರಾಗಿರಬೇಕಲ್ಲವೆ? ತೋರಿಕೆಗೆ ಮಾತ್ರ ಪ್ರಾಮಾಣಿಕತೆ ಎಂದರೆ ಅದು ಪ್ರಾಮಾಣಿಕತೆಯೆ? ದಿಟವಾಗಿ, ತ್ರಿಕರಣಪೂರ್ವಕವಾಗಿ, ಅದನ್ನು ನಡೆಸಿಕೊಂಡುಬಂದವರು ವೆಂಕಟಪ್ಪ. ಹಾಗೆಂದೆ ಪ್ರಶಸ್ತಿ, ಪದವಿ, ಪ್ರತಿಷ್ಠೆ, ಅಧಿಕಾರ, ಯಶಸ್ಸು, ಸಂಪತ್ತು ಒಂದರ ಕಡೆಗೂ ಅವರ ಗಮನ ಹರಿಯಲಿಲ್ಲ. ಎಡೆಬಿಡದೆ, ಬೇರೆ ಆಸಕ್ತಿಯಾಗಲಿ ಹವ್ಯಾಸವಾಗಲಿ ಇರದೆ, ತದೇಕಚಿತ್ತದಿಂದ ಕಲೆಯನ್ನು ಐವತ್ತು ವರ್ಷಗಳಿಗೂ ಮೀರಿ ಅಧ್ಯಯನಮಾಡಿದರೂ ಕಲೆಯ ಗುಟ್ಟನ್ನು ಅರಿಯಲಾಗಲಿಲ್ಲವೆಂಬ ಕೊರಗು ಅವರ ಮುಪ್ಪಿನಲ್ಲೂ ಅವರನ್ನು ಕಾಡುತ್ತಿದ್ದಿತು.

ಈ ಪ್ರವೃತ್ತಿಯಿದ್ದುದರಿಂದಲೆ ಅವರು ತಮ್ಮ ಒಂದೊಂದು ಚಿತ್ರವನ್ನೂ ಶಿಲ್ಪವನ್ನೂ ಫಲಕವನ್ನೂ ಮತ್ತೆ ಮತ್ತೆ ಪರಿಷ್ಕರಿಸುವರು. ಬೆಂಗಳೂರಿಗೆ ಬಂದಮೇಲೆ ತಮ್ಮ ಸ್ಟುಡಿಯೋದಲ್ಲಿ ದಿನವೂ ತಮ್ಮ ಕೃತಿಗಳನ್ನೇ ದಿಟ್ಟಿಸಿ ದಿಟ್ಟಿಸಿ ನೋಡುವುದು ವಾಡಿಕೆ. ಹೊಸಕೃತಿಗಳನ್ನು ಮಾಡುವ ತವಕಕ್ಕಿಂತ ಹೆಚ್ಚಾಗಿ ತಾವು ಈಗಾಗಲೆ ಮಾಡಿದ ಕೃತಿಗಳು ದೋಷ ದೂರವಾಗಿರಬೇಕೆಂಬ ಕಾತರ ಅವರದ್ದು. ಹೀಗಾಗಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಕಲಾಕೃತಿಗಳನ್ನು ರಚಿಸುವ ಗೋಜಿಗೆ ಹೋಗದೆ, ಸಣ್ಣಸಂಖ್ಯೆಯ ಕೃತಿಗಳೇ ಆದರೂ, ಒಂದೊಂದೂ ಸಾಧ್ಯವಾದಷ್ಟು ಪರಿಪೂರ್ಣವಾಗಿರಬೇಕು ಎಂಬುದು ಅವರ ದೃಷ್ಟಿ. ವಸ್ತುವಿನಲ್ಲಿ ನೈಜತೆ, ಸಂವಿಧಾನದಲ್ಲಿ ಪ್ರಗಲ್ಭತೆ, ಭಾವದಲ್ಲಿ ಹೃದ್ಯತೆ ಇವನ್ನು ತಮ್ಮ ಕೃತಿಗಳಲ್ಲಿ ಮೂಡಿಸಲು ಅವರು ಎಷ್ಟು ಶ್ರಮವಾದರೂ ಲೆಕ್ಕಿಸುತ್ತಿರಲಿಲ್ಲ. ಒಂದೊಂದು ಕೃತಿಯ ಮೇಲೆ ಅವರು ಅಡಿಗಡಿಗೆ ಕೈಯಾಡಿಸಿ, ಒದಗಿಬಂದಿದ್ದ ದೋಷಗಳನ್ನು ತಿದ್ದಿ, ಗುಣವನ್ನು ಹೆಚ್ಚಿಸಿ, ವಿವರಗಳಲ್ಲೂ ಒಟ್ಟಾರೆಯೂ ಕಲೆಗಾರಿಕೆಯು ತುಂಬಿ ಬರಬೇಕೆಂಬುದೂ ಪ್ರಾಮಾಣಿಕತೆಯ ಫಲವೆ. ಯಾವುದಾದರೊಂದು ಕಲಾಕೃತಿಯನ್ನು ಮಾಡುವಾಗ ಅವರಿಗೆ ಆತುರವಿರದು, ಆಯಾಸವಿರದು, ಬೇರೆ ಆಲೋಚನೆಯಿರದು; ಕೈಯಂತೆ ಮನಸ್ಸೂ ಅದರಲ್ಲಿಯೆ ತೊಡಗುವುದು.

ಆದರೆ ಕಲಾಕೃತಿಯ ರಚನೆಗೆ ಮನೋಧರ್ಮವಿರಬೇಕೆಂದು ನಂಬಿದ್ದವರು ಅವರು. ಯಾವಾಗ ಬೇಕೆಂದರೆ ಆಗ ಚಿತ್ರದ, ಶಿಲ್ಪದ, ಫಲಕದ ಕೆಲಸಕ್ಕೆ ಕೂಡುವುದು ಅವರ ವಾಡಿಕೆಯಲ್ಲ. ಅವರ ಡೈರಿಯಲ್ಲಿ ಮತ್ತೆ ಮತ್ತೆ ಕಾಣಸಿಗುವ ಒಕ್ಕಣೆ. ''ಇವತ್ತು ಏನೋ ಮನೋಧರ್ಮವಿಲ್ಲ, ಯಾವ ಕಲಾಕೃತಿಯನ್ನೂ ಕೈಗೆತ್ತಿಕೊಳ್ಳಲಿಲ್ಲ''. ಯಾರ ನಿರ್ಬಂಧಕ್ಕೂ ಅಪೇಕ್ಷೆಗೂ ಅವರು ಎಂದೂ ಯಾವ ಕಲಾಕೃತಿಯನ್ನು ಮಾಡಿದವರಲ್ಲ. ಒಳಗಿನ ಒತ್ತಡಕ್ಕೆ ಮಾತ್ರ ಮಣಿಯುವರು. ಬೆಂಗಳೂರಿಗೆ ಬಂದ ಹೊಸತರಲ್ಲಿ ಅವರಿಗೆ ಉತ್ಸಾಹವಿದ್ದಿತಾದರೂ ಬರುಬರುತ್ತ ತೊಂದರೆಗಳೆ ಹೆಚ್ಚಿ ಅವರ ಮನೋಧರ್ಮ

ಕಲಾಸೃಷ್ಟಿಗೆ ಅಷ್ಟೇನು ಅನುಕೂಲವಾಗಿರಲಿಲ್ಲ. ಆದುದರಿಂದಲೆ ಇಲ್ಲಿ ಅವರು ಹೊಸದೇನನ್ನೂ ಮಾಡಲೆ ಇಲ್ಲ. ಹಿಂದೆ (ಎಂದರೆ ಮೈಸೂರಿನಲ್ಲಿ) ಮಾಡಿದ ಕೃತಿಗಳ ಪರಿಷ್ಕರಣವೆ ಇಲ್ಲಿ ಅವರ ಗಮನವನ್ನು ಬಹುಮಟ್ಟಿಗೆ ಸೆಳೆದದ್ದು. ಸ್ವತಂತ್ರ ಕೃತಿರಚನೆಗೆ ಅಗತ್ಯವಾದ ಮನೋಧರ್ಮ ಬೆಂಗಳೂರಿನಲ್ಲಿ ಅವರಿಗೆ ಬರಲೆ ಇಲ್ಲವೆಂದರೂ ತಡೆದೀತು. ಹಳೆಯ ಕೃತಿಗಳ ಪರಿಷ್ಕರಣಕ್ಕೆ ಅಂಥ ಮನೋಧರ್ಮ ಬೇಕಾಗಲಿಲ್ಲವೊ ಏನೊ.

ಬೇರೆಯವರ ವಿಚಾರದಲ್ಲಿ, ಲೋಕ ವ್ಯವಹಾರದಲ್ಲಿ ಎಷ್ಟು ಪ್ರಾಮಾಣಿಕತೆ ಅವರಲ್ಲಿದ್ದಿತೊ ಅಷ್ಟೆ ಪ್ರಾಮಾಣಿಕತೆ ತಮ್ಮ ಏಕಾಂತ ವ್ಯವಹಾರದಲ್ಲಿಯೂ ಇದ್ದಿತು. ತಾವು ಇತರರಲ್ಲಿ ದೋಷವೆಂದು ಕಂಡುದನ್ನು ತಮ್ಮಲ್ಲಿಯಾಗಲಿ ಇರಗೊಡಿಸರು. 'ಬೇರೆಯವರಿಗೊಂದು ನ್ಯಾಯ, ತನಗಿನ್ನೊಂದು ನ್ಯಾಯ' ಎಂದು ಅವರನ್ನು ಯಾವ ವಿಚಾರದಲ್ಲಿಯೂ ಯಾರೂ ಆಕ್ಷೇಪಿಸುವಂತಿಲ್ಲ. ಈ ಹುಲಿಗೆ ತನ್ನ ಕಾಡೂ ಒಂದೆ, ಪರರ ಕಾಡೂ ಒಂದೆ. ಲೋಕಕ್ಕೆ ಅವರು ತೋರಿಸಿದ ಮುಖವೆ ಅವರ ದಿಟವಾದ ಮುಖ; ಅದನ್ನು ಬಿಟ್ಟು ಬೇರೊಂದು ಮುಖ ಅವರಿಗಿರಲಿಲ್ಲವೆಂಬುದು ದಿಟವೆ.

ಅಪರಿಗ್ರಹವ್ರತವನ್ನು ಕೈಗೊಂಡಮೇಲೆ ಬೇರೆಯವರ ನೆರವನ್ನು ಪಡೆದುಕೊಳ್ಳುವುದರ ವಿಚಾರವಾಗಿ ಎಚ್ಚರದಿಂದಿರಬೇಕಾದುದೂ ಪ್ರಾಮಾಣಿಕತನವೆ ತಾನೆ? ಅನುಕೂಲವಾದಾಗ ವ್ರತಪರಿಪಾಲನೆ, ಪ್ರತಿಕೂಲವಾದಾಗ ವ್ರತಭಂಗ ಎನ್ನುವವರ ಗುಂಪಿಗೆ ಸೇರಿದವರಲ್ಲ ವೆಂಕಟಪ್ಪ. ದಿಟವಾಗಿ ಅವರು ಬದುಕಿನುದ್ದಕ್ಕೂ ಯಾರ ನೆರವನ್ನೂ ದಾನವಾಗಿ, ಪುಕ್ಕಟೆಯಾಗಿ ಬಯಸಿದವರಲ್ಲ, ಪಡೆದುಕೊಂಡವರಲ್ಲ. ತಾವು ಪಡೆದುಕೊಂಡುದಕ್ಕೆಲ್ಲ ಏನಾದರೂ ಪ್ರತಿಫಲವನ್ನು ನೀಡಿಯೇ ತೀರಬೇಕು ಎನ್ನುವ ಹಟ ಅವರದ್ದು. ಈ ವಿಚಾರ ಮೊದಲೆ ಬಂದಿದೆಯಷ್ಟೆ. ಅಲ್ಲಿ ಅವರ ಸ್ವತಂತ್ರ ಮನೋವೃತ್ತಿಯ ನಿದರ್ಶನವಾಗಿ ಇದನ್ನು ಹೇಳಿತು. ಸ್ವತಂತ್ರ ಮನೋವೃತ್ತಿಗೂ ಅಪರಿಗ್ರಹವ್ರತಕ್ಕೂ ಇರುವ ನಂಟನ್ನು ಸೂಚಿಸುವುದು ಈ ವಿವರವನ್ನು ಇಲ್ಲಿ ಮತ್ತೆ ಎತ್ತಿಕೊಂಡಿರುವುದರ ಉದ್ದೇಶ.

೭

ವೆಂಕಟಪ್ಪನ ಬದುಕಿನಲ್ಲಿ ಅಪರಿಗ್ರಹವ್ರತ, ಸ್ವತಂತ್ರ ಮನೋವೃತ್ತಿ, ಅಸಹನೆ, ಅಚ್ಚುಕಟ್ಟು, ಮೊಂಡಾಟ, ಕಟ್ಟುನಿಟ್ಟು, ಹಟ, ಕಟುವಾದ ಮಾತು, ಹೀಗೆ ಹಲವಾರು ವಿವರಗಳು ಒಕ್ಕೂಟವಾಗಿ ಬೇರೂರಿ ಕಲೆತುಕೊಂಡಿದ್ದುವು. ಇವುಗಳಲ್ಲಿ ಪರಸ್ಪರ ಸಂಬಂಧವಿಲ್ಲದೆ ಇಲ್ಲ. ಆದರೆ ಇವೆಲ್ಲಕ್ಕೂ ಪ್ರೇರಕವಾಗಿ ಯಾವುದಾದರೂ ಪ್ರಸಂಗವೊ ಮತ್ತೇನೊ ಇದ್ದಿತೊ? ಮೇಲೆ ಕಾಣಿಸಿದ ವಿವರಗಳು ಒಬ್ಬನಲ್ಲಿ ಇದ್ದರೆ ಆಶ್ಚರ್ಯವಲ್ಲ; ಆದರೆ ಅವುಗಳ ವಿಚಾರವಾಗಿ ಮಿತಿಮೀರಿದ ಆಗ್ರಹವಿದ್ದರೆ ಏನೊ ಕಾರಣವಿರಬೇಕು ಎನಿಸುತ್ತದೆ. ಏನೊ ಅಚಾತುರ್ಯ ಯಾವಾಗಲೊ ನಡೆದಿರಬೇಕು, ಅದರ ಫಲವಾಗಿಯೆ ಈಗ ಹೀಗೆ ಸೆಟೆದುಕೊಂಡಿದ್ದಾರು, ಮುದುಡಿಕೊಂಡಿದ್ದಾರು, ಮುಟ್ಟಿದರೆ ಮುನಿದಾರು ಎನಿಸುತ್ತದೆ. ಅಂಥ ಪ್ರಸಂಗ ಏನೆಂಬುದಾಗಲಿ, ಅವರ ವ್ಯಕ್ತಿತ್ವದ ಓರೆಕೋರೆಗೆ ಕಾರಣವೇನು ಎಂದಾಗಲಿ ಸ್ಪಷ್ಟವಾಗಿಲ್ಲ. ಅವರ ಬದುಕಿನ ಮೊದಲ ವಿವರಗಳು ತಿಳಿದು

ಬರುವುದಿಲ್ಲ. ಅವರ ತಂದೆತಾಯಿಯರ ವಿಚಾರವಾಗಲಿ, ಎಳೆತನದಲ್ಲಿ ಇದ್ದ ಸ್ಥಿತಿಗತಿಗಳಾಗಲಿ, ಆಗ ಅನುಭವಿಸಿದ ಆಗುಹೋಗುಗಳಾಗಲಿ ಯಾರಿಗೂ ತಿಳಿಯದು. ವೆಂಕಟಪ್ಪ ಈ ವಿಚಾರವಾಗಿ ಏನೂ ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಅವರನ್ನು ಎಳೆತನದಿಂದಾಗಲಿ ತಾರುಣ್ಯದಿಂದಾಗಲಿ ಬಲ್ಲವರು ಯಾರೂ ಇಲ್ಲ. ತಿಳುವಳಿಕೆ ಬಂದ ಕಾಲದಿಂದಲೂ ನೆಂಟರಿಂದ ದೂರವಾಗಿಯೆ ಇರುತ್ತ, ಒಂಟಿಯಾಗಿದ್ದರಾಗಿ ಅವರ ವಿಚಾರ ಹೇಳಬಲ್ಲ ಹಿರಿಯರೂ ಯಾರು ಇಲ್ಲ.

ನಮಗೆ ತಿಳಿದಂತೆ ಅವರ ಬದುಕಿನ ಮೊದಲ ಭಾಗದಲ್ಲೆ ಒಂದು ನಿರಾಶೆ ಅವರನ್ನು ಕಾಡಿತು. ಇದನ್ನು ಅವರು ಬಾಯಿಬಿಟ್ಟು ಹೇಳದಿದ್ದರೂ ಅವರ ದಿನಚರಿಯ ಒಕ್ಕಣೆಯಿಂದ ಸುಲಭವಾಗಿ ಊಹಿಸಿಕೊಳ್ಳಬಹುದು. ಕಲ್ಕತ್ತೆಯಲ್ಲಿ ಕಲಾಭ್ಯಾಸ ಮುಗಿಸಿ ಮೈಸೂರಿಗೆ 1916ರಲ್ಲಿ ಹಿಂದಿರುಗಿದ ಸಂದರ್ಭದಲ್ಲಿ ಕಲ್ಕತ್ತೆಯ ಕಲಾಶಾಲೆಯ ಪ್ರಿನ್ಸಿಪಲ್ ಆಗಿದ್ದ ಪರ್ಸಿ ಬ್ರೌನ್ ಮೈಸೂರು ಸರಕಾರಕ್ಕೆ ಬರೆದ ಕಾಗದದಲ್ಲಿ ವೆಂಕಟಪ್ಪನನ್ನು ಹೊಗಳಿ ಅವರನ್ನು ಉಚ್ಚ ಶಿಕ್ಷಣಕ್ಕಾಗಿ ವಿದೇಶಕ್ಕೆ ಕಳುಹಿಸಬೇಕೆಂದು ಸಲಹೆಮಾಡಿದ್ದನಷ್ಟೆ. ವೆಂಕಟಪ್ಪ ವಿದೇಶದಲ್ಲಿ ಹೆಚ್ಚಿನ ಶಿಕ್ಷಣ ಪಡೆದುಕೊಳ್ಳಲು ಕಾತರರಾಗಿದ್ದರು. ಆದರೆ ಕಾರಣಾಂತರದಿಂದ ಇದು ಕೈಗೂಡಲಿಲ್ಲ. ಮೈಸೂರಿನಲ್ಲೆ ಇರಬೇಕಾಯಿತು. ಇದು ಅವರ ಬದುಕಿನಲ್ಲಿ ಒದಗಿದ ಮೊದಲ ನಿರಾಶೆ. ಯಾವೊಬ್ಬ ವ್ಯಕ್ತಿಯೂ ಅದಕ್ಕೆ ಕಾರಣನಲ್ಲವೆಂದೂ, ಸರಕಾರ ಒಪ್ಪಿತಾದರೂ ವಿಶ್ವಸಮರದ ಅನಿಶ್ಚಿತ ಪರಿಸ್ಥಿತಿ ಅವರ ವಿದೇಶಯಾತ್ರೆಗೆ ಅಡ್ಡಿಯಾಯಿತೆಂದೂ ಅವರು ಬಲ್ಲರು. ಆದರೂ ಅದರಿಂದಾದ ದುಗುಡ ಮಾತ್ರ ಕಡಮೆಯಾಗಲಿಲ್ಲ. ಚಿತ್ರಕಲೆಯನ್ನೆ ಕೈಬಿಟ್ಟು ಸಂಗೀತದ ಕಡೆ ತಿರುಗಿದುದೂ ಇದೇ ಕಾರಣದಿಂದ ಎನ್ನಬಹುದು. ಇದರಲ್ಲಿ ಪ್ರೌಢಿಮೆಯ ನಿರ್ಧಾರವನ್ನು ಯಾರೂ ಕಾಣಲಾರರು! ಮಕ್ಕಳ ಮುನಿಸಿನಂತೆ, ಹಟದಂತೆ ಎಂದರೂ ತಡೆದೀತು!

ವೆಂಕಟಪ್ಪನಿಗೆ ವಿದೇಶಕ್ಕೆ ಹೋಗಿ ಕಲಿಯಬೇಕೆಂಬ ಚಪಲ ಒದಗಿದುದಾದರೂ ಹೇಗೆ? ಆ ಕಾಲದಲ್ಲಿ ವಿದೇಶದ ಶಿಕ್ಷಣವೆಂದರೆ ಹಲವರಿಗೆ ಅಪೇಕ್ಷೆಯಿದ್ದುದು ಸರಿಯೆ. ಆದರೆ ದೇಶೀ ಕಲೆಯ ಪುರಸ್ಕಾರಕ್ಕಾಗಿ ಪರಿಣತರು ಹೆಣಗಾಡುತ್ತಿದ್ದ ಕಾಲ ಅದು; ರಾಷ್ಟ್ರೀಯಭಾವನೆ ಬೆಳೆದು ಹರಡಿಕೊಳ್ಳುತ್ತಿದ್ದ ಕಾಲ. ಭಾರತೀಯರಿಗೆ ತಮ್ಮದೆ ಆದ, ವಿಶಿಷ್ಟವಾದ ವಿಶ್ವಮಾನ್ಯ ವಾದ ಕಲಾಸಂಪ್ರದಾಯವಿದೆಯೆಂದು ಎಲ್ಲರಿಗೂ ತಿಳಿಯುತ್ತಿದ್ದ ಕಾಲ ಅದು. ವೆಂಕಟಪ್ಪನ ಗುರುಗಳಾದ ಅವನೀಂದ್ರನಾಥ ಠಾಕುರರು ವಿದೇಶಕ್ಕೆ ಹೋಗಬೇಕೆಂದು ಎಂದೂ ಬಯಸಿದವರಲ್ಲ; ಹೊರದೇಶಗಳ ಕಲಾಶಿಕ್ಷಣವನ್ನು ಎಂದೂ ಮೆಚ್ಚಿಕೊಂಡವರಲ್ಲ. "ಹೊರದೇಶಗಳಿಗೆ ಹೋಗಿ ನೋಡಿ ಕಲಿಯಬೇಕಾದದ್ದು ಬಹಳ ಇದೆ" ಎಂದು ರವೀಂದ್ರನಾಥ ಠಾಕುರರು ಹೇಳುತ್ತಲೆ ಇದ್ದರೂ ಅವನೀಂದ್ರನಾಥರು ಅದಕ್ಕೆ ಕಿವಿಗೊಡಲಿಲ್ಲ. ಕಲಾಶಿಕ್ಷಣಕ್ಕೆ ಬೇಕಾದುದೆಲ್ಲ (ಸಾಹಿತ್ಯ, ಸಂವಿಧಾನ, ವಸ್ತು, ಪರಂಪರೆ, ಸಾಮಗ್ರಿ ಇತ್ಯಾದಿ) ನಮ್ಮಲ್ಲಿಯೆ ಇದೆ ಎಂದು ಅವನೀಂದ್ರನಾಥರು ದೃಢವಾಗಿ ನಂಬಿದ್ದರು. ಹೀಗಿರುವಾಗ ವೆಂಕಟಪ್ಪನಿಗೆ ವಿದೇಶದ ಶಿಕ್ಷಣದಲ್ಲಿ ಒಲವು ಹೇಗೆ ಮೂಡಿಕೊಂಡಿತು?

ಇದರಲ್ಲಿ ಪರ್ಸಿ ಬ್ರೌನರ ಪ್ರೇರಣೆ ಇದ್ದೀತೆಂದು ತೋರುತ್ತದೆ. ಭಾರತೀಯ ಕಲೆಯ ವಿಚಾರವಾಗಿ ಹ್ಯಾವೆಲ್ ಮಹಾಶಯರಿಗಿದ್ದ ಆದರ, ಕಳಕಳಿ ಬ್ರೌನರಿಗಿರಲಿಲ್ಲ . ಭಾರತೀಯ ಕಲೆ ವಿದೇಶೀ ಪ್ರಭಾವದಿಂದಲೆ ಬೆಳೆಯಬೇಕು ಎಂದು ನಂಬಿದ್ದವರು ಅವರು. ವೆಂಕಟಪ್ಪನ ಸಹಾಧ್ಯಾಯಿಗಳಲ್ಲಿ ಕೆಲವರು ವಿದೇಶದಲ್ಲಿ ಕಲಾಶಿಕ್ಷಣಕ್ಕಾಗಿ ಹಾತೊರೆಯುತ್ತಿದ್ದುದುಂಟು. ತಮ್ಮ ಶಿಷ್ಯ ಅಶೀತಕುಮಾರ ಹಾಲದಾರರ ವಿಚಾರ ಅವನೀಂದ್ರನಾಥರು ಹ್ಯಾವೆಲ್‌ಗೆ ಬರೆಯುತ್ತ (1925ರ ಸೆಪ್ಟೆಂಬರ್ ಐದರಂದು) "ಅಶೀತ ಹಾಲದಾರನು ಮೊನ್ನೆ ಇಂಗ್ಲೆಂಡಿನಿಂದ ಬಂದ. ಈ ಯುವಕನು ಇಂಗ್ಲೆಂಡಿಗೆ ಹೋಗಬೇಕೆಂದು ತುಂಬ ಕಾತರನಾಗಿದ್ದ . ಆದರೆ ಈಗ ಆ ರೋಗ ವಾಸಿಯಾಗಿ ಹಿಂದಕ್ಕೆ ಬಂದಿದ್ದಾನೆ. ಮತ್ತೆಂದೂ ಕಪ್ಪು ನೀರನ್ನು ದಾಟಿ ಹೋಗುವುದಿಲ್ಲವೆಂದು ನಿರ್ಧರಿಸಿದ್ದಾನೆ!" ಅಶೀತಕುಮಾರರು ವೆಂಕಟಪ್ಪನ ಸಹಾಧ್ಯಾಯಿಯಾಗಿದ್ದವರು; ಕಲ್ಕತ್ತೆಯ ಕಲಾಶಾಲೆಯನ್ನು ಬಿಟ್ಟಮೇಲೆ ಶಾಂತಿನಿಕೇತನಕ್ಕೆ ಹೋಗಿ ಅಲ್ಲಿನ ಕಲಾಭವನದಲ್ಲಿ ಕೆಲಸಮಾಡುತ್ತಿದ್ದವರು. ಅವರ ಮೇಲೆ ಅವನೀಂದ್ರನಾಥರ ಪ್ರಭಾವಕ್ಕಿಂತ ಬ್ರೌನರ ಪ್ರಭಾವ ಹೆಚ್ಚಾಗಿದ್ದಿತು. ಹಾಗೆಯೆ ವೆಂಕಟಪ್ಪನ ಇನ್ನೊಬ್ಬ ಸಹಪಾಠಿ ಪ್ರಮೋದಕುಮಾರ ಚಟರ್ಜಿಯನ್ನು ಅವನೀಂದ್ರನಾಥರು "ಪಿಬಿ ಅಂಡ್ ಕೊ (ಪರ್ಸಿ ಬ್ರೌನ್ ಸಂಗಡಿಗರು) ಅವರ ವಿದ್ಯಾರ್ಥಿ, ಇಂಗ್ಲೆಂಡಿನಿಂದ ಮರಳಿರುವ ಜಾಹೀರಾತು ಕಲಾವಿದ" ಎಂದು ಹ್ಯಾವೆಲರಿಗೆ ಬರೆದ ಕಾಗದದಲ್ಲಿ ಬಣ್ಣಿಸಿದ್ದರು. (ಇವರೆಡೂ ಪತ್ರಗಳು ಶಾಂತಿನಿಕೇತನದ "ವಿಶ್ವಭಾರತಿ ಕ್ವಾರ್ಟರ್ಲಿ" ಪತ್ರಿಕೆಯಲ್ಲಿ ಪ್ರಕಟವಾಗಿವೆ; 1982ರ ಸೆಪ್ಟೆಂಬರ್‌ನಲ್ಲಿ ಪ್ರಕಟವಾದ 1981, 1-4 ಸಂಚಿಕೆಗಳು). ಪರ್ಸಿ ಬ್ರೌನರು ತಮ್ಮ ವಿದ್ಯಾರ್ಥಿಗಳಿಗೆ ಇಂಗ್ಲೆಂಡಿಗೆ ಹೋಗಿ ಅಲ್ಲಿನ ರಾಯಲ್ ಕಾಲೇಜಿನಲ್ಲಿ ಕಲಾಶಿಕ್ಷಣವನ್ನು ಮುಂದುವರೆಸುವಂತೆ ಸೂಚಿಸುತ್ತಿದ್ದರೆಂದು ತಿಳಿದುಬರುತ್ತದೆ. ವೆಂಕಟಪ್ಪನು ಈ ಸೂಚನೆಯನ್ನು ಆದರದಿಂದ ಸ್ವೀಕರಿಸಿದ್ದಿರಬೇಕು.

ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ಕಲಾಕೃತಿಗಳನ್ನು ರಚಿಸುವ ಕೆಲಸ ವಹಿಸಿದಮೇಲೆ ಈ ನಿರಾಶೆಯು ಬಹುಮಟ್ಟಿಗೆ ಮರೆಯಾಯಿತೆನ್ನಬಹುದು. ಆಗಲೆ ಮಹಾರಾಜರ ನೆಂಟರೂ ಕಲಾಭಿಮಾನಿಗಳೂ ಆಗಿದ್ದ ಪ್ರಿನ್ಸ್ ಗೋಪಾಲರಾಜೇ ಅರಸಿನವರ, ಲೆಫ್ಟಿನೆಂಟ್ ಕರ್ನಲ್ ಎ.ವಿ. ಸುಬ್ರಹ್ಮಣ್ಯರಾಜೇ ಅರಸಿನವರ ಸ್ನೇಹವೂ ಅವರಿಗೆ ಸಮಾಧಾನವನ್ನು ತಂದಿತು. ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ಮಿರ್ಜಾ ಇಸ್ಮಾಯಿಲರ ಪ್ರೋತ್ಸಾಹವೂ ಇದ್ದಿತು. ಎಲ್ಲಕ್ಕಿಂತ ಮಿಗಿಲಾಗಿ, ವೈಣಿಕಶಿಖಾಮಣಿ ಶೇಷಣ್ಣನವರಲ್ಲಿ ವೀಣಾಭ್ಯಾಸವು ಅವರು ನಿರಾಶೆಯನ್ನು ಮರೆಯುವಲ್ಲಿ ನೆರವಾಯಿತು. ವೆಂಕಟಪ್ಪ ಈ ಕಾಲದಲ್ಲಿ ರಚಿಸಿದ 'ವೀಣೆಯ ಹುಚ್ಚು' ಎಂಬ ಚಿತ್ರ ಇದನ್ನು ಎತ್ತಿ ಹೇಳುತ್ತದೆ. ಶೇಷಣ್ಣನವರ ಸಂಪರ್ಕದಲ್ಲಿ ಅವರ ಕಲಾಸಂಸ್ಕಾರ ಊರ್ಜಿತಗೊಂಡಿತು; ಕಲಾತಪಸ್ಸು ದೃಢವಾಯಿತು. ಆದುದರಿಂದಲೆ ಈ ನಿರಾಶೆಯ ಅವಧಿಯಲ್ಲಿಯೆ ಅವರ ಕಲಾಜೀವನ ಅತ್ಯಂತ ಸೃಜನಾತ್ಮಕವಾಗಿ ಪರಿಣಮಿಸಿತು. ಅವರ ಅತ್ಯುತ್ತಮ ಶಿಲ್ಪಗಳೂ, ಫಲಕಗಳೂ, ವರ್ಣಚಿತ್ರಗಳೂ (ಉದಕಮಂಡಲ ಮತ್ತು ಕೊಡೈಕೆನಾಲ್‌ನಲ್ಲಿ ಮಾಡಿದವು) ಮೈದಳೆದದ್ದು ಆಗಲೆ.

ಅವರ ಬದುಕಿನಲ್ಲಿ ಎರಡನೆಯ ಬಾರಿ ನಿರಾಶೆಯ ಪೆಟ್ಟು ಬಿದ್ದುದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ತೀರಿಕೊಂಡಾಗ (1940ರ ಆಗಸ್ಟ್ ಮೂರರಂದು). ತಮ್ಮ ಪೋಷಕರೆಂದು ಮಾತ್ರವಲ್ಲದೆ, ದಿಟವಾಗಿ ಕಲಾಭಿಮಾನಿಯೆಂದೂ ಸಜ್ಜನರೆಂದೂ ಆ ಮಹಾರಾಜರ ಮೇಲೆ ವೆಂಕಟಪ್ಪನಿಗೆ ಭಕ್ತಿ, ವಿಶ್ವಾಸ. ವೆಂಕಟಪ್ಪ ತನ್ನ ಜೀವನದಲ್ಲಿ ಹೀಗೆ ಹೃದಯತುಂಬಿ ವಿಶೇಷವಾಗಿ ದೈವೀಭಾವನೆಯಿಂದ ಗೌರವಿಸಿದ್ದು ಮೂರೆ ಮಂದಿಯನ್ನು- ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು, ವೀಣೆ ಶೇಷಣ್ಣನವರು, ಕಲಾಗುರು ಅವನೀಂದ್ರನಾಥ ಠಾಕುರರು. ವೆಂಕಟಪ್ಪನ ಅಭಿಮಾನತಾರತಮ್ಯವೂ ಇದೆ ಕ್ರಮದಲ್ಲಿತ್ತು. (ಇವರನ್ನು ಬಿಟ್ಟರೆ ವೆಂಕಟಪ್ಪನಿಗೆ ಗೌರವಾಸ್ಪದರು ಮಹಾತ್ಮಾ ಗಾಂಧಿ ಮತ್ತು ರವೀಂದ್ರನಾಥ ಠಾಕುರರು.) ಮಹಾರಾಜರು ತೀರಿಕೊಂಡಮೇಲೆ ಜರುಗಿದ ಸಂಗತಿಗಳ ನಿರೂಪಣೆ ಈಗಾಗಲೆ ಬಂದಿದೆ. ವೆಂಕಟಪ್ಪ ಮೈಸೂರನ್ನೆ ಬಿಟ್ಟು ಹೊರಡಬೇಕಾಯಿತು. ನಾಲ್ವಡಿಯವರಿಲ್ಲದ ಮೈಸೂರು ಅವರ ವಾಸಕ್ಕೆ ಯೋಗ್ಯವಾಗಿರಲಿಲ್ಲವೊ ಏನೊ!

ಮೈಸೂರು ತನ್ನ ಹುಟ್ಟೂರು, ತಾನು ಬೆಳೆದದ್ದು ಇಲ್ಲೆ; ತನ್ನ ಕಲೆಯ ದಾರಿ ಸ್ಪಷ್ಟವಾದುದು ಇಲ್ಲೆ; ತನ್ನ ಕಲೆಯನ್ನು ಜನ ಮೆಚ್ಚಿಕೊಂಡುದು ಇಲ್ಲೆ. ತನ್ನನ್ನು ಅಭಿಮಾನದಿಂದ ಸಾಕಿದ ಧಣಿ ನಾಲ್ವಡಿ ಕೃಷ್ಣರಾಜ ಒಡೆಯರು ಇರುತ್ತಿದ್ದ ಊರು ಇದೆ. ಊರಿಗೆ ಹೆಸರಾದ ಅರಮನೆಯಲ್ಲೆ ತನ್ನ ಉದ್ಯೋಗ; ಅದರ ಚೆಲುವನ್ನು ಹೆಚ್ಚಿಸುವ ಉದ್ಯೋಗ. ತನ್ನ ನಂಬಿಕೆಗೆ ಆದರಕ್ಕೆ ಅರ್ಹರಾದ ಸ್ನೇಹಿತರು ದೊರೆತದ್ದು ಇಲ್ಲೆ. ಈ ಊರನ್ನು ಬಿಟ್ಟು ಹೊರಡುವಾಗ ಅವರ ಹೃದಯದ ಅಳಲು ಏನಿದ್ದಿತೊ ಅದನ್ನು ಊಹಿಸಿಕೊಳ್ಳಬಹುದು. ತನ್ನ ರಾಜಭಕ್ತಿಯನ್ನು ಸೂರೆಗೊಂಡಿದ್ದ ಮಹಾರಾಜರು ತೀರಿಕೊಂಡದ್ದು ತೀರದ ದುಃಖಕ್ಕೆ ಕಾರಣವಾಯಿತು; ತನ್ನ ಮೆಚ್ಚಿಗೆಯ ಊರನ್ನು ಬಿಡಬೇಕಾದದ್ದು ಉದ್ವೇಗಕ್ಕೆ ಕಾರಣವಾಯಿತು. ಅದಕ್ಕೆ ಕಾರಣರಾದವರ ಮೇಲೆ ಕೋಪ ಉಂಟಾದದ್ದು ಆಶ್ಚರ್ಯವೇನಲ್ಲ.

ಅವರಿಗೆ ಉದ್ಯೋಗಕ್ಕಾಗಿ ಹಲವೆಡೆಗಳಿಂದ ಕರೆ ಬಂದಿತ್ತಾದರೂ ಅವರು ಮೈಸೂರನ್ನು ಬಿಟ್ಟು ಎಲ್ಲಿಗೆ ಹೋಗಲೂ ಸಮ್ಮತಿಸಲಿಲ್ಲ. ಅವರು ಕಲ್ಕತ್ತೆಯಲ್ಲಿ ಓದು ಮುಗಿಸಿ ಮೈಸೂರಿಗೆ ಹಿಂದಿರುಗುವ ಮೊದಲೆ ಅವರಿಗೆ ಸರಕಾರಿ ಉದ್ಯೋಗವೊಂದು ದೊರೆಯುವ ಸಂಭವವಿದ್ದಿತು. ಅದರ ಪ್ರಸ್ತಾಪ ಆಗಲೆ ಬಂದಿದೆ. ಆದರೆ ಅವರ ತವರೂರಿನ ವ್ಯಾಮೋಹ ಇದಕ್ಕೆ ಒಪ್ಪಗೊಡಿಸಲಿಲ್ಲ. ಮೈಸೂರಿಗೆ ಬಂದ ಹೊಸದರಲ್ಲೆ (1920ರ ಏಪ್ರಿಲ್ ತಿಂಗಳಲ್ಲಿ) ಮಚ್ಛಲಿಪಟ್ಟಣದ ಆಂಧ್ರ ಜಾತೀಯ ಕಲಾಶಾಲೆಯ ಮೇಲಧಿಕಾರಿಯಾಗಿ ಬನ್ನಿರೆಂದು ಆಹ್ವಾನವಿದ್ದಿತು. ಅವರು ಮೈಸೂರನ್ನು ಬಿಡಲೊಪ್ಪಲಿಲ್ಲ. ಮತ್ತೆ ಆಂಧ್ರ ವಿಶ್ವವಿದ್ಯಾನಿಲಯದ ವಿಧಾತರೂ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ಮೇಲಧಿಕಾರಿಯೂ ಆಗಿದ್ದ ಡಾ।। ಕಟ್ಟಮಂಚಿ ರಾಮಲಿಂಗ ರೆಡ್ಡಿ (ಸಿ.ಆರ್.ರೆಡ್ಡಿ) ವೆಂಕಟಪ್ಪನ ಸ್ಟುಡಿಯೋಗೆ 1928ರಲ್ಲಿ ಬಂದು ಅವರ ಕಲಾಕೃತಿಗಳನ್ನು ಮೆಚ್ಚಿಕೊಂಡು ಆಂಧ್ರ ವಿಶ್ವವಿದ್ಯಾಲಯವು ಇನ್ನೇನು ಆರಂಭಿಸುವುದರಲ್ಲಿದ್ದ ಕಲಾ ಮತ್ತು ಸಂಗೀತ ವಿಭಾಗಕ್ಕೆ ಹಿರಿಯರಾಗಿ ಬರಬೇಕೆಂದು ಬಲವಂತಮಾಡಿದರು; ಅವರಿಗೆ ಎಲ್ಲ ವಿಧದ ಸೌಕರ್ಯವನ್ನೂ

ಒದಗಿಸುವುದಾಗಿ ಆಶ್ವಾಸನೆಯಿತ್ತರು. ಅವರ ಸ್ವತಂತ್ರಮನೋವೃತ್ತಿಗೆ ಒಂದಿಷ್ಟೂ ಊನ ಬರದಂತೆ ನೋಡಿಕೊಳ್ಳುವುದಾಗಿ ಹೇಳಿದರು. ವೆಂಕಟಪ್ಪ ಮೈಸೂರಿನಿಂದ ಕಾಲುತೆಗೆಯಲು ಒಪ್ಪಲಿಲ್ಲ. ಹೀಗಿದ್ದಾಗ ಇದ್ದಕ್ಕಿದ್ದಂತೆ ಅವರು ಮೈಸೂರನ್ನು ಬಿಟ್ಟು ಹೊರಡಲೇಬೇಕಾದ ಪರಿಸ್ಥಿತಿ ಬಂದಿತಲ್ಲ !

ಹೀಗೆ ಅವರು ಬೆಂಗಳೂರಿಗೆ ಬರುವಾಗಲೆ ತಮ್ಮೊಂದಿಗೆ ನಿರಾಶೆ, ಸಂತಾಪ, ಉದ್ವೇಗ, ಕೋಪ, ಪ್ರತೀಕಾರಬುದ್ಧಿ ಇವನ್ನು ಹೊತ್ತುತಂದರು. ಬೆಂಗಳೂರಿಗೆ ಬಂದುದೆ ವಕೀಲರನ್ನು ಕಂಡು ಅರಮನೆಯ ಮೇಲೆ ಹಗರಣ ಹೂಡುವ ಸಂಕಲ್ಪದಿಂದ. ಅವರ ಸೃಜನಾತ್ಮಕ ಕಲೆಯ ಚಿಲುಮೆ ಆಗ ಬತ್ತಿಹೋದುದು ಮತ್ತೆ ಹೊರಹೊಮ್ಮಲೆ ಇಲ್ಲ. ಬೆಂಗಳೂರಿಗೆ ಬಂದಮೇಲೆ ಒಂದರಮೇಲೊಂದು ಪ್ರಸಂಗ ಅವರ ಕೋಪತಾಪಗಳನ್ನು ಮಿಡಿಯುತ್ತಲೆ ಇದ್ದಿತು. ಇಲ್ಲಿ ಸ್ಟುಡಿಯೋ ಏರ್ಪಡಿಸುವ, ಉಚಿತ ಕಲಾಶಾಲೆಯನ್ನು ವ್ಯವಸ್ಥೆಗೊಳಿಸುವ ಅವರ ಆಶೆ ಕಡೆಗೂ ಕೈಗೂಡಲೆ ಇಲ್ಲ. ಕೈಗೂಡುವ ಚಿಹ್ನೆಗಳೂ ಅವರಿಗೆಂದೂ ಕಾಣಲಿಲ್ಲ. ಹೀಗೆ ಬೆಂಗಳೂರಿನ ವಾಸ ಒಂದು ನಿರಾಶೆಯ ಪರಂಪರೆಯೆ ಆಯಿತು. ನಿರಾಶೆಯ ಮೋಡಗಳನ್ನು ಅಷ್ಟಿಷ್ಟು ಚದುರಿಸಿ ಆಶೆಯ ಬೆಳಕು ಆಗಾಗ ತೋರಿಕೊಳ್ಳುತ್ತಿದ್ದಿತು. ಆದರೆ ಕಡೆಗೆ ನಿರಾಶೆಯ ಮೋಡಗಳೆ ದಟ್ಟವಾಗಿ ಕವಿದು ಗೆದ್ದುವು.

ಅಪರಿಗ್ರಹವ್ರತವನ್ನು ಬಾಳಿನ ಮೊದಲ ಭಾಗದಲ್ಲೆ ತೊಟ್ಟರಾದರೂ ಬ್ರಹ್ಮಚರ್ಯ ನಿಷ್ಠೆಯನ್ನೇನು ತಳೆದಿರಲಿಲ್ಲವೆಂದು ತೋರುತ್ತದೆ. ಕಲೆಯೆ ಜೀವನದ ಸಂಗಾತಿ, ಕಲೆಯನ್ನು ವರಿಸಿದಮೇಲೆ ಮಾನವ ಸಂಗಾತಿಯ ಒಡನಾಟ ಸಲ್ಲದು ಎಂದೇನು ಅವರು ಮೊದಲಲ್ಲಿ ಹಟ ಹಿಡಿದಂತೆ ಸೂಚನೆಯಿಲ್ಲ. ಕಲೆಯ ಕೈಹಿಡಿದವರು ಎಂಬುದು ಔಪಚಾರಿಕವಾದ ಮಾತಷ್ಟೆ. ಮದುವೆಯಾಗುವ ಮನಸ್ಸಿದ್ದುದಕ್ಕೇನೊ ದಾಖಲೆಯಿದೆ; ಆದರೆ ಅದು ಎಷ್ಟು ಬಲವಾಗಿದ್ದಿತೊ ಹೇಳುವುದು ಕಷ್ಟ. ಒಂಟಿ ಜೀವವಾಗಿದ್ದು, ಯಾವ ನೆಂಟರೊಂದಿಗೂ ಸೇರುತ್ತಿರಲಿಲ್ಲವಾಗಿ ಅವರಿಗೆ ಮದುವೆಯ ಪ್ರಯತ್ನ ಮಾಡುವವರು ತಾನೆ ಯಾರಿದ್ದರು? ತಂದೆ-ತಾಯಿಯರು ವೆಂಕಟಪ್ಪನ ಎಳೆತನದಲ್ಲೆ ತೀರಿಕೊಂಡಂತೆ ತೋರುತ್ತದೆ. ಕಲ್ಕತ್ತೆಯಿಂದ ಮೈಸೂರಿಗೆ ಹಿಂದಿರುಗಿದ ಮೇಲೆ ಅವರು ಒಂಟಿಯಾಗಿಯೆ ಇದ್ದುದು; ಹೋಟೆಲುಗಳಲ್ಲೆ ವಾಸ, ಊಟ. ಆಗಲೂ ನೆಂಟರು ದೂರವೆ. ಮತ್ತೆ, ಕಲಾವಿದನೆಂದು ಸ್ವಚ್ಛಂದ ಜೀವನದ ಪರಿಪಾಟವೇನಿಲ್ಲ. ಯಾವುದೊ ಹೆಣ್ಣನ್ನು ತಾನೆ ನೋಡಿ, ಕಾಮಿಸಿ, ಮೋಹಿಸಿ, ಮದುವೆಯಾಗುವ ಪ್ರವೃತ್ತಿಯಿರದು; ಮೊದಲಿಂದ ಸಂಯಮದ ಜೀವನವೆ. ಹೀಗಾಗಿ ಮುಂದೆಲ್ಲ ಹೆಣ್ಣಿನ ಒಡನಾಟವಿಲ್ಲದೆ ಕಳೆದ ಬಾಳಾಯಿತು. ಹಾಗಾಗದಿದ್ದರೆ ನಿರಾಶೆಯ ಕಾವು ಅಷ್ಟಿರುತ್ತಿರಲಿಲ್ಲವೇನೊ.

ಅಪರಿಗ್ರಹವ್ರತವಿದ್ದರೂ, ಶಿಸ್ತಿನ ಬದುಕಾದರೂ, ಸಂಯಮದ ನಿಷ್ಠೆಯಿದ್ದರೂ, ಶೀಲ ಶುದ್ಧಿಯಿದ್ದರೂ ಅವರಿಗೆ ಬದುಕಿನಿಂದ ದೂರಾಗುವ ವಿರಕ್ತಿಯೇನಿರಲಿಲ್ಲ. ಕಾವಿಯ ಬಟ್ಟೆಯನ್ನು ತೊಟ್ಟು ಆಶ್ರಮದಲ್ಲಿರುವ ಚಪಲ ಅವರಿಗೆಂದೂ ಬಂದುದಿಲ್ಲ. ಒಂಟಿ ಜೀವನವೊಂದನ್ನು ಬಿಟ್ಟರೆ, ಕಲೆಯ ಕಳಕಳಿಯೊಂದನ್ನು ಬಿಟ್ಟರೆ ಅವರ ಉಳಿದೆಲ್ಲ ಪ್ರವೃತ್ತಿಗಳೂ ಸಾಮಾನ್ಯವಾಗಿ ಎಲ್ಲರಂತೆಯೆ. ಅವರ ಮಾತಿನಲ್ಲಾಗಲಿ,

ಮನಸ್ಸಿನಲ್ಲಾಗಲಿ, ಕೆಲಸದಲ್ಲಾಗಲಿ ವೈರಾಗ್ಯದ ಗಾಳಿ ಗಂಧವೂ ಇರಲಿಲ್ಲ ಇಳಿವಯಸ್ಸಿನಲ್ಲೂ 'ಅಭಾವ ವೈರಾಗ್ಯ'ದ ಸೋಗನ್ನು ಅವರು ಏರಿಸಿಕೊಳ್ಳಲಿಲ್ಲ. ಸಾಧು ಸಂತರೆಂದರೆ ಅವರು ದೂರವೆ; ಯಾವ ಮಠ, ಯಾವ ಆಶ್ರಮ, ಯಾವ ಆಧ್ಯಾತ್ಮ, ಯಾವ ಸಾಧನೆ, ಯಾವ ವೇದಾಂತ, ಯಾವ ಯೋಗ ಎಂದು ಅವರೆಂದೂ ಪರಿತಪಿಸಲಿಲ್ಲ. ಮುಪ್ಪಿನಲ್ಲೂ ಅವರಿಗೆ ಅಧ್ಯಾತ್ಮಿಕಚಿಂತನೆಯ ಅಗತ್ಯ ಕಂಡುಬರಲಿಲ್ಲ. ತತ್ವದ, ಮುಕ್ತಿಯ ವಿಚಾರಗಳನ್ನು ಅವರು ಎಂದಾಗಲಿ ಹಚ್ಚಿಕೊಂಡವರಲ್ಲ. ಅದರ ಬಗ್ಗೆ ಓದುವ ಚಪಲವೂ ಅವರಿಗಿರಲಿಲ್ಲ. ಎಂದಮೇಲೆ, ಮದುವೆಯಾಗಿದ್ದರೆ, ಅನುಕೂಲೆಯಾದ ಮಡದಿ ದೊರಕಿದ್ದರೆ, ಅವರಿಗೆ ಒದಗಿದ ನಿರಾಶೆಗಳ ಒತ್ತಡ ಮರೆಯಾಗುವ ಸಂಭವ ವಿರುತ್ತಿದ್ದಿತು. ಆದರೆ ಇದು 'ರೆ' ಲೋಕದ ಮಾತಷ್ಟೆ!

. . . . . ಕಲೆ

೧

ವೆಂಕಟಪ್ಪ ಹುಟ್ಟುವ ಕಾಲಕ್ಕೆ (1886) ರಾಜ ರವಿವರ್ಮರಿಗೆ ಮುವತ್ತೆಂಟು ವರ್ಷ ವಯಸ್ಸು; ಅವನೀಂದ್ರನಾಥ ಠಾಕುರರಿಗೆ ಹದಿನೈದು ವರ್ಷ ವಯಸ್ಸು. ಅವನೀಂದ್ರನಾಥರು ಕಲಾವಿದರೆಂದು ಇನ್ನೂ ಹೆಸರು ಗಳಿಸಿರಲಿಲ್ಲ; ಅವರ ಭಾರತೀಯ ಕಲಾ ಪುನರುಜ್ಜೀವನದ ಆಂದೋಲನ ಇನ್ನೂ ಮೈದುಂಬಿ ಬಂದಿರಲಿಲ್ಲ. ಅವರು ಚಿತ್ರಕಲೆಯ ಅಭ್ಯಾಸವನ್ನೇನೊ ಮಾಡುತ್ತಿದ್ದರು. ಅವರ ಮೇಲೆ ರಾಜ ರವಿವರ್ಮರ ಪ್ರಭಾವ ಬಿದ್ದಿತು; ಅವರ ಕಲಾಗುರುಗಳೂ ವಿದೇಶೀಯರೆ. ಕಲೆಯಲ್ಲಿ ಭಾರತೀಯತೆಯೆಂಬುದು ಆ ಕಾಲಕ್ಕೆ ವಸ್ತುವಿನಲ್ಲಿ ಮಾತ್ರ; ಸಂವಿಧಾನವೆಲ್ಲ ಐರೋಪ್ಯವೆ, ಸ್ಫೂರ್ತಿಯೂ ಅಲ್ಲಿಯದೆ. ರವಿವರ್ಮರ ಹಿನ್ನೆಲೆಯೂ ಅಲ್ಲಿಯದೆ. ನಮ್ಮ ರಾಮಾಯಣ, ಮಹಾಭಾರತ, ಪುರಾಣ, ಕಾವ್ಯಗಳ ವಸ್ತುಗಳನ್ನಾರಿಸಿಕೊಂಡರಾದರೂ, ಚಿತ್ರಣಕ್ಕೆ ಮೂಲಾಕೃತಿಗಳಾಗಿ ಅವರ ಮುಂದೆ ನಿಂತವರು ಮನುಷ್ಯರೆ, ಅವರ ಪರಿಚಯಕ್ಕೆ ಬಂದವರೆ. ಭಾರತೀಯ ಕಲೆಯ ಆದರ್ಶವಾಗಲಿ ಸಂವಿಧಾನವಾಗಲಿ ಅವರಿಗೆ ತಿಳಿಯದು. ಅವರು ವ್ಯಕ್ತಿ ಚಿತ್ರಣ (ಪೊರ್ಟ್ರೆಚರ್)ದಲ್ಲೇನೋ ಕುಶಲರು; ವರ್ಣಸಂಯೋಜನೆಯಲ್ಲೂ ಚತುರರು. ಅಷ್ಟಕ್ಕೆ ಮೀರಿ ಅವರ ಕಲೆಗಾರಿಕೆ ನಿಲ್ಲಲಾರದು.

ಆದರೆ ಅವರು ಮಾಡಿದ ದೇವತೆಗಳ, ಪುರಾಣಪುರುಷರ ಚಿತ್ರಗಳು ಜನಪ್ರಿಯವಾದುವು. ಅವುಗಳ ಪ್ರತಿಗಳೂ ಅಗ್ಗವಾಗಿ ದೊರಕುವಂತಿದ್ದು, ಸಾಮಾನ್ಯಜನರ ಮನೆಯಲ್ಲೂ ಗೋಡೆಗಳ ಮೇಲೆ ರಾರಾಜಿಸುವಂತಾಯಿತು. ಮೇಲಾಗಿ ಅವರು ರಾಜಮನೆತನದವರು, ಶ್ರೀಮಂತರು, ಪಾಶ್ಚಾತ್ಯ ಕಲಾವಿದರ ಸಂಪರ್ಕವನ್ನು ಪಡೆದಿದ್ದವರು. ಜನರಲ್ಲಿ ಇವರ ಮೇಲೆ ಗೌರವ, ವಿಶ್ವಾಸ ಮೂಡುವುದಕ್ಕೆ ಇದೂ ಕಾರಣವಾಯಿತು. ರಾಷ್ಟ್ರೀಯಭಾವನೆ ಇನ್ನೂ ವಿಶೇಷವಾಗಿ ಹರಡಿಕೊಂಡಿರದಿದ್ದ ಕಾಲ ಅದು; ಸ್ವದೇಶೀ ಅಭಿಮಾನವೂ ಜನರಲ್ಲಿ ಬೇರೂರಿರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಕಡೆಗೇ ಒಲವು ಇರುತ್ತಿದ್ದ ಕಾಲ. ಆದುದರಿಂದಲೇ ಆ ಕಾಲದ ಕಲೆಗೂ ಹೊರಗಣ ಆದರ್ಶವೇ ಇದ್ದಿತು. ರವಿವರ್ಮ ಈ ಆದರ್ಶಕ್ಕೆ ಅಂಟಿಕೊಂಡಿದ್ದವರೆ; ಜನರಿಗೆ ಬೇಕಾದ ಕಲೆಯನ್ನು ಇವರು ಒದಗಿಸಿದರು. 1897ರಲ್ಲಿ ಮೈಸೂರಿನ ಅರಮನೆಯ ಭಾಗಗಳು ಸುಟ್ಟುಹೋಗಿ ಮತ್ತೆ ಕಟ್ಟುವ ಸಂದರ್ಭದಲ್ಲಿ ಆಗಿನ ರೀಜೆಂಟ್-ಮಹಾರಾಣಿ (ಅಥವಾ ಆಕೆಯ ಸಲಹೆಗಾರರು) ಅರಮನೆಯ ಚಿತ್ರಣದ ಕೆಲಸವನ್ನು ನೋಡಿಕೊಳ್ಳಲು ನೆರೆರಾಜ್ಯದ ರವಿವರ್ಮರನ್ನು ಕರೆಸಿಕೊಂಡದ್ದು ಸಹಜವೆ. ಮೈಸೂರು ಅರಸೊತ್ತಿಗೆ ಮತ್ತು

ತಿರುವಾಂಕೂರು-ಕೊಚಿನ್ ಅರಸೊತ್ತಿಗೆಗಳು ಬ್ರಿಟಿಷ್ ಪರಮಾಧಿಕಾರಕ್ಕೆ ಒಳಗಾಗಿದ್ದ ನೆರೆರಾಜ್ಯಗಳು. ಪರಸ್ಪರ ಪ್ರಶಂಸೆ, ಪ್ರೋತ್ಸಾಹಗಳು ಸರಿಯೆ. ಮೇಲಾಗಿ, ಆಳರಸರು ಆಂಗ್ಲರೆ ಆಗಿದ್ದುದರಿಂದ ಅವರ ಕಲಾಶೈಲಿಯನ್ನು ಅಳವಡಿಸಿಕೊಂಡ ಭಾರತೀಯ ಕಲಾವಿದನೆಂದರೆ ಮರ್ಯಾದೆಗೆ ಪಾತ್ರನೆ ತಾನೆ!

ಮೈಸೂರು ಅರಮನೆಯ ಒಳಾಂಗಣಗಳ ಚಿತ್ರಣವನ್ನು ಮಾಡಲು ಮೈಸೂರಿನವರೆ ಕಲಾವಿದರಿದ್ದರು; ಅವರಲ್ಲಿ ವೆಂಕಟಪ್ಪನ ತಂದೆ ಕೃಷ್ಣಪ್ಪನೂ ಒಬ್ಬರು. ಇವರೆಲ್ಲ ಚಿತ್ರಗಾರ ಮನೆತನದವರಾಗಿದ್ದು, ತಂಜಾವೂರು ಅಮರಾವತಿಗಳ ಪದ್ಧತಿಯನ್ನು ಅಳವಡಿಸಿ ಕೊಂಡು ತಮ್ಮದೆ ಆದ ಚಿತ್ರಶೈಲಿಯನ್ನು ಬೆಳೆಸಿಕೊಂಡಿದ್ದರು; ಆದರೆ ಅವರೆಲ್ಲ ಈಗ ರವಿವರ್ಮನ ಕೈಕೆಳಗೆ ಕೆಲಸಮಾಡಬೇಕಾಗಿ ಬಂದಿತು. ಬಹುಮಟ್ಟಿಗೆ ಅವರು ತಮ್ಮ ಮನೆತನದ, ಪರಂಪರೆಯ ಪದ್ಧತಿಯನ್ನು ಕೈಬಿಟ್ಟು, ರವಿವರ್ಮರ ಮೂಲಕ ಬಂದಿಳಿದ ಐರೋಪ್ಯ ಪ್ರಭಾವಕ್ಕೆ ಪಕ್ಕಾದರು. ಮೈಸೂರಿನ ಚಿತ್ರಕಲೆಯ ಅವನತಿಯನ್ನು ಇಲ್ಲಿಂದಲೆ ಗುರುತಿಸಬಹುದು. ಮೈಸೂರಿನ ದೊರೆಗಳೂ ಐರೋಪ್ಯ ಆದರ್ಶವನ್ನೆ ಬಹುಮಟ್ಟಿಗೆ ಪುರಸ್ಕರಿಸುತ್ತಿದ್ದುದರಿಂದ ಇಲ್ಲಿ ಬೆಳೆದುಕೊಂಡು ಬಂದ ಕಲೆಯಲ್ಲಿ ತನ್ನತನದ ಕಾವಿರದೆ ಕೃತಕತೆ ತಲೆಯೆತ್ತಿಕೊಂಡು ಮೆರೆಯಿತು. ದೇಶೀಯ ಸಂಸ್ಕೃತಿಯ ಮಡಿಲಿಂದಲೆ ಎದ್ದ ಕಲೆಯ ಪದ್ಧತಿ ಬರುಬರುತ್ತ ಸಂಪೂರ್ಣವಾಗಿ ಮರೆಯಾಯಿತು. ಈ ಪರಿಸರದಿಂದ ವೆಂಕಟಪ್ಪ ಎಳೆತನದಲ್ಲೆ ದೂರ ಹೋದುದು ಒಳ್ಳೆಯದಾಯಿತು.

ಅವರು ಕಲಾಶಿಕ್ಷಣಕ್ಕೆಂದು ಕಲ್ಕತ್ತೆಗೆ ಬರುವ ವೇಳೆಗೆ ಕಲೆಯಲ್ಲಿ ಭಾರತೀಯತೆಯ ಕಳಕಳಿ ಬಂಗಾಳದ ಕಡೆ ಆಗಲೆ ಮೂಡಿಕೊಂಡಿದ್ದಿತು. ಅವರ ಕಲಾಗುರುಗಳಾದ ಅವನೀಂದ್ರನಾಥ ಠಾಕುರರು ಮೊದಲಿಗೆ ಐರೋಪ್ಯ ಕಲೆಯ ಚೌಕಟ್ಟಿನಲ್ಲೆ ಬೆಳೆದವರು. ಅವರ ಸಣ್ಣ ಪ್ರಾಯದಲ್ಲೆ ಅವರಿಗೆ ಕಲೆಯನ್ನು ಕಲಿಸಿಕೊಟ್ಟವರು ಸಿನಾರ್ ಫಿಲರ್ಡಿ ಮತ್ತು ಚಾರ್ಲಸ್ ಪಾಮರ್ ಎಂಬಿಬ್ಬರು ಪರದೇಶದ ಕಲಾವಿದರು. ಇವರಿಬ್ಬರಿಗೂ ಭಾರತೀಯರಿಗೊಂದು ಕಲಾಸಂಪ್ರದಾಯವಿರಬಹುದೆಂಬ ಊಹೆಯೆ ಇರಲಿಲ್ಲ. ಇವರ ಬಳಿ ಕಲಿತ ಮೇಲೆ ಅವನೀಂದ್ರನಾಥರಿಗೆ ರಾಜ ರವಿವರ್ಮರ ಕಲೆಯ ಪ್ರಭಾವವೂ ಒದಗಿಬಂದು ಪರದೇಶದ ಪಟ್ಟು ಇನ್ನಷ್ಟು ಗಟ್ಟಿಯಾಯಿತು. ಆದರೆ ಅವನೀಂದ್ರನಾಥರಿಗೆ ಇಪ್ಪತ್ತಾರು ವರ್ಷ ವಯಸ್ಸಿನಲ್ಲಿ ಇ.ಬಿ. ಹ್ಯಾವೆಲರ ಸಂಪರ್ಕ ದೊರೆತು ಭಾರತೀಯ ಕಲಾಸಂಪ್ರದಾಯದ ಅರಿವು ಮೂಡಿ ಬಂದು, ಈ ಸಂಪ್ರದಾಯದ ಏಳಿಗೆಗೆ ಟೊಂಕ ಕಟ್ಟಿ ನಿಂತರು; ಐರೋಪ್ಯ ಕಲಾ ಶೈಲಿಯ ಕಡೆ ಬೆನ್ನು ತಿರುಗಿಸಿದರು. ಈ ಪರಿಸ್ಥಿತಿಯಲ್ಲೆ ವೆಂಕಟಪ್ಪ ಅವರ ಬಳಿ ವಿದ್ಯಾರ್ಥಿಯಾಗಿ ಸೇರಿದುದು.

ಕವಿ ರವೀಂದ್ರನಾಥ ಠಾಕುರರು 1916ರ ಸುಮಾರಿಗೆ ಜಪಾನಿನಲ್ಲಿ ಪ್ರವಾಸ ಮಾಡುತ್ತಿದ್ದಾಗ, ಅಲ್ಲಿನ ಕಲಾವೈಶಿಷ್ಟ್ಯವನ್ನು ಕಂಡು ಬೆರಗಾಗಿ ತಮ್ಮ ಸೋದರಳಿಯ ಅವನೀಂದ್ರನಾಥರಿಗೆ ಪತ್ರವೊಂದನ್ನು ಬರೆದು



ರವೀಂದ್ರನಾಥ ಠಾಕೂರ್

ವೀಣೆ ಶೇಷಣ್ಣ

ಸಿದ್ಧಾರ್ಥನ ರಾಜ್ಯ ಪರಿತ್ಯಾಗ



ಶಿವ ತಾಂಡವ

ರಾಮನಿಂದ ಹನುಮನಿಗೆ ಅಂಗುಲಿ ಪ್ರದಾನ



ಏಕಲವ್ಯನ ಧನುರ್ವಿದ್ಯಾಭ್ಯಾಸ



ಶಕುಂತಲೆಯ ನಿರ್ಗಮನ



ಸಂಕಷ್ಟ ಪರಿಹಾರ

ಮುನಿಸಿಪಲ್ ಹೈಸ್ಕೂಲು ಮತ್ತು ಹಳೆಯ ಅಗ್ರಹಾರ, ಮೈಸೂರು

ಚರ್ಚ್ ಹಿಲ್ ಮೇಲಿನಿಂದ ಕಾಣುವ ನೀಲವರ್ಣದ ಬೆಟ್ಟಸಾಲು ಮತ್ತು ಉದಕ ಮಂಡಲದ ಹುಲ್ಲುಗಾವಲಿನ ವಿಹಂಗಮ ನೋಟ

ಪ್ರತಿಬಿಂಬ, ಉದಕ ಮಂಡಲ ಸರೋವರ

ಮುಂಗಾರು ಮಳೆ ನಿಂತ ಮೇಲೆ ಶುಭ್ರ ವಾತಾವರಣ



ಅಂಗಸಾಧನೆ



ಸಸ್ಯಗಳ ಅಧ್ಯಯನ



ರೇಖಾಚಿತ್ರ

ಮ. ಮಹಾಶಯರೆ,

ನೀವು 20-12-46ರಲ್ಲಿ ಬರೆದ ಪತ್ರ 23ನೇ ಮಧ್ಯಾಹ್ನ ತಲಪಿತು. ಸಕಲವೂ ಅಭಿಪ್ರಾಯವಾಯಿತು. ನನ್ನ ಅಲ್ಪಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸದಾ ವ್ಯಾಸಂಗಮಾಡುವದಕ್ಕೂ, ಇತರರಿಗೆ (ಕೇವಲ ಯಾವ ಅಂತಸ್ತುಗಳ ವ್ಯತ್ಯಾಸಗಳಿಲ್ಲದೆ) ವಿದ್ಯಾದಾನಮಾಡುವದಕ್ಕೂ ಒಂದು ಸ್ಟುಡಿಯೋ ಕಟ್ಟಿರುವುದು ನಿಜ. ಆದರೆ, ಪ್ರಾರಂಭದಲ್ಲಿ ಕೆಲವು ವಯಸ್ಸು ಮೀರಿದ ಮತ್ತು ಇತರ ವೃತ್ತಿಗಳನ್ನಿಟ್ಟುಕೊಂಡಿದ್ದ ಅಯೋಗ್ಯರಾದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು, ಅವರುಗಳು ಕೆಲವು ತಿಂಗಳುಗಳನಂತರ ವಿದ್ಯೆಯನ್ನು ಸಾಧಿಸುವುದಕ್ಕೆ ತಕ್ಕಷ್ಟು ಚೇತನವೂ ಮತ್ತು ಶಾಂತತೆಯೂ ಇಲ್ಲದೆ ಬಿಟ್ಟು ಹೋದ್ದರಿಂದ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು, ಹಾಳಿಗೆ ಸುದ್ದ ಮೈ ನೋಯಿಸಿಕೊಂಡಂತಾಯಿತು! ಆದ್ದರಿಂದ ಇನ್ನು ಮುಂದೆ ನನ್ನ ಹತ್ತಿರ ಬರುವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವದಕ್ಕೆ ಮುಂಚಿತವಾಗಿ ನನ್ನ ಗುರುಗಳ ಆಜ್ಞೆ ಪ್ರಕಾರ ಹದಿನಾಲ್ಕು ವರಷಗಳಾಗಿರುವ ಮತ್ತು ಕೊನೇಪಕ್ಷ ೮-೧೦ ವರ್ಷಗಳಾದರೂ ಜಿತವಾದ ಮನಸ್ಸಿನಿಂದಲೂ, ತಪಃ ಇಂದಲೂ ವ್ಯಾಸಂಗಮಾಡಲು ಸಿದ್ಧರಾಗಿರು: ಯೋಗ್ಯರಾದ ವಿದ್ಯಾರ್ಥಿಗಳನ್ನು ಮಾತ್ರಾ ಸೇರಿಸಿಕೊಳ್ಳಬೇಕೆಂದು ನಿಶ್ಚಯಿಸಿರುತ್ತೇನೆ. ನಿಜಾಂಶವನ್ನು ನಿಮಗೆ ಮರೆಮಾಚದೆ ತಿಳಿಸಿರುತ್ತೇನೆ.

ಇಂತಿ ನಿಮ್ಮವ,
ಕೆ. ವೆಂಕಟಪ್ಪ.

ಹಸ್ತಾಕ್ಷರ

"ನಮ್ಮ ದೇಶದಲ್ಲಿ ಕಲೆಯ ಗಾಳಿ ಎಂದೂ ಬೀಸಿದುದಿಲ್ಲ. ಕಲೆಗೂ ಸಾಮಾಜಿಕ ಜೀವನಕ್ಕೂ ಮುಖ್ಯವೆನಿಸುವ ನಂಟು ಬೆಳೆದುಬಂದಿಲ್ಲ. ನಮ್ಮಲ್ಲಿ ಕಲೆ ಮೇಲಪದರದಲ್ಲಿರುವದೆ; ಅನಗತ್ಯವಾದುದು; ಜನರಿಗೆ ಅದರ ಪ್ರಯೋಜನವಿರದು. ಆದುದರಿಂದ ನಿನಗೆ ಬೇಕಾದ ಸಾಮಗ್ರಿಯನ್ನೂ ಸ್ಫೂರ್ತಿಯನ್ನು ಆ ನೆಲದಿಂದಲೆ ಎಂದೂ ಪಡೆದುಕೊಳ್ಳಲಾರೆ"

ಎಂದು ತಿಳಿಸಿದರು. ಕವಿಯ ಆಶಯ, ಭಾರತೀಯ ಕಲಾವಿದರು ಜಪಾನಿನ ಕಲಾಸಂಪ್ರದಾಯದ ಸಂಪರ್ಕವನ್ನು ಪಡೆದುಕೊಂಡರೆ ಮಾತ್ರ ಬೆಳೆಯಬಲ್ಲರು ಎಂಬುದು. ಆದರೆ ಅವರ ಗ್ರಹಿಕೆ ಸರಿಯಾದುದಲ್ಲವೆಂದು ಯಾರಿಗಾದರೂ ತಟ್ಟನೆ ಹೊಳೆದೀತು. ಅವರ ಬುದ್ಧಿವಾದವನ್ನು ಅವರ ಸೋದರಳಿಯನೆ ಕೇಳಲಿಲ್ಲವೆಂಬುದು ಸಮಾಧಾನದ ಮಾತು! ಜಪಾನಿನ (ಅಥವಾ ಮತ್ತಾವ ದೇಶದ) ಕಲಾ ಸಂಪ್ರದಾಯವನ್ನು ಅರಿತುಕೊಂಡಮಾತ್ರಕ್ಕೆ ನಮ್ಮ ಜನಜೀವನಕ್ಕೂ ಕಲೆಗೂ ಸಂಬಂಧ ಏರ್ಪಡುವುದು ಹೇಗೆ? ಭಾರತೀಯರಿಗೊಂದು ಕಲಾಸಂಪ್ರದಾಯವೆ ಎಂದೂ ಇರಲಿಲ್ಲವೆ? ನಮ್ಮ ದೇಶದಲ್ಲಿ ಕಲೆಯ ಗಾಳಿ ಬೀಸಲೆ ಇಲ್ಲವೆಂಬುದು ದಿಟವೆ? ಅಜಂಟ, ಅಮರಾವತಿ, ಬಾಗ್, ಸೀಗಿರಿಯ, ರಾಜಸ್ಥಾನಿ, ತಂಜಾವೂರು ಈ ಸಂಪ್ರದಾಯಗಳ ಪ್ರಯೋಜನವನ್ನು ಜನಸಾಮಾನ್ಯರು ಪಡೆದುಕೊಳ್ಳಲೆ ಇಲ್ಲವೆ? ರವೀಂದ್ರನಾಥರಂಥ ಬುದ್ಧಿವಂತರ ದೃಷ್ಟಿಯಲ್ಲಿಯೂ ದೋಷವಿದ್ದಿತೆನ್ನಲು ಇದೊಂದು ನಿದರ್ಶನ.

ಆದರೆ ಅವರು ಹೇಳಿದ ಮಾತನ್ನು ಅವರ ಸಮಸಾಮಯಿಕ ಪರಿಸ್ಥಿತಿಗೆ ಹೊಂದಿಸಿಕೊಂಡರೆ ಸರಿಯಾದೀತೇನೊ. ಭಾರತೀಯ ಕಲಾಸಂಪ್ರದಾಯಗಳನ್ನು ಜನ ಮರೆತಿದ್ದರು, ಮರೆಯುತ್ತಿದ್ದರು. ಅಜಂಟ, ಬಾಗ್, ಸೀಗಿರಿಯ ಸಂಪ್ರದಾಯಗಳು ಮೊಗಲರ ಆಳ್ವಿಕೆಯಲ್ಲಿ ಹಿಂದೆ ಬಿದ್ದು, ಪರ್ಶಿಯನ್ ಕಲೆಯ ಪ್ರಭಾವವನ್ನಳವಡಿಸಿಕೊಂಡ ಪ್ರಾದೇಶಿಕ ಪದ್ಧತಿಗಳು (ರಾಜಸ್ಥಾನಿ, ಬುಂದಿ, ಕಾಂಗಡಾ, ಮುಗಲ್ ಮೊದಲಾದ ಕಲೆಗಳು) ತಲೆಯೆತ್ತಿಕೊಂಡುವು. ಬ್ರಿಟಿಷರು ಬಂದು ಆಳರಸರಾಗಿ ನಿಂತಾಗ ಈ ಪದ್ಧತಿಗಳೂ ಹಿಂದೆಬಿದ್ದು ಐರೋಪ್ಯ ಪ್ರಭಾವವೆ ಮೂಡಿಕೊಂಡಿತು. ರವೀಂದ್ರನಾಥರು ಮೇಲೆ ಕಾಣಿಸಿದ ಪತ್ರವನ್ನು ಬರೆದಾಗ ಮುಂಬಯಿ ಮತ್ತು ಕಲ್ಕತ್ತೆಗಳ ಕಲಾಶಾಲೆಗಳಲ್ಲಿ ಆಂಗ್ಲರೆ ನಮ್ಮ ವಿದ್ಯಾರ್ಥಿಗಳಿಗೆ ಕಲೆಯನ್ನು ಕಲಿಸುತ್ತಿದ್ದವರು. ಅವರಿಗಾಗಲಿ, ನಮ್ಮ ಧುರೀಣರಿಗಾಗಲಿ (ಕಡೆಗೆ ರವೀಂದ್ರನಾಥರಿಗೆ ಆಗಲಿ) ಈ ದೇಶದಲ್ಲೆ ಪ್ರಾಚೀನವಾದ ಕಲಾ ಸಂಪ್ರದಾಯವಿದ್ದಿತೆಂಬ ಅರಿವಿರಲಿಲ್ಲ.

ಐರೋಪ್ಯ ಕಲೆಯೇ ಪ್ರಗತಿಪರವಾದುದು, ಅತ್ಯುತ್ತಮವಾದುದು, ಅನುಕರಣೀಯವಾದುದು ಎಂಬ ವಿಶ್ವಾಸವು ರವಿವರ್ಮರಲ್ಲೂ ಇದ್ದಿತು. ಮೊದಲಿಗೆ ಅವನೀಂದ್ರನಾಥರಲ್ಲಿಯೂ ಇದ್ದಿತು. ಆದರೆ ಈ ಚೌಕಟ್ಟಿನಲ್ಲಿ ಭಾರತೀಯ ಕಲೆಯನ್ನು ಬೆಳೆಸಬೇಕೆಂದು ಪ್ರಯತ್ನಮಾಡಿದವರಲ್ಲಿ ಇವರಿಬ್ಬರೂ ಸೇರುವರು. ಈ ಪ್ರಯತ್ನಕ್ಕೆ

ತೊಡಗಿದವರು ಬಹುಮಂದಿ ವಿದೇಶೀಯರೆ ಎಂಬುದು ಸ್ವಾರಸ್ಯವಾದ ವಿಚಾರ. ಸರ್ ಜಾನ್ ವುಡ್‌ರೊಫ್, ಸೋದರಿ ನಿವೇದಿತಾ, ಲಾರ್ಡ್ ರೊನಾಲ್ಡ್‌ಶೆ, ಸಿ.ಡಬ್ಲ್ಯೂ. ಇ ಕಾಟನ್, ಲಾರ್ಡ್ ನಾರ್ತ್‌ಬ್ರೂಕ್, ಜಸ್ಟಿಸ್ ಪ್ರಾಟ್, ಆ್ಯನಿ ಬೆಸೆಂಟ್ ಇವರೆಲ್ಲ ವಿದೇಶೀಯರಾದರೂ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಮನಗಂಡಿದ್ದವರು. ಇವರಲ್ಲದೆ ರಾಜೇಂದ್ರಲಾಲ ಮಿತ್ರ, ಯತೀಂದ್ರನಾಥ ಠಾಕುರರು, ಬರ್ದ್ವಾನಿನ ಮಹಾರಾಜ ಮುಂತಾದ ಭಾರತೀಯರೂ ಇದ್ದರೆನ್ನಿ. ಆದರೆ ಅವರಿಗಾರಿಗೂ ಭಾರತೀಯ ಸಾಂಪ್ರದಾಯಿಕ ಕಲೆಯ ಅರಿವಾಗಲಿ, ಅದನ್ನು ಗುರುತಿಸಿ ಅದರ ಸ್ವಾರಸ್ಯವನ್ನು ಗಮನಿಸುವ ಸಾಮರ್ಥ್ಯವಾಗಲಿ ಇರಲಿಲ್ಲ. ಜನಸಾಮಾನ್ಯರ ಆಶೆ-ಆಕಾಂಕ್ಷೆಗಳನ್ನು ಇವರು ಕಂಡುಕೊಳ್ಳುವುದಾಗಲಿಲ್ಲ. ಅವರು ಎಷ್ಟೆಂದರೂ ವಿದೇಶಿಯರೆ, ಕೆಲವರು ಹುಟ್ಟಿನಲ್ಲಿ, ಕೆಲವರು ನಂಬಿಕೆಯಲ್ಲಿ. ನಮ್ಮ ತತ್ತ್ವಶಾಸ್ತ್ರವನ್ನು ಮೆಚ್ಚಿಕೊಂಡು, ಅದರ ಮೇಲೆ ಬಳಕೆಯಲ್ಲಿದ್ದ ಪುಸ್ತಕಗಳನ್ನು ಮಾತ್ರ ಓದಿಕೊಂಡವರು. ಅವರ ಪರಿಚಯಕ್ಕೆ ಬಂದ ಭಾರತೀಯರೂ ಜನಸಾಮಾನ್ಯರೇನಲ್ಲ; ಅಧಿಕಾರಿಗಳು, ವಿದ್ವಾಂಸರು, ರಾಜಕಾರಣಿಗಳು, ಶ್ರೀಮಂತರು. ಹೀಗಿರುವಾಗ ಅವರಿಗೂ ದಿಟವಾದ ಭಾರತೀಯತೆಗೂ ಏನು ನಂಟಿದ್ದೀತು?

ಅವರ ಪ್ರಯತ್ನದಿಂದ ಮೈದಳೆದ ಕಲಾಶಾಲೆಗಳಲ್ಲಿ ಕಲ್ಕತ್ತೆಯದು 1845ರಷ್ಟು ಹಿಂದೆಯೆ ಕಾಣಿಸಿಕೊಂಡಿತು. ಇದರಲ್ಲಿ ಕಲಿಸುವ ಕಲೆ ಶ್ರೀಮಂತ ರಸಿಕರ, ಆಂಗ್ಲ-ವಿದ್ಯೆಯನ್ನು ಕಲಿತ ಬಾಬುಗಳ, ಅಧಿಕಾರಿ ನಾಗರಿಕರ 'ಸುಖಸಂಕಥಾವಿನೋದ'ಕ್ಕೆ ಅಷ್ಟೆ. ಅದು ಆರಂಭವಾದದ್ದೆ 'ಇಂಡಸ್ಟ್ರಿಯಲ್ ಆರ್ಟ್ ಸೊಸೈಟಿ'ಯ (ಔದ್ಯಮಿಕ ಕಲೆಯ ಉದ್ಧಾರಕ್ಕಾಗಿ ವ್ಯವಸ್ಥೆಗೊಂಡ ಸಂಸ್ಥೆಯ) ಅಂಗವಾಗಿ. ಇದರಲ್ಲಿ ಸೇರಿದ್ದವರೆಲ್ಲ ಆಂಗ್ಲ ಸಂಸ್ಕೃತಿಯ ಅಭಿಮಾನಿಗಳು, ಉದ್ಯಮವೇ ನಾಡಿನ ಉದ್ಧಾರಕ್ಕೆ ದಾರಿ ಎಂದು ನಂಬಿದ್ದವರು, ಭಾರತ ದೇಶದ ಹಿರಿಮೆ ಒಂದು ಕಾಲಕ್ಕೆ ಇದ್ದಿತಾದರೂ ಈಗ ಇರದೆಂದು ಭಾವಿಸಿದ್ದವರು, ಆಂಗ್ಲರ ಆಡಳಿತದಿಂದಲೆ ನಾಡಿನ ಏಳಿಗೆ ಎಂಬ ವಿಶ್ವಾಸವಿದ್ದವರು. ಕಲಾಶಾಲೆ ಮೊದಲು ಈ ಸಂಸ್ಥೆಯಿಂದ ಆರಂಭವಾದರೂ, ಬಂಗಾಳದ ಸರಕಾರ ಅದನ್ನು ತೆಗೆದುಕೊಂಡು ನಡೆಸತೊಡಗಿತು. ಅಲ್ಲಿ ಕಲೆಯನ್ನು ಕಲಿಸುವ ಅಧ್ಯಾಪಕರು ಇಂಗ್ಲೆಂಡಿನಿಂದಲೆ ಬಂದವರು.

1864ರಲ್ಲಿ ಗುಣೇಂದ್ರನಾಥ ಠಾಕುರರು (ಕವಿ ರವೀಂದ್ರನಾಥರ ತಂದೆ ಮಹರ್ಷಿ ದೇವೇಂದ್ರನಾಥ ಠಾಕುರರು; ದೇವೇಂದ್ರನಾಥರ ತಮ್ಮ ಗಿರೀಂದ್ರನಾಥ ಠಾಕುರರು; ಗಿರೀಂದ್ರನಾಥರ ಮಗ ಗುಣೇಂದ್ರನಾಥರು) ಈ ಸಂಸ್ಥೆಯ ಸದಸ್ಯರಾದರು; ಅವರ ಮಗ ಅವನೀಂದ್ರನಾಥರು ಈ ಸಂಸ್ಥೆ ನಡೆಸುತ್ತಿದ್ದ ಕಲಾಶಾಲೆಗೆ ಸೇರಿದುದರಲ್ಲಿ ಆಶ್ಚರ್ಯವಿಲ್ಲ. ಈ ಕಲಾಶಾಲೆಗೆ ಅವನೀಂದ್ರನಾಥರು ಸೇರಿದಾಗ ಸಿನಾರ್ ಫಿಲರ್ಡಿ ಎಂಬುವನು ಕಲಾಶಿಕ್ಷಕ; ಮುಂದೆ (1893-95) ಚಾರ್ಲ್ಸ್ ಎಲ್. ಪಾಮರ್ ಎಂಬ ಕಲಾವಿದ ಶಿಕ್ಷಕರಾಗಿ ನೇಮಕಗೊಂಡನು. ಹೀಗಾಗಿ ಅವನೀಂದ್ರನಾಥರು ಅಲ್ಲಿ ಕಲಿತದ್ದು ದಕ್ಷಿಣ ಕೆನ್ಸಿಂಗ್‌ಟನ್ನಿನಲ್ಲಿ ಮೈದಳೆದ ಪ್ರಾಕ್‌ರಾಫೆಲ್ ಕಲಾಸಂಪ್ರದಾಯದ ಪ್ರಕಾರವನ್ನೆ. ಅವನೀಂದ್ರನಾಥರ ಮೊದಲ ಕಲಾಕೃತಿಗಳಲ್ಲಿ ನಾವು ಕಾಣುವುದು ಇದರ ಪ್ರಭಾವವನ್ನೆ.

ಅರ್ನೆಸ್ಟ್ ಬಿನ್‌ಫಿಲ್ಡ್ ಹ್ಯಾವೆಲ್ (ಇ.ಬಿ. ಹ್ಯಾವೆಲ್) 1884ರಲ್ಲಿ ಮದರಾಸಿನ ಸರಕಾರಿ ಕಲಾಶಾಲೆಯ ಮುಖ್ಯಸ್ಥರಾಗಿ ಭಾರತದೇಶಕ್ಕೆ ಬಂದು, 1896 ಸೆಪ್ಟೆಂಬರ್ ತಿಂಗಳಲ್ಲಿ ಕಲ್ಕತ್ತೆಯ ಕಲಾಶಾಲೆಯ ಮುಖ್ಯಸ್ಥರಾಗಿ ಅಧಿಕಾರವಹಿಸಿಕೊಂಡರು. ಅವರ ಪರಿಚಯವಾದಾಗ ಅವನೀಂದ್ರನಾಥರಿಗೆ ಇಪ್ಪತ್ತಾರುವರ್ಷ ಪ್ರಾಯ. ಹ್ಯಾವೆಲ್ಲರು ಭಾರತೀಯರದ್ದೆ ಕಲಾಸಂಪ್ರದಾಯವನ್ನು ಗುರುತಿಸುವ ಕೆಲಸದಲ್ಲಿ ತೊಡಗಿದ್ದುದರಿಂದ, ಬ್ರಿಟಿಷರು ಈ ದೇಶಕ್ಕೆ ಕಾಲಿರಿಸುವ ಮೊದಲು ಇಲ್ಲಿದ್ದ ರಾಜಸ್ಥಾನಿ ಮತ್ತು ಮುಗಲ್ ಕಲಾ ಪ್ರಕಾರಗಳನ್ನು ಆಸ್ಥೆಯಿಂದ ಅಧ್ಯಯನಮಾಡಿದ್ದರು. ಅವನೀಂದ್ರನಾಥರು 1895ರಲ್ಲಿ ಇದೆ ನಡುಯುಗದ ಭಾರತೀಯ ಕಲಾ ಪದ್ಧತಿಯಲ್ಲಿ ರಚಿಸಿದ್ದ 'ರಾಧಾಕೃಷ್ಣ' ಚಿತ್ರಮಾಲೆ ಅವರಿಗೆ ತುಂಬ ಹಿಡಿಸಿತು. ಅದಕ್ಕೂ ಮೊದಲು ಇಲ್ಲಿಯದೆ ಆಗಿದ್ದ ಕಲಾಪರಂಪರೆ ಇದ್ದೀತು ಎಂದು ಅವರಿಗೆ ಆಗ ತಿಳಿದಿರಲಿಲ್ಲ. 1897ರಷ್ಟು ಹಿಂದೆಯೆ ಜೆ. ಗ್ರಿಫಿತ್ ಎಂಬಾತ ಅಜಂಟ ಕಲಾಕೃತಿಗಳನ್ನು ಕುರಿತ ಗ್ರಂಥವನ್ನು ಪ್ರಕಟಿಸಿದ್ದರೂ, ಅದು ಹ್ಯಾವೆಲ್ಲರ ಅಥವಾ ಅವನೀಂದ್ರನಾಥರ ಗಮನಕ್ಕೆ ಬಂದಿರಲಿಲ್ಲ. ಆದರೆ ಐರೋಪ್ಯವಲ್ಲದ ಕಲಾಪ್ರಕಾರಗಳ ಮೇಲೆ ಅಭಿಮಾನ ಇಬ್ಬರಿಗೂ ಬೆಳೆಯಿತು. ಈ ತರುಣದಲ್ಲೆ ಅವನೀಂದ್ರನಾಥರಿಗೆ ಜಪಾನಿನ ಕಲಾರಸಿಕ ಓಕಕುರ ಕಕುಜೊ ಅವರ ಪರಿಚಯವಾಯಿತು. ಈತ 1902ರಲ್ಲಿ ಸೋದರಿ ನಿವೇದಿತಾ ಅವರ ಪ್ರಯತ್ನದಿಂದ ಕಲ್ಕತ್ತೆಗೆ ಬಂದರು. ಅವರೊಂದಿಗೆ ತೈಕನ್ ಮತ್ತು ಹಿಸಿದ ಎಂಬಿಬ್ಬರು ಜಪಾನೀ ಕಲಾವಿದರೂ ಬಂದರು. ಇವರ ಬಳಿ ಅವನೀಂದ್ರನಾಥರು ಜಪಾನೀ ಕಲೆಯ ಕೆಲವು ಸಂವಿಧಾನಗಳನ್ನು ಕಲಿತರು. ತಾವು ಮೊದಲೆ ಪರಿಚಯಮಾಡಿಕೊಂಡಿದ್ದ ಪರ್ಶಿಯನ್, ಮುಗಲ್, ರಾಜಸ್ಥಾನಿ ಚಿತ್ರಶೈಲಿಗಳಲ್ಲಿ ಜಪಾನಿ ಸಂವಿಧಾನವನ್ನು ಅಳವಡಿಸಿ ಕಲಾಕೃತಿಗಳನ್ನು ರಚಿಸಲಾರಂಭಿಸಿದ್ದರು.

ವೆಂಕಟಪ್ಪ ಕಲ್ಕತ್ತೆಗೆ ಕಲಾಶಿಕ್ಷಣಕ್ಕೆಂದು ಬಂದಾಗ ಅವನೀಂದ್ರನಾಥರೇ ಕಲಾಶಾಲೆಯ ಮುಖ್ಯಸ್ಥರಾಗಿ ಕೆಲಸವನ್ನು ನೋಡುತ್ತಿದ್ದರಷ್ಟೆ. ಆ ಕಾಲಕ್ಕೆ ಅವನೀಂದ್ರನಾಥರು ಭಾರತೀಯ ಕಲಾಸಂಪ್ರದಾಯದ ಪುನರುಜ್ಜೀವನದ ನಾಂದಿಯನ್ನು ಹಾಡಿದ್ದರು. ಆಗಲೆ ಹ್ಯಾವೆಲ್ಲರು ಕಲಾಶಾಲೆಗೆ ಸೇರಿದ್ದ ಚಿತ್ರ ಸಂಗ್ರಹಾಲಯದಲ್ಲಿ ಐರೋಪ್ಯಪದ್ಧತಿಯ ಚಿತ್ರಗಳನ್ನು ತೆಗೆದುಹಾಕಿ ರಾಜಸ್ಥಾನಿ, ಮುಗಲ್, ಕಾಂಗಡ ಪ್ರಕಾರಗಳ ನಿದರ್ಶನಗಳನ್ನು ವಿದ್ಯಾರ್ಥಿಗಳೆದುರು ಕಾಣಿಸಿದ್ದರು; ಮತ್ತು 'ಭಾರತದ ಪ್ರಾಚೀನ ಮತ್ತು ಮಧ್ಯಯುಗೀನ ವಾಸ್ತು' (1905) ಮತ್ತು 'ಭಾರತೀಯ ಚಿತ್ರಕಲೆ ಮತ್ತು ಶಿಲ್ಪ' (1908) ಎಂಬ ಎರಡು ಗ್ರಂಥಗಳನ್ನು ಬರೆದು ಭಾರತೀಯ ಕಲಾಪದ್ಧತಿಯ ಹಿರಿಮೆಯನ್ನೂ ಸ್ವಾರಸ್ಯವನ್ನೂ ರಸಿಕರೆದುರು ಎತ್ತಿ ಹಿಡಿದಿದ್ದರು. ಅವನೀಂದ್ರನಾಥರ ಮತ್ತೆ ಹ್ಯಾವೆಲ್ಲರ ಮಿತ್ರರೂ ಸುಪ್ರಸಿದ್ಧ ಕಲಾವಿಮರ್ಶಕರೂ ಆಗಿದ್ದ ಡಾ. ಆನಂದ ಕುಮಾರಸ್ವಾಮಿಯವರು ಕಲೆಯಲ್ಲಿಯೂ ಸ್ವದೇಶಿಯ ಮಂತ್ರವನ್ನು ಉಪದೇಶಮಾಡುತ್ತಿದ್ದರು. ಹದಿನೇಳು-ಹದಿನೆಂಟು ವರ್ಷಗಳ ವೆಂಕಟಪ್ಪ ಕಲ್ಕತ್ತೆಗೆ ಬಂದಾಗ ಅವರಿಗೆ ಒದಗಿದ ಮೊಟ್ಟಮೊದಲ ಪ್ರಭಾವ ಇದು. ಅವರಲ್ಲಿ ರಾಜ ರವಿವರ್ಮನ ಪ್ರಭಾವ ಆಗಲೆ ಎಷ್ಟರಮಟ್ಟಿಗೆ

ಮೂಡಿದ್ದಿತೂ ತಿಳಿಯದು; ಮುಂದಂತೂ ಆ ಪ್ರಭಾವ ಉಳಿಯುವುದು ಸಾಧ್ಯವಿರಲಿಲ್ಲ. ಭಾರತೀಯ ಕಲಾ ಪುನರುಜ್ಜೀವನದ ಆಂದೋಲನದಲ್ಲಿ ಮೊದಲ ಬಲಿ ಎಂದರೆ ರವಿವರ್ಮನ ಕಲೆಯೆ.

ವೆಂಕಟಪ್ಪ ಅವನೀಂದ್ರನಾಥರ ಬಳಿ ಬರುವ ಸ್ವಲ್ಪ ಮುಂಚೆ ಅವನೀಂದ್ರನಾಥರು ಅಜಂಟ ಗುಹೆಗಳಲ್ಲಿನ ಭಿತ್ತಿಚಿತ್ರಗಳಿಂದ ಬಹುವಾಗಿ ಆಕರ್ಷಿತರಾಗಿದ್ದರು. ಅಲ್ಲಿಯವರೆಗೆ ಅವರಿಗೆ ನಡುಯುಗದ ಮುಗಲ್ ಚಿತ್ರಗಳೇ ಭಾರತೀಯ ಕಲೆಯ ನಿದರ್ಶನಗಳಾಗಿದ್ದುವು. ಪ್ರಾಚೀನವಾದ ಅಜಂಟ ಚಿತ್ರಗಳನ್ನು ನೋಡಿದಮೇಲೆ ಭಾರತೀಯ ಕಲಾಸಂಪ್ರದಾಯದ ಹಳಮೆ, ಹಿರಿಮೆ, ಸ್ವಾರಸ್ಯಗಳು ಒಮ್ಮಿಂದೊಮ್ಮೆಗೆ ಅವರ ಕಣ್ಣಮುಂದೆ ಹರಡಿಕೊಂಡುವು. ಅವನ್ನು ತಮ್ಮ ಕಲೆಯಲ್ಲಿ ಅಳವಡಿಸಿಕೊಳ್ಳಬೇಕೆಂಬ ತವಕ ಅವರಿಗಿದ್ದಿತಾದರೂ ಅದು ಕೈಗೂಡಲಿಲ್ಲ. ಅವರಲ್ಲಾಗಲೆ ನಡುಯುಗದ ಶೈಲಿಯು ಬೇರೂರಿ, ಜಪಾನೀ ಪ್ರಭಾವವನ್ನು ಒಳಗೊಂಡು ಒಂದು ಅಚ್ಚು ಸಿದ್ಧವಾಗಿಬಿಟ್ಟಿದ್ದಿತು. ಅದರ ಹಿಡಿತದಿಂದ ಹೊರಗೆ ಹೋಗುವುದು ಅವರಿಗಾಗಲಿಲ್ಲ. ಮೇಲಾಗಿ ಅವನೀಂದ್ರನಾಥರು ಅಜಂಟದ ಚಿತ್ರಗಳನ್ನು ಪುಸ್ತಕದಲ್ಲಿ ನೋಡಿದ್ದರೆ ವಿನಾ, ತಾವೆ ಅಲ್ಲಿಗೆ ಹೋಗಿ ನೇರವಾಗಿ ನೋಡಿರಲಿಲ್ಲ. ಆದರೆ ಅವರ ಪಟ್ಟಶಿಷ್ಯ ನಂದಲಾಲ ಬಸು ಅಜಂಟ ಗುಹೆಗಳಿಗೆ ಹೋಗಿ ಅಲ್ಲಿನ ಕಲೆಯನ್ನು ನೋಡಿದ್ದರಾಗಿ ಅಜಂಟದ ಶೈಲಿಯನ್ನು ಚೆನ್ನಾಗಿ ವಶಮಾಡಿಕೊಂಡರು; ತಮ್ಮ ಕಲಾಕೃತಿಗಳಲ್ಲಿ ಅದರ ಪ್ರಭಾವವನ್ನು ಮೂಡಿಸಿಕೊಂಡರು. ವೆಂಕಟಪ್ಪನೂ ನಂದಲಾಲರೊಂದಿಗೆ ಅಜಂಟ ಪ್ರವಾಸ ಮಾಡಿ ಅಲ್ಲಿನ ಚಿತ್ರಗಳ ಪ್ರತಿಮಾಡಿದ್ದರಷ್ಟೆ.

೨

ಭಾರತೀಯ ಕಳೆಯ ಇತಿಹಾಸದಲ್ಲಿ ಹೊಸಯುಗ ಆರಂಭವಾದ ಸಮಯದಲ್ಲೆ, ಅದು ಮೈದಳೆದ ಪ್ರದೇಶದಲ್ಲೆ, ಪ್ರಭಾವವನ್ನು ಒಳಮಾಡಿಕೊಳ್ಳುವ ವಯಸ್ಸಿನಲ್ಲೆ ವೆಂಕಟಪ್ಪ ಇದ್ದುದು ಗಮನಾರ್ಹವಾದ ಸಂಗತಿ. ಸ್ವದೇಶಿ ಮಂತ್ರಕ್ಕೆ ಒಲಿದು, ಭಾರತೀಯತೆಯಲ್ಲಿ ಶ್ರದ್ಧೆ ತಾಳಿ, ಕಲೆಯು ಸಂಸ್ಕೃತಿಯ ಅಂಗ ಎಂಬುದನ್ನು ಅವರು ಕಲಿತದ್ದು ಆಗಲೆ. ಬದುಕು ಹೇಗಾದರಿರಲಿ, ನಡವಳಿಕೆ ಎಂತಾದರಿರಲಿ, ಕಲೆಗೂ ಅದಕ್ಕೂ ನಂಟಿರದು ಎಂಬ ಸ್ವಚ್ಛಂದತೆಯ ದೃಷ್ಟಿ ಅವನೀಂದ್ರನಾಥರದಲ್ಲ. ಭಾರತೀಯ ಕಲೆಯೆಂದರೆ ಭಾರತೀಯ ಸಂಸ್ಕೃತಿಯ ಒಂದು ಅಂಗ, ಎರಡರ ನಡುವೆ ಒಡೆಯಲಾರದ ನಂಟು. ವ್ಯಕ್ತಿಯ ಕಲಾಭಿವ್ಯಕ್ತಿಯು ಅವನ ಸಂಸ್ಕಾರದ ಕುರುಹು; ಉತ್ತಮ ಸಂಸ್ಕಾರವಿದ್ದರೇ ಉತ್ತಮ ಕಲೆ. ಪರಂಪರೆಯಿಂದ ಬಂದ ಆದರ್ಶ, ತತ್ವ, ಕಾವ್ಯ, ಆಚಾರ, ವಿಚಾರ, ವಿನೋದ, ವಿಹಾರ ಎಲ್ಲವೂ ಕಲೆಯ ಹಿನ್ನೆಲೆಯಲ್ಲಿರಬೇಕು. ನೈಜವಾದ ಭಾರತೀಯತೆ ವಸ್ತುವಿನಲ್ಲಿ ಮಾತ್ರವಿದ್ದರೆ ಸಾಲದು; ಸಂವಿಧಾನದಲ್ಲೂ ಇರಬೇಕು. ಎರಡಕ್ಕಿಂತ ಹೆಚ್ಚಾಗಿ ಕಲೆಗಾರನ ಬದುಕಿನಲ್ಲೂ ಇರಬೇಕು. ಅವನೀಂದ್ರನಾಥರ ಈ ನಿಲುವು ವೆಂಕಟಪ್ಪ ಅವರಲ್ಲಿ ಕಲಿತ ಮೊದಲ ಪಾಠ. ಅವರು ತಮ್ಮ ಬದುಕಿನುದ್ದಕ್ಕೂ ಈ ಪಾಠದ ಪಡಿಯಚ್ಚಿನಲ್ಲೆ ತಮ್ಮ ಕಲಾಕೃತಿಗಳನ್ನು ರಚಿಸಿದರು.

ಅವನೀಂದ್ರನಾಥರು ತಮ್ಮದೇ ಎಂಬ ಶೈಲಿಯನ್ನು ಬೆಳಸಲಿಲ್ಲ. ಶಿಷ್ಯರ ಮೇಲೆ

ಯಾವೊಂದು ಪ್ರಕಾರದ ಮುದ್ರೆಯನ್ನೊತ್ತಬೇಕೆಂಬ ಕಾತರವಾಗಲಿ, ತಮ್ಮ ಪಂಥವನ್ನು ಬೆಳೆಸಬೇಕೆಂಬ ಚಪಲವಾಗಲಿ ಅವರಿಗಿರಲಿಲ್ಲ. ಶಿಷ್ಯರು ತಮ್ಮ ತಮ್ಮ ಶೈಲಿಗಳನ್ನು ಕಂಡುಕೊಂಡು ಬೆಳೆಸಿಕೊಳ್ಳಬೇಕೆಂದು ಹೇಳುತ್ತಿದ್ದರು. "ಯಾವ ಗುರುವೂ ಕಲಾವಿದರನ್ನು ಸೃಷ್ಟಿಮಾಡುವುದಿಲ್ಲ ; ವಿದ್ಯಾರ್ಥಿಗಳು ತಾವೆ ಕಲಾವಿದರಾಗುವರು" ಎಂಬುದು ಅವರ ಮಾತು. ತಮ್ಮ, ಅಥವಾ ತಮ್ಮ ದೃಷ್ಟಿಯ, ಪ್ರಭಾವವನ್ನು ಇತರರ ಮೇಲೆ ಬೀರಬೇಕೆಂಬ ಬಯಕೆಯಾಗಲಿ ಅವರಿಗಿರಲಿಲ್ಲ. ಹೀಗಿದ್ದುದರಿಂದ, ಅವರ ಶಿಷ್ಯರಲ್ಲಿ ಅವರ ಆದರ್ಶವನ್ನು ಪೂರ್ಣವಾಗಿ ಹಿಡಿದವರೆಂದರೆ ನಂದಲಾಲ ಬಸು, ಮತ್ತು ಬಹುಮಟ್ಟಿಗೆ ವೆಂಕಟಪ್ಪ. ಇವರಿಬ್ಬರೂ ಭಾರತೀಯತೆಗೆ ಒಲಿದವರು, ಸ್ವದೇಶಿಯೆಂಬ ನಿಲುವನ್ನು ಮೆಚ್ಚಿಕೊಂಡವರು, ಕಲೆಯು ಬದುಕಿನ ರೀತಿ ಎಂಬುದನ್ನು ನಂಬಿದವರು, ಗುರುವಿನಂತೆ ಸಾತ್ವಿಕವಾದ ಜೀವನವನ್ನು ನಡೆಸಿದವರು, ಕಲೆಯು ಜೀವನದ ಪ್ರತಿಬಿಂಬ ಎಂಬುದನ್ನು ತೋರಿಸಿಕೊಟ್ಟವರು. ಅವನೀಂದ್ರನಾಥರ ಇತರ ಶಿಷ್ಯರು ಹಲವು ದಾರಿಗಳನ್ನು ಹಿಡಿದು ಹೋದರು. ಕೆಲವರು ರಾಜಸ್ಥಾನಿ, ಮುಗಲ್ ಸಂಪ್ರದಾಯವನ್ನೆ ಹಿಡಿದರು, ಇನ್ನು ಕೆಲವರು ಅಜಂಟ, ಸೀಗಿರಿಯ, ಬಾಗ್ ಶೈಲಿಯನ್ನು ಹಿಡಿದರು, ಮತ್ತೆ ಕೆಲವರು ಐರೋಪ್ಯ ಪ್ರಭಾವಕ್ಕೇ ಶರಣುಹೋದರು. ನಂದಲಾಲ ಬಸು ಮತ್ತು ವೆಂಕಟಪ್ಪ ಇಬ್ಬರನ್ನು ಬಿಟ್ಟರೆ ಉಳಿದವರಲ್ಲಿ ಭಾರತೀಯತೆಯ ಉತ್ಕಟಾಭಿಮಾನ ಉಳಿದುಬರಲಿಲ್ಲ.

ನಂದಲಾಲ ಬಸು (1882-1966) ಕಲ್ಕತ್ತೆಯ ಕಲಾಶಾಲೆಯಲ್ಲಿ ವೆಂಕಟಪ್ಪನ ಸಹಾಧ್ಯಾಯಿ; ವೆಂಕಟಪ್ಪನಿಗಿಂತ ನಾಲ್ಕು ವರ್ಷ ಹಿರಿಯರು. ವೆಂಕಟಪ್ಪ ಕಲಾಶಾಲೆಯನ್ನು ಸೇರುವ ಮೊದಲೆ ಅವನೀಂದ್ರನಾಥರ ಬಳಿ ಶಿಷ್ಯವೃತ್ತಿ ಮಾಡುತ್ತಿದ್ದವರು. ಗುರುವಿನ ಜಪಾನೀ ಸಂವಿಧಾನದ ಪ್ರಭಾವವನ್ನು ಅರಗಿಸಿಕೊಂಡಿದ್ದವರು. ಅವರ ಅಜಂಟ ಕಲಾಶೈಲಿಯ ಅಭಿಮಾನವನ್ನು ಅಳವಡಿಸಿಕೊಂಡಿದ್ದರು. ಭಾರತೀಯ ಕಲಾ ಪದ್ಧತಿಯ ಪುನರುಜ್ಜೀವನವೆಂಬ ಆಂದೋಲನದಲ್ಲಿ ಅವನೀಂದ್ರನಾಥರು ಮೂಲಮೂರ್ತಿಯಾದರೆ ನಂದಲಾಲರು ಉತ್ಸವಮೂರ್ತಿ. ಈ ಆಂದೋಲನವನ್ನು ಕಲಾರಸಿಕರು ಮೊಟ್ಟಮೊದಲು ಗುರುತಿಸಿದ್ದು ಅವನೀಂದ್ರನಾಥರ ಯಾವ ಕಲಾಕೃತಿಯಲ್ಲೂ ಅಲ್ಲ ; ನಂದಲಾಲರ 'ಸತಿ' ಎಂಬ ಚಿತ್ರದಲ್ಲಿ. 1907ಕ್ಕೆ ಮೊದಲೆ ರಚಿತವಾಗಿದ್ದ ಈ ಚಿತ್ರವನ್ನು ಸುಪ್ರಸಿದ್ಧ ಕಲಾವಿಮರ್ಶಕ ಅರ್ಧೇಂದು ಕುಮಾರ ಗಂಗೊಲಿ "ಭಾರತೀಯ ಚಿತ್ರಕಲೆಯ ನವ್ಯಯುಗದ ಮೊದಲ ಅಭಿವ್ಯಕ್ತಿ" ಎಂದು ಬಣ್ಣಿಸಿದರು. ಅಜಂಟ ಶೈಲಿಯು ಮತ್ತೆ ನೈಜವಾಗಿ, ಅಷ್ಟೆ ಸ್ವಾರಸ್ಯವಾಗಿ ಕಾಣಿಸಿಕೊಂಡುದು ನಂದಲಾಲರ ಚಿತ್ರಗಳಲ್ಲೆ. ಐರೋಪ್ಯ ಸಂಪ್ರದಾಯದ, ಮುಗಲ್ ಸಂಪ್ರದಾಯದ, ಜಪಾನೀ ಸಂವಿಧಾನಧ ಪರಿಚಯ ಅವರಿಗಿದ್ದಿತಾದರೂ ಅವುಗಳ ಪ್ರಭಾವವನ್ನು ದೂರವಿರಿಸಿ ಶುದ್ಧ ಭಾರತೀಯ ಸಂಪ್ರದಾಯಕ್ಕೆ ಬೆಲೆಕೊಟ್ಟವರು ನಂದಲಾಲ ಬಸು. 'ವ್ಯಾಪಾರದಲ್ಲಿ ಬಂಡವಾಳ ಹೇಗೋ, ಹಾಗೆ ಕಲೆಯಲ್ಲಿ ಸಂಪ್ರದಾಯ' ಎಂದವರು ಅವರು.

ನಂದಲಾಲರೂ ವೆಂಕಟಪ್ಪನೂ ಸ್ನೇಹಿತರಾದುದು ಆಶ್ಚರ್ಯವಲ್ಲ. ಅವರಿಬ್ಬರೂ ಅವನೀಂದ್ರನಾಥರ ಶಿಷ್ಯರಲ್ಲಿ ಹಿರಿಯರು; ಅಗ್ರಗಣ್ಯರು. ಅವರಿಬ್ಬರನ್ನು ಕಂಡರೆ ಗುರುವಿಗೆ

ತುಂಬಾ ವಾತ್ಸಲ್ಯ. ಇಂಗ್ಲೆಂಡಿನ ಲೇಡಿ ಹರಿಂಗ್‌ಹ್ಯಾಮ್ ಅಜಂಟ ಚಿತ್ರಗಳ ಪ್ರತಿಮಾಡಿಸುವ ಉದ್ದೇಶದಿಂದ 1911ರಲ್ಲಿ ಅವನೀಂದ್ರನಾಥರ ಬಳಿ ಬಂದಾಗ, ಅವರು ತಮ್ಮ ಶಿಷ್ಯರಲ್ಲಿ ನಂದಲಾಲರನ್ನೂ ವೆಂಕಟಪ್ಪನನ್ನೂ ಜೊತೆಮಾಡಿಕಳುಹಿಸಿದರಷ್ಟೆ. ಇದೇನು ಆಕಸ್ಮಿಕವಲ್ಲ. ಇಬ್ಬರ ಮನೋಧರ್ಮದಲ್ಲಿ ಸಾಮ್ಯವಿದೆ ಎಂಬುದನ್ನು ಅವನೀಂದ್ರನಾಥರು ಅರಿತುಕೊಂಡಿದ್ದರು. ಬ್ರಿಟಿಷ್ ದೊರೆ ಐದನೆಯ ಜಾರ್ಜ್ ಭಾರತದ ಚಕ್ರವರ್ತಿಯಾಗಿ ಕಲ್ಕತ್ತೆಗೆ ಭೇಟಿಕೊಟ್ಟಾಗ, ಅವರನ್ನು ಎದುರುಗೊಳ್ಳುವ ಮಂಟಪದ ಅಲಂಕರಣಕ್ಕೆ ಅಧಿಕಾರಿಗಳು ಅವನೀಂದ್ರನಾಥರನ್ನು ಕೇಳಿದಾಗ ಅವರು ಕಳುಹಿಸಿದ್ದು ಈ ಇಬ್ಬರು ಶಿಷ್ಯರನ್ನೆ. 'ರಾಮಾಯಣ' ಪ್ರಸಂಗಗಳನ್ನು ಎತ್ತಿಕೊಂಡು ಚಿತ್ರಗಳನ್ನು ರಚಿಸಬೇಕೆಂದು ಈ ಇಬ್ಬರಿಗೇ ಅವನೀಂದ್ರನಾಥರು ಹೇಳಿದುದು. ಇವರಿಬ್ಬರೂ ಈ ಚಿತ್ರಮಾಲೆಗಳನ್ನು 1911-1913ರಲ್ಲಿ ಮುಗಿಸಿದರು.

ಅವರಿಬ್ಬರ ಶಿಕ್ಷಣವೂ ಹೆಚ್ಚೂ ಕಡಮೆ ಒಂದೇ ರೀತಿಯಲ್ಲಿ ಸಾಗಿತು. ಅವನೀಂದ್ರನಾಥರಿಗೆ ಮೊದಲೆ ಶಾಲೆಯಲ್ಲಿ ಕಲೆಯನ್ನು ಕಲಿಸಲು ಹ್ಯಾವೆಲ್‌ನಿಂದ ನೇಮಕಗೊಂಡಿದ್ದವರಲ್ಲಿ ಹರಿನಾರಾಯಣ ಬಾಬು ಮತ್ತು ಲಾಲಾ ಈಶ್ವರೀಪ್ರಸಾದ ಎಂಬಿಬ್ಬರು ಭಾರತೀಯರು ಪರಂಪರೆಯಿಂದ ಕಲಾವಿದರು. ಅವರ ಹಿರಿಯರು ರಾಜಸ್ಥಾನದ ಮತ್ತು ಮುಗಲ್ ಸಂಪ್ರದಾಯದ ಕಲೆಯಲ್ಲಿ ಪರಿಣತರಾಗಿದ್ದು ಮಧ್ಯಭಾರತದ ರಾಜಾಸ್ಥಾನಗಳಲ್ಲಿದ್ದವರು; ಆ ಪರಿಣತಿ ಇವರಿಬ್ಬರಲ್ಲೂ ಉಳಿದು ಬಂದಿದ್ದಿತು. ವೆಂಕಟಪ್ಪ ಮತ್ತು ನಂದಲಾಲ ಬಸು ಇಬ್ಬರಿಗೂ ನಡುಯುಗದ ಚಿತ್ರಣ ಕಲೆಯನ್ನು ಕಲಿಸಿದವರು ಇವರಿಬ್ಬರು. ಇವರಿಬ್ಬರ ಶಿಕ್ಷಣ ಮುಗಿದ ಮೇಲೇ ಅವನೀಂದ್ರನಾಥರ ಬಳಿ ಶಿಕ್ಷಣ ಮೊದಲಾದದ್ದು.

ಅವನೀಂದ್ರನಾಥರು ಪರ್ಸಿಬ್ರೌನನೊಂದಿಗೆ ಹೊಂದಿಕೊಳ್ಳಲಾರದೆ ಕಲಾಶಾಲೆಯ ಉದ್ಯೋಗವನ್ನು ಬಿಟ್ಟಾಗ (1915ರಲ್ಲಿ) ನಂದಲಾಲರೂ ಶಾಲೆಯನ್ನು ಬಿಟ್ಟು, ಅವನೀಂದ್ರನಾಥರು ತೆರೆದ ಸ್ವಂತ ಸ್ಟುಡಿಯೋಗೆ ಸೇರಿದರು. ವೆಂಕಟಪ್ಪನೇನೋ ಇನ್ನೊಂದು ವರ್ಷ ಅಲ್ಲಿಯೇ ಉಳಿದು ತಮ್ಮ ಶಿಕ್ಷಣವನ್ನು ಮುಗಿಸಿದರು. ವೆಂಕಟಪ್ಪ ಮೈಸೂರಿಗೆ ಹಿಂದಿರುಗಿದಾಗ ನಂದಲಾಲರು ಕಲ್ಕತ್ತೆಯಲ್ಲೆ ಉಳಿದು ಅವನೀಂದ್ರನಾಥರ ಬಳಿ 1919ರವರೆಗೂ ಇದ್ದು, ಅನಂತರ ಶಾಂತಿನಿಕೇತನದಲ್ಲಿ ರವೀಂದ್ರನಾಥ ಠಾಕುರರು ಏರ್ಪಡಿಸಿದ 'ಕಲಾಭವನ'ದಲ್ಲಿ ಕಲಾಚಾರ್ಯರಾಗಿ, ತಾವು (1966ರಲ್ಲಿ) ತೀರಿ ಕೊಳ್ಳುವವರೆಗೂ ನಿಂತರು, ವೆಂಕಟಪ್ಪ 1940ರವರೆಗೂ ಮೈಸೂರಿನಲ್ಲೆ ಇದ್ದು, ಅನಂತರ ಬೆಂಗಳೂರಿಗೆ ಬಂದು ತಾವು ತೀರಿಕೊಳ್ಳುವವರೆಗೂ ನಿಂತಂತೆ ಇಬ್ಬರೂ ಕಲೆಗಾಗಿ ತಮ್ಮ ಬಾಳನ್ನೆ ಮುಡಿಪಿಟ್ಟವರು; ಕಲೆಯಲ್ಲಿ ಮಾತ್ರ ಪುರುಷಾರ್ಥವನ್ನು ಕಂಡುಕೊಂಡವರು. ಇಬ್ಬರ ಸ್ವಭಾವವೂ ಬಹುಮಟ್ಟಿಗೆ ಸಮನಾದುದು. ನಂದಲಾಲರೇನೊ 1930ರಲ್ಲಿ ಮದುವೆಯಾದರು; ವೆಂಕಟಪ್ಪ ಒಂಟಿಯಾಗಿಯೆ ಉಳಿದರು. ಆದರೆ ನಂದಲಾಲರಿಗೆ ಕುಟುಂಬವಿದ್ದರೂ ಒಂಟಿ ಜೀವವೆ; ಏಕಾಂತ ಪ್ರಿಯರು; ಯೋಗಿಯಂತೆ ನಿಷ್ಠರಾಗಿ ಬಾಳಿದವರು. ಅವರಿಗೆ ಪ್ರಾಪಂಚಿಕ ಸುಖದ ಮೇಲೆ, ಲೌಕಿಕ ಪ್ರಯೋಜನಗಳ ಮೇಲೆ

ಒಂದಿಷ್ಟೂ ಆಸಕ್ತಿಯಿರಲಿಲ್ಲ. ಸಾಮಾಜಿಕವಾಗಿ ಅಥವಾ ರಾಜಕೀಯವಾಗಿ ಇಬ್ಬರಿಗೂ ಯಾವ ಪ್ರಸಕ್ತಿಯೂ ಇರಲಿಲ್ಲ. ಆದರೆ ಇಬ್ಬರೂ ಸ್ವದೇಶೀಪ್ರಿಯರು, ಗಾಂಧೀಭಕ್ತರು, ಧರ್ಮಪರರು, ಸಜ್ಜನರು. ಜನರೊಂದಿಗೆ ವ್ಯವಹರಿಸುವಾಗ ನಂದಲಾಲರು ಸೌಮ್ಯ, ವೆಂಕಟಪ್ಪ ಉಗ್ರ; ನಂದಲಾಲರು ಸಾಧು, ವೆಂಕಟಪ್ಪ ಕಟು, ಅಷ್ಟೆ ವ್ಯತ್ಯಾಸ.

ಇಬ್ಬರ ಶಿಕ್ಷಣ ಚಿತ್ರಕಲೆಯಲ್ಲೆ ಆದುದು. ಆದರೆ ವೆಂಕಟಪ್ಪ ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಅರ್ಧ ಶಿಲ್ಪ ಫಲಕಗಳಲ್ಲಿ ಹೊಸ ಪ್ರಯೋಗವನ್ನು ಮಾಡಿದಂತೆ ನಂದಲಾಲರೂ ಮರದ ಕೆತ್ತನೆಯಲ್ಲಿ ಪ್ರಯೋಗಗಳನ್ನು ನಡೆಸಿ 'ಎಚಿಂಗ್' ಸಂವಿಧಾನವನ್ನು ವಶಮಾಡಿಕೊಂಡರು. ವೆಂಕಟಪ್ಪನೂ ಎಲೆಕ್ಟ್ರೋಕಾಪರ್ ಡಿಪಾಸಿಟ್ ವಿಧಾನದಿಂದ ಎಚಿಂಗ್ ಪ್ರಯೋಗಗಳನ್ನು ನಡೆಸಿದುದುಂಟು. ಹೀಗೆ ಮಾಡಿದ ಅವರ ಬೋಧಿಸತ್ವ ಎಂಬ ಲೋಹಫಲಕದ ವಿಚಾರ ಬಂದಿದೆಯಷ್ಟೆ. ಇಬ್ಬರೂ ಈ ಎರಡು ದಾರಿಗಳನ್ನು ಹಿಡಿದದ್ದು 1920-24ರ ಸುಮಾರಿನಲ್ಲೆ. ವೆಂಕಟಪ್ಪ ಉದಕಮಂಡಲ, ಕೊಡೈಕೆನಾಲಿನಲ್ಲಿ ಪ್ರಕೃತಿಚಿತ್ರಣ ಮಾಡಿದಂತೆಯೆ ನಂದಲಾಲರು ಹಿಮಾಲಯ ಶ್ರೇಣಿಯ ಕಾರ್ಸಿಯೊಂಗ್‌ನ ಪ್ರಕೃತಿಚಿತ್ರಣ ಮಾಡಿದರು. ಇದೂ ಸರಿಸುಮಾರು ಒಂದೇ ಸಮಯದಲ್ಲಿ ಎನ್ನುವುದು ಸೋಜಿಗದ ವಿಷಯ. ವೆಂಕಟಪ್ಪನಿಗೆ ಸಂಗೀತದಲ್ಲಿ ಆಸಕ್ತಿಯಿದ್ದು ವೀಣೆಯನ್ನು ನುಡಿಸುತ್ತಿದ್ದಂತೆ, ನಂದಲಾಲರು ಎಸ್ರಾಜ್ ವಾದ್ಯವನ್ನು ನುಡಿಸುತ್ತಿದ್ದರು.

ಉಪನಿಷತ್ತಿನಲ್ಲಿ ಒಂದೆ ಮರದ ಮೇಲೆ ಸ್ನೇಹಭಾವದಿಂದ ಕುಳಿತ ಹೊಂಬಣ್ಣದ ಎರಡು ಹಕ್ಕಿಗಳ ಉಲ್ಲೇಖ ಬರುತ್ತದೆ: 'ದ್ವಾ ಸುಪರ್ಣಾ ಸಯುಜಾ ಸಖಾಯಾ'. ಅಲ್ಲಿನ ತಾತ್ಪರ್ಯ, ಸಂದರ್ಭ ಬೇರೆ. ಆದರೆ ಆ ಚಿತ್ರವನ್ನು ಮಾತ್ರ ಅನ್ವಯಿಸಬಹುದಾದರೆ, ವೆಂಕಟಪ್ಪನೂ ನಂದಲಾಲ ಬಸುವೂ ಅವನೀಂದ್ರನಾಥರೆಂಬ ಒಬ್ಬನೇ ಗುರುವಿನ ಬಳಿ ಕುಳಿತು ಧನ್ಯರಾದ ಇಬ್ಬರು ಶಿಷ್ಯರು.

೩

ಅವನೀಂದ್ರನಾಥ ಠಾಕುರರ ಶಿಷ್ಯರೆಲ್ಲ ಚಿತ್ರಕಲೆಯನ್ನೆ ಮೊದಲು ಕಲಿತವರು. ಹಲವರು ಚಿತ್ರಕಲೆಗೆ ಮಾತ್ರ ಅಂಟಿಕೊಂಡು, ಅಷ್ಟಕ್ಕೆ ಮಾತ್ರ ತಮ್ಮ ಪ್ರತಿಭೆಯನ್ನು ಸೀಮಿತಗೊಳಿಸಿದರು. ವೆಂಕಟಪ್ಪನೂ ಮೊದಲು ಕಲಿತದ್ದು ಚಿತ್ರಕಲೆಯನ್ನೆ. ಆದರೆ ಕಲ್ಕತ್ತೆಯ ಶಾಲೆಯಲ್ಲಿ ಶಿಲ್ಪವನ್ನೂ ಕಲಿಯುವ ಅವಕಾಶವಿದ್ದಿತು. ವೆಂಕಟಪ್ಪ ಶಿಲ್ಪದ ಕಡೆಗೂ ತಮ್ಮ ಒಲವನ್ನು ಬೆಳೆಸಿಕೊಂಡರು. ಶಿಲ್ಪದ ಸಂವಿಧಾನವನ್ನೂ ವರ್ಣಚಿತ್ರದ ನಾಜೂಕನ್ನೂ ಸೇರಿಸಿ ಪ್ಯಾರಿಸ್ಸಿನ ಪ್ಲಾಸ್ಟರ್‌ನಲ್ಲಿ ಶಿಲ್ಪಗಳನ್ನೂ ಅರ್ಧಶಿಲ್ಪ ಫಲಕ (ಬಾಸ್ ರಿಲೀಫ್)ಗಳನ್ನೂ ರಚಿಸುವತ್ತ ಗಮನ ಹರಿಸಿದರು. ಮೊನ್‌ಮಾರ್ತ್ರೆ ಎಂಬಲ್ಲಿ ದೊರೆಯುವ ಜಿಪ್ಸಮ್ ಎಂಬ ಸಾಮಗ್ರಿಯಿಂದ ತಯಾರಿಸುವ ಪ್ಲಾಸ್ಟರ್ ಸಾಮಾನ್ಯವಾಗಿ ಎರಕ ತೆಗೆಯಲು, ಪಡಿಯಚ್ಚು (ಮೋಲ್ಡ್) ತಯಾರಿಸಲು ಬಳಸುತ್ತಾರೆ. ಶಿಲ್ಪಿಗಳು ಕಲ್ಲು, ಮರ, ಮಣ್ಣು, ಲೋಹ ಇವನ್ನೆ ತಮ್ಮ ಕಲಾಕೃತಿಗಳಿಗೆ ಬಳಸುವುದು; ಕಲಾಕೃತಿಯ ಇನ್ನೊಂದು ಪ್ರತಿ ಬೇಕಾದಾಗ ಈ ಪ್ಯಾರಿಸ್ಸಿನ ಪ್ಲಾಸ್ಟರ್‌ನಿಂದ ಅಚ್ಚು ತೆಗೆದುಕೊಳ್ಳುವ ವಾಡಿಕೆ. ಇದು 1667ರಿಂದಲೂ

ಬಳಕೆಯಲ್ಲಿದೆ. ಆದರೆ ಸ್ವತಂತ್ರವಾಗಿ ಈ ಸಾಮಗ್ರಿಯಿಂದಲೇ ಶಿಲ್ಪವನ್ನು ರಚಿಸುವುದು ಕಡಮೆ. ವರ್ಣಚಿತ್ರಕಲೆಯಲ್ಲಿ ಪಳಗಿದ ಕೈ ಕಲ್ಲು, ಮರ, ಲೋಹದ ಶಿಲ್ಪಕ್ಕೆ ತೊಡಗಿದರೆ ಅದರ ಸೂಕ್ಷ್ಮತೆಗೆ ಅಡ್ಡಿಯಾದೀತೆಂಬ ಭಯದಿಂದ ವೆಂಕಟಪ್ಪ ಮರ, ಕಲ್ಲು, ಲೋಹದ ಶಿಲ್ಪಕ್ಕೆ ಕೈಹಾಕಲಿಲ್ಲ. ಜೇಡಿಮಣ್ಣಿನಲ್ಲಿ ಮೊದಲು ವ್ಯಕ್ತಿಶಿಲ್ಪವನ್ನೊ ಪ್ರಸಂಗ ಕಲ್ಪನೆಯನ್ನೊ ಮಾಡುವುದು, ಅನಂತರ ಪ್ಯಾರಿಸ್ಸಿನ ಪ್ಲಾಸ್ಟರ್‌ನಲ್ಲಿ ಅದರ ಅಚ್ಚು ತೆಗೆದುಕೊಂಡು ಕಲಾಕೃತಿಯನ್ನು ಮುಗಿಸುವುದು. ಇದು ಅವರು ಒಲಿದ ಕ್ರಮ. ದಕ್ಷಿಣ ಕೆನ್ಸಿಂಗ್‌ಟನ್ನಿನ ಕಲಾಶಾಲೆಯಲ್ಲಿ ಅನುಸರಿಸುತ್ತಿದ್ದ ವಿಧಾನವನ್ನು ಇವರು ಮೆಚ್ಚಿಕೊಂಡಿದ್ದರು.

ವೆಂಕಟಪ್ಪ ಮೈಸೂರಿಗೆ ಮರಳಿದ ಮೇಲೆ ಅರಮನೆಯ ಒಲಗದ ಚಾವಡಿಯನ್ನು ಅಲಂಕರಿಸುವ ಕೆಲಸವನ್ನು ಕೈಗೊಂಡರಷ್ಟೆ. ಇಲ್ಲಿ ಎತ್ತರವಾದ ಗೋಡೆಗಳಿಗೆ ಆನಿಸಿ ಇಡುವಂತೆ ಪ್ಯಾರಿಸ್ಸಿನ ಪ್ಲಾಸ್ಟರ್‌ನಲ್ಲೆ ಉಬ್ಬುಶಿಲ್ಪ ಮಾದರಿಯಲ್ಲಿ ಫಲಕಗಳನ್ನು (ಬಾಸ್ ರಿಲೀಫ್) ರಚಿಸುವ ಮನಸ್ಸುಮಾಡಿದರು. ಈ ಆವರಣಕ್ಕೆ ಅದೇ ಹೊಂದಿಕೊಳ್ಳುವುದೆಂದು ಅವರ ಎಣಿಕೆ; ಮಹಾರಾಜರೂ ಒಪ್ಪಿದರು. ವೆಂಕಟಪ್ಪ ಈ ಮಾಧ್ಯಮವನ್ನು ಆರಿಸಿಕೊಳ್ಳಲು ಇನ್ನೊಂದು ಕಾರಣವೂ ಇದ್ದಿತು. ಅವರು ಕಲ್ಕತ್ತೆಯಲ್ಲಿ ಕಲಿತದ್ದು, ಮುಗಲ್ ಮತ್ತು ರಾಜಸ್ಥಾನೀ ಪದ್ಧತಿಯಿಂದ ಸ್ಫೂರ್ತಿಪಡೆದದ್ದು ಕಿರುಚಿತ್ರಕಲೆ (ಮಿನಿಯೇಚರ್). ಸಣ್ಣ ಪ್ರಮಾಣದ ಚಿತ್ರಗಳನ್ನು ಮಾಡುವುದರಲ್ಲೆ ಅವರು ಸಿದ್ಧಹಸ್ತರಾದುದು. ಅರಮನೆಯ ಅಂಬಾವಿಲಾಸ ತೊಟ್ಟಿಯ ದೈತ್ಯಾಕಾರದ ಗೋಡೆಗಳ ಮೇಲೆ ಈ ಬಗೆಯ ಕಿರುಚಿತ್ರಗಳು ಏನು ಸೊಗಸಿಯಾವು? ದೊಡ್ಡ ಪ್ರಮಾಣದ ವರ್ಣಚಿತ್ರಗಳನ್ನು ಮಾಡುವ ಒಲವು ಅವರಿಗಿರಲಿಲ್ಲ; ಸಾಮರ್ಥ್ಯವೂ ಇರಲಿಲ್ಲವೇನೊ. ಹಾಗಾಗಿ ತಮ್ಮ ಶಿಲ್ಪದ ಪರಿಣತಿ, ಚಿತ್ರಕರ್ಮದ ಕೌಶಲ ಎರಡನ್ನೂ ಕೂಡಿಸಿಕೊಂಡು ದೊಡ್ಡ ಪ್ರಮಾಣದ ಅರ್ಧಶಿಲ್ಪ ಫಲಕಗಳನ್ನು ಮಾಡಲು ಹೊರಟರು. ಈ ಫಲಕಗಳು ಸ್ವರೂಪದಲ್ಲಿ ಶಿಲ್ಪ, ಸ್ವಭಾವದಲ್ಲಿ ಚಿತ್ರ.

ಈ ಫಲಕದ ಸಂವಿಧಾನದಲ್ಲಿ ನೆರಳು-ಬೆಳಕುಗಳ ಆಟ ಸ್ವಾರಸ್ಯವಾದುದು. ಒಂದೊಂದು ಫಲಕವನ್ನು ಸಿದ್ಧಮಾಡುವಾಗಲೂ ವೆಂಕಟಪ್ಪ ನೆರಳು-ಬೆಳಕಿನ ಸಂಯೋಜನೆಯನ್ನು ಆಳವಾಗಿ ಅಧ್ಯಯನಮಾಡಿ ಫಲಕದಲ್ಲಿ ಕಲ್ಪನೆಯ ವೈಶಿಷ್ಟ್ಯ, ಭಾವಸಂಪತ್ತಿ, ರೂಪನಿರ್ದೇಶನ, ಹಿನ್ನೆಲೆ-ಮುನ್ನೆಲೆಗಳ ಅಂತರ ಎಲ್ಲವನ್ನೂ ಫಲಕಾರಿಯಾಗಿ ಅಳವಡಿಸಿದರು. ಫಲಕವೆಲ್ಲ ಬಿಳಿಬಣ್ಣದಲ್ಲೆ ಇರುವುದರಿಂದ, ಅದರಲ್ಲಿ ವರ್ಣವಿನ್ಯಾಸ ಸಾಧ್ಯವಿಲ್ಲವಾದುದರಿಂದ, ಉಬ್ಬುತಗ್ಗು ತೀರ ಅಲ್ಪವಾದುದರಿಂದ ನೆರಳು-ಬೆಳಕನ್ನು ಪ್ರಭಾವಶಾಲಿಯಾಗಿ ಯೋಜಿಸುವುದು ಶ್ರಮಸಾಧ್ಯ; ಅದಕ್ಕೆ ತುಂಬ ಜಾಣ್ಮೆಯಿರಬೇಕು. ಅವರು ಕಲ್ಕತ್ತೆಯಲ್ಲಿರುವಾಗ ಅವರಿಗೆ ಅವನೀಂದ್ರನಾಥರ ಅಣ್ಣ ಗಗನೇಂದ್ರನಾಥ ಠಾಕುರರ ಸ್ನೇಹವಿದ್ದಿತು. ಗಗನೇಂದ್ರನಾಥರೂ ಹೆಸರಾಂತ ಕಲಾವಿದರೆ, ಕುಶಲರಾದ ವರ್ಣಚಿತ್ರಕಾರರೆ; ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೆ ಇದ್ದರು. ಅವರಿಗೆ ಪ್ರಿಯವೆನಿಸಿದ ಪ್ರಕಾರವೆಂದರೆ ನೆರಳು-ಬೆಳಕುಗಳ ವಿನ್ಯಾಸ (ಖಿಯರೊಸ್ಕುರೊ)

ವರ್ಣಚಿತ್ರದಲ್ಲೆ ಇದನ್ನು ಎತ್ತಿ ತೋರಿಸುವ ಅವರ ಕೃತಿಗಳು ಹಲವಿವೆ. ವೆಂಕಟಪ್ಪ ಬಿಡುವಿನ ವೇಳೆಯಲ್ಲಿ ಅವರೊಂದಿಗೆ ಇರುತ್ತಲೆ ಇದ್ದರಾಗಿ ಅವರ ಈ ಪ್ರಯೋಗದ ಸ್ವಾರಸ್ಯವನ್ನೂ ಸಾರ್ಥಕತೆಯನ್ನೂ ಅರಿತುಕೊಂಡಿದ್ದರು. ಗಗನೇಂದ್ರನಾಥರು ಚಿತ್ರದಲ್ಲಿ ಮಾಡಿದುದನ್ನು ವೆಂಕಟಪ್ಪ ಶಿಲ್ಪದಲ್ಲಿ ಮಾಡಲು ಹೊರಟರು.

ಮೈಸೂರು ಅರಮನೆಯ ಅಂಬಾವಿಲಾಸ ತೊಟ್ಟಿಗೆಂದೆ ವೆಂಕಟಪ್ಪ ಈ ಅರ್ಧ ಶಿಲ್ಪಫಲಕಗಳನ್ನು ಮಾಡತೊಡಗಿದರೆಂಬುದನ್ನು ಮರೆಯಬಾರದು, ಗೋಡೆಗಳ ಎತ್ತರ, ಆವರಣದ ವೈಶಾಲ್ಯ, ಕಿಟಕಿಗಳ ಔನ್ನತ್ಯ, ಬೆಳಗಿನ ವೇಳೆ ಮತ್ತು ಸಂಜೆಯ ವೇಳೆ ಬೆಳಕು ಬೀಳುವ ದಿಕ್ಕು, ನಿಂತು ನೋಡಬೇಕಾದ ಅಂತರ ಮೊದಲಾದ ಹಲವು ವಿವರಗಳು ಇಲ್ಲಿ ಅಗತ್ಯವಾಗುತ್ತವೆ. ಈ ವಿವರಗಳ ನೆರವಿಲ್ಲದಿದ್ದರೆ ಈ ಫಲಕಗಳ ಸೊಗಸನ್ನು ಅರಿತು ಕೊಳ್ಳುವುದು ಕಷ್ಟ. ಈಗ ಅಂಬಾವಿಲಾಸ ತೊಟ್ಟಿಯಲ್ಲಿ ನಾಲ್ಕು ಫಲಕಗಳು ಮಾತ್ರ ಇವೆ. ಉಳಿದವೆಲ್ಲ ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯದಲ್ಲಿವೆ. ಈಗ ಅಂಬಾವಿಲಾಸ ತೊಟ್ಟಿಯಲ್ಲಿರುವ ಫಲಕಗಳ ಮೇಲೆ ಬೆಳಕು ಬೀಳುವುದೆ ವಿರಳವಾಗಿ, ಫಲಕಗಳ ಸೊಬಗು ತೋರಿಕೊಳ್ಳುವುದೆ ಇಲ್ಲ. ಬೆಂಗಳೂರಿನ ಚಿತ್ರಸಂಗ್ರಹಾಲಯದಲ್ಲಿರುವ ಫಲಕಗಳಿಗೆ ಮೇಲೆ ಕಾಣಿಸಿದ ಯಾವ ವಿವರವೂ ನೆರವಾಗದು. ಹೀಗಾಗಿ ವೆಂಕಟಪ್ಪ ಗ್ರೀಕ್ 'ಸ್ತಿಲೆ' ಮಾದರಿಯಲ್ಲಿ ತುಂಬ ಸೂಕ್ಷ್ಮವಾಗಿ, ಶ್ರಮವಹಿಸಿ, ಜಾಣ್ಮೆಯಿಂದ ತಯಾರಿಸಿದ ಫಲಕಗಳ ಚೆಲುವನ್ನು ಅರಿತುಕೊಳ್ಳುವುದೆ ಕಷ್ಟವಾಗಿದೆ.

ಈ ಫಲಕಗಳು ಬಹುಮಟ್ಟಿಗೆ ರಾಮಾಯಣ, ಮಹಾಭಾರತದಿಂದ, ಬುದ್ಧನ ಜೀವನದಿಂದ ಆಯ್ದುಕೊಂಡ ಪ್ರಸಂಗಗಳನ್ನು ಕುರಿತವು. ರಾಮನು ಹನುಮಂತನ ಮೂಲಕ ಸೀತೆಗೆ ಮುದ್ರೆಯುಂಗುರ ಕಳುಹಿಸುತ್ತಿರುವುದು, ದ್ರೋಣಾಚಾರ್ಯರು ಪಾಂಡವ-ಕೌರವರಿಗೆ ಧನುರ್ವಿದ್ಯೆಯನ್ನು ಕಲಿಸುತ್ತಿರುವುದು, ಏಕಲವ್ಯನು ದ್ರೋಣಾ ಚಾರ್ಯರನ್ನು ಮಾನಸಗುರುವನ್ನಾಗಿರಿಸಿಕೊಂಡು ಧನುರ್ವಿದ್ಯೆಯ ಸಾಧನೆಯಲ್ಲಿ ತೊಡಗಿರುವುದು, ಶಕುಂತಲೆಯನ್ನು ಸಾಕುತಂದೆ ಕಣ್ವರು ಗಂಡನ ಮನೆಗೆ ಕಳುಹಿಸಿ ಕೊಡುತ್ತಿರುವುದು, ಬುದ್ಧನು ಪರಿವ್ರಾಜಕನಾಗಿ ಕಪಿಲವಸ್ತುವಿಗೆ ಬಂದು ಭಿಕ್ಷೆ ಬೇಡು ತ್ತಿರುವುದು, ಸಿದ್ಧಾರ್ಥನ ರಾಜ್ಯಪರಿತ್ಯಾಗ ಇವೆಲ್ಲ ಫಲಕಗಳಾಗಿ ತೋರಿಕೊಂಡಿವೆ. ಇವಲ್ಲದೆ ಶಿವತಾಂಡವ, ನದೀಸುಂದರಿ, ಶರಭ, ಮೈಸೂರು ಅರಸೊತ್ತಿಗೆಯ ಲಾಂಛನ ಇವೂ ಫಲಕಗಳೆ.

ವೆಂಕಟಪ್ಪನ ಸಹಾಧ್ಯಾಯಿಯಾಗಿದ್ದ ಅಸಿತಕುಮಾರ ಹಾಲದಾರರು 1956ರಲ್ಲಿ ಬೆಂಗಳೂರಿಗೆ ಬಂದಿದ್ದಾಗ ಈ ಫಲಕಗಳನ್ನು ನೋಡಿ "ನಿಮ್ಮ ಅರ್ಧ ಶಿಲ್ಪದಲ್ಲಿ ವರ್ಣಚಿತ್ರವಿದೆ" ಎಂದು ಹೇಳಿದರು. ಅದರಲ್ಲಿ ವರ್ಣಚಿತ್ರ ಮಾತ್ರವಲ್ಲದೆ ಕಾವ್ಯವೂ ಇದೆ. ನಿದರ್ಶನಕ್ಕೆ ಶಕುಂತಲೆಯ ನಿರ್ಗಮನವನ್ನು ರೂಪಿಸುವ ಫಲಕ ಕಾಳಿದಾಸನ ನಾಟಕದ ನಾಲ್ಕನೆಯ ಅಂಕದಲ್ಲಿರುವ ಕರುಣರಸವನ್ನೆಲ್ಲ ಸೂರೆಗೊಂಡಿದೆ. ಕಣ್ವಮುನಿಯ ಕಣ್ಣುಗಳಲ್ಲಿರುವ ಶೋಕ, ಶಕುಂತಲೆಯ ಮುಖದಲ್ಲಿ ತೋರಿಬರುವ ಸಂತೋಷ (ಗಂಡನ ಮನೆಗೆ ಹೊರಟಿರುವಾಗ), ದುಗುಡ (ತೌರುಮನೆಯಿಂದ ಹೊರಟು

ಹೋಗುವೆನೆಂದು) ಎರಡೂ ಕೂಡಿರುವ ಭಾವ, ತನ್ನನ್ನು ತಬ್ಬಲಿಯಾಗಿ ಬಿಟ್ಟು ಹೋಗುವಳೆಂದು ಸಾಕುಜಿಂಕೆ ಅವಳ ಸೀರೆಯ ಸೆರಗನ್ನು ಎಳೆಯುತ್ತಿರುವ ವಿವರ, ಪ್ರಕೃತಿಯ ನೀರವತೆ ಇವೆಲ್ಲ ಕಾವ್ಯಪದ್ಧತಿಯಲ್ಲೆ ಬಂದಿರುವುದನ್ನು ಗಮನಿಸಬಹುದು.

ಹಾಗೆಯೆ ಸಿದ್ಧಾರ್ಥನ ರಾಜ್ಯಪರಿತ್ಯಾಗದ ಚಿತ್ರಣದಲ್ಲಿ ತನ್ನ ಧಣಿ ತನ್ನನ್ನು ಬಿಟ್ಟು ಹೋಗುವನೆಂಬುದನ್ನು ಅರಿತ ಕುದುರೆ (ಕಂಥಕ) ಕಣ್ಣೀರು ಸುರಿಸುತ್ತಿರುವುದನ್ನು ಕಾಣಬಹುದು. ವಿರಕ್ತನಾದ ಸಿದ್ಧಾರ್ಥನ ಮುಖದಲ್ಲಿ ರಾಜಸಹಜವಾದ ಗಾಂಭೀರ್ಯ, ಅವನು ಆಗ ತಾನೆ ಅನುಭವಿಸಿದ ಲೋಕದುಃಖದ ಅನುಕಂಪ, ತನ್ನ ಮೆಚ್ಚಿನ ಕುದುರೆಯನ್ನು ಬಿಡುವಾಗ ದುಗುಡ, ಮುಂಬರುವ ಸಿದ್ಧಿಯನ್ನು ಆಗಲೆ ಸೂಚಿಸುವ ಹಿರಿಮೆ ಇವೆಲ್ಲವೂ ಇವೆ. ಕುದುರೆಯ, ಮನುಷ್ಯನ ಅಂಗಪ್ರಮಾಣಗಳ ಸೌಷ್ಠವ, ಅಲಂಕರಣದ ಔಚಿತ್ಯ, ಪರಸ್ಪರ ಪೂರಕತೆ ಇವನ್ನೆಲ್ಲ ವೆಂಕಟಪ್ಪ ಅಳವಡಿಸಿದ್ದಾರೆ. ದ್ರೋಣಾಚಾರ್ಯರು ಧನುರ್ವಿದ್ಯೆಯನ್ನು ಕಲಿಸುತ್ತಿರುವ ಫಲಕದಲ್ಲಿ ಧನುರ್ವಿದ್ಯೆಯ ಮೇಲೆ ಅರ್ಜುನನ ಪ್ರೀತಿ, ಭೀಮನ ತಾತ್ಸಾರಗಳಿರುವ ಅಂತರವನ್ನು ಕಂಡರಿಸಿದ್ದಾರೆ. ಕಾಡು ಹುಡುಗನಾದ ಏಕಲವ್ಯ ತಾನೇ ಬಿಲ್ಲಾಟವನ್ನು ಕಲಿಯುವಾಗ, ತನ್ನ ಮಾನಸಗುರುವಾದ ದ್ರೋಣರ ಪುತ್ಥಳಿಯನ್ನು ತಾನೆ ಮಾಡಿಕೊಂಡು ಅದರ ಎದುರೆ ಧನುರ್ವಿದ್ಯೆಯ ಅಭ್ಯಾಸಮಾಡುತ್ತಿರುವ ಫಲಕದಲ್ಲಿ ಏಕಲವ್ಯನ ಮೈಮಾಟ, ಕಲಾವಿದನಲ್ಲದ ಅವನು ತನ್ನ ಕೈಯಿಂದಲೆ ಮಾಡಿದ ದ್ರೋಣರ ಪ್ರತಿಕೃತಿಯ ಪ್ರಾಕೃತ ನೆಲೆ ಇವನ್ನು ಗಮನಿಸಬೇಕು.

ಅರ್ಧಶಿಲ್ಪ ಫಲಕಗಳು ಮುಖ್ಯವಾಗಿ ಕಲ್ಪನೆಯ ಕೂಸುಗಳು. ಸುಪ್ರಸಿದ್ಧವಾದ ಕಾಲ್ಪನಿಕ ಪ್ರಸಂಗವೊಂದನ್ನು ಕಲಾವಿದನು ತನ್ನ ಧ್ಯಾನದಲ್ಲಿ ಕಂಡುಕೊಂಡು, ಅದರ ವಿವರಗಳನ್ನೆಲ್ಲ ಜಾಣತನದಿಂದ ಬಿಡಿಸಿ ಮೂಡಿಸಿ, ಪ್ರಸಂಗದ ತಾತ್ಪರ್ಯ ತಟ್ಟನೆ ಮನಮುಟ್ಟುವಂತೆ ಮಾಡಿರುವುದು ಇಲ್ಲಿನ ಸ್ವಾರಸ್ಯ. ತನ್ನ ನೋಟದ, ಕಲ್ಪನೆಯ, ಚಿಂತನೆಯ, ಕೈಚಳಕದ ಕಾವನ್ನೆಲ್ಲ ಬಳಸಿಕೊಂಡು ಕಲಾವಿದರು ಈ ಫಲಕಗಳನ್ನು ಕಂಡರಿಸಿದ್ದಾರೆ. ಅವನೀಂದ್ರನಾಥರ ಉಳಿದ ಯಾವ ಶಿಷ್ಯನೂ ಈ ಪ್ರಯೋಗವನ್ನು ಮಾಡಲಿಲ್ಲ . ವೆಂಕಟಪ್ಪ ಚಿತ್ರಕಲೆ, ಶಿಲ್ಪಕಲೆ ಎರಡರಲ್ಲೂ ಸಮನಾಗಿಯೆ ಆಸಕ್ತರಾಗಿದ್ದರಾಗಿ ಈ ಪ್ರಯೋಗ ಸಾಧ್ಯವಾಯಿತು, ಯಶಸ್ವಿಯಾಯಿತು.

ಇನ್ನು ಪ್ಯಾರಿಸ್ಸಿನ ಪ್ಲಾಸ್ಟರ್‌ನಲ್ಲೆ ವ್ಯಕ್ತಿಗಳ ಶಿಲ್ಪವನ್ನು ಮಾಡುವುದರಲ್ಲೂ ವೆಂಕಟಪ್ಪ ಗಳಿಸಿದ ಯಶಸ್ಸು ಹೆಚ್ಚಿನದು. ಅವರ ಮೊಟ್ಟಮೊದಲನೆಯ ಶಿಲ್ಪ ಉಡುಪಿ ಹೋಟೆಲ್ ಮಾಣಿ ನರಸಿಂಹಯ್ಯನದು (1918). ಅವರು ಆ ಕಾಲಕ್ಕೆ ಸಂಗೀತ ಕಲಿಯುತ್ತಿದ್ದರು; ಶೇಷಣ್ಣನವರ ಆಕರ್ಷಣೆ ಇವರನ್ನು ಚಿತ್ರಕಲೆಯಿಂದ ದೂರ ಸರಿಸೀತೊ ಎಂದು ಅವರ ಅಭಿಮಾನಿಗಳಿಗೆ ಆತಂಕವಾಗಿದ್ದಂತೆ ಅವರಿಗೂ ಆಗಾಗ ಅನಿಸುತ್ತಿತ್ತು . ಚಿತ್ರವನ್ನೂ ಶಿಲ್ಪವನ್ನೂ ಅಭ್ಯಾಸದಲ್ಲಿರಿಸಿಕೊಳ್ಳಬೇಕೆಂದು, ತಾವು ತಂಗಿದ್ದ ಹೋಟೆಲಿನಲ್ಲಿ ತಮ್ಮನ್ನು ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದ ಉಡುಪಿ ಹುಡುಗ ನರಸಿಂಹಯ್ಯನ ಶಿಲ್ಪವನ್ನು ಮಾಡಿದರು. ಹುಡುಗನ ಅಮಾಯಕತೆ, ಲವಲವಿಕೆ, ನೈಜವಾದ ಚೆಲುವು, ಇವು ಇಲ್ಲಿ

ಎದ್ದು ಕಾಣುತ್ತವೆ. ಅನಂತರ, ಕೈ ಪಳಗಿತೆಂದು ಧೈರ್ಯ ಬಂದ ಮೇಲೆ ಶೇಷಣ್ಣನವರದ್ದೆ ಒಂದು ಶಿಲ್ಪ ಸಿದ್ಧವಾಯಿತು (1922). ಶೇಷಣ್ಣನವರು ತಾವೆ ವೆಂಕಟಪ್ಪನ ಸ್ಟುಡಿಯೋಗೆ ಬಂದು ಹಲವು ಗಂಟೆಗಳ 'ಸಿಟಿಂಗ್' ಕೊಟ್ಟರು. ಶೇಷಣ್ಣನವರ ವ್ಯಕ್ತಿತ್ವವನ್ನು ಚೆನ್ನಾಗಿ ತೋರಿಸುವ ಈ ಶಿಲ್ಪ ಜಗತ್ತಿನ ಉತ್ತಮ ಶಿಲ್ಪಗಳ ಸಾಲಿಗೆ ಸೇರಬಲ್ಲದು. ಗುರುವಿನಲ್ಲಿದ್ದ ನೈಜವಾದ ಹಿರಿಮೆ, ಶಿಷ್ಯನಲ್ಲಿದ್ದ ಸಹಜವಾದ ಗುರುಭಕ್ತಿ ಎರಡನ್ನೂ ಈ ಶಿಲ್ಪ ಸೆರೆಹಿಡಿದಿದೆ. ಆದರೆ ಈಗ ಈ ಶಿಲ್ಪ ಎಲ್ಲಿದೆಯೊ ತಿಳಿಯದು. ಕೆಲವು ವರ್ಷಗಳ ಹಿಂದೆ ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲಿದ್ದಿತೆಂದು ನನ್ನ ನೆನಪು. ಹಾಗೆಯೆ ಮಾಣಿಯ ಶಿಲ್ಪವನ್ನು ಅವರ ಮನೆಯಲ್ಲಿಯೆ ನಾನು ನೋಡಿದ್ದು ; ಅನಂತರ ಅದು ಏನಾಯಿತೊ, ಎಲ್ಲಿದೆಯೊ ತಿಳಿಯದು.*

ಮೂರನೆಯ ಶಿಲ್ಪ ಕವಿ ರವೀಂದ್ರನಾಥ ಠಾಕುರರದ್ದು (1923). ಈಗ ಇದು ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯದಲ್ಲಿದೆ. ರವೀಂದ್ರನಾಥರ ಪರಿಚಯ ವೆಂಕಟಪ್ಪನಿಗೆ ಚೆನ್ನಾಗಿಯೆ ಇದ್ದಿತು. ಅವರು ಮೈಸೂರಿಗೆ ಬಂದಾಗ, ವೆಂಕಟಪ್ಪ ಅವರನ್ನು ಕಂಡು ಶಿಲ್ಪಕ್ಕೆಂದು ಬೇಕಾದ ಛಾಯಾಚಿತ್ರಗಳನ್ನು ತೆಗೆಸಿಕೊಂಡು ಅದರ ಆಧಾರದ ಮೇಲೆ ಈ ಶಿಲ್ಪವನ್ನು ಮಾಡಿ ಮುಗಿಸಿದರು. ಇದನ್ನು ಅನಂತರ ಪರಿಷ್ಕರಿಸಿ, ಕೆಲವು ಮಾರ್ಪಾಟುಗಳನ್ನು ಮಾಡಿದರು. ವೆಂಕಟಪ್ಪ ಕಲ್ಕತ್ತೆಯ ಕಲಾಶಾಲೆಯಲ್ಲಿ ವಿದ್ಯಾರ್ಥಿಯಾಗಿರುವಾಗ ಶಾಲೆಯ ಮುಖ್ಯಸ್ಥರಾಗಿದ್ದ ಪರ್ಸಿ ಬ್ರೌನರ ಮೃಣ್ಮಯಶಿಲ್ಪವೊಂದನ್ನು ಮಾಡಿದ್ದರೆಂಬ ಸೂಚನೆಯಿದೆ (1954ರ ಡಿಸೆಂಬರ್ 24ರ ದಿನಚರಿ). ಆದರೆ ಅದೇನಾಯಿತೆಂದು ತಿಳಿದುಬರುವುದಿಲ್ಲ ; ಅದರ ಛಾಯಾಚಿತ್ರ ಈಗ ದೊರೆಯುವುದೊಂದು ನಮ್ಮ ಸುಕೃತ.

ವೆಂಕಟಪ್ಪ ಶಿಲ್ಪದಲ್ಲಿ ಸಿದ್ಧಹಸ್ತರು ಎನ್ನುವುದರಲ್ಲಿ ಯಾವ ಸಂಶಯವೂ ಇರದು. ಆದರೆ ಅವರು ಮಾಡಿದ್ದು ಮೇಲೆ ಕಾಣಿಸಿದ ಮೂರೆ (ಅಥವಾ ನಾಲ್ಕೆ) ಶಿಲ್ಪಗಳು. ಇವೆಲ್ಲ ಬೇರೆ ಯಾರೂ ಬಯಸಿ ಮಾಡಿಸಿದುದಲ್ಲ. ಹಣಕ್ಕೆಂದು ಮಾಡಿದುದಲ್ಲ, ಯಾರ ನಿರ್ಬಂಧಕ್ಕೊ ಒತ್ತಾಯಕ್ಕೊ ಮಣಿದು ಮಾಡಿದುದಲ್ಲ. ತಮ್ಮ ವಿಶ್ವಾಸದ, ಭಕ್ತಿಯ, ಗೌರವದ ಕುರುಹಾಗಿ ಇರಬೇಕೆಂಬ ಕಳಕಳಿಯಿಂದ, ಮಾಡಿದುದು; ತಮ್ಮ ಬಳಿ ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಕ್ಕೆಂದು ಇರಿಸಿಕೊಂಡುದು. ಆದುದರಿಂದಲೆ ಅವು ಸೊಗಸಾದ ಕಲಾಕೃತಿಗಳಾದುದು.

೪

ವೆಂಕಟಪ್ಪ ಕಲ್ಕತ್ತೆಗೆ ಕಲಿಯಲೆಂದು ಹೋದದ್ದು ಚಿತ್ರಕಲೆಯನ್ನೆ; ಅವರ ಗುರು ಅವನೀಂದ್ರನಾಥ ಠಾಕುರರು ಚಿತ್ರಗಾರರೆ, ಅವರ ಸಹಾಧ್ಯಾಯಿಗಳೆಲ್ಲ (ನಂದಲಾಲ ಬಸು,

* ಈಚೆಗೆ ನನಗೆ ತಿಳಿದುಬಂದಂತೆ, ಶೇಷಣ್ಣನವರ ಶಿಲ್ಪ ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲೇ ಉಗ್ರಾಣದಲ್ಲಿರಿಸಿದ್ದಾರಂತೆ; ಪ್ರದರ್ಶನಕ್ಕಂತೂ ಇಲ್ಲ. ಹಾಗೆಯೆ ಮಾಣಿಯ ಶಿಲ್ಪ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಒಳಗಡೆ ಕಪಾಟಿನಲ್ಲಿರಿಸಿಕೊಂಡಿದ್ದಾರಂತೆ; ಪ್ರದರ್ಶನಕ್ಕಿಲ್ಲ.

ಅಶೀತಕುಮಾರ ಹಾಲದಾರ, ಪ್ರಮೋದ ಕುಮಾರ ಚಟರ್ಜಿ, ಶೈಲೇಂದ್ರ ದೇ) ಚಿತ್ರಕಲಾವಿದರೆ. ವೆಂಕಟಪ್ಪನೂ ಈ ಪ್ರಕಾರದಲ್ಲಿ ಹಿರಿಮೆಯನ್ನು ಗಳಿಸಿದುದು ಸಹಜ. ವೆಂಕಟಪ್ಪ ಮೈಸೂರಿನಲ್ಲಿ ಕಲಿತದ್ದೇನು, ಮದರಾಸಿನ ಸರಕಾರಿ ಪರೀಕ್ಷೆಗೆ ಕಲಿತದ್ದೇನು ಎಂಬುದು ವಿವರವಾಗಿ ತಿಳಿಯುವುದಿಲ್ಲ. ಪ್ರಾಸ್ತಾವಿಕ ರೇಖಾಚಿತ್ರದ ಅಗತ್ಯವನ್ನೂ ಸ್ವಾರಸ್ಯವನ್ನೂ ಕಲಿತರೆಂದು ಅವರೊಮ್ಮೆ ನನಗೆ ಹೇಳಿದ್ದುಂಟು. ವರ್ಣಚಿತ್ರಕ್ಕಾಗಲಿ ಶಿಲ್ಪಕ್ಕಾಗಲಿ ಮೊದಲು ರೇಖಾಚಿತ್ರಗಳನ್ನು ಸ್ಪಷ್ಟವಾಗಿ, ವಿವರವಾಗಿ, ಕರಾರುವಾಕ್ಕಾಗಿ ಬರೆದುಕೊಳ್ಳಬೇಕೆಂಬುದನ್ನು ಅವರು ಆಗ ಕಲಿತರಂತೆ. ಕಲ್ಕತ್ತೆಯಲ್ಲಿ ಅವರು ಶಿಕ್ಷಣವನ್ನು ಮೊದಲುಮಾಡಿದ್ದು ಲಾಲಾ ಈಶ್ವರೀಪ್ರಸಾದರಲ್ಲಿ. ಈಶ್ವರೀಪ್ರಸಾದರು ನಡುಯುಗದ ಮುಗಲ್ ಶೈಲಿಯ ಚಿತ್ರಕರ್ಮದಲ್ಲಿ ನುರಿತವರು, ಅವರ ಮನೆತನದಲ್ಲೆ ಅದು ಬಂದಿದ್ದಿತು. ವೆಂಕಟಪ್ಪನ ಪ್ರವೇಶ ಆದದ್ದು ಈ ಪದ್ಧತಿಗೇ ಎಂಬುದು ಸ್ವಾರಸ್ಯವಾದದ್ದು. ಇದರ ಪ್ರಭಾವ ವೆಂಕಟಪ್ಪನ ಮೇಲೆ ವಿಶೇಷವಾಗಿಯೆ ಆಯಿತು.

ಮುಂದೆ ವೆಂಕಟಪ್ಪ ಅವನೀಂದ್ರನಾಥರ ಬಳಿ ಕಲಿತರಾದರೂ, ಅವನೀಂದ್ರನಾಥರ ವಿಚಾರದಲ್ಲಿ ಗಾಢವಾದ ಗೌರವಬುದ್ಧಿಯನ್ನು ಬೆಳೆಸಿಕೊಂಡಿದ್ದರಾದರೂ ಅವರ ಕಲೆಯ ಪ್ರಭಾವ ಇವರ ಮೇಲೆ ಬಿದ್ದುದು ಕಡಮೆಯೆ. ಅವನೀಂದ್ರನಾಥರ ಮೊದಲಿನ ಕಲಾಕೃತಿಗಳಲ್ಲಿಯು ಕನಸಿನಂಥ ಕಾಲ್ಪನಿಕ ವಿವರಗಳ ಹೆಚ್ಚಳ ಕಾಣಿಸುತ್ತದೆ; ಗಟ್ಟಿಲೋಕದ ನಿಶ್ಚಿತಪದಾರ್ಥಗಳ ಚಿತ್ರಣಕ್ಕಿಂತ ಹೆಚ್ಚಾಗಿ ಯಾವುದೊ ಗಂಧರ್ವಲೋಕದ ಭಾವನಾಮಯತೆ ತೋರಿಕೊಳ್ಳುತ್ತದೆ. ವಾಸ್ತವಿಕತೆಯ ಅಂಶ ಕಡಮೆ; ಕಲ್ಪನೆಯ ಅಂಶ ಹೆಚ್ಚು. ಈ ಗುಣ ನಂದಲಾಲರ ಮೊದಲ ಚಿತ್ರಗಳಲ್ಲೂ ಕಾಣಸಿಗುತ್ತದೆ. ಆದರೆ ಅವರು ಅಜಂಟ ಚಿತ್ರಗಳ ಪರಿಚಯ ಮಾಡಿಕೊಂಡಮೇಲೆ ಇದು ಮಾರ್ಪಟ್ಟಿತು. ವೆಂಕಟಪ್ಪ ಈಶ್ವರೀಪ್ರಸಾದರ ಬಳಿ ಮುಗಲ್ ಶೈಲಿಯ ಪರಿಚಯಮಾಡಿಕೊಂಡು ವರ್ಣಸಂಯೋಜನೆಯ ಸ್ವಾರಸ್ಯವನ್ನು ಅರಿತುಕೊಂಡರು; ರೇಖಾಚಿತ್ರಗಳ ಬಳಕೆಯನ್ನೂ ಮನವರಿಕೆ ಮಾಡಿಕೊಂಡರು. ವಾಸ್ತವಿಕತೆಯ ತಂತ್ರವನ್ನು ವಶಮಾಡಿಕೊಂಡರು. ವೆಂಕಟಪ್ಪನ 'ಪಕ್ಷಿ' ಎಂಬ ವರ್ಣಚಿತ್ರ ದಿಟವಾಗಿ ಮುಗಲ್ ಶೈಲಿಯದೆ. ಆ ಕಾಲದಲ್ಲೆ ಅವರು ಬಿಡಿಸಿದ ಕುದುರೆ ಸವಾರಿ ಮಾಡುತ್ತಿರುವ ಟೀಪೂಸುಲ್ತಾನನ ರೇಖಾ ಚಿತ್ರವೂ ಅದೇ ಪ್ರಭಾವದ ಫಲ. ಈಶ್ವರೀಪ್ರಸಾದರ ಪ್ರಭಾವದ ತರುಣದಲ್ಲೆ ಅವರು ಅಜಂಟ ಚಿತ್ರಪದ್ಧತಿಯ ಪರಿಚಯ ಪಡೆದುಕೊಂಡರಾಗಿ ವಾಸ್ತವಿಕತೆ, ರೇಖಾ ಚಿತ್ರದ ಸಿದ್ಧತೆ, ಸ್ಪಷ್ಟವಾದ ವರ್ಣಸಂಯೋಜನೆ ಈ ವಿವರಗಳೆ ಅವರ ಮನಸ್ಸಿನಲ್ಲಿ ಬೇರೂರಿದುವು.

ಉಚಿತವಾದ ಗೆರೆಗಳು, ವಿವರವಾದ ರೂಪಗಳು, ಎದ್ದುಕಾಣುವ ಬಿಡಿಬಿಡಿಯಾದ ಬಣ್ಣಗಳು, ವೆಂಕಟಪ್ಪ ಕಲ್ಕತ್ತೆಯಲ್ಲಿ ಪಡೆದುಕೊಂಡದ್ದು ಇದನ್ನೆ. ಅವನೀಂದ್ರನಾಥರ ಗಂಧರ್ವಲೋಕದ ಹರವಾಗಲಿ, ಜಪಾನಿಶೈಲಿಯ ತೇಲುಬಣ್ಣದ ಬಗೆಯಾಗಲಿ ಅವರಿಗೆ ಹಿಡಿಸಲಿಲ್ಲ. ವೆಂಕಟಪ್ಪ ಪ್ರಕೃತಿಯನ್ನು ಚಿತ್ರಿಸಲಿ, ಮನುಷ್ಯರನ್ನೆ ಬರೆಯಲಿ, ಸಾಧ್ಯವಾದಷ್ಟೂ ವಸ್ತುಸ್ಥಿತಿಗೆ ಅನುಗುಣವಾಗಿರಬೇಕೆಂಬ ತವಕ ಕಾಣುತ್ತದೆ. ಭಾರತೀಯ ಕಲಾ ಪುನರುಜ್ಜೀವನದ ಮೊದಲಭಾಗದಲ್ಲಿ 'ಬಂಗಾಳಿ ಶೈಲಿ' ಯೆಂದು ಹೆಸರಾದ

ಕಲ್ಪನಾಭೂಯಿಷ್ಠ ಪ್ರತಿಮಾನಿಷ್ಠ ರಚನೆಯ ಪ್ರಕಾರದಲ್ಲೂ ವೆಂಕಟಪ್ಪನ ಒಂದೆರಡು ಚಿತ್ರಗಳಿವೆ. ಅರಣ್ಯದಲ್ಲಿ ರಾಮ ಮಲಗಿ ನಿದ್ರಿಸುತ್ತಿರುವಾಗ ಭೂಮಾತೆಯು ಅವನಿಗಾಗಿ ಪಾದುಕೆಗಳನ್ನು ಸೀತೆಗೆ ನೀಡುತ್ತಿರುವ ಒಂದು ಚಿತ್ರ ನಿದರ್ಶನ. ನಿಸರ್ಗದ ಹಿನ್ನೆಲೆ, ಭೂಮಾತೆಯ ಆವಿರ್ಭಾವ ಇವೆರಡೂ 'ಬಂಗಾಳಿ ಶೈಲಿ'ಗೆ ಹೊಂದಿಕೊಳ್ಳುವ ವಿವರಗಳೆ; ಆದರೆ ಪಾದುಕೆಗಳನ್ನು ಪಡೆಯುತ್ತಿರುವ ಸೀತೆಯಾಗಲಿ, ಅದಕ್ಕಿಂತ ಮಿಗಿಲಾಗಿ ಮಲಗಿ ನಿದ್ರಿಸುತ್ತಿರುವ ರಾಮನಾಗಲಿ ವಾಸ್ತವಿಕತೆಯಿಂದ ದೂರವಾಗಿಲ್ಲ. ಅವು ಹದಿನೇಳನೆಯ ಶತಮಾನದ ಚಿತ್ರಪದ್ಧತಿಯ ಪ್ರಭಾವವನ್ನು ತಳೆದ ವಿವರಗಳು.

ಮೈಸೂರಿಗೆ ಅವರು ಹಿಂದಿರುಗಿದನಂತರ ರಚಿಸಿದ ಚಿತ್ರಗಳಲ್ಲಿ 'ಬಂಗಾಳಿ ಶೈಲಿ'ಯ ವಿವರವೊಂದೂ ಕಾಣಿಸುವುದಿಲ್ಲ. ಅವರನ್ನು ಅವನೀಂದ್ರನಾಥರ ಪಂಥವನ್ನು ಹಿಡಿದ ಕಲಾವಿದ ಎಂದು ಹೇಳುವ ಹಾಗಿಲ್ಲ; ಕಲ್ಕತ್ತೆಯಲ್ಲಿ ಆಗ ತಯಾರಾದ ಕಲಾವಿದರ ಪೀಳಿಗೆಗೆ ಇವರು ಕಲೆಯ ದೃಷ್ಟಿಯಿಂದ ಸೇರುವುದಿಲ್ಲ. ಅವರು ತಮ್ಮದೆ ದಾರಿಯನ್ನು ಹಿಡಿದರು. ಇದರಲ್ಲಿ ಮುಗಲ್ ಶೈಲಿಯ ಪ್ರಭಾವವನ್ನೂ ಅಜಂಟ ಪದ್ಧತಿಯ ಪ್ರಭಾವವನ್ನೂ ವಿಶೇಷವಾಗಿ ಗುರುತಿಸಬಹುದು. ಆದರೆ ಅಷ್ಟರಲ್ಲಿ ಅದು ಅಡಕವಾಗುವುದಿಲ್ಲ. ಪಾಶ್ಚಾತ್ಯ ಚಿತ್ರಕಲೆಯನ್ನು ತಾವೆ ಆಳವಾಗಿ ಅಭ್ಯಾಸಮಾಡಿ ಅದರಿಂದಲೂ ಪ್ರಭಾವವನ್ನು ತಳೆದಿದ್ದಾರೆ. ಅವರು ತಮ್ಮದಾಗಿಸಿಕೊಂಡ ಶೈಲಿಯಲ್ಲಿ ವಾಸ್ತವಿಕತೆ ಮತ್ತು ಕಾವ್ಯಮನೋಧರ್ಮ ಎರಡೂ ಸೇರಿಕೊಂಡಿವೆ. ಅವರು ಸೌಂದರ್ಯಾನುಭವದ ಪಕ್ಷಪಾತಿಗಳೂ ಹೌದು, ಯಥಾವತ್ತಾದ ವಿವರನಿರೂಪಣೆಗೆ ಒಲಿದವರೂ ಹೌದು. ಸೌಂದರ್ಯಾನುಭವವೆಂದಮಾತ್ರಕ್ಕೆ ಎಚ್ಚರದ ಸ್ಥಿತಿಯಿಂದ ಕನಸಿನ ಲೋಕಕ್ಕೆ ಜಾರಬೇಕೆಂಬ ಅಗತ್ಯವೇನು ಅವರಿಗೆ ಕಾಣಲಿಲ್ಲ. ಭಾವವಾಗಲಿ, ಚೆಲುವಿನ ಪ್ರಕಾರಗಳಾಗಲಿ ರೂಪವನ್ನು ಮಾರ್ಪಡಿಸಬಾರದು; ನಿಯತವಾದ ರೇಖೆಗಳ ನಿಯಮಕ್ಕೆ ಅಡ್ಡಿಬರಬಾರದು, ಅಂಗ ವಿಭಜನೆಯ ನಿಯಮವನ್ನೂ ಕಡೆಗಾಣಿಸಬಾರದು, ರೂಪದ ಸಮಷ್ಟಿ ಮತ್ತು ವ್ಯಷ್ಟಿ ನಿರೂಪಣೆ, ಮೇಲ್ಮೈ ರೇಖೆಗಳ ನಿರ್ದಿಷ್ಟತೆ, ಅವಯವಗಳ ವಿಂಗಡಣೆ, ವರ್ಣಗಳ ಕ್ರಮ, ಭೂಮಿಕೆ ಮತ್ತು ರೂಪಗಳ ವಿನ್ಯಾಸ ಇವನ್ನು ಕಲಾವಿದ ಮರೆಯುವ ಹಾಗಿಲ್ಲ.

ವೆಂಕಟಪ್ಪನ ವರ್ಣಚಿತ್ರಗಳು ಬಹುಮಟ್ಟಿಗೆ ಕಿರುಚಿತ್ರಗಳು. ಅವರು ದೊಡ್ಡ ಪ್ರಮಾಣದ ಚಿತ್ರಗಳನ್ನು ರಚಿಸುವ ಗೋಜಿಗೆ ಹೋಗಲೆ ಇಲ್ಲ. ಇದೂ ಮುಗಲ್ ಶೈಲಿಯ ಪ್ರಭಾವದ ಫಲವೆ ಎನ್ನಬಹುದು; ಅವನೀಂದ್ರನಾಥರೂ ಮೊದಲಿಗೆ ಮೆಚ್ಚಿಕೊಂಡಿದ್ದುದು, ಮಾಡುತ್ತಿದ್ದುದು ಕಿರುಚಿತ್ರಗಳನ್ನೆ. ದೊಡ್ಡ ಚಿತ್ರಗಳನ್ನೂ ರಚಿಸಿದರು. ಅವರದ್ದೆಂಬ ತೈಲವರ್ಣಚಿತ್ರವೊಂದು ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲಿದೆ. 'ಬೆಟ್ಟದ ಮೇಲೆ ಬಸವ' ಎಂಬ ಹೆಸರಿನ ಆ ಚಿತ್ರ ವೆಂಕಟಪ್ಪನದೆಂದು ಅಲ್ಲಿನ ದಾಖಲೆಯಲ್ಲಿದೆಯಂತೆ. ಆದರೆ ಚಿತ್ರದಲ್ಲೆ ವೆಂಕಟಪ್ಪನ ಸಹಿ ಇಲ್ಲ; ಚಿತ್ರದ ಶೈಲಿಯನ್ನು ನೋಡಿದರೂ ವೆಂಕಟಪ್ಪನದೆಂದು ತೋರುವುದಿಲ್ಲ. ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯದಲ್ಲಿ ಪೆಸ್ಟೆಲ್ ಸಂವಿಧಾನದಿಂದ ಮಾಡಿದ 'ಅಂಗಸಾಧನೆ'ಯೆಂಬ ಚಿತ್ರವೊಂದಿದೆ. ಅವರ

ಸ್ನೇಹಿತರು ಗೋಪಾಲರಾಜೇ ಅರಸಿನವರು ಅಂಗಸಾಧನೆಯಲ್ಲಿ ತೊಡಗಿರುವಂತೆ ಈ ಚಿತ್ರ. ಉಳಿದಂತೆ ವೆಂಕಟಪ್ಪನ ಎಲ್ಲ ಚಿತ್ರಗಳೂ ಜಲವರ್ಣಸಂವಿಧಾನದವೆ.

ಅವರ ಚಿತ್ರಗಳಲ್ಲಿ ಪ್ರಕೃತಿ ಚಿತ್ರಣ, ಕಲ್ಪನೆ, ವ್ಯಕ್ತಿಚಿತ್ರ ಎಂಬ ಮೂರು ಬಗೆಗಳನ್ನು ಗುರುತಿಸಬಹುದು. ಕಲ್ಪನೆಯನ್ನು ಮುಖ್ಯವಾಗಿ ಇರಿಸಿಕೊಂಡಿರುವ ಚಿತ್ರಗಳಲ್ಲಿ 'ವೀಣೆಯ ಹುಚ್ಚು' (1922) ಪ್ರಸಿದ್ಧವಾಗಿದೆ. ಅವನೀಂದ್ರನಾಥ ಠಾಕುರರಿಗೆ ಯಾರೊ ಮಿತ್ರರು 'ವೆಂಕಟಪ್ಪ ಚಿತ್ರಕಲೆಯನ್ನು ಕೈಬಿಟ್ಟಿದ್ದಾರೆ, ಸಂಗೀತಕ್ಕೆ ತಮ್ಮನ್ನು ಮುಡಿಪಾಗಿರಿಸಿ ಕೊಂಡಿದ್ದಾರೆ' ಎಂದು ಹೇಳಿದಾಗ ಅವನೀಂದ್ರನಾಥರು ವೆಂಕಟಪ್ಪನಿಗೆ ಹೀಗೆ ಮಾಡಬಾರದೆಂದು ಪತ್ರ ಬರೆದರಂತೆ. ಅದಕ್ಕುತ್ತರವಾಗಿ ವೆಂಕಟಪ್ಪ ಈ ಚಿತ್ರವನ್ನು ಸಿದ್ಧಪಡಿಸಿ ಗುರುಗಳಿಗೆ ಕಳುಹಿಸಿದರು. ವೀಣಾದೇವತೆಯೆದುರು ವೆಂಕಟಪ್ಪ ಹುಚ್ಚನಂತೆ ನಿಂತು ಆಕೆಯ ಅನುಗ್ರಹವನ್ನು ಬೇಡುತ್ತಿರುವಂತೆ, ವೀಣಾದೇವತೆ ಪ್ರಸನ್ನಳಾಗಿರುವಂತೆ, ಚಿತ್ರಕಲೆ ಶಿಲ್ಪಕಲೆಗಳ ದೇವತೆಯರು ಬಂಧನದಲ್ಲಿರುವಂತೆ, ಆ ಕಲೆಗೆ ಬೇಕಾದ ಪರಿಕರಗಳೆಲ್ಲ ಚೆಲ್ಲಾಡಿ ಬಿದ್ದಂತೆ, ಚಿತ್ರಕಲಾ ಗುರುಗಳಾದ ಅವನೀಂದ್ರನಾಥರ ಶಿಲ್ಪ ಧೂಳು ಹಿಡಿದು ಕೂತಂತೆ ಇಲ್ಲಿ ಚಿತ್ರಣ. ವೀಣೆಯ ಆಕರ್ಷಣೆ ಹೆಚ್ಚಿ ಚಿತ್ರಕಲೆಯನ್ನು ಹಿಂದೆ ಸರಿಸಿದ ಸಮಯ ವೆಂಕಟಪ್ಪನ ಬಾಳಿನಲ್ಲಿದ್ದಿತು(1918 ರಿಂದ 1922 ರವರೆಗೆ). ಆ ಸಮಯದಲ್ಲೂ ಚಿತ್ರವನ್ನಾಗಲಿ, ಶಿಲ್ಪವನ್ನಾಗಲಿ ಅವರೇನು ಪೂರಾ ಕೈಬಿಟ್ಟಿರಲಿಲ್ಲ. ಕೈಬಿಟ್ಟಾರು ಎಂಬ ಶಂಕೆಯೇನೊ ಅವರ ಅಭಿಮಾನಿಗಳಿಗೆ ಒದಗಿದುದು ಉಂಟು. ಈ ಚಿತ್ರಕ್ಕೆ ಅವನೀಂದ್ರನಾಥರ ಪ್ರತಿಕ್ರಿಯೆ ಏನೆಂಬುದನ್ನು ಆಗಲೆ ಹೇಳಿದೆ. ಈ ಚಿತ್ರದಲ್ಲಿ ವೀಣಾವಾದ್ಯದ ಚಿತ್ರಣ ಎದ್ದು ಕಾಣುವ ವಿವರ. ಕಲಾವಿದನ ತದೇಕಚಿತ್ತವನ್ನೆ, ಪ್ರಾಪಂಚಿಕ ಪರಾಙ್ಮುಖತೆಯನ್ನೆ ಹುಚ್ಚೆಂದು ಕಾಣಿಸಿದ್ದಾರೆ. ಅವರ ನಿರೂಪಣೆಯಲ್ಲಿ ಭಾವವನ್ನೂ ಮೆಟ್ಟಿ ವಾಸ್ತವಿಕತೆ ಕಾಣುತ್ತದೆ. ಹಾಗೆಯೆ ಅವನೀಂದ್ರನಾಥರ ಶಿಲ್ಪದ ಚಿತ್ರ ವಸ್ತುನಿಷ್ಠವಾಗಿದೆ. ಇದೊಂದು ಆತ್ಮಚಿತ್ರಣ ಮತ್ತು ಗುರುದಕ್ಷಿಣೆ.

ಅವರ ಇನ್ನೊಂದು ಕಾಲ್ಪನಿಕ ಚಿತ್ರವೆಂದರೆ 'ಮಹಾಶಿವರಾತ್ರಿ'. ದಂಪತಿಗಳು ರಾತ್ರಿಯ ವೇಳೆ ಶಿವಾಲಯಕ್ಕೆ ಬಂದಿರುವುದರ ಚಿತ್ರಣ ಇಲ್ಲಿದೆ. ಶಿವಾಲಯದೊಳಗಿಂದ ಬೆಳಕು ಇವರಿಬ್ಬರ ಮೇಲೆ ಬಿದ್ದು, ಇವರ ನಿರೂಪಣೆ ಸೊಗಸಾಗಿ ಮೂಡಿಬಂದಿದೆ. ಉಳಿದಂತೆ ರಾತ್ರಿಯ ಕತ್ತಲೆ. ಹೆಂಗಸು ಆಲಯದೊಳಗೆ ಬರುತ್ತಿದ್ದಾಳೆ, ಗಂಡಸು ಅಂಗಳದಲ್ಲೇ ಪ್ರಣಾಮ ಸಲ್ಲಿಸುತ್ತಿದ್ದಾನೆ. ಆಲಯದ ನೆರೆಯಲ್ಲಿ ಅಶ್ವತ್ಥ ಕಟ್ಟೆ; ಅದರ ಮೇಲೆ ಹಣತೆಯ ದೀಪಗಳು. ಮರದ ನೆರಳು ರಾತ್ರಿಯ ಕತ್ತಲೆಯೊಂದಿಗೆ ಕೂಡಿಕೊಂಡಿದೆ. ಮನುಷ್ಯರ ರೂಪಗಳು ವಾಸ್ತವಿಕತೆಯ ಪಡಿಯಚ್ಚುಗಳು; ಆದರೆ ನೆರಳು-ಬೆಳಕಿನ ವಿನ್ಯಾಸ ಚಿತ್ರದ ಜೀವ. ರಾತ್ರಿಯ ಹಿನ್ನೆಲೆಯಲ್ಲಿ ಭಕ್ತರ ಭಾವುಕತೆಯ ಕಲ್ಪನೆ ಚಿತ್ರದ ಸ್ವಾರಸ್ಯ. ಈ ಚಿತ್ರ ರಚಿತವಾದದ್ದು 1923ಕ್ಕೆ ಮುಂಚೆಯೆ. ಇದನ್ನು 'ರಾತ್ರಿಯ ಪೂಜೆ' ಎಂಬ ಹೆಸರಿನಿಂದ ಆ ವರ್ಷದ ಮದರಾಸು ಚಿತ್ರಕಲಾ ಪ್ರದರ್ಶನಕ್ಕೆ ಕಳುಹಿಸಿದ್ದರು.

'ರಾಧೆ ಮತ್ತು ಜಿಂಕೆ' ಇನ್ನೊಂದು ಸೊಗಸಾದ ವರ್ಣಚಿತ್ರ. ಕೃಷ್ಣಲೀಲೆಯ ವಸ್ತುವನ್ನವಲಂಬಿಸಿ ಮಾಡಿರುವ ಸಾಂಪ್ರದಾಯಿಕ ನಡುಯುಗದ ಶೈಲಿಯ ಚಿತ್ರ.

ಅವನೀಂದ್ರನಾಥರು 1896ರಷ್ಟು ಹಿಂದೆಯೆ ರಾಧಾಕೃಷ್ಣ ಪ್ರಸಂಗಗಳ ಕಿರು ಚಿತ್ರ-ಮಾಲೆಯನ್ನು ರಚಿಸಿದ್ದರಷ್ಟೆ. ಬಹುಶಃ ಅದರಿಂದ ದೊರೆತ ಪ್ರೇರಣೆ ವೆಂಕಟಪ್ಪನ ಈ ಚಿತ್ರಕ್ಕೆ ಮೂಲವಿದ್ದೀತು. ನಡುಯುಗದಲ್ಲಿ ಭಾಗವತ ಸಂಪ್ರದಾಯದ ಜನಪ್ರೀತಿಯಿಂದಾಗಿ ಕೃಷ್ಣ -ರಾಧೆಯರ ಪ್ರೇಮ ಸಂದರ್ಭಗಳು ಕಾವ್ಯದಲ್ಲೂ ಚಿತ್ರದಲ್ಲೂ ಕಾಣಿಸಿಕೊಂಡವು. ಚಿತ್ರಗಾರರು ರಾಧೆಯನ್ನು ಅಭಿಸಾರಿಕೆಯಂತೆ ಕಾಣಿಸಿ, ನಿಸರ್ಗದ ಚೆಲುವಿಗೂ ರಾಧೆಯ ಚೆಲುವಿಗೂ ನಂಟನ್ನು ಕಾಣಿಸುವುದು ವಾಡಿಕೆಯಾಯಿತು. ಬಸೋಲಿ ಎಂಬ ಚಿತ್ರ ಕಲಾ ಪರಂಪರೆಯಲ್ಲಿ ರಾಧೆಯೊಂದಿಗೆ ಸಂಗಾತಿಯಾಗಿ ಜಿಂಕೆಯೊಂದನ್ನು ಸೇರಿಸುವುದು ವಿಶೇಷ. ವೆಂಕಟಪ್ಪ ಈ ವಿವರವನ್ನು ಇಲ್ಲಿ ಅಳವಡಿಸಿ ಕೊಂಡಿದ್ದಾರೆ. ಆದರೆ ಅಲ್ಲಿನಂತೆ ಅವಾಸ್ತವಿಕತೆಯ ಭ್ರಮೆಯ ಧ್ವನಿ ಇಲ್ಲಿರದು. ವೆಂಕಟಪ್ಪನ ರಾಧೆಯಾಗಲಿ ಜಿಂಕೆಯಾಗಲಿ ವಸ್ತುನಿಷ್ಠವೆ; ಕಲೆಗಾರಿಕೆ ಅಲ್ಲಿನ ಚೆಲುವನ್ನು ಹೆಚ್ಚಿಸಿದೆಯೆ ವಿನಾ ಪರಿಚಿತ ರೂಪಕ್ಕೆ ಅಡ್ಡಿ ತಂದಿಲ್ಲ. ಈ ಚಿತ್ರದಲ್ಲಿ ರಾಧೆ ಅಥವಾ ಜಿಂಕೆ ಮುನ್ನೆಲೆಯಲ್ಲಿದ್ದರೂ ಹಿನ್ನೆಲೆಯ ನಿಸರ್ಗವೆ ನಮ್ಮ ಗಮನವನ್ನು ಸೆರೆಹಿಡಿಯುವುದು. ಇಡೀ ಚಿತ್ರ ಒಂದು ಕವಿತೆಯಂತೆ ಮೂಡಿಕೊಂಡಿದೆ.

ರಾಮಾಯಣ ಚಿತ್ರಮಾಲೆಯಲ್ಲಿ ಎರಡು ಚಿತ್ರಗಳು ರಸಿಕರ ಗಮನಕ್ಕೆ ಆಗಲೆ ಬಂದಿವೆ. ಆನಂದ ಕುಮಾರಸ್ವಾಮಿಗಳ 'ಕಲೆ ಮತ್ತು ಸ್ವದೇಶಿ' ಎಂಬ ಗ್ರಂಥದಲ್ಲಿ (ಮದರಾಸು 1919) ವೆಂಕಟಪ್ಪನ ಕಲೆಗೆ ನಿದರ್ಶನವಾಗಿ ಕೊಟ್ಟಿರುವ ಒಂದು ಚಿತ್ರ ರಾಮನಿಗೆ ಅರಣ್ಯದಲ್ಲಿ ಭೂಮಾತೆ ಪಾದುಕೆಗಳನ್ನು ಅನುಗ್ರಹಿಸುವ ಪ್ರಕರಣವನ್ನು ಕುರಿತದ್ದು. ಸಣ್ಣ ಪ್ರಮಾಣದ ಚಿತ್ರವಾದರೂ ಅಲ್ಲಿ ಕಾಣುವ ಅರಣ್ಯದ ನೋಟ ಹಿರಿದಾಗಿರುವುದು ಈ ಚಿತ್ರದ ಸ್ವಾರಸ್ಯ. ಸನ್ನಿವೇಶ ಕಲ್ಪನಾತ್ಮಕವಾದುದು; ಹಿನ್ನೆಲೆಯ ನಿಸರ್ಗದ ಹರವು ಮರೆಯುವಂತೆ, ಹಿಂಬದಿಯ ಭೂಮಾತೆ-ಸೀತೆಯರು ಗಮನದಿಂದ ಜಾರುವಂತೆ, ಮಲಗಿ ನಿದ್ರಿಸುತ್ತಿರುವ ರಾಮನ ಚಿತ್ರಣ ಸೊಗಸಾಗಿದೆ. ನಿಸರ್ಗದ ನಿರೂಪಣೆಯಲ್ಲಿ ಸ್ವಲ್ಪಮಟ್ಟಿಗೆ ಸೆಟೆತವಿದ್ದರೂ, ಭೂಮಾತೆ-ಸೀತೆಯರು ಬಂಗಾಳೀ ಕಲಾ ಶೈಲಿಯಲ್ಲಿದ್ದರೂ, ರಾಮನಲ್ಲಿ ಕಾಣುವ ನೈಜವಾಸ್ತವಿಕತೆ ಎದ್ದು ನಿಲ್ಲುತ್ತದೆ.

ಇನ್ನೊಂದು ಚಿತ್ರ ಈಗ ಕಲ್ಕತ್ತೆಯ ಇಂಡಿಯನ್ ಮ್ಯೂಸಿಯಂನಲ್ಲಿದೆ. ಇದು ಸೇತುಬಂಧದ ಪ್ರಸಂಗವನ್ನು ಕುರಿತದ್ದು. ವಾನರರು ಸಮುದ್ರಕ್ಕೆ ಬಂಡೆಗಳನ್ನು ಹೊತ್ತು ತಂದು ಸೇತುವೆಯನ್ನು ಕಟ್ಟುತ್ತಿರುವ ಚಿತ್ರಣ. ಇದರಲ್ಲಿ ಸಮುದ್ರದ ಅಲೆಗಳನ್ನು ಚೆನ್ನಾಗಿ ಕಾಣಿಸಿದ್ದಾರೆ; ವಾನರರ ಉತ್ಸಾಹ, ಸಂಭ್ರಮ, ಆತಂಕಗಳನ್ನು ತೋರಿಸಿದ್ದಾರೆ. ಆದರೆ ಒಟ್ಟಾರೆ ಚಿತ್ರ ದುರ್ಬಲವೆನಿಸುತ್ತದೆ.

ಅವರು ಕಲ್ಕತ್ತೆಯಲ್ಲಿ ಕಲಾವಿದ್ಯಾರ್ಥಿಯಾಗಿರುವಾಗಲೆ (1910) ಮಾಡಿದ ಪಕ್ಷಿಯ ಚಿತ್ರ ನಡುಯುಗದ ಮುಗಲ್ ಕಲಾಶೈಲಿಯ ಗುಂಗಿನಲ್ಲೆ ಇದೆ. ಈಗ ಇದು ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯದಲ್ಲಿದೆ. ಇದೇ ಕಾಲದಲ್ಲಿ (1911) ಸಿದ್ಧವಾದ ಇನ್ನೊಂದು ಚಿತ್ರ 'ಬಂಗಾಲದ ಮೀನು ಮಾರುಕಟ್ಟೆ'ಯನ್ನು ನಾನು ನೋಡಿಲ್ಲ. ಇದನ್ನು ಜೇಮ್ಸ್ ಎಚ್. ಕಸಿನ್ಸ್ ಅವರು ತುಂಬ ಮೆಚ್ಚಿಕೊಂಡಿದ್ದರೆಂಬ ಸೂಚನೆ ಅವರ ದಿನಚರಿಯಲ್ಲಿದೆ.

ಆನಂದ ಕುಮಾರಸ್ವಾಮಿಯವರು ತಮ್ಮ 'ಕಲೆ ಮತ್ತು ಸ್ವದೇಶಿ'ಯಲ್ಲಿ ವೆಂಕಟಪ್ಪನ 'ಶಂಕರಾಚಾರ್ಯರೂ ಹೆಂಡದವನೂ' ಎಂಬ ಚಿತ್ರವನ್ನು ಉಲ್ಲೇಖಿಸಿ, ಸುಂದರವಾದ ಕಲಾಕೃತಿಯೆಂದು ಹೊಗಳಿದ್ದಾರೆ. ಅದನ್ನೂ ನಾನು ನೋಡುವುದಾಗಿಲ್ಲ. ಇವರೆಡು ಚಿತ್ರಗಳೂ ಎಲ್ಲಿವೆಯೆಂಬುದೂ ನನಗೆ ತಿಳಿಯದು. 1911ರಲ್ಲೆ ರಚಿತವಾದ ಒಂದು ರೇಖಾಪದ್ಧತಿಯ ಚಿತ್ರ 'ಅರ್ಧನಾರೀಶ್ವರ'ದಲ್ಲಿ ಗಂಡು ಶಿವನನ್ನೂ ಹೆಣ್ಣು ಪಾರ್ವತಿಯನ್ನೂ ಅವರು ಅಂತರವರಿತು ಬಿಡಿಸಿರುವ ಬಗೆ ಮನೋಜ್ಞವಾಗಿದೆ. ಅದರ ಛಾಯಾ ಚಿತ್ರವನ್ನು 1930ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆಯಾದ 'ಪ್ರಬುದ್ಧ ಕರ್ಣಾಟಕ'ವು ಪ್ರಕಟಿಸಿತು; ಆಮೇಲೆ ಚಿತ್ರದ ಗತಿ ಏನಾಯಿತೊ ತಿಳಿಯದು.

ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲಿ ವೆಂಕಟಪ್ಪನದೊಂದು ಸ್ವಾರಸ್ಯವಾದ ಚಿತ್ರವಿದೆ — ಗಣೇಶನು ಅರ್ಚಕನ ಕೈಯಿಂದ ಮೋದಕವನ್ನು ತೆಗೆದುಕೊಳ್ಳುತ್ತಿರುವ ಪ್ರಸಂಗ. ಚಿತ್ರದ ಹಿನ್ನೆಲೆಯಲ್ಲಿ ಕತೆಯೊಂದು ಇದ್ದಿತೊ ನಾ ಕಾಣೆ; ಈ ಚಿತ್ರಕ್ಕೆ ಪ್ರೇರಣೆ ಯೇನೆಂಬುದನ್ನೂ ಅರಿಯೆ. ಚಿತ್ರದಲ್ಲಿ ವೆಂಕಟಪ್ಪನ ಹೆಸರಾಗಲಿ, ಅದರ ರಚನೆಯ ಕಾಲವಾಗಲಿ, ಇತರೆಡೆ ಅದರ ಉಲ್ಲೇಖವಾಗಲಿ ಇಲ್ಲದಿದ್ದರೂ ಚಿತ್ರದ ಶೈಲಿಯನ್ನು ಗಮನಿಸಿದರೆ ವೆಂಕಟಪ್ಪನದೆ ಇದ್ದಂತೆ ತೋರುತ್ತದೆ; ಆ ಸಂಗ್ರಹಾಲಯದ ದಾಖಲೆಯಲ್ಲೇನೊ ವೆಂಕಟಪ್ಪನದೆಂಬ ವಿವರವಿದೆ. ಇಲ್ಲಿ ಕಣ್ಣುಮುಚ್ಚಿ ಭಕ್ತಿಭಾವದಿಂದ ನೈವೇದ್ಯವನ್ನು ನೀಡುತ್ತಿರುವ ಅರ್ಚಕನ ಚಿತ್ರಣ ಸೊಗಸಾಗಿ ಮೂಡಿಬಂದಿದೆ. ಅವನ ಮುಂದೆ ಸುಖಾಸೀನನಾಗಿ ಕುಳಿತ ಗಣಪತಿ ಅರ್ಚಕನ ಕೈಯಿಂದ ಒಂದು ಕಡುಬನ್ನು ಹಾರಿಸುತ್ತಿರುವುದು ನಗೆಯನ್ನು ತರುತ್ತದೆ. ಸರಳವಾದ ನಿರೂಪಣೆ, ಹೆಚ್ಚು ವಿವರಗಳ ಗೊಂದಲವಿಲ್ಲ ; ವರ್ಣಸಂಯೋಜನೆಯು ಮನಮುಟ್ಟುವಂತಿದೆ.

ವೆಂಕಟಪ್ಪನ ಚಿತ್ರಗಳಲ್ಲಿ ಸುಪ್ರಸಿದ್ಧವಾದುದು 'ಬುದ್ಧ ಮತ್ತು ಅವನ ಶಿಷ್ಯರು'. ಈಗ ಇದು ಬೆಂಗಳೂರಿನ ವೆಂಕಟಪ್ಪ ಚಿತ್ರ ಸಂಗ್ರಹಾಲಯದಲ್ಲಿದೆ. 1921ರಲ್ಲಿ ಚಿತ್ರ ರಚಿತವಾದಮೇಲೆ ಕಾರ್ಲ್ ಖಂಡೆಲವಾಲ ಎಂಬ ಚಿತ್ರ ಸಂಗ್ರಹಕಾರರೊಬ್ಬರು ಇದನ್ನು ಪಡೆದುಕೊಂಡಿದ್ದರು. ಅನಂತರ ಇದು ದಿಲ್ಲಿಯ ನ್ಯಾಷನಲ್ ಆರ್ಟ್ ಗ್ಯಾಲರಿಯಲ್ಲಿದ್ದಿತು. ಚಿತ್ರ ಜಲವರ್ಣ ಸಂವಿಧಾನದಲ್ಲೆ ಸಿದ್ಧವಾಗಿದ್ದರೂ ಬುದ್ಧನ ಮತ್ತು ಅವನ ಶಿಷ್ಯರ ಮುಖಗಳನ್ನು ಟೆಂಪೆರ ಮಾಧ್ಯಮದಿಂದ ಬಿಡಿಸಿ, ಸೂಕ್ಷ್ಮತೆಯನ್ನೂ ಸ್ಪಷ್ಟತೆಯನ್ನೂ ಕಾಂತಿಯನ್ನೂ ಹೆಚ್ಚಿಸಿರುವುದನ್ನು ನೋಡಬಹುದು. ಹಿನ್ನೆಲೆಯ ನಿಸರ್ಗವೇನೊ ಸಾಂಪ್ರದಾಯಿಕವಾದುದೆ; ಕೊಂಚಮಟ್ಟಿಗೆ ಜಡವಾಗಿಯೂ ಇದೆ. ಆದರೆ ವ್ಯಕ್ತಿಗಳಲ್ಲಿ ಗಾಂಭೀರ್ಯ, ಉತ್ಸುಕತೆ, ಭಾವಪರವಶತೆಗಳು ಚಿತ್ರಕ್ಕೊಂದು ಅಪೂರ್ವವಾದ ಕಳೆಯನ್ನು ತಂದುಕೊಟ್ಟಿವೆ. ದಿಲ್ಲಿಯ ಲಲಿತಕಲಾ ಅಕಾಡಮಿಯ ಕಾರ್ಯದರ್ಶಿಯಾಗಿದ್ದ, ಮತ್ತು ವೆಂಕಟಪ್ಪನ ಮಿತ್ರರಾಗಿದ್ದ ವರದ ಉಕೀಲರು 1957ರಲ್ಲಿ ಸರಕಾರೀ ಪ್ರಕಟಣೆಯೊಂದಕ್ಕೆ ವೆಂಕಟಪ್ಪನ ಚಿತ್ರಗಳಲ್ಲಿ ಒಂದನ್ನು ಕಳುಹಿಸುವಂತೆ ಕೇಳಿದಾಗ ವೆಂಕಟಪ್ಪ ''ನಾನು ಮಾಡಿರುವ ಚಿತ್ರಗಳಲ್ಲೆಲ್ಲ ಅತ್ಯುತ್ತಮವಾದುದು ದಿಲ್ಲಿಯ ನ್ಯಾಷನಲ್ ಆರ್ಟ್ ಗ್ಯಾಲರಿಯಲ್ಲೆ ಇದೆ. 'ಬುದ್ಧ ಮತ್ತು ಶಿಷ್ಯರು' ಎಂಬುದು. ಅದನ್ನು ಬಳಸಿಕೊಳ್ಳಿ.

ಸರಕಾರವು ಯೋಜಿಸಿರುವ ಆಲ್‌ಬಮ್ ಅಥವಾ ಪೋರ್ಟ್‌ಫೋಲಿಯೋಗೆ ಇದು ಯೋಗ್ಯವಾಗಿದೆ'' ಎಂದು ಬರೆದರು.

ವೆಂಕಟಪ್ಪನ ವರ್ಣಚಿತ್ರಗಳಲ್ಲಿ ನಿಸರ್ಗದ ನಿರೂಪಣೆಯ ವೈಶಿಷ್ಟ್ಯವನ್ನು ಕಾಣುವುದು ಅವರು ಉದಕಮಂಡಲ ಮತ್ತು ಕೊಡೈಕೆನಾಲುಗಳಲ್ಲಿ ಬಿಡಿಸಿದ ಕಿರುಚಿತ್ರಗಳಲ್ಲಿ. ಪ್ರಕೃತಿ ಚಿತ್ರಣಕ್ಕೆ ವೆಂಕಟಪ್ಪ ಮೊಟ್ಟಮೊದಲು ಕೈಹಾಕಿದುದು 1916ರಲ್ಲಿ ಎಂದು ತೋರುತ್ತದೆ. ಕಲ್ಕತ್ತೆಯಲ್ಲಿ ವಿದ್ಯಾರ್ಥಿಯಾಗಿರುವಾಗಲೆ ಗಗನೇಂದ್ರನಾಥ ಠಾಕುರರ ಜೊತೆಯಲ್ಲಿ ದಾರ್ಜಿಲಿಂಗ್, ಪುರಿಜಗನ್ನಾಥ ಮೊದಲಾದ ಸ್ಥಳಗಳಿಗೆ ಹೋಗುತ್ತಿದ್ದು ಅಲ್ಲಿನ ಪ್ರಕೃತಿಯನ್ನು ಚಿತ್ರಿಸುತ್ತಿದ್ದುದುಂಟು. ಆದರೆ ಅವುಗಳಲ್ಲಿ ಯಾವುದೂ ಉಳಿದು ಬಂದಿಲ್ಲ. ಅವರು ಮೈಸೂರಿಗೆ ಬಂದ ಹೊಸದರಲ್ಲೆ ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ಮಿರ್ಜಾ ಇಸ್ಮಾಯಿಲರು 1916ರಲ್ಲಿ ವೆಂಕಟಪ್ಪನಿಂದ ಕೆಲವು ಪ್ರಕೃತಿ ಚಿತ್ರಗಳನ್ನು ಮಾಡಿಸಿ ಮಹಾರಾಜರಿಗೆ ತೋರಿಸಿದ್ದರು; ಮಹಾರಾಜರು ಅವನ್ನು ಮೆಚ್ಚಿಕೊಂಡು ರಾಘವೇಂದ್ರ ರಾಯರೊಂದಿಗೆ ಅವುಗಳ ವೈಶಿಷ್ಟ್ಯವನ್ನು ಕುರಿತು ಮಾತನಾಡಿದ್ದರು. ಮಹಾರಾಜರ ಆಪ್ತರೂ, ಸರಕಾರದಲ್ಲಿ ಉನ್ನತವಾದ ಅಧಿಕಾರದಲ್ಲಿದ್ದವರೂ, ವೆಂಕಟಪ್ಪನ ಅಭಿಮಾನಿಗಳೂ ಆಗಿದ್ದ ಪೂರ್ಣ ರಾಘವೇಂದ್ರರಾಯರು ತಮಗೆ ಕೆಲವು ಪ್ರಕೃತಿ ಚಿತ್ರಗಳನ್ನು ರಚಿಸಿಕೊಡುವಂತೆ ವೆಂಕಟಪ್ಪನನ್ನು ಕೇಳಿದರು. ಅದರಂತೆ ವೆಂಕಟಪ್ಪ 1919ರಲ್ಲಿ ಚಾಮುಂಡಿ ಬೆಟ್ಟದ ಮೇಲಿಂದ ಎರಡು ದೃಶ್ಯಗಳನ್ನು ವರ್ಣಚಿತ್ರ ವಿಧಾನದಲ್ಲಿ ರಚಿಸಿದರು. ಇವೆರಡೂ ರಾಘವೇಂದ್ರರಾಯರ ವಶದಲ್ಲಿದ್ದು, ಅವರು ತೀರಿಕೊಂಡಮೇಲೆ ಬೆಂಗಳೂರಿನ ಡಾ।। ಎಂ. ಶಿವರಾಮ್ ಅವರ ಸಂಗ್ರಹದಲ್ಲಿವೆ. ವೆಂಕಟಪ್ಪ ಮಿರ್ಜಾ ಇಸ್ಮಾಯಿಲರಿಗೆ ಮಾಡಿಕೊಟ್ಟ ಚಿತ್ರಗಳು ಏನಾದುವೊ ತಿಳಿಯದು.

ವೆಂಕಟಪ್ಪ ಮೈಸೂರಿನಲ್ಲಿರುವಾಗ ಬೇಸಗೆಯನ್ನು ತಡೆಯಲಾರದೆ ವರ್ಷದ ಆ ಎರಡು ತಿಂಗಳುಗಳನ್ನು ಉದಕಮಂಡಲದಲ್ಲಿ ಕಳೆಯುವ ವಾಡಿಕೆಯಿದ್ದಿತು. ಹಾಗೆ ಅಲ್ಲಿಗೆ ಹೋದಾಗ ಅಲ್ಲಿನ ಪ್ರಕೃತಿಯ ವಿವಿಧ ಮುಖಗಳನ್ನು, ವಿಭಿನ್ನಭಾವಗಳನ್ನು ಚಿತ್ರಿಸುವ ಮನಸ್ಸು ಮಾಡಿದರು. 1926ರ ಮೇ-ಅಕ್ಟೋಬರ್ ತಿಂಗಳುಗಳ ನಡುವೆ ಇದು ಮೊದಲಾಗಿ 1928ರ ಮಾರ್ಚ್-ಸೆಪ್ಟೆಂಬರ್ ತಿಂಗಳುಗಳ ನಡುವೆ ಮುಗಿಯಿತು. ಆ ಅವಧಿಯಲ್ಲಿ ರಚಿತವಾದ ಚಿತ್ರಗಳನ್ನು ಈಗ ಬೆಂಗಳೂರಿನ ವೆಂಕಟಪ್ಪ ಚಿತ್ರ ಸಂಗ್ರಹಾಲಯದಲ್ಲಿ ಕಾಣಬಹುದು. ಮುಂದೆ, 1934ರ ಏಪ್ರಿಲ್‌ನಿಂದ ಜುಲೈವರೆಗೆ ವೆಂಕಟಪ್ಪ ಇನ್ನೊಂದು ಗಿರಿಧಾಮವಾದ ಕೊಡೈಕೆನಾಲಿಗೆ ಹೋಗಿದ್ದರು. ಅಲ್ಲಿ ರಚಿಸಿದ ಪ್ರಕೃತಿಚಿತ್ರಗಳೂ ಇವೆ. ಮನುಷ್ಯನಂತೆ ಪ್ರಕೃತಿಗೂ ತನ್ನದೆ ಆದ ವ್ಯಕ್ತಿತ್ವವಿದೆ, ಮನೋಧರ್ಮವಿದೆ; ಕಾಲಕಾಲಕ್ಕೆ ಅದು ಮಾರ್ಪಡುವುದೂ ಉಂಟು. ಕಲಾವಿದನ ಸೂಕ್ಷ್ಮ ದೃಷ್ಟಿಗೆ ಈ ಪರಿವರ್ತನೆಯ ವಿವರಗಳು ತೋರಿಕೊಳ್ಳುತ್ತವೆ. ಉದಕಮಂಡಲದಲ್ಲಿ ಮುಂಜಾನೆಯಿಂದ ಮಧ್ಯ ರಾತ್ರಿಯವರೆಗೆ ಪ್ರಕೃತಿಯು ಬದಲಾಯಿಸುವುದನ್ನು ಚಿತ್ರಿಸಲು ವೆಂಕಟಪ್ಪ ತೊಡಗಿದರು.

ಈ ಚಿತ್ರಗಳು ದಿಟವಾಗಿ ಅದ್ಭುತ ಕೃತಿಗಳು. ಅವುಗಳಿಗೆ ಸರಿಸಾಟಿಯಾದ ಪ್ರಕೃತಿ ಚಿತ್ರಣ ನಮ್ಮ ದೇಶದಲ್ಲಿ ಈವರೆಗೆ ನಡೆದುದಿಲ್ಲ. ಅವುಗಳ ಸೊಗಸನ್ನು ಮಾತಿನಿಂದ

ಬಣ್ಣಿಸುವುದಾಗದು. ಕಲಾವಿದನ ಕಣ್ಣಿನಲ್ಲಿರುವ ಗ್ರಹಣಶಕ್ತಿ, ಮನಸ್ಸಿನಲ್ಲಿರುವ ಕಲ್ಪನಾಶಕ್ತಿ, ಕುಂಚದಲ್ಲಿರುವ ವರ್ಣನಾಶಕ್ತಿಗಳು ಆ ಚಿತ್ರಗಳನ್ನು ನೋಡಿದಾಗಲೆ ಅರಿವಿಗೆ ಬರುವುದು. ವರ್ಣಗಳ ಮಾರ್ದವ, ನೆರಳು-ಬೆಳಕುಗಳ ಚಕ್ಕಂದದಾಟ, ವಾಸ್ತವಿಕತೆಯ ನಿಷ್ಠೆ, ಗೆರೆಗಳ ಚೆಲುವು, ವಿವರಗಳು ಹೊರಸೂಸುವ ಭಾವ, ಒಟ್ಟಾರೆ ಸಂದರ್ಭದ ಕಾಂತಿ ಇವೆಲ್ಲ ಅಲ್ಲಿ ಎದ್ದು ಕಾಣುತ್ತವೆ. ವಸ್ತುನಿಷ್ಠವಾದ ಚಿತ್ರಣವಾದರೂ ನಿರೂಪಣೆಯಲ್ಲಿ ಕಲ್ಪನೆಯಿಲ್ಲದಿಲ್ಲ.

೫

ವೆಂಕಟಪ್ಪನ ವರ್ಣಚಿತ್ರಗಳಲ್ಲಿ ಮೂರನೆಯ ಗುಂಪಿಗೆ ಸೇರಿದ ಕೃತಿಗಳು ವ್ಯಕ್ತಿಚಿತ್ರಗಳು (ಪೋರ್ಟ್ರೇಟ್). ಆನೆಯ ದಂತದ ಹಲಗೆಯ ಮೇಲೆ ಜಲವರ್ಣಪದ್ಧತಿಯಲ್ಲಿ ಅವರು ರಚಿಸಿದ ಕೆಲವು ಕಿರುಚಿತ್ರಗಳು ಉಳಿದುಬಂದಿವೆ. ದಂತದ ಕಿರುಚಿತ್ರಗಳು ಕಷ್ಟಸಾಧ್ಯವಾದ ಕಲೆ. ಅಷ್ಟು ನಯವಾದ ಮಾಧ್ಯಮದ ಮೇಲೆ ಜಲವರ್ಣಗಳನ್ನು ಮೂಡಿಸುವುದೂ ಕಷ್ಟ, ಉಳಿಸಿಕೊಳ್ಳುವುದೂ ಕಷ್ಟ; ಬಣ್ಣಗಳನ್ನು ಪದರಪದರವಾಗಿ, ತೆಳುವಾಗಿ ಹಾಕುವಾಗ ನೀರಿನ ಸೇರ್ಪಡೆ ಎಷ್ಟಿರಬೇಕೆಂದು ನಿಶ್ಚಯಿಸಿಕೊಳ್ಳಲು ಜಾಣ್ಮೆ ಬೇಕು; ಕುಂಚದ ಓಟ ಖಚಿತವಾಗಿರಬೇಕು. ಈ ಕಲೆಯನ್ನು ಬೆಳೆಸಿದವರು ಮುಗಲ್ ಕಾಲದ ಕಲಾವಿದರು. ಅರಸರು ತಮ್ಮ ಕಿರುಚಿತ್ರಗಳನ್ನು ಹೀಗೆ ಮಾಡಿಸಿಕೊಂಡು, ಅವರ ಪ್ರೇಯಸಿಯರಿಗೊ ಅಧಿಕಾರಿಗಳಿಗೊ ಸಾಮಂತರಿಗೊ ಉಡುಗೊರೆಯಾಗಿ ಕೊಡುವುದು ವಾಡಿಕೆಯಾಗಿದ್ದಿತು. ಶ್ರೀಮಂತರು ಪಗಡೆ ಆಟವಾಡುವಾಗ ದಂತದ ದಾಳಗಳ ಮೇಲೆ ಈ ಬಗೆಯ ಚಿತ್ರಗಳನ್ನು ಮಾಡಿಸುತ್ತಿದ್ದುದುಂಟು. ಇನ್ನೂ ಇತರ ಆಟಗಳಲ್ಲಿ ದಂತದ ಕಿರುಚಿತ್ರಗಳು ಬಳಕೆಗೆ ಬರುತ್ತಿದ್ದುವು. ಹದಿನೆಂಟನೆಯ ಶತಮಾನದ ಸುಮಾರಿಗೆ ಐರೋಪ್ಯದೇಶಗಳಲ್ಲಿ ಇದು ಜನಪ್ರಿಯವಾಯಿತು. ರುಸುಲ್‌ಬ ಕೆರೀರ (1675-1757) ಎಂಬ ಇಟಲಿ ದೇಶದ ಕಲಾವಿದೆ ಅಲ್ಲಿ ಮೊಟ್ಟಮೊದಲು ಈ ಕಲೆಯಲ್ಲಿ ಪರಿಣತಿಯನ್ನು ಪಡೆದವಳಂತೆ. ಅಲ್ಲಿಂದ ಈ ಕಲೆ ಇಂಗ್ಲೆಂಡಿಗೆ ಬಂದು ಜಾನ್ ಸ್ಮಾರ್ಟ್ (1741-1811), ಜಾರ್ಜ್ ಎಂಗಲ್‌ಹಾರ್ಟ್ (1750-1829), ರಿಚರ್ಡ್ ಕೊಸ್ವೆ (1742-1821) ಮೊದಲಾದ ಕಲಾವಿದರಿಂದ ಊರ್ಜಿತವಾಯಿತು.

ವೆಂಕಟಪ್ಪನಿಗೆ ಈ ಕಲೆಯ ಮೇಲೆ ಆಸಕ್ತಿ ಬಂದುದು ಹೇಗೊ ತಿಳಿಯದು. ಆದರೆ ಅವರು ಕಲ್ಕತ್ತೆಯಿಂದ ಮೈಸೂರಿಗೆ ಮರಳಿದ ತರುಣದಲ್ಲೆ, 1918ರ ಫೆಬ್ರುವರಿ ತಿಂಗಳಲ್ಲಿ ಮಿರ್ಜಾ ಇಸ್ಮಾಯಿಲರು ಮಹಾರಾಜರ ಕೆಲವು ಚಿತ್ರಗಳನ್ನು ಜಲವರ್ಣಪದ್ಧತಿಯಲ್ಲೊ ತೈಲವರ್ಣ ಪದ್ಧತಿಯಲ್ಲೊ ಮಾಡುವಂತೆ ವೆಂಕಟಪ್ಪನಿಗೆ ಸೂಚಿಸಿದಾಗ, ವೆಂಕಟಪ್ಪ ಆನೆಯ ದಂತದ ಮೇಲೆ ಕಿರುಚಿತ್ರ ಶೈಲಿಯಲ್ಲಿ (ಮಿನಿಯೇಚರ್) ಮಾಡಿದರೆ ಒಳ್ಳೆಯದೆಂದು ಹೇಳಿದರು. ಮಿರ್ಜಾ ಆಗಲೆಂದು ಒಪ್ಪಿ ವೆಂಕಟಪ್ಪನಿಗೆ ಆನೆಯ ದಂತದ ಕೆಲವು ಹಲಗೆಗಳನ್ನೂ ಮಹಾರಾಜರ ಕೆಲವು ಚಿತ್ರಗಳನ್ನೂ ಕಳುಹಿಸಿಕೊಟ್ಟರು. ಆಗ ಅವರು ಮಾಡಿದ ಮಹಾರಾಜರ ಕಿರುಚಿತ್ರ ಈಗ ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯ

ದಲ್ಲಿದೆ. ಇದನ್ನು ನೋಡಿದ ಕೂಚ್‌ಬಿಹಾರ್ ರಾಜ್ಯದ ಮಹಾರಾಣಿ ತನ್ನ ದಿವಂಗತ ಪತಿಯ ಚಿತ್ರವನ್ನೂ ಹೀಗೆಯೇ ಮಾಡಿಸಬೇಕೆಂದು ಬಯಸಿದಾಗ ವೆಂಕಟಪ್ಪ 1926ರ ಏಪ್ರಿಲ್ ತಿಂಗಳಲ್ಲಿ ಈ ಮಹಾರಾಜರ ಭಾವಚಿತ್ರಗಳ ನೆರವಿನಿಂದ ಎರಡು ಕಿರುಚಿತ್ರಗಳನ್ನು ಮಾಡಿ ಮುಗಿಸಿದರು; ಒಂದು ಐರೋಪ್ಯ ಉಡುಪಿನಲ್ಲಿ, ಇನ್ನೊಂದು ಭಾರತೀಯ ಉಡುಪಿನಲ್ಲಿ. ಇವುಗಳಲ್ಲೊಂದು ಈಗ ಮದರಾಸಿನ ಚಿತ್ರ ಸಂಗ್ರಹಾಲಯದಲ್ಲಿದೆ; 1954ರಲ್ಲಿ ವೆಂಕಟಪ್ಪ ಇದನ್ನು ದಾನವಾಗಿ ಕೊಟ್ಟರು. ಅದು ಅವರ ಬಳಿ ಉಳಿದುಕೊಂಡದ್ದು ಹೇಗೆಂಬ ಕತೆ ಆಗಲೆ ಬಂದಿದೆ. ಈ ಚಿತ್ರಗಳನ್ನು ಮಾಡಿ ಮುಗಿಸಿದೊಡನೆ ಅದನ್ನು ನೋಡಿದ ವೆಂಕಟಪ್ಪನ ಮಿತ್ರರು ಪ್ರಿನ್ಸ್ ಗೋಪಾಲರಾಜೇ ಅರಸಿನವರು ತಮಗೊಂದು ಮೈಸೂರು ಮಹಾರಾಜರ ಕಿರುಚಿತ್ರವನ್ನು ಹೀಗೆಯೆ ಮಾಡಿಕೊಡಬೇಕೆಂದು ಕೇಳಿದರು. ಆಗ ನಾಲ್ವಡಿ ಕೃಷ್ಣರಾಜ ಒಡೆಯರ ಇನ್ನೊಂದು ಕಿರು ದಂತಚಿತ್ರ ಸಿದ್ಧವಾಯಿತು. ಇದೂ ಬೆಂಗಳೂರಿನ ವೆಂಕಟಪ್ಪ ಚಿತ್ರಸಂಗ್ರಹಾಲಯದಲ್ಲೆ ಇದೆ.

ಇದೆ ಪದ್ಧತಿಯಲ್ಲಿರುವ ಇನ್ನೊಂದು ಕಿರುಚಿತ್ರ ತಮ್ಮ ಕಲಾಗುರು ಅವನೀಂದ್ರನಾಥ ಠಾಕುರರದ್ದು. ಈ ಕಿರುಚಿತ್ರಗಳು ವಾಸ್ತವಿಕತೆಯ ಪರಮಾವಧಿ ಎಂದರೂ ತಡೆಯುತ್ತದೆ. ಯಾವ ಛಾಯಾಚಿತ್ರವೂ ಅವುಗಳ ಮುಂದೆ ನಿಲ್ಲಲಾರದು. ಹಾಗೆಂದಮಾತ್ರಕ್ಕೆ ಕಲೆಯ ಅಂಶ ಕಡಮೆ ಎಂದೇನಲ್ಲ. ವ್ಯಕ್ತಿಗಳ ರೂಪವನ್ನು ಮಾತ್ರವಲ್ಲದೆ, ಅವರ ಗುಣ, ಗತ್ತು, ಗಾಂಭೀರ್ಯ, ನಯ, ನಾಜೂಕು ಎಲ್ಲವನ್ನೂ ಚಿತ್ರಿಸಿದ್ದಾರೆ. ಸಣ್ಣ ಪ್ರಮಾಣವಾದರೂ ವಿವರಗಳೆಲ್ಲವೂ ಸ್ಪಷ್ಟವಾಗಿವೆ. ಬರಿಗಣ್ಣಿಂದಲೆ ವ್ಯಕ್ತಿಯ ಸ್ವಾರಸ್ಯವನ್ನು, ವೈಶಿಷ್ಟ್ಯವನ್ನು ಅರಿತುಕೊಳ್ಳಬಹುದು. ಭೂತಗನ್ನಡಿಯ ನೆರವಿನಿಂದ ನೋಡಿದರಂತೂ ಸೂಕ್ಷ್ಮ ವಿವರಗಳನ್ನೂ ವೆಂಕಟಪ್ಪ ಉಳಿಸಿದ್ದಾರೆಂಬುದು ಸೋಜಿಗದ ಮಾತು. ಒಮ್ಮೆ ನನಗೆ ಅವನೀಂದ್ರನಾಥರ ಕಿರುಚಿತ್ರವನ್ನು ತೋರಿಸುತ್ತಿದ್ದರು. ಕೈಯಲ್ಲಿ ಕನ್ನಡಕ ಹಿಡಿದು ನಿಂತ ಸಹಜ ಭಂಗಿಯಲ್ಲಿ ಆ ಮಹನೀಯರ ಸರಳ ಸ್ವಭಾವ ಎದ್ದು ಕಾಣುತ್ತಿತ್ತು. ಅವರ ಮೆಳ್ಳಗಣ್ಣು ಚಿತ್ರದ ವಾಸ್ತವಿಕತೆಯನ್ನು ಮಾತ್ರವಲ್ಲ ಚೆಲುವನ್ನೂ ತೋರಿಸುವಂತಿದ್ದಿತು. ವೆಂಕಟಪ್ಪ ನನ್ನ ಕೈಗೆ ಭೂತಗನ್ನಡಿಯನ್ನು ಕೊಟ್ಟು "ಈಗ ನೋಡಿ" ಎಂದರು. ಅವರ ಗುರುವಿನ ಕೈಮೇಲಿನ ನೀಲಿಗಟ್ಟಿದ ನರಗಳು ಕಂಡುವು; ಕೈಯಲ್ಲಿ ಹಿಡಿದ ಕನ್ನಡಕದ ಕಟ್ಟು ಸ್ಪಷ್ಟವಾಗಿ ಕಂಡಿತು; ತೊಟ್ಟ ನಿಲುವಂಗಿಯ ದಾರವೂ ಕಾಣುವಂತಿತ್ತು. ನಾನು ನೋಡಿ ಬೆರಗಾಗಿ, ಚಿತ್ರವನ್ನು ಅವರಿಗೆ ಹಿಂದಿರುಗಿಸಿದಾಗ, ಅವರು ಅದನ್ನು ಕಣ್ಣಿಗೊತ್ತಿಕೊಂಡು ಒಳಗಿಟ್ಟರು! ಗುರುಭಕ್ತಿಯ ಭರದಲ್ಲಿ ಮಾಡಿದ್ದ ಚಿತ್ರ ಅದು; ಹಾಗೆಂದೆ ಅದರಲ್ಲಿ ಸೊಗಸು ತುಂಬಿ ಬಂದಿದೆ.

ಹಾಗೆಯೇ ಇನ್ನೊಮ್ಮೆ ನಾಲ್ವಡಿ ಕೃಷ್ಣರಾಜ ಒಡೆಯರ ದಂತ ಕಿರುಚಿತ್ರವೊಂದನ್ನು ನನಗೆ ತೋರಿಸಿ ವಿವರಿಸುತ್ತಿದ್ದರು. ವ್ಯಕ್ತಿಯಲ್ಲಿದ್ದ ಗಾಂಭೀರ್ಯ, ಸಾತ್ವಿಕತೆ ಕಲಾಭಿಮಾನವನ್ನು ಅವರು ಚಿತ್ರದಲ್ಲಿ ಕಾಣಿಸಿದ್ದರು. ಮತ್ತೆ ಭೂತಗನ್ನಡಿಯ ನೆರವಿನಿಂದ ನೋಡಿದಾಗ, ಒಂದು ದಿನ ಮುಖಕ್ಷೌರ ತಪ್ಪಿ ನೀಲಿಗಟ್ಟಿದ ಕೆನ್ನೆಗಳು, ಕಣ್ಣುಗುಡ್ಡೆಗಳಲ್ಲಿ ಮೂಡಿಬಂದ ಪದರಗಳು, ಸ್ವಾಭಾವಿಕವಾದ ಕಣ್ಣಿನ ಕಾಂತಿ, ಪೇಟದ ಹೊರಸುತ್ತಿನಲ್ಲಿ

ಬಂದ ಜರತಾರಿಯ ಕುಸುರಿ ಕೆಲಸ ಎಲ್ಲವನ್ನೂ ವಿರಳವಾಗಿ ಚಿತ್ರಿಸಿದ್ದರು. ನಾನು ನೋಡುತ್ತ ಬೆರಗಾಗಿ ಮಾತನಾಡದಾಗ, ''ಇದನ್ನು ಮಾಡಿ ಮುಗಿಸಲು ಎಷ್ಟು ದಿನ ಹಿಡಿದಿರಬಹುದು, ಹೇಳಿ'' ಎಂದು ಕೇಳಿದರು; ನನ್ನಿಂದ ಮಾತು ಹೊರಡದಿದ್ದಾಗ ''ಇಡೀ ಒಂದು ವರ್ಷ'' ಎಂದು ಅವರೆ ಹೇಳಿದರು. ತಮ್ಮಲ್ಲಿ ಅಭಿಮಾನವಿಟ್ಟು, ತಮ್ಮ ಕಲೆಗೆ ಪ್ರೋತ್ಸಾಹ ನೀಡಿ, ತಮ್ಮ ಯೋಗಕ್ಷೇಮವನ್ನು ನೋಡಿಕೊಂಡ ಆ ಅರಸರ ಮೇಲೆ ವೆಂಕಟಪ್ಪನಿಗಿದ್ದ ಗೌರವಬುದ್ಧಿಯನ್ನು ಈ ಚಿತ್ರದಲ್ಲಿ ಗುರುತಿಸಬಹುದು.

ವೆಂಕಟಪ್ಪ 1924ರಲ್ಲಿ ಮಾಡಿದ 'ಚಾಂದಬೀಬಿ'ಯ ವ್ಯಕ್ತಿಚಿತ್ರವೊಂದರ ಉಲ್ಲೇಖವಿದೆ. ಚಿತ್ರ ಈಗ ಎಲ್ಲಿದೆಯೊ ತಿಳಿಯದು. ಅವರ ಅಭಿಮಾನಿಗಳಾಗಿದ್ದ ಕಲಾರಸಿಕ ಡಾ. ಜೇಮ್ಸ್ ಎಚ್. ಕಸಿನ್ಸ್‌ಅವರು ಬಯಸಿ ಮಾಡಿಸಿಕೊಂಡ ಇದೂ ಕಿರುಚಿತ್ರವೆ; ಜಲವರ್ಣ ಶೈಲಿಯದೆ ಎಂದು ಅವರ ದಿನಚರಿಯಲ್ಲಿ ಒಕ್ಕಣೆಯಿದೆ. ಚಿತ್ರವನ್ನು ಮಾಡಲು ಕಸಿನ್ಸ್ ವೆಂಕಟಪ್ಪನಿಗೆ ಚಾಂದಬೀಬಿಯ ಸಾಂಪ್ರದಾಯಿಕ ಚಿತ್ರವೊಂದನ್ನು ಕಳುಹಿಸಿದ್ದರಂತೆ. ವೆಂಕಟಪ್ಪ ತೈಲವರ್ಣ ಪದ್ಧತಿಯಲ್ಲಿ ಮಾಡಿದ ಹೆಂಗಳೆಯೊಬ್ಬರ ವ್ಯಕ್ತಿಚಿತ್ರ ಈಗ ಬೆಂಗಳೂರಿನ ಎನ್‌ಎಂಕೆಆರ್‌ವಿ ಹೆಂಗಸರ ಕಾಲೇಜಿಗೆ ಸೇರಿದ 'ಶಾಶ್ವತಿ' ಸಂಗ್ರಹಾಲಯದಲ್ಲಿದೆ. ಇದು ಮಾಡಿದ ವರ್ಷ 1909 ಎಂದು ಚಿತ್ರದಲ್ಲೆ ಕಾಣಿಸಿದ್ದಾರೆ. ಈಕೆ ಯಾರೆಂಬುದಾಗಲಿ, ಇದನ್ನು ಮಾಡಿದ ಸಂದರ್ಭ ಏನೆಂಬುದಾಗಲಿ ತಿಳಿಯುವುದಿಲ್ಲ. 'ಶಾಶ್ವತಿ' ಸಂಗ್ರಹಾಲಯದ ನಿರ್ದೇಶಕಿ ಪ್ರೊ। ಚಿ.ನ. ಮಂಗಳಾ ಅವರು ಅದನ್ನು ಮೈಸೂರಿನ ಒಬ್ಬರ ಮನೆಯಿಂದ ಪಡೆದುದಾಗಿ ತಿಳಿಸಿದರು.

ಮುಖ್ಯ ಪ್ರಸಂಗಗಳು

ಜನನ (ಮೈಸೂರಿನಲ್ಲಿ)	ಜೂನ್ 23, 1886 (ಸರ್ವಜಿತ್, ಆಷಾಢ ಶುದ್ಧ ದ್ವಿತೀಯಾ)
ಮೈಸೂರು ಔದ್ಯಮಿಕ ಶಾಲೆ ಸೇರಿದ್ದು	1902
ಮದ್ರಾಸು ಸರಕಾರದ ಕಲಾಪರೀಕ್ಷೆಗಳಲ್ಲಿ ತೇರ್ಗಡೆಯಾದದ್ದು	1906
ಕಲ್ಕತ್ತೆಯ ಸರಕಾರಿ ಕಲಾಶಾಲೆಯನ್ನು ಸೇರಿದ್ದು	1909
ಮಹಿಳೆ (ತೈಲಚಿತ್ರ)	1909
ಪಕ್ಷಿ (ವರ್ಣಚಿತ್ರ, ಮುಗಲ್ ಪದ್ಧತಿಯಲ್ಲಿ)	1910
ಅಜಂಟ ಭಿತ್ತಿ ಚಿತ್ರಗಳ ಪ್ರತಿ ಮಾಡಿಕೊಳ್ಳಲು ಹೋದದ್ದು	1911
ಅರ್ಧನಾರೀಶ್ವರ ಮತ್ತು *ಬಂಗಾಳದ ಮೀನು ಮಾರುಕಟ್ಟೆ*	1911
ರಾಮಾಯಣದ ಚಿತ್ರಗಳು	1913
ಹಿಮಾಲಯ ಯಾತ್ರೆ (ಪಂಚಕೇದಾರ ದರ್ಶನಕ್ಕಾಗಿ)	ಏಪ್ರಿಲ್-ಜೂನ್ 1913
ಅಪರಿಗ್ರಹ ವ್ರತವನ್ನು ಸ್ವೀಕರಿಸಿದ್ದು	ಮೇ 6, 1913
ವೀಣಾಭ್ಯಾಸದ ಆರಂಭ (ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರರ ಬಳಿ)	1913ರ ಕೊನೆಯ ಭಾಗ
*ಶ್ರುತಿ ವೀಣೆ*ಯನ್ನು ಸಿದ್ಧಪಡಿಸಿದ್ದು	1914ರ ಜನವರಿ
ಅವನೀಂದ್ರನಾಥರು (ದಂತಫಲಕದ ಮೇಲೆ ಕಿರುಚಿತ್ರ)	1914
ಮೈಸೂರಿಗೆ ಹಿಂದಿರುಗಿದ್ದು	ಜೂನ್ 1, 1916
ಹಳೆ ಅಗ್ರಹಾರ ದ ಚಿತ್ರಣ	1917
ಮೈಸೂರು ಅರಮನೆಗೆ ಕೆಲಸ ಮಾಡಲು ತೊಡಗಿದ್ದು	1918
ಮಹಾರಾಜ ಕೃಷ್ಣರಾಜ ಒಡೆಯರು (ದಂತಫಲಕದ ಮೇಲೆ ಕಿರುಚಿತ್ರ) (ಮಿರ್ಜಾ ಇಸ್ಮಾಯಿಲರಿಗಾಗಿ ಮಾಡಿದ್ದು)	1918
ಮಾಣಿ (ಶಿಲ್ಪ)	1918 (ಪುನರ್ನಿರ್ಮಾಣ 1950ರಲ್ಲಿ)
ವೀಣೆ ಶೇಷಣ್ಣನವರ ಬಳಿ ಶಿಕ್ಷಣ ಮೊದಲಾದದ್ದು	ಮಾರ್ಚ್ 7, 1918
ವೀಣೆ ಶೇಷಣ್ಣ (ಶಿಲ್ಪ) ಮುಗಿದದ್ದು	ಆಗಸ್ಟ್ 6, 1918
ಚಾಮುಂಡಿ ಬೆಟ್ಟದಿಂದ ದೃಶ್ಯಗಳು (ಎರಡು ವರ್ಣಚಿತ್ರಗಳು)	1919
ವೀಣೆಯ ಹುಚ್ಚು (ವರ್ಣಚಿತ್ರ)	1921-22
ಮಹಾಶಿವರಾತ್ರಿ	1923
ಜೇಮ್ಸ್ ಕಸಿನ್ಸ್‌ರಿಗಾಗಿ *ಚಾಂದ್‌ಬೀಬಿ* (ಕಿರುಚಿತ್ರ)	1923
ಅಂಗಸಾಧನೆ (ಸರ್ದಾರ್ ಗೋಪಾಲರಾಜ ಅರಸರ ಚಿತ್ರಣ) ಮುಗಿದದ್ದು	ಮೇ 10, 1923
ರವೀಂದ್ರನಾಥ ಠಾಕೂರರು (ಶಿಲ್ಪ) ಮುಗಿದದ್ದು	ಡಿಸೆಂಬರ್ 27, 1923 (ಪರಿಷ್ಕಾರ 1956)
ಮಾರೀಚನು ಹೇಮಮೃಗವಾಗಿ ಸೀತೆಯನ್ನು ಭ್ರಮೆಗೀಡುಮಾಡಿದ್ದು (ವರ್ಣಚಿತ್ರ)	1923
ಮಹಾತ್ಮಾಗಾಂಧಿಯವರ ಸಂದರ್ಶನ (ಬೆಳಗಾಂವಿಯಲ್ಲಿ)	ಡಿಸೆಂಬರ್ 28, 1924
ಮೈಸೂರು ಅರಮನೆಯ ಅಂಬಾವಿಲಾಸ ತೊಟ್ಟಿಯ ಅಲಂಕರಣಕ್ಕೆ ತೊಡಗಿದ್ದು	1924

ಕುಚ್‌ಬಿಹಾರದ ಅರಸರು (ದಂತಫಲಕದ ಮೇಲೆ ಕಿರುಚಿತ್ರ)	1924-1926
ಸಿದ್ಧಾರ್ಥನ ರಾಜ್ಯಪರಿತ್ಯಾಗ (ಫಲಕ)	1924 (ಪರಿಷ್ಕಾರ 1951-52)
ದ್ರೋಣಾಚಾರ್ಯರ ಶಿಕ್ಷಣ (ಫಲಕ)	1925
ಏಕಲವ್ಯನ ಅಭ್ಯಾಸ (ಫಲಕ)	1925
ಬೆಂಗಳೂರಿನಲ್ಲಿ ಚಿತ್ರಶಾಲೆ ಕಟ್ಟಲು ನಿವೇಶನವನ್ನು ಕೊಂಡದ್ದು	ಏಪ್ರಿಲ್ 15, 1926
ಊಟಿಯಲ್ಲಿ ನಿಸರ್ಗಚಿತ್ರಗಳ ಸಿದ್ಧತೆ	ಮೇ 9ರಿಂದ ಅಕ್ಟೋಬರ್ 27, 1926 ಮತ್ತೆ ಮಾರ್ಚ್ 29ರಿಂದ ಸೆಪ್ಟೆಂಬರ್ 27, 1928
ಶಕುಂತಲೆಯ ನಿರ್ಗಮನ (ಫಲಕ)	1928 (ಪರಿಷ್ಕಾರ 1948)
ಮೈಸೂರು ಮಹಾರಾಜರು ಚಿತ್ರಶಾಲೆಗೆ ಭೇಟಿಕೊಟ್ಟದ್ದು	ಜನವರಿ 27, 1930
ರಾಮನಿಂದ ಹನುಮಂತನಿಗೆ ಅಂಗುಲಿ ಪ್ರದಾನ (ಫಲಕ)	1932
ಬುದ್ಧ ಪರಿವ್ರಾಜಕನಾಗಿ (ಫಲಕ)	1934
ಕೊಡೈಕೆನಾಲಿನ ದೃಶ್ಯಗಳು (ವರ್ಣಚಿತ್ರಗಳು)	ಏಪ್ರಿಲ್ 21ರಿಂದ ಜುಲೈ 11, 1934
ನಂದಿಬೆಟ್ಟಕ್ಕೆ ಬಂದದ್ದು	ಮಾರ್ಚ್ 7ರಿಂದ ಏಪ್ರಿಲ್ 21, 1934
ಮಹಾರಾಜ ಕೃಷ್ಣರಾಜ ಒಡೆಯರು (ದಂತಫಲಕದ ಮೇಲೆ ಕಿರುಚಿತ್ರ) (ಸರ್ದಾರ್ ಗೋಪಾಲರಾಜ ಅರಸರಿಗಾಗಿ)	1939
ಶಿವತಾಂಡವ (ಫಲಕ)	1940 (ಪರಿಷ್ಕಾರ 1956)
ಕೃಷ್ಣರಾಜ ಒಡೆಯರ ನಿಧನಾನಂತರ ಅರಮನೆಯೊಂದಿಗೆ ವಿರಸ ಒದಗಿ, ಮೈಸೂರು ಬಿಟ್ಟು ಬೆಂಗಳೂರಿಗೆ ಹೊರಟದ್ದು	ಅಕ್ಟೋಬರ್ 23, 1940
ಸ್ವಂತ ಚಿತ್ರಶಾಲೆಯ ನಿರ್ಮಾಣ (ಗೃಹಪ್ರವೇಶ)	ಜೂನ್ 4, 1941
ಮೈಸೂರು ಅರಮನೆಯ ಮೇಲೆ ನ್ಯಾಯಾಲಯದಲ್ಲಿ ಕಟ್ಲೆ ಹೂಡಿದ್ದು	ಸೆಪ್ಟೆಂಬರ್ 5, 1943
ಕಟ್ಲೆ ನ್ಯಾಯಾಲಯದಲ್ಲಿ ತಿರಸ್ಕೃತವಾದದ್ದು	ಅಕ್ಟೋಬರ್ 28, 1946
ರಾಜವೀಣೆಯ ನಿರ್ಮಾಣ ಮುಗಿದದ್ದು	ಜನವರಿ 2, 1949
ಮೊಳಕಾಲುಗಳಲ್ಲಿ ನೋವು, ಕಣ್ಣುಗಳ ತೊಂದರೆ ಮೊದಲಾದದ್ದು	1952ರ ಕಡೆಯ ಭಾಗ
ಡಯಾಬಿಟಿಸ್ ವ್ಯಾಧಿಯೆಂದು ಗೊತ್ತಾದದ್ದು	ಆಗಸ್ಟ್ 28, 1954
ಸೂರ್ಯಾಸ್ತ (ವರ್ಣಚಿತ್ರ) ಮುಗಿದದ್ದು	ನವೆಂಬರ್ 18, 1957
ವ್ಯಾಧಿ ಉಲ್ಬಣಿಸಿದ್ದು	ಮಾರ್ಚ್ 1958
ದಿಲ್ಲಿಯ ಲಲಿತಕಲಾ ಅಕಾಡಮಿಯ ಫೆಲೊ ಆಗಿ ಆಯ್ಕೆ	ಜೂನ್ 17, 1961
ಕೇಂದ್ರ ಲಲಿತಕಲಾ ಅಕಾಡಮಿಯ ಪುರಸ್ಕಾರ (ತಾಮ್ರಪತ್ರ ಮತ್ತು ಅಂಗವಸ್ತ್ರಗಳ ಪ್ರದಾನ) (ಸಮಾರಂಭ ಅವರ ನಿವಾಸದಲ್ಲೆ ನಡೆದದ್ದು)	ಆಗಸ್ಟ್ 7, 1962
ಕರ್ನಾಟಕ ಚಿತ್ರಕಲಾ ಪರಿಷತ್ತು, ಬಿನ್ನವತ್ತಳಿಕೆಯನ್ನು ಅರ್ಪಿಸಿದ್ದು	ಡಿಸೆಂಬರ್ 2, 1962
ಮರಣ (ತಮ್ಮ ನಿವಾಸದಲ್ಲೆ; ಅಪರಾಹ್ಣ ಒಂದು ಗಂಟೆಗೆ)	ಮೇ 25, 1965
ದಹನ ಸಂಸ್ಕಾರ (ಹರಿಶ್ಚಂದ್ರ ಘಾಟಿನಲ್ಲಿ; ಪ್ರಾಹ್ಣ 11.45 ಗಂಟೆಗೆ)	ಮೇ 26, 1965
ಬೆಂಗಳೂರಿನಲ್ಲಿ ವೆಂಕಟಪ್ಪ ಚಿತ್ರಕಲಾ ಶಾಲೆಯ ವ್ಯವಸ್ಥೆ	1974